ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆನ್‌ಲೈನ್ ಪಾಠ: ಕಲಿಸಿದ್ದೇನು? ಕಲಿತಿದ್ದೇನು?

ಬೇಕಿದೆ ಮೌಲ್ಯಮಾಪನ

• ಕೆ.ನರಸಿಂಹಮೂರ್ತಿ

ಒಳನೋಟ
ಶಿಕ್ಷಣದ ದಿಕ್ಕು-ದೆಸೆ
ಪ್ರತಿಕ್ರಿಯಿಸಿ: 9606038256
feedback@prajavani.co.in

ಮೈಸೂರು: ಕೋವಿಡ್–19 ಪರಿಣಾಮವಾಗಿ ಆನ್‌ಲೈನ್ ಬೋಧನೆ ಮತ್ತು ಕಲಿಕೆಯ ಎರಡನೇ ಶೈಕ್ಷಣಿಕ ವರ್ಷ ಆರಂಭವಾಗಿ ವೇಗ ಪಡೆದಿದೆ. ಆದರೆ, ಒಂದು ವರ್ಷ ಶಿಕ್ಷಕರು ಕಲಿಸಿದ್ದೇನು? ವಿದ್ಯಾರ್ಥಿಗಳು ಕಲಿತಿದ್ದೇನು? ಎಂಬುದರ ಸಮರ್ಪಕ ಮೌಲ್ಯಮಾಪನವೇ ರಾಜ್ಯದಲ್ಲಿ ನಡೆದಿಲ್ಲ. ಅಲ್ಲಲ್ಲಿ ಗುಂಪು ಚರ್ಚೆ, ವೆಬಿನಾರ್‌ಗಳಷ್ಟೇ ನಡೆದಿವೆ. ಮೌಲ್ಯಮಾಪನಕ್ಕಿಂತಲೂ ಶೈಕ್ಷಣಿಕ ವರ್ಷಗಳ ನಿರಂತರತೆಯನ್ನು ಕಾಯ್ದುಕೊಳ್ಳುವತ್ತಲೇ ಎಲ್ಲರ ಗಮನವಿದೆ.

ಶಾಲೆ–ಕಾಲೇಜು, ಬೋಧನೆ, ಕಲಿಕೆಯ ಇಡೀ ಸಾಂಪ್ರದಾಯಿಕ ವ್ಯವಸ್ಥೆಯು ಛಿದ್ರಗೊಂಡಿದೆ. ಈ ಸ್ಥಿತಿಯಲ್ಲಿ ಇಲಾಖೆಗಳು, ಶಿಕ್ಷಕರು, ಪೋಷಕರು ವಾರ್ಷಿಕ ನಿರಂತರತೆಗೇ ಒತ್ತು ಕೊಟ್ಟು, ಹಿಂದಿನ ವರ್ಷದ ಮುಂದುವರಿಕೆಯಾಗಿ ಮತ್ತೆ ವಿದ್ಯಾರ್ಥಿಗಳನ್ನು ಆನ್‌ಲೈನ್ ಕಲಿಕೆಯತ್ತ ತಳ್ಳಿದ್ದಾರೆ. ವಿದ್ಯಾರ್ಥಿಗಳು ಯಾವ ಆಕ್ಷೇಪಣೆಯನ್ನೂ ಎತ್ತುವ ಸ್ಥಿತಿಯಲ್ಲಿ ಇಲ್ಲ.

ಪೂರ್ವ ಪ್ರಾಥಮಿಕ ಹಂತದಿಂದ ವೃತ್ತಿ ಶಿಕ್ಷಣದ ಕೋರ್ಸ್‌ಗಳವರೆಗಿನ ಕಲಿಕೆಯವರೆಗೂ ಕೋವಿಡ್ ತನ್ನ ಪ್ರಭಾವ, ಪರಿಣಾಮ ಬೀರಿದೆ. ಯಾವ ಆನ್‌ಲೈನ್, ಮೊಬೈಲ್‌ಫೋನ್ ಜಗತ್ತಿನಿಂದ ಮಕ್ಕಳನ್ನು ದೂರವಿಡಬೇಕು ಎಂದು ಪೋಷಕರು, ಶಿಕ್ಷಕರು ಹೇಳುತ್ತಿದ್ದರೋ ಅದನ್ನೇ ಅವಲಂಬಿಸಿದ ಪರಿಸ್ಥಿತಿಯಲ್ಲಿ ನಡೆದಿರುವ ಬೋಧನೆ ಮತ್ತು ಕಲಿಕೆಯ ಫಲಿತಾಂಶವೇನು ಎಂಬ ಹುಡುಕಾಟವೂ ನಡೆದಿಲ್ಲ.

ತಂತ್ರಜ್ಞಾನ ಇಲ್ಲದಿದ್ದರೆ, ಕಲಿಕೆ ಸಂಪೂರ್ಣವಾಗಿ ಒಂದು ವರ್ಷ ಸ್ಥಗಿತವಾಗುತ್ತಿತ್ತು. ಸಣ್ಣ ಮಕ್ಕಳಿಗೆ ಆನ್‌ಲೈನ್ ಕಲಿಕೆ ಹೆಚ್ಚು ಪರಿಣಾಮಕಾರಿಯಾಗಿರುವುದಿಲ್ಲ.
ಪ್ರೊ.ಜಿ. ಹೇಮಂತಕುಮಾರ್, ಕುಲಪತಿ, ಮೈಸೂರು ವಿಶ್ವವಿದ್ಯಾಲಯ

1ರಿಂದ 10ನೇ ತರಗತಿವರೆಗಿನ ಮಕ್ಕಳ ಕಲಿಕೆಯ ಸ್ವರೂಪ, ಗಳಿಸಿಕೊಂಡ ಕೌಶಲ ಅರಿಯಲು ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ನಡೆಸಿದ ಸಮೀಕ್ಷೆಯು ಕೂಡ ಬೋಧನೆ–ಕಲಿಕೆಯ ಮೌಲ್ಯಮಾಪನಕ್ಕಿಂತಲೂ, ಆ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರ ಕುರಿತು ಅಂಕಿ ಅಂಶಗಳಿಗಷ್ಟೇ ಒತ್ತು ನೀಡಿದೆ.

ಇದನ್ನು ಹೊರತುಪಡಿಸಿದರೆ, ಪದವಿಪೂರ್ವ, ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿ ಶಿಕ್ಷಣ ಕೋರ್ಸ್‌ಗಳಲ್ಲಿ ಬೋಧನೆ ಮತ್ತು ಕಲಿಕೆಯ ಹಿನ್ನೋಟದ ಪ್ರಯತ್ನಗಳತ್ತ ಆಯಾ ಇಲಾಖೆಗಳು ಗಮನ ಹರಿಸಿಲ್ಲ.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

ಮತ್ತೆ ₹ 73 ಕೋಟಿ ಮೌಲ್ಯದ ಸ್ವತ್ತು ವಶ

29 ಕೆರೆಗಳ 47 ಎಕರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆ ಜಾಗ, ಗೋಮಾಳ, ಗುಂಡುತೋಪುಗಳ ಒತ್ತುವರಿ ವಿರುದ್ಧ ಬೆಂಗಳೂರು ನಗರ ಜಿಲ್ಲಾಡಳಿತ ಭರ್ಜರಿ ಕಾರ್ಯಾಚರಣೆ ಆರಂಭಿಸಿದೆ. ಶನಿವಾರ ಒಂದೇ ದಿನ ಒಟ್ಟು 47 ಎಕರೆ 3 ಗುಂಟೆ ಜಾಗವನ್ನು ಸ್ವಾಧೀನ ಮಾಡಿಕೊಂಡಿದೆ. ಇವುಗಳ ಮೌಲ್ಯ ₹73.46 ಕೋಟಿ ಎಂದು ಅಂದಾಜಿಸಲಾಗಿದೆ.

ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಬೆಂಗಳೂರು ಪೂರ್ವ, ಆನೇಕಲ್ ಮತ್ತು ಯಲಹಂಕ ತಾಲ್ಲೂಕುಗಳಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ಒತ್ತುವರಿ ಮಾಡಿ ನಿರ್ಮಿಸಿಕೊಂಡಿದ್ದ ಕಟ್ಟಡಗಳನ್ನು ಜೆಸಿಬಿ ಮೂಲಕ ನೆಲಸಮ ಮಾಡಲಾಗಿದೆ. ಬೆಳಿಗ್ಗೆಯಿಂದಲೇ ಕಾರ್ಯಾಚರಣೆ ಆರಂಭವಾಗಿದ್ದು, ರಾತ್ರಿ ತನಕವೂ ಮುಂದುವರಿದಿತ್ತು.

ಸರ್ಕಾರಿ ಜಾಗದಲ್ಲಿ ನಿರ್ಮಿಸಿರುವ ಕಟ್ಟಡಗಳು ಉತ್ತಮವಾಗಿದ್ದರೆ ಅವುಗಳನ್ನು ವಶಕ್ಕೆ ಪಡೆದು ಉಳಿಸಿಕೊಳ್ಳಲಾಗಿದೆ. ಸಾರ್ವಜನಿಕ ಉದ್ದೇಶದ ಕೆಲಸಗಳಿಗೆ ಅವುಗಳನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ಜಿಲ್ಲಾಡಳಿತದ ಅಧಿಕಾರಿಗಳು ವಿವರಿಸಿದರು.

ಕಳೆದ ಶನಿವಾರ ನಡೆಸಿದ ಕಾರ್ಯಾಚರಣೆಯಲ್ಲಿ 58 ಕೆರೆಗಳಲ್ಲಿ ಒತ್ತುವರಿಯಾಗಿದ್ದ 141 ಎಕರೆ ಜಾಗದಲ್ಲಿದ್ದ ಕಟ್ಟಡ ತೆರವುಗೊಳಿಸಿ ವಶಕ್ಕೆ ಪಡೆಯಲಾಗಿತ್ತು. ಈ ಶನಿವಾರ ಮತ್ತೆ ನಡೆಸಿರುವ ಕಾರ್ಯಾಚರಣೆಯಲ್ಲಿ 29 ಕೆರೆಗಳ ಒತ್ತುವರಿ ತೆರವು ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಹುಲಿಮಂಗಲದಲ್ಲಿ ತೆರವು ಕಾರ್ಯಾಚರಣೆ ನಡೆಸುತ್ತಿರುವ ಜಿಲ್ಲಾಡಳಿತದ ಅಧಿಕಾರಿಗಳು

ಆನೇಕಲ್ ತಾಲ್ಲೂಕಿನಲ್ಲಿ 10 ಕೆರೆಗಳಲ್ಲಿ ಒತ್ತುವರಿಯಾಗಿದ್ದ 15 ಎಕರೆ 23 ಗುಂಟೆ ಜಾಗವನ್ನು ವಶಕ್ಕೆ ಪಡೆಯಲಾಗಿದೆ. ಬೆಂಗಳೂರು ಪೂರ್ವ ತಾಲ್ಲೂಕಿನ 8 ಕೆರೆಗಳಲ್ಲಿ ಒತ್ತುವರಿಯಾಗಿದ್ದ 7 ಎಕರೆ 24 ಗುಂಟೆ ತೆರವುಗೊಳಿಸಲಾಗಿದೆ.

ಯಲಹಂಕ ತಾಲ್ಲೂಕಿನ 5 ಕೆರೆಯಲ್ಲಿ 13 ಎಕರೆ 10 ಗುಂಟೆ ಜಾಗದಲ್ಲಿದ್ದ ಕಟ್ಟಡ ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದೆ. ದಕ್ಷಿಣ ತಾಲ್ಲೂಕಿನ 4 ಕೆರೆಗಳ 5 ಎಕರೆ 9 ಗುಂಟೆ, ಉತ್ತರ ತಾಲ್ಲೂಕಿನ 2 ಕೆರೆಯಲ್ಲಿ ಒತ್ತುವರಿಯಾಗಿದ್ದ 5 ಎಕರೆ 7 ಗುಂಟೆ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಪ್ರಭಾವ ಬಳಸಿ ಉಳಿಸಿಕೊಳ್ಳುವ ವಿಫಲ ಯತ್ನ

ಬಲಿಷ್ಠರೇ ಹೆಚ್ಚಿನದಾಗಿ ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡಿದ್ದು, ಪ್ರಭಾವ ಬಳಸಿ ಉಳಿಸಿಕೊಳ್ಳುವ ಪ್ರಯತ್ನ ನಡೆಸುತ್ತಿದ್ದಾರೆ. ಆದರೆ, ಅಧಿಕಾರಿಗಳು ಫೋನ್ ಸ್ವಿಚ್ ಆಫ್ ಅಥವಾ ಏರೋಪ್ಲೇನ್ ಮೋಡ್‌ನಲ್ಲಿ ಇರಿಸಿಕೊಂಡು ಕಾರ್ಯಾಚರಣೆ ನಡೆಸುತ್ತಿದ್ದಾರೆ.

‘ಮುಂದುವರಿಯಲಿದೆ ಕಾರ್ಯಾಚರಣೆ’

‘ಸರ್ಕಾರಿ ಗೋಮಾಳ, ತೋಪುಗಳು ಮತ್ತು ಕೆರೆಗಳನ್ನು ಸಾಕಷ್ಟು ಒತ್ತುವರಿ ಮಾಡಲಾಗಿದೆ. ಕೆರೆಗಳ ಸರ್ವೆ ನಡೆಸಬೇಕು ಎಂಬ ಹೈಕೋರ್ಟ್ ಆದೇಶದ ಹೊರತಾಗಿ ಎಲ್ಲಾ ರೀತಿಯ ಸರ್ಕಾರಿ ಜಾಗವನ್ನೂ ವಶಕ್ಕೆ ಪಡೆಯಲಾಗುತ್ತಿದೆ. ಕಾರ್ಯಚರಣೆ ಪ್ರತಿ ವಾರವೂ ಮುಂದುವರಿಯಲಿದೆ’ ಎಂದು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಹೇಳಿದರು.

‘ಬೆಂಗಳೂರಿನಲ್ಲಿ 837 ಕೆರೆಗಳಿದ್ದು, ಬಹುತೇಕ ಕಡೆ ಒತ್ತುವರಿಯಾಗಿದೆ. ಮುಂದಿನ ಪೀಳಿಗೆಗೆ ಸರ್ಕಾರಿ ಜಾಗ ಉಳಿಸಬೇಕು ಎಂಬ ಉದ್ದೇಶದಿಂದ ಈ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕಾಚರಕನಹಳ್ಳಿಯಲ್ಲಿ ಶೆಲ್ ಪೆಟ್ರೋಲ್ ಬಂಕ್ ಕೂಡ ತೆರವುಗೊಳಿಸಲಾಗುತ್ತಿದೆ’ ಎಂದು ‘ಪ್ರಜಾವಾಣಿ’ಗೆ ವಿವರಿಸಿದರು.

‘ಈ ರೀತಿಯ ಕಾರ್ಯಾಚರಣೆಯನ್ನು ಒಮ್ಮೆ ನಡೆಸಿದರೆ ಒತ್ತುವರಿ ಮಾಡಿಕೊಳ್ಳುವವರಲ್ಲಿ ಭಯ ಹುಟ್ಟುತ್ತದೆ. ಅನಧಿಕೃತವಾಗಿ ಕಟ್ಟಡ ನಿರ್ಮಿಸಿಕೊಂಡರೆ ಒಂದಲ್ಲ ಒಂದು ದಿನ ಸರ್ಕಾರ ಮತ್ತೆ ವಶಕ್ಕೆ ಪಡೆಯಲಿದೆ ಎಂಬುದು ಒತ್ತುವರಿದಾರರಿಗೆ ಗೊತ್ತಾಗಬೇಕಿದೆ’ ಎಂದರು.

BGS BLOOMFIELD
The Innovative School in Basavanagudi
Recognised by the Government of Karnataka
#38, 6th Cross, 3rd Block Thyagarajanagar, Basavanagudi, Bangalore 560028
Ph: 080-26763777 www.bgsbloomfield.com
General Enquiries: 9448528484, 6366947181, 6366947182 Email: bloomfieldadm@gmail.com

ADMISSIONS OPEN Nursery to Std VIII
ADMISSIONS for Std I Closed
Limited seats available for remaining classes Hurry up !!

Salient Features

- Major focus on English competence
- Innovative curriculum for all classes
- Highly qualified and experienced academic administrator and teachers
- Good teacher-student ratio - Class strength below 40
- Excellent sports facilities and training for holistic development
- Spacious classrooms, labs and multi-purpose halls as per CBSE norms
- Ergonomically designed classrooms and lab infrastructure
- State-of-the-art Science Labs, Language Lab and Computer Lab
- Well provided library with digital resources
- Anti-bacterial emulsions used in classrooms, labs and washrooms
- Modern digital classrooms with 24x7 internet - UPS support and generator
- 24x7 security / CCTV monitoring, fire safety, gender sensitization and lab safety

Due to the prevailing condition caused by the pandemic, we generously offer the following benefits :

Mr. Augustine Charles
ADMINISTRATOR, BLOOMFIELD
(former Principal of Baldwin Boys' High School)

Annual fee of Rs. 45,000/- (Includes text books) for the current academic year 2021 - 2022

Additional offer : Students enrolling on or before 15th August 2021 will continue to pay Rs. 45,000/- per annum till standard X

Ms. Nandita B G
SECRETARY, BLOOMFIELD

15th August 2021, Sunday School office will remain open between : 9.00 AM to 4 PM

No further extension of offer

Visit our campus once...

ಶಿವರಾಮ ಕಾರಂತ ಬಡಾವಣೆಗಾಗಿ ಮನೆ ಕಳೆದುಕೊಳ್ಳುತ್ತಿರುವವರ ಅಳಲು

‘ಬದುಕನ್ನು ಬೀದಿಗೆ ತಂದ ಬಿಡಿಎ’

ಪ್ರಜಾವಾಣಿ ವಾರ್ತೆ

ದೊಡ್ಡ ಬೆಟ್ಟಹಳ್ಳಿಯಲ್ಲಿ ನಿರ್ಮಿಸಿದ್ದ ಮನೆಗಳನ್ನು ಬಿಡಿಎ ತೆರವುಗೊಳಿಸಿರುವುದು

ಬೆಂಗಳೂರು: ‘ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಮ್ಮ ಬದುಕನ್ನು ಬೀದಿಗೆ ತರುತ್ತಿದೆ. ಸ್ವಂತ ಜಾಗದಲ್ಲಿಯೇ ಮನೆ ಕಟ್ಟಿಕೊಂಡಿದ್ದರೂ ನ್ಯಾಯಾಲಯದ ಆದೇಶದ ನೆಪ ಇಟ್ಟುಕೊಂಡು ಮನೆಗಳನ್ನು ಧ್ವಂಸಗೊಳಿಸುತ್ತಿದೆ’ ಎಂದು ಶಿವರಾಮ ಕಾರಂತ ಬಡಾವಣೆಯ ಭೂಸ್ವಾಧೀನಕ್ಕಾಗಿ ಮನೆಗಳನ್ನು ಕಳೆದುಕೊಳ್ಳುತ್ತಿರುವ ಸಂತ್ರಸ್ತರು ದೂರಿದರು.

‘ದೊಡ್ಡ ಬೆಟ್ಟಹಳ್ಳಿಯಲ್ಲಿ ಶನಿವಾರ ಒಂದೇ ದಿನ 10 ಮನೆಗಳನ್ನು ಧ್ವಂಸಗೊಳಿಸಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಮೂರು ಮನೆಗಳೂ ಇವೆ’ ಎಂದು ಸಂತ್ರಸ್ತರಾದ ಶಾರದಮ್ಮ, ಜಯಮ್ಮ, ಶೈಲಾ ಮತ್ತಿತರರು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಗಾಣಿಗರಹಳ್ಳಿ, ಲಕ್ಷ್ಮೀಪುರ, ಸೋಮಶೆಟ್ಟಿಹಳ್ಳಿಯಲ್ಲಿ 15 ದಿನಗಳ ಹಿಂದೆ 20ಕ್ಕೂ ಅಧಿಕ ಮನೆಗಳನ್ನು ಒಡೆದಿದ್ದಾರೆ. ಉತ್ತರ ಭಾರತದವರು ಸೇರಿದಂತೆ ಶ್ರೀಮಂತರಿಗೆ ಮನೆ ಕಟ್ಟಿಕೊಡುವ ಉದ್ದೇಶದಿಂದ ಬಡವರ, ಕೃಷಿಕರ ಮನೆಗಳನ್ನು ಧ್ವಂಸ ಮಾಡಲಾಗುತ್ತಿದೆ’ ಎಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಯೋಜಕ ರಮೇಶ್ ರಾಮಗೊಂಡನಹಳ್ಳಿ ಆರೋಪಿಸಿದರು.

‘ಸುಪ್ರೀಂ ಕೋರ್ಟ್ ಆದೇಶ ಇದೆ ಎಂಬುದು ನೆಪ ಮಾತ್ರ. ಬಿಡಿಎ ಅಧಿಕಾರಿಗಳು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ ಇಂತಹ ಆದೇಶ ಬರುವಂತೆ ಮಾಡಿದ್ದಾರೆ’ ಎಂದು ದೂರಿದರು.

‘ಈ ಹಳ್ಳಿಗಳು ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ. ಈ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್. ಈಗ ಬಿಡಿಎ ಅಧ್ಯಕ್ಷರೂ ಆಗಿದ್ದಾರೆ. ಸುಪ್ರೀಂ ಕೋರ್ಟ್‌ನ ಆದೇಶ ಬಂದ ನಂತರವೂ, ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಯಾವುದೇ ಮನೆಗಳನ್ನು ಕೆಡವಲು ಅವಕಾಶ ನೀಡುವುದಿಲ್ಲ ಎಂದು ಹೇಳಿದ್ದರು. ಬಿಡಿಎ ಅಧ್ಯಕ್ಷರಾದ ನಂತರ, ನ್ಯಾಯಾಲಯದ ಆದೇಶ ಪಾಲಿಸಲೇಬೇಕು ಎಂದು ಹೇಳುತ್ತಾ ಮನೆಗಳನ್ನು ತೆರವುಗೊಳಿಸಲು ಮುಂದಾಗಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಶಿವರಾಮ ಕಾರಂತ ಬಡಾವಣೆಗೆ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುವ ಆರು ಹಳ್ಳಿಗಳು ಮಾವಳ್ಳಿಪುರಕ್ಕೆ ಹೊಂದಿಕೊಂಡಂತಿವೆ. ನಗರದ ತ್ಯಾಜ್ಯವನ್ನೆಲ್ಲ ಇಲ್ಲಿ ತಂದು ಸುರಿದಿದ್ದರ ದುಷ್ಪರಿಣಾಮವನ್ನು ಜನ ಇಲ್ಲಿಯವರೆಗೂ ಅನುಭವಿಸಿದ್ದರು. ಕಸ ಸುರಿಯುವುದನ್ನು ನಿಲ್ಲಿಸಿ ಏಳು ವರ್ಷಗಳೇ ಆಗಿದ್ದರೂ ಅದರ ಪರಿಣಾಮ ಕಡಿಮೆಯಾಗಿರಲಿಲ್ಲ. ಇತ್ತೀಚೆಗಷ್ಟೇ ಕೃಷಿ ಚಟುವಟಿಕೆಯನ್ನು ಮತ್ತೆ ಪ್ರಾರಂಭಿಸಿದ್ದರು. ಈಗ ಗಾಯದ ಮೇಲೆ ಬರೆ ಎಳೆದಂತೆ ಬಡಾವಣೆಗಾಗಿ ಕೃಷಿ ಜಮೀನನ್ನೇ ವಶಪಡಿಸಿಕೊಳ್ಳಲಾಗುತ್ತಿದೆ’ ಎಂದರು.

‘ಪರಿಶಿಷ್ಟ ಜಾತಿಗೆ ಸೇರಿದ ಜಯಮ್ಮ ಎಂಬುವರ ಮನೆ ಧ್ವಂಸ ಮಾಡಿದ್ದಾರೆ. ಇದನ್ನು ವಿರೋಧಿಸಿದ್ದಕ್ಕೆ ಅವರ ಇಬ್ಬರು ಸಂಬಂಧಿಕರು ಮತ್ತು ಇನ್ನಿಬ್ಬರನ್ನು, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಆರೋಪದ ಮೇಲೆ ಪೊಲೀಸರು ಬಂಧಿಸಿದ್ದಾರೆ’ ಎಂದರು.

‘ಅನಧಿಕೃತ ಕಟ್ಟಡಗಳ ತೆರವು’

‘ದೊಡ್ಡಬೆಟ್ಟಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 40ರಲ್ಲಿರುವ ಸ್ವತ್ತು ಬಿಡಿಎಗೆ ಸೇರಿದೆ. ಇಲ್ಲಿ ಅನಧಿಕೃತವಾಗಿ ಕಟ್ಟಿದ್ದ ಕಟ್ಟಡಗಳನ್ನು ತೆರವುಗೊಳಿಸಲಾಗಿದೆ’ ಎಂದು ಬಿಡಿಎ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ್ ತಿಳಿಸಿದರು.

‘ಗ್ರಾಮದ 7 ಎಕರೆ 30 ಗುಂಟೆ ಜಮೀನು ಬಿಡಿಎಗೆ ಸೇರಿದ್ದು, ಇಲ್ಲಿ ಶಿವರಾಮ ಕಾರಂತ ಬಡಾವಣೆ ನಿರ್ಮಿಸಲಾಗುತ್ತದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಬಡಾವಣೆ ನಿರ್ಮಾಣ ಮಾಡುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ’ ಎಂದೂ ಅವರು ಹೇಳಿದ್ದಾರೆ.

‘ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಕೈಗೊಂಡಿದ್ದಾಗ ಸ್ಥಳೀಯರು ಅಡ್ಡಿ ಪಡಿಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಯಲಹಂಕ ಉಪನಗರ ಠಾಣೆಗೆ ದೂರು ನೀಡಲಾಗಿದೆ’ ಎಂದು ಮಾಹಿತಿ ನೀಡಿದರು.

ಆಯುಷ್ಮಾನ್ ಸೇವೆ: ಕಿದ್ವಾಯಿಗೆ ಅಗ್ರ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ’ ಯೋಜನೆಯಡಿ ಉತ್ತಮ ಪ್ರದರ್ಶನ ಹಾಗೂ ಹೆಚ್ಚಿನ ರೋಗಿಗಳಿಗೆ ವೈದ್ಯಕೀಯ ಸೌಲಭ್ಯ ಒದಗಿಸಿದ ರಾಜ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಸಾಲಿನಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಅಗ್ರ ಸ್ಥಾನ ಪಡೆದುಕೊಂಡಿದೆ.

2020–21ನೇ ಸಾಲಿನಲ್ಲಿ ಈ ಯೋಜನೆಯಡಿ ಅಧಿಕ ಮಂದಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದ ಆಸ್ಪತ್ರೆಗಳ ಪಟ್ಟಿಯನ್ನು ವಿವಿಧ ವಿಭಾಗಗಳಲ್ಲಿ ಆರೋಗ್ಯ ಇಲಾಖೆ ಸಿದ್ಧಪಡಿಸಿದೆ.

ಜಿಲ್ಲಾ ಆಸ್ಪತ್ರೆಗಳಲ್ಲಿ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆ, ವೈದ್ಯಕೀಯ ಕಾಲೇಜುಗಳಲ್ಲಿ ಹುಬ್ಬಳ್ಳಿಯ ಕಿಮ್ಸ್, ತಾಲ್ಲೂಕು ಆಸ್ಪತ್ರೆಗಳಲ್ಲಿ ಕೊಪ್ಪಳದ ಗಂಗಾವತಿ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಹಾಸನದ ಹಿರೀಸಾವೆ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಿಜಯಪುರದ ವಂದಲ್ ಆಸ್ಪತ್ರೆ ಮೊದಲ ಸ್ಥಾನದಲ್ಲಿದೆ. ಈ ಆಸ್ಪತ್ರೆಗಳು ‘ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ’ ಯೋಜನೆಯಡಿ ಕಳೆದ ಸಾಲಿನಲ್ಲಿ ಅತ್ಯಧಿಕ ಮಂದಿಗೆ ವೈದ್ಯಕೀಯ ಸೌಲಭ್ಯ ಒದಗಿಸಿವೆ.

ಇಲ್ಲಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ 8,676 ಮಂದಿಗೆ ಯೋಜನೆಯಡಿ ಸೇವೆ ನೀಡಿದೆ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಎಸ್‌ಜೆಐಸಿಆರ್) 4,199 ಮಂದಿಗೆ ಚಿಕಿತ್ಸೆ ಒದಗಿಸಿದೆ. ಎಸ್‌ಜೆಐಸಿಆರ್ ಮೈಸೂರು (3,415), ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ (2,699) ಹಾಗೂ ನಿಮ್ಹಾನ್ಸ್ (1,936) ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಪಟ್ಟಿಯಲ್ಲಿ ಮೊದಲ ಐದು ಸ್ಥಾನಗಳಲ್ಲಿವೆ.

ಜಿಲ್ಲಾ ಆಸ್ಪತ್ರೆಗಳ ಸಾಲಿನಲ್ಲಿ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆ 347 ಕೋವಿಡ ರೋಗಿಗಳು ಸೇರಿದಂತೆ 6,511 ಮಂದಿಗೆ ಚಿಕಿತ್ಸೆ ನೀಡಿದೆ. ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆ (6,112), ಕೋಲಾರದ ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನದಲ್ಲಿದೆ.

ವೈದ್ಯಕೀಯ ಕಾಲೇಜುಗಳ ಪಟ್ಟಿಯಲ್ಲಿ ಹುಬ್ಬಳ್ಳಿಯ ಕಿಮ್ಸ್ 11,991 ರೋಗಿಗಳಿಗೆ ಸೇವೆ ಒದಗಿಸುವ ಮೂಲಕ ಮೊದಲ ಸ್ಥಾನದಲ್ಲಿದೆ. ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆ (11,680), ಹಾಸನದ ಶ್ರೀಚಾಮರಾಜೇಂದ್ರ ಆಸ್ಪತ್ರೆ/ ಹಿಮ್ಸ್ (11,572), ಚಾಮರಾಜನಗರದ ವೈದ್ಯಕೀಯ ಕಾಲೇಜು (8,585) ಹಾಗೂ ಮಂಡ್ಯದ ವೈದ್ಯಕೀಯ ಕಾಲೇಜು (7,588) ಮೊದಲ ಐದು ಸ್ಥಾನಗಳಲ್ಲಿವೆ.

‘ಅರೆ ನ್ಯಾಯಿಕ ಅಧಿಕಾರ ಬೇರೆಯವರಿಗೆ ವಹಿಸಲಾಗದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮಗಿರುವ ಅರೆ ನ್ಯಾಯಿಕ ಅಧಿಕಾರವನ್ನು ಬೇರೆಯವರಿಗೆ ವಹಿಸಿ, ಅವರ ಮೂಲಕ ವಿಚಾರಣೆ ನಡೆಸಲು ಕಾನೂನಿನಲ್ಲಿ ಅವಕಾಶ ಇಲ್ಲ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ವ್ಯಕ್ತಿಯೊಬ್ಬರು ತಮ್ಮ ಜಾಗದಲ್ಲಿ ವಾಣಿಜ್ಯ ಚಟುವಟಿಕೆ ನಡೆಸಲು ಕೋರಿದ್ದ ಅನುಮತಿಯನ್ನು ಬಿಬಿಎಂಪಿ ಕಾನೂನು ಕೋಶದ ಅಧಿಕಾರಿಗಳು ನಡೆಸಿದ ವಿಚಾರಣೆ ಆಧರಿಸಿ ನಿರಾಕರಿಸಿದ ಆಯುಕ್ತರ ಆದೇಶವನ್ನು ಹೈಕೋರ್ಟ್ ವಜಾಗೊಳಿಸಿದೆ.

ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲು ಕೇಳಿದ್ದ ಅನುಮತಿಯನ್ನು ಬಿಬಿಎಂಪಿ 2019ರ ಮಾರ್ಚ್ 16ರಂದು ನಿರಾಕರಿಸಿತ್ತು. ಅದಕ್ಕೂ ಮುನ್ನ ವಿಚಾರಣೆ ನಡೆಸಲು ಬಿಬಿಎಂಪಿ ಕಾನೂನು ಕೋಶಕ್ಕೆ ಆಯುಕ್ತರು ಅಧಿಕಾರ ನೀಡಿದ್ದರು. ‘ಕರ್ನಾಟಕ ಮುನ್ಸಿಪಲ್ ಕೌನ್ಸಿಲ್ (ಕೆಎಂಸಿ) ಕಾಯ್ದೆಯ ಸೆಕ್ಷನ್ 66ರ ಅಡಿಯಲ್ಲಿ ಇರುವ ಅಧಿಕಾರ ಬಳಸಿಕೊಂಡು ಆಯುಕ್ತರು ಅಧಿಕಾರ ಹಸ್ತಾಂತರ ಮಾಡಿದ್ದಾರೆ’ ಎಂದು ಬಿಬಿಎಂಪಿ ಪರ ವಕೀಲರು ವಾದಿಸಿದರು.

‘ಅರೆ ನ್ಯಾಯಿಕ ಅಧಿಕಾರಿಯೇ ವಿಚಾರಣೆ ನಡೆಸಬೇಕೆ ಹೊರತು ಬೇರೆಯವರಿಗೆ ತನ್ನ ಅಧಿಕಾರ ವಹಿಸಲು ಆಗುವುದಿಲ್ಲ’ ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

‘ಕೆಎಂಸಿ ಕಾಯ್ದೆ ಪ್ರಕಾರ ಬೇರೆ ಜವಾಬ್ದಾರಿಗಳನ್ನು ಹಸ್ತಾಂತರಿಸಲು ಅವಕಾಶ ಇದೆ. ಆದರೆ, ಅರೆ ನ್ಯಾಯಿಕ ಅಧಿಕಾರವನ್ನು ಹಸ್ತಾಂತರಿಸುವಂತಿಲ್ಲ. ಮತ್ತೊಮ್ಮೆ ವಿಚಾರಣೆ ನಡೆಸಿ’ ಎಂದು ಪಾಲಿಕೆ ಮುಖ್ಯ ಆಯುಕ್ತರಿಗೆ ಪೀಠ ನಿರ್ದೇಶನ ನೀಡಿತು.

ಮಹಾರಾಣಿ ಕ್ಲಸ್ಟರ್ ವಿವಿ: ನೂತನ ಪದವಿ ಕೋರ್ಸ್

ಬೆಂಗಳೂರು: ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021-22) ಎರಡು ಹೊಸ ಬಿ.ಎಸ್ಸಿ (ಆನರ್ಸ್) ಕೋರ್ಸ್‌ಗಳನ್ನು ಆರಂಭಿಸಲು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ನಿರ್ಧರಿಸಿದೆ.

‘ಡಾಟಾ ಸೈನ್ಸ್ ಆ್ಯಂಡ್ ಅನಾಲಿಟಿಕ್ಸ್’ ಮತ್ತು ‘ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಆ್ಯಂಡ್ ಮೆಷಿನ್ ಲರ್ನಿಂಗ್’ ಎಂಬ ವಿಷಯದ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿನಿಯರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

ಮಾಹಿತಿಗೆ 080–29555666, 22200044, 22200055 ಅಥವಾ ಅಶೋಕ್.ಎಸ್.ಬಿ (9164001006) ಅವರನ್ನು ಸಂಪರ್ಕಿಸಬಹುದು ಎಂದು ವಿಶ್ವ ವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಬಸವನಪುರ ಕೆರೆ: ಕೊಳಚೆ ನೀರು ಹರಿವು ಸ್ಥಗಿತ

ಪ್ರಜಾವಾಣಿ ವಾರ್ತೆ

ತುಂಬಿ ಕೋಡಿ ಹರಿದ ಬಸವನಪುರ ಕೆರೆಗೆ ಸ್ಥಳೀಯರು ಕಳೆದ ಸೋಮವಾರ ಬಾಗಿನ ಅರ್ಪಿಸಿದ್ದರು

ಬೆಂಗಳೂರು: ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಬಸವನಪುರ ಕೆರೆಗೆ ಒಳಚರಂಡಿಯ ಕೊಳಚೆ ನೀರು ಹರಿಯುವುದನ್ನು ತಡೆಯಲಾಗಿದೆ. ಕೊಳಚೆ ನೀರು ಕೆರೆಗೆ ಸೇರುವುದನ್ನು ತಡೆಯುವ ಕೊಳವೆ ಮಾರ್ಗವನ್ನು ಬಿಬಿಎಂಪಿ ಕೆರೆ ವಿಭಾಗದ ಅಧಿಕಾರಿಗಳು ದುರಸ್ತಿ ಪಡಿಸಿದ್ದಾರೆ.

ಬಸವನಪುರ ಕೆರೆಗೆ ಕೊಳಚೆ ನೀರು ಸೇರುತ್ತಿರುವ ಬಗ್ಗೆ ‘ಪ್ರಜಾವಾಣಿ’ಯು ಶುಕ್ರವಾರದ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು. ಅದೇ ದಿನ ಬಿಬಿಎಂಪಿ ಅಧಿಕಾರಿಗಳು ದುರಸ್ತಿ ಕಾರ್ಯ ಕೈಗೊಂಡಿದ್ದರು.

‘ಕೊಳಚೆ ನೀರು ಬಸವನಪುರ ಕೆರೆಗೆ ಸೇರದಂತೆ ತಡೆಯಲು ಅಳವಡಿಸಿದ್ದ ಕೊಳವೆಯಲ್ಲಿ ತ್ಯಾಜ್ಯ ನೀರು ಹರಿಯುವಿಕೆ ಪ್ರಮಾಣ ಇತ್ತೀಚೆಗೆ ತೀರಾ ಹೆಚ್ಚಳವಾಗಿತ್ತು. ಈ ಕೊಳವೆಯೊಳಗೆ ಪ್ಲಾಸ್ಟಿಕ್ ಮತ್ತಿತರ ಕಸಗಳು ಕಟ್ಟಿಕೊಂಡು ತ್ಯಾಜ್ಯ ನೀರಿನ ಸಹಜ ಹರಿವಿಗೆ ಅಡ್ಡಿ ಉಂಟಾಗಿತ್ತು. ಕಟ್ಟಿಕೊಂಡಿದ್ದ ಕಸಗಳನ್ನು ತೆಗೆಸಿ ನೀರು ಸರಾಗವಾಗಿ ಹರಿಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ’ ಎಂದು ಬಿಬಿಎಂಪಿ ಕೆರೆ ವಿಭಾಗದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ದುರಸ್ತಿ ಕಾರ್ಯ ಕೈಗೊಂಡ ಬಳಿಕ ಬಸವನಪುರ ಕೆರೆಗೆ ಯಾವುದೇ ಕೊಳಚೆ ನೀರು ಸೇರುತ್ತಿಲ್ಲ. ಇನ್ನೂ ಕೆಲವು ದಿನಗಳ ಕಾಲ ಕೆರೆಗೆ ಕೊಳಚೆ ನೀರು ಸೇರುತ್ತದೆಯೋ ಇಲ್ಲವೋ ಎಂಬ ಬಗ್ಗೆ ನಿಗಾ ಇಟ್ಟು ಮತ್ತೊಮ್ಮೆ ಖಚಿತಪಡಿಸಿಕೊಳ್ಳಲಿದ್ದೇವೆ’ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಆಕ್ರೋಶ

‘ತೆರಿಗೆ ಹೆಸರಲ್ಲಿ ಮೀಟರ್ ಬಡ್ಡಿ ದಂಧೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಆಸ್ತಿ ಮಾಲೀಕರಿಂದ ₹ 120 ಕೋಟಿ ತೆರಿಗೆ ಬಾಕಿ ಇದೆ. ಆದರೆ ಅದಕ್ಕೆ ₹ 240 ಕೋಟಿ ಬಡ್ಡಿ ಹಾಕುವ ಮೂಲಕ, ಪಾಲಿಕೆ ಅಧಿಕಾರಿಗಳು ತೆರಿಗೆ ಹೆಸರಿನಲ್ಲಿ ಮೀಟರ್ ಬಡ್ಡಿ ದಂಧೆ ನಡೆಸಲು ಮುಂದಾಗಿದ್ದಾರೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಮಾಜಿ ಮೇಯರ್‌ಗಳಾದ ರಾಮಚಂದ್ರಪ್ಪ, ಪಿ.ಆರ್. ರಮೇಶ್, ಕೆ. ಚಂದ್ರಶೇಖರ್, ಜಿ.ಪದ್ಮಾವತಿ, ಗಂಗಾಬಿಕೆ ಮತ್ತು ಮಂಜುನಾಥ್ ರೆಡ್ಡಿ ಜೊತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಪಾಲಿಕೆ ಜನರ ಮೇಲೆ ಅವೈಜ್ಞಾನಿಕ ರೀತಿಯಲ್ಲಿ ತೆರಿಗೆ ಹಾಕುತ್ತಿದೆ’ ಎಂದು ಆರೋಪಿಸಿದರು.

‘ನಗರದಲ್ಲಿ 20 ಲಕ್ಷ ಆಸ್ತಿಗಳಿದ್ದು, ಅದರಲ್ಲಿ 18 ಲಕ್ಷ ಆಸ್ತಿಗಳು ತೆರಿಗೆ ವ್ಯಾಪ್ತಿಗೆ ಬರುತ್ತವೆ. ಅಧಿಕಾರಿಗಳಿಂದ ಅಚಾತುರ್ಯದಿಂದ ಆಸ್ತಿಯ ವಲಯ ಗುರುತಿಸುವಲ್ಲಿ ತಪ್ಪಾಗಿದೆ. ಈಗ ಪಾಲಿಕೆ 78 ಸಾವಿರ ಆಸ್ತಿಗಳ ಮಾಲೀಕರಿಗೆ ತೆರಿಗೆ ಪಾವತಿ ಮಾಡಿಲ್ಲ ಎಂದು ಎರಡರಿಂದ ಮೂರು ಪಟ್ಟು ದುಬಾರಿ ದಂಡವನ್ನು ವಿಧಿಸುತ್ತಿದೆ’ ಎಂದು ದೂರಿದರು.

‘ಐದು ವರ್ಷಗಳ ಹಿಂದೆ ವಲಯ ವರ್ಗೀಕರಣವನ್ನು ಸರಿಯಾಗಿ ಮಾಡದೆ ಪಾಲಿಕೆ ಗೊಂದಲ ಮೂಡಿಸಿದೆ. ನಿಗದಿ ಮಾಡಿದ ವಲಯದಲ್ಲಿ ತೆರಿಗೆ ಪಾವತಿಸಿದ್ದರೂ, ಬೇರೆ ವಲಯಕ್ಕೆ ಅನ್ವಯವಾಗುವಂತೆ ತೆರಿಗೆ ಪಾವತಿಸುವಂತೆ ಅಧಿಕಾರಿಗಳು ನೋಟಿಸ್ ಜಾರಿ ನೀಡಿದ್ದಾರೆ. ಅಧಿಕಾರಿಗಳಿಗೆ ಆಡಳಿತ ವಿಚಾರದಲ್ಲಿ ಮೇಯರ್ ಅಧಿಕಾರವನ್ನು ನೀಡಿರಬಹುದು. ಆದರೆ, ತೆರಿಗೆ ಹೆಚ್ಚಳ ವಿಚಾರವನ್ನು ಮುಖ್ಯಮಂತ್ರಿಯ ಗಮನಕ್ಕೆ ತಾರದೇ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರ ಗಮನಕ್ಕೆ ಈ ವಿಚಾರ ಬಂದಿರುತ್ತದೆ. ಹೀಗಾಗಿ, ದಂಧೆಗೆ ಬಿಜೆಪಿ ಸರ್ಕಾರವೇ ಕಾರಣ’ ಎಂದು ಆರೋಪಿಸಿದರು.

‘ಯಾವುದೇ ತಪ್ಪು ಮಾಡದ ಜನರಿಗೆ ಮೂರು ಪಟ್ಟು ತೆರಿಗೆ ಕಟ್ಟುವಂತೆ ಪಾಲಿಕೆ ನೋಟಿಸ್ ಜಾರಿ ಮಾಡಿರುವುದು ಸರಿಯಲ್ಲ. ಈ ನಿರ್ಧಾರದಿಂದ ತಕ್ಷಣ ಹಿಂದೆಸರಿಯದಿದ್ದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

‘ಯಾವುದೇ ತೆರಿಗೆ ಸಂಬಂಧಿತ ವಿಚಾರದಲ್ಲಿ ತೀರ್ಮಾನ ಕೈಗೊಳ್ಳಬೇಕಾದರೆ ಆಗಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಳ್ಳಬೇಕು. ಕೋವಿಡ್ ಸಂಕಷ್ಟದ ಸಮಯದಲ್ಲಿ ಜನರ ಮೇಲೆ ದೌರ್ಜನ್ಯ ನಡೆಸುವಂಥ ನಿರ್ಧಾರ ಸರಿಯಲ್ಲ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ನಾಲ್ಕು ವರ್ಷಗಳ ತೆರಿಗೆಗೆ ಅಧಿಕಾರಿಗಳು ಈಗ ನೋಟಿಸ್ ಕೊಟ್ಟಿದ್ದಾರೆ. ಅಧಿಕಾರಿಗಳು ರದ್ದಾಗಿರುವ ಹಳೆ ಕಾಯ್ದೆ ಆಧಾರದ ಮೇಲೆ ನೋಟಿಸ್ ಕೊಡುತ್ತಿರುವುದು ಎಷ್ಟು ಸರಿ’ ಎಂದು ಪಿ.ಆರ್. ರಮೇಶ್ ಪ್ರಶ್ನಿಸಿದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕಠಿಣ ಪರಿಶ್ರಮಿಗಳಾದ ಭಾರತೀಯ ಮಹಿಳೆಯರಿಗೆ ಅವಕಾಶ ಮತ್ತು ಸ್ವಾತಂತ್ರ್ಯ ಸಿಕ್ಕರೆ ಏನನ್ನೂ ಸಾಧಿಸಬಲ್ಲರು. ಟೋಕಿಯೊ ಒಲಿಂಪಿಕ್ ಕೂಟದಲ್ಲಿ ದೇಶದ ಹೆಣ್ಣುಮಕ್ಕಳು ಜಯಿಸಿದ ಪದಕಗಳ ಹಿಂದಿರುವ ಶ್ರಮ ಸಣ್ಣದೇನಲ್ಲ.

ಕರಾವಳಿ, ಮಲೆನಾಡು ಭಾಗದಲ್ಲಿ ಮಳೆ 5

ಪಿಯು ವಿದ್ಯಾರ್ಥಿಗೆ ₹2,500, ಬಾಲಕಿಯರಿಗೆ ₹ 3000

'ಇಂದಿರಾ ಕ್ಯಾಂಟೀನ್ ಹೆಸರು ಬದಲಿಸಿ' 5

ರೈತರ ಮಕ್ಕಳಿಗೆ ಶಿಷ್ಯವೇತನ 5

ಟೋಕಿಯೊ ಅಂಗಳದಲ್ಲಿ ರಾಷ್ಟ್ರಗೀತೆ ಮೊಳಗಿಸಿದ ಭಾರತದ ಪ್ರತಿಭೆ: ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನಲ್ಲಿ ಮೊದಲ ಚಿನ್ನದ ಪದಕದ ಶ್ರೇಯ

ಚಿನ್ನದ ಹುಡುಗ ನೀರಜ್ ಚೋಪ್ರಾ

ಪ್ರತಿ ಸುತ್ತು

ಒಂದು 87.03 ಮೀ
ಎರಡು 87.58 ಮೀ
ಮೂರು 76.79 ಮೀ
ನಾಲ್ಕು/ಐದು ಫೌಲ್
ಆರು 84.24 ಮೀ

ಟೋಕಿಯೊ: ಒಲಿಂಪಿಕ್ ಕೂಟದ ಅಂಗಳದಲ್ಲಿ ಭಾರತದ ರಾಷ್ಟ್ರಗೀತೆ ಮೊಳಗಿತು. ಅದಕ್ಕೆ ಕಾರಣವಾಗಿದ್ದು 'ಚಿನ್ನದ ಹುಡುಗ' ನೀರಜ್ ಚೋಪ್ರಾ. ಒಲಿಂಪಿಕ್ಸ್‌ನ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಸ್ವರ್ಣಪದಕ ಗೆದ್ದ ಮೊದಲ ಅಥ್ಲೀಟ್ ಎಂಬ ಶ್ರೇಯಕ್ಕೆ ಅವರು ಪಾತ್ರರಾದರು.

ಟೋಕಿಯೊದಲ್ಲಿ ಶನಿವಾರ ಸಂಜೆ ನಡೆದ ಪುರುಷರ ಜಾವೆಲಿನ್ ಥ್ರೋನಲ್ಲಿ 87.58 ಮೀಟರ್ಸ್ ದೂರ ಎಸೆತದ ಸಾಧನೆ ಮಾಡಿದ ಅವರು, ತಮ್ಮ ಮೈಮೇಲೆ ತ್ರಿವರ್ಣ ಧ್ವಜ ಹೊದ್ದುಕೊಂಡು ನಲಿದರು. ಸ್ಥಿತಪ್ರಜ್ಞನಂತೆ ನಸುನಗುತ್ತ ಮನಗೆದ್ದರು. 23 ವರ್ಷದ ಹುಡುಗ, ವಿಜಯವೇದಿಕೆಯಲ್ಲಿ ಮಿರಿಮಿರಿ ಹೊಳೆವ ಚಿನ್ನದ ಪದಕವನ್ನು ತನ್ನ ಕೈಯಾರೆ ಕೊರಳಿಗೇರಿಸಿಕೊಂಡರು. ಆಗ ಅವರ ಕಂಗಳಲ್ಲಿ ಸಂತಸದ ಹನಿಗಳು ಜಿನುಗಿದ್ದವು. ಕೋವಿಡ್ ತಡೆ ನಿರ್ಬಂಧದಿಂದಾಗಿ ಕ್ರೀಡಾಂಗಣದಲ್ಲಿ ಪ್ರೇಕ್ಷಕರಿರಲಿಲ್ಲ. ಆದರೆ, ಟಿವಿ ಪರದೆಗಳ ಮುಂದೆ, ಸಾಮಾಜಿಕ ಜಾಲತಾಣಗಳ ಮೂಲಕ ಕಣ್ತುಂಬಿಕೊಂಡ ಕ್ರೀಡಾಭಿಮಾನಿಗಳ ಸಂತಸ ಹೊನಲಾಗಿ ಹರಿಯಿತು. ಅಥ್ಲೆಟಿಕ್ಸ್‌ನ ಈ ವಿಭಾಗದಲ್ಲಿ ಮೊದಲಿನಿಂದಲೂ ಇದ್ದ ಯುರೋಪ್, ರಷ್ಯಾ, ಅಮೆರಿಕ ದೇಶಗಳ ಪ್ರಾಬಲ್ಯವನ್ನು ನೀರಜ್ ಮುರಿದರು.

ಬಜರಂಗ್‌ಗೆ ಕಂಚು

ಭಾರತದ ಕುಸ್ತಿಪಟು ಬಜರಂಗ್ ಪೂನಿಯಾ ಪುರುಷರ 65 ಕೆಜಿ ವಿಭಾಗದ ಫ್ರೀಸ್ಟೈಲ್ ಕುಸ್ತಿಯಲ್ಲಿ ಕಂಚಿನ ಪದಕ ಜಯಿಸಿದರು

ಹೆಚ್ಚು ದೂರ ಎಸೆದ ಐವರು

ಕ್ರೀಡಾಪಟು	ದೇಶ	ಅಂತರ
ನೀರಜ್ ಚೋಪ್ರಾ		87.58
ಜಾಕುಬ್ ವಡ್ಲೆಜ್	ಜೆಕ್ ಗಣರಾಜ್ಯ	86.67
ವಿಟೆಜ್ಲಾವ್ ವೆಸೆಲಿ	ಜೆಕ್ ಗಣರಾಜ್ಯ	85.44
ಜುಲಿಯನ್ ವೆಬರ್	ಜರ್ಮನಿ	85.30
ಅರ್ಷದ್ ನದೀಮ್	ಪಾಕಿಸ್ತಾನ	84.62

ರಾಜ್ಯ ಕೋವಿಡ್ ಅಂಕಿ–ಅಂಶ

29,16,927 ▲ ಒಟ್ಟು ಸೋಂಕಿತರು (29,15,317 ನಿನ್ನೆಯ ವಿವರ)

24,266 ▼ ಸಕ್ರಿಯ ಪ್ರಕರಣಗಳು

28,55,862 ▲ ಗುಣಮುಖರಾದವರು

36,773 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,610	▼
ಗುಣಮುಖ	1,640	▼
ಸಾವು	32	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟ 7
ಉತ್ತರ ಭಾರತ: ಪ್ರವಾಹ–ರಕ್ಷಣಾ ಕಾರ್ಯ ಚುರುಕು

ಸಂಘನಿಷ್ಠರ ಅದೃಷ್ಟ: 'ವಲಸಿಗ'ರೂ ಇಷ್ಟ

ಬೆಂಗಳೂರು: ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರಕ್ಕೆ ಅಂಟಿದ್ದ ಕಳಂಕ ತೊಳೆಯಲು ಮುಂದಾಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ತಮ್ಮ ಸಹೋದ್ಯೋಗಿ ಗಳಿಗೆ ಖಾತೆ ಹಂಚಿಕೆ ಮಾಡುವಾಗ ಎಚ್ಚರದ ಹೆಜ್ಜೆ ಇಟ್ಟಿದ್ದಾರೆ. 4

ಎಸ್ಸೆಸ್ಸೆಲ್ಸಿ ಫಲಿತಾಂಶ ನಾಳೆ

ಬೆಂಗಳೂರು: 2020–21ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಸೋಮವಾರ (ಆಗಸ್ಟ್ 9) ಮಧ್ಯಾಹ್ನ 3.30ಕ್ಕೆ ಪ್ರಕಟವಾಗಲಿದೆ. 5

ತುರ್ತು ಬಳಕೆ: ಮತ್ತೊಂದು ಲಸಿಕೆಗೆ ಒಪ್ಪಿಗೆ

ನವದೆಹಲಿ: ಜಾನ್ಸನ್ ಆ್ಯಂಡ್ ಜಾನ್ಸನ್ ಕಂಪನಿಯ ಒಂದೇ ಡೋಸ್ ಕೋವಿಡ್ ಲಸಿಕೆಯ ತುರ್ತು ಬಳಕೆಗೆ ಭಾರತದಲ್ಲಿ ಅನುಮೋದನೆ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವೀಯ ಶನಿವಾರ ತಿಳಿಸಿದ್ದಾರೆ. 5

ಚಿನಕುರಳಿ
ಪ್ರಕಾಶ್ ಶೆಟ್ಟಿ

ನಿಮ್ಮ ಪರಿಪೂರ್ಣ ಸಂಗಾತಿಯ ಜೊತೆ ಹೊಸ ಕುಟುಂಬವನ್ನು m4marry.com ನೊಂದಿಗೆ ಹುಡುಕಿ.

Register for free

m4marry.com
Where *families* find each other

Call: 79949 10999 9048112340

RAMAIAH Institute of Technology

PROVIDING QUALITY EDUCATION 60 YEARS EXCELLENCE IN

ADMISSIONS OPEN

Dr. M S RAMAIAH, FIAE
(1922-1997)
Founder Chairman

YOUR First Step to a Great Career

RIT is among India's most respected names in engineering education and has produced more than 45,000+ engineers who serve in enterprises across the globe. RIT is an autonomous institution affiliated to VTU and offers programs with a constantly updated, Industry relevant syllabi.

Our students are placed in over 300+ reputed companies.

Ranked #1 AMONG ENGINEERING COLLEGES (VTU) IN KARNATAKA

Ranked 59 BEST ENGINEERING INSTITUTE AMONG 1071 REPUTED INSTITUTES IN INDIA
- As per NIRF, MHRD, Govt. of India. 2020

RIT proud to introduce the new undergraduate courses:
- Computer Science and Engineering (Artificial Intelligence and Machine Learning)
- Computer Science and Engineering (Cyber Security)
- Artificial Intelligence and Machine Learning
- Artificial Intelligence and Data Science

Undergraduate Courses
- Civil Engg.
- Mechanical Engg.
- Electrical & Electronics Engg.
- Electronics & Communication Engg.
- Computer Sciences & Engg.
- Chemical Engg.
- Industrial Engg. & Management
- Electronics & Instrumentation Engg.
- Information Science and Engg.
- Electronics & Telecommunication Engg.
- Medical Electronics Engg.
- Bio-Technology
- Bachelor of Architecture

Postgraduate Courses
M.Tech. in :
- Structural Engg.
- Manufacturing Science & Engg.
- Computer Science & Engg.
- Digital Electronics & Communication Engg.
- Software Engg.
- Computer Applications in Industrial Drives
- Digital Communication
- Computer Integrated Manufacturing
- Industrial Engg.
- Bio- Technology
- VLSI Design & Embedded Systems
- Computer Network Engg.

M.Arch. in • Landscape Architecture
MBA: Master of Business Administration
MCA: Master of Computer Applications

Eighteen Research Centres Leading to
- Ph. D. / M.Sc. Engg. (By Research)

HIGHLIGHTS
- State-of-the-art campus with wi-fi connectivity
- Highly qualified and experienced faculty Dynamic Teaching Methodology
- Challenging, contemporary syllabi Excellent placements
- Autonomous since 2007
- Strong Industry alliances

Ramaiah Institute of Technology
(Registered as: M. S. Ramaiah Institute of Technology)
Autonomous Institute, Affiliated to VTU, Approved by AICTE, New Delhi & Govt. of Karnataka, Accredited by NBA & NAAC with A+ Grade
MS Ramaiah Nagar, MSRIT Post, Bengaluru - 54.
Email: admn@msrit.edu | principal@msrit.edu;
For admissions please contact: +91 80 2360 7902
2360 0822 | 2360 6934 | 2360 6936 | Extn: 338 & 333 www.msrit.edu
* Conditions Apply

ಯುವತಿ ಮೇಲೆ ಹಲ್ಲೆ ವ್ಯವಸ್ಥಾಪಕ ಬಂಧನ

ಬೆಂಗಳೂರು: ತಮ್ಮ ಜೊತೆ ಕೆಲಸ ಮಾಡುತ್ತಿದ್ದ ಯುವತಿ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಪುರುಷೋತ್ತಮ್ ಎಂಬುವರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ಪುರುಷೋತ್ತಮ್, ಬನಶಂಕರಿ ಬಳಿಯ ಡಾಮಿನೋಸ್ ಮಳಿಗೆಯಲ್ಲಿ ವ್ಯವಸ್ಥಾಪಕರಾಗಿದ್ದರು. ಯುವತಿ ಅದೇ ಮಳಿಗೆಯಲ್ಲೇ ಕೆಲಸ ಮಾಡುತ್ತಿದ್ದರು. ತಮ್ಮನ್ನು ಪ್ರೀತಿಸಲು ಒಪ್ಪಲಿಲ್ಲವೆಂಬ ಕಾರಣಕ್ಕೆ ಯುವತಿ ಮೇಲೆ ಆರೋಪಿ ಹಲ್ಲೆ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ಮೂರು ತಿಂಗಳ ಹಿಂದೆ ನಡೆದಿದ್ದ ಹಲ್ಲೆ ಬಗ್ಗೆ ಯುವತಿ ಯಾವುದೇ ದೂರು ನೀಡಿರಲಿಲ್ಲ. ಹಲ್ಲೆ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಹರಿದಾಡಿತ್ತು. ವಿಡಿಯೊ ಆಧರಿಸಿ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲಾಗಿತ್ತು. ಅದರನ್ವಯ ಆರೋಪಿಯನ್ನು ಬಂಧಿಸಲಾಗಿದೆ’ ಎಂದರು.

ಪಿಎಚ್.ಡಿ: ಬಾಕಿ ಸೀಟು ಭರ್ತಿಗೆ ಕೌನ್ಸೆಲಿಂಗ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ನಡೆಸಿದ ಪಿಎಚ್.ಡಿ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಹಂಚಿಕೆಯಾಗದೆ ಉಳಿದಿರುವ ಬಾಕಿ ಸೀಟುಗಳ ಭರ್ತಿಗಾಗಿ ಇದೇ 12ರಂದು ಕೌನ್ಸೆಲಿಂಗ್ ನಡೆಯಲಿದೆ. ಎಲ್ಲ ಸ್ನಾತಕೋತ್ತರ ವಿಭಾಗಗಳ ಕಚೇರಿಯಲ್ಲಿ ಅಂದು ಬೆಳಿಗ್ಗೆ 9.30ಕ್ಕೆ ಕೌನ್ಸೆಲಿಂಗ್ ನಡೆಸಲಾಗುವುದು. ಜ್ಯೇಷ್ಠತಾ ಪಟ್ಟಿಯಲ್ಲಿದ್ದು ಆಯ್ಕೆಯಾಗದೆ ಉಳಿದಿರುವ ಅಭ್ಯರ್ಥಿಗಳು ಪ್ರವೇಶ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಆಸ್ತಿ ತೆರಿಗೆ: ವ್ಯತ್ಯಾಸದ ಮೊತ್ತಕ್ಕೆ ದಂಡ ವಿಧಿಸಬೇಡಿ– ಕಾಂಗ್ರೆಸ್ ಒತ್ತಾಯ

ತಪ್ಪು ಮಾಡದ ಆಸ್ತಿ ಮಾಲೀಕರಿಗೇಕೆ ಶಿಕ್ಷೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆಯನ್ನು 2016-17ನೇ ಸಾಲಿನಿಂದ ಪರಿಷ್ಕರಿಸಲಾಗಿದೆ. ಆಗ ವಲಯ ವರ್ಗೀಕರಣವನ್ನೂ ನಡೆಸಲಾಗಿತ್ತು. ಆಗ ಆಸ್ತಿ ಇರುವ ವಲಯ ಗುರುತಿಸುವಾಗ ಆಗಿರುವ ಲೋಪವನ್ನು ಪತ್ತೆ ಹಚ್ಚಿರುವ ಬಿಬಿಎಂಪಿ ವ್ಯತ್ಯಾಸದ ಮೊತ್ತಕ್ಕೆ ದಂಡವನ್ನು ಬಡ್ಡಿ ಸಮೇತ ಪಾವತಿಸುವಂತೆ ಮಾಲೀಕರಿಗೆ ನೋಟಿಸ್ ಜಾರಿಗೊಳಿಸುತ್ತಿದೆ. ಪಾಲಿಕೆಯ ಈ ಕ್ರಮಕ್ಕೆ ಕಾಂಗ್ರೆಸ್ ಪಕ್ಷವು ಆಕ್ಷೇಪ ವ್ಯಕ್ತಪಡಿಸಿದೆ.

ಈ ಕುರಿತು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಮನವಿ ಸಲ್ಲಿಸಿರುವ ಕಾಂಗ್ರೆಸ್ ಮುಖಂಡರಾದ ಎಂ.ಶಿವರಾಜು ಹಾಗೂ ಅಬ್ದುಲ್ ವಾಜೀದ್, ‘ಆಸ್ತಿಯ ವರ್ಗೀಕರಣದ ಬಳಿಕ ವಲಯ ಗುರುತಿಸುವಲ್ಲಿ ಆಗಿರುವ ಲೋಪಕ್ಕೆ ಅದರ ಮಾಲೀಕರು ಕಾರಣರಲ್ಲ. ಅವರು ಮಾಡದ ತಪ್ಪಿಗೆ ನಾಲ್ಕು ವರ್ಷಗಳಿಗೆ ವಾರ್ಷಿಕ ಶೇ 24ರಂತೆ ದಂಡನಾ ಬಡ್ಡಿ ವಿಧಿಸಲಾಗುತ್ತಿದೆ. ಇದು ಸರಿಯಲ್ಲ. ಇದನ್ನು ಕೈಬಿಡಬೇಕು’ ಎಂದು ಒತ್ತಾಯಿಸಿದರು.

‘ಎರಡು ವರ್ಷಗಳಿಂದ ಕೋವಿಡ್ ಸಾಂಕ್ರಾಮಿಕ ರೋಗದಿಂದ ಜನರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಕ್ರಮ ಕೈಗೊಳ್ಳುವುದೂ ಸಮಂಜಸವಲ್ಲ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್ ಮುಖಂಡರಾದ ಅಬ್ದುಲ್ ವಾಜಿದ್ ಹಾಗೂ ಎಂ.ಶಿವರಾಜು ಅವರು ಗೌರವ್ ಗುಪ್ತ ಅವರಿಗೆ ಶನಿವಾರ ಮನವಿ ಸಲ್ಲಿಸಿದರು

‘ಬಿಬಿಎಂಪಿಯು 2008-09ನೇ ಸಾಲಿನಲ್ಲಿ ಜಾರಿಗೆ ತಂದ ಸ್ವಯಂ ಘೋಷಿತ ಆಸ್ತಿ ತೆರಿಗೆ (ಎಸ್.ಎ.ಎಸ್) ನಿಯಮ 12(1)ರ ಪ್ರಕಾರ ಆಸ್ತಿ ತೆರಿಗೆಗೆ ಸಂಬಂಧಿಸಿದ ಆಯ್ದ ಅರ್ಜಿಗಳನ್ನು ಮಾತ್ರ ಪರಿಶೀಲನೆಗೆ ಆಯ್ಕೆ ಮಾಡಿಕೊಳ್ಳಬೇಕು. ಈ ನಿಯಮಗಾಳಿಗೆ ತೂರಿ ಲಕ್ಷಾಂತರ ಆಸ್ತಿಗಳ ಮಾಲೀಕರಿಗೆ ತೆರಿಗೆ ಪರಿಷ್ಕರಿಸಲಾಗಿದೆ’ ಎಂದು ಅವರು ದೂರಿದ್ದಾರೆ.

‘1976ರ ಕೆಎಂಸಿ ಕಾಯ್ದೆಯ ಸೆಕ್ಷನ್ 108 ಎ 13 (ಬಿ) ಹಾಗೂ 2020ರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 144 (15) (ಬಿ) ಪ್ರಕಾರ ಅರ್ಜಿಗಳನ್ನು ಪರಿಶೀಲಿಸಿದ ನಂತರ ಪರಿಷ್ಕೃತ ತೆರಿಗೆ ಹಾಗೂ ಪಾವತಿಸಿರುವ ತೆರಿಗೆಯ ವ್ಯತ್ಯಾಸದ ಮೊತ್ತಕ್ಕೆ ಶೇ 2ರಷ್ಟು ದಂಡವನ್ನು ಮಾತ್ರ ವಿಧಿಸಬಹುದಾಗಿದೆ. ಆದರೆ, ವ್ಯತ್ಯಾಸದ ಮೊತ್ತಕ್ಕೆ ವಾರ್ಷಿಕ ಶೇ 24 ರಷ್ಟು ಬಡ್ಡಿ ವಿಧಿಸಲಾಗಿದೆ. ಈ ದಂಡವನ್ನು ಪ್ರತಿ ವರ್ಷ ವಿಧಿಸಿರುವುದು ಕೂಡಾ ತಪ್ಪು’ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘2008-09ರ ನಿಯಮಾವಳಿಯಂತೆ 'ಎಫ್' ವಲಯದಲ್ಲಿದ್ದ ಕೆಲವು ಆಸ್ತಿಗಳು 2016-17ರ ನಿಯಮಗಳ ಪ್ರಕಾರ 'ಡಿ' ವಲಯಕ್ಕೆ ಬಂದಿದ್ದವು. 2016-17ರಲ್ಲಿ ಬಿಬಿಎಂಪಿಯು ಆಸ್ತಿ ತೆರಿಗೆ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸದ ಕಾರಣ ಅನೇಕರು 'ಎಫ್' ವಲಯದ ದರದ ಪ್ರಕಾರ ತೆರಿಗೆ ಪಾವತಿಸಿದ್ದಾರೆ. ಇದರಲ್ಲಿ ಆಸ್ತಿ ಮಾಲೀಕರ ತಪ್ಪು ಇಲ್ಲ. ಅವರದಲ್ಲದ ತಪ್ಪಿಗೆ ದಂಡ ಬಡ್ಡಿ ವಿಧಿಸಿರುವುದು ನ್ಯಾಯ ಸಮ್ಮತವಲ್ಲ. ಈ ಅನ್ಯಾಯ ತಡೆಯಲು ಹೆಚ್ಚುವರಿಯಾಗಿ ‘ಇ’ ವಲಯವನ್ನು ಸೃಷ್ಟಿಸಿ ತೆರಿಗೆ ಪಾವತಿಸಲು ಅವಕಾಶ ಕಲ್ಪಿಸಬಹುದು’ ಎಂದು ಅವರು ಸಲಹೆ ನೀಡಿದ್ದಾರೆ.

‘2021ರ ಫೆಬ್ರುವರಿಯಲ್ಲೇ ಬಿಬಿಎಂಪಿ ನೋಟಿಸ್ ಸಿದ್ಧಪಡಿಸಿದ್ದರೂ ಐದು ತಿಂಗಳು ತಡವಾಗಿ ಆಸ್ತಿ ಮಾಲೀಕರಿಗೆ ಜಾರಿ ಮಾಡಲಾಗುತ್ತಿದೆ. ತೆರಿಗೆ ಪಾವತಿ ವಿಳಂಬಕ್ಕೆ ತಿಂಗಳಿಗೆ ಶೇ 2 ರಷ್ಟು ಬಡ್ಡಿ ನೀಡುವಂತೆಯೂ ನೋಟಿಸ್‌ನಲ್ಲಿ ಸೂಚಿಸಲಾಗಿದೆ. ತಡವಾಗಿ ನೋಟಿಸ್ ಜಾರಿಗೊಳಿಸಿದ್ದಕ್ಕೆ ಅಧಿಕಾರಿಗಳು ಹೊಣೆಯೇ ಹೊರತು ತೆರಿಗೆದಾರರಲ್ಲ’ ಎಂದರು.

‘ಮಧ್ಯಮ ವರ್ಗಗಳ ಅನೇಕ ಕುಟುಂಬಗಳು ಮನೆ ಬಾಡಿಗೆಯಿಂದಲೇ ಜೀವನ ನಡೆಸುತ್ತಿದ್ದವು. ಕೋವಿಡ್ ಕಾಣಿಸಿಕೊಂಡ ಬಳಿಕ ನಗರದಲ್ಲಿ 3 ಲಕ್ಷದಷ್ಟು ಬಾಡಿಗೆ ಮನೆಗಳು ಖಾಲಿ ಇವೆ. ಕೆಲವು ಕಾರ್ಮಿಕರು, ಬಡ ವ್ಯಾಪಾರಸ್ಥರು ವರಮಾನವಿಲ್ಲದೇ ಮನೆ ಬಾಡಿಗೆಯನ್ನು ಪಾವತಿಸುತ್ತಿಲ್ಲ. ಇಂತಹ ಮನೆಗಳ ಮಾಲೀಕರಿಗೆ ಮನೆ ಬಾಡಿಗೆ ವರಮಾನವೂ ಇಲ್ಲ. ಅನೇಕ ಸಾರ್ವಜನಿಕರು ವಿವಿಧ ತೆರಿಗೆಗಳನ್ನು ಎರಡು ವರ್ಷಗಳ ಮಟ್ಟಿಗೆ ಮನ್ನಾ ಮಾಡುವಂತೆ ಸರ್ಕಾರವನ್ನೂ ಕೋರಿದ್ದಾರೆ. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಆಸ್ತಿ ತೆರಿಗೆಯ ಬಾಕಿ ಮೊತ್ತಕ್ಕೆ ದುಬಾರಿ ದಂಡ ವಿಧಿಸಿ ವಸೂಲಿ ಮಾಡುವುದನ್ನು ಕೈ ಬಿಡಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

‘ಅಹವಾಲು ಪರಿಶೀಲಿಸಿ ಕ್ರಮ’

‘2016-17ರಲ್ಲಿ ಆಸ್ತಿ ತೆರಿಗೆ ವಲಯಗಳ ಮರು ವರ್ಗೀಕರಣ ಸಂದರ್ಭದಲ್ಲಿ ‘ಸಿ’ ವಲಯದಲ್ಲಿದ್ದ ಕೆಲವು ಮನೆಗಳು ‘ಎ’ ವಲಯಕ್ಕೆ ಬಂದಿದ್ದವು. ಆದರೂ ಕೆಲವು ಮಾಲೀಕರು ಆಸ್ತಿ ಇರುವ ವಲಯವನ್ನು ತಪ್ಪಾಗಿ ಗುರುತಿಸಿದ್ದಾರೆ. ತೆರಿಗೆಯ ಪರಿಷ್ಕೃತ ದರವನ್ನು ಪಾವತಿಸಿಲ್ಲ. ಪರಿಶೀಲನೆ ನಡೆಸಿದಾಗ ಇಂತಹ ಅನೇಕ ಲೋಪಗಳು ಬೆಳಕಿಗೆ ಬಂದಿದೆ. ಈ ತಪ್ಪನ್ನು ಸರಿಪಡಿಸಲು ಬಿಬಿಎಂಪಿ ಕ್ರಮ ಕೈಗೊಳ್ಳುತ್ತಿದೆ. ಇದರಿಂದ ಆಸ್ತಿ ಮಾಲೀಕರಿಗೆ ಹೊರೆ ಆಗುತ್ತಿದೆ ಎಂಬ ದೂರುಗಳು ಬಂದಿವೆ. ಅಹವಾಲುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ’ ಎಂದು ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿ 2 ನಿಮಿಷ

‘ಎಲ್‌ಇಡಿ ಬೀದಿದೀಪ ಅಳವಡಿಕೆ ಕಾಮಗಾರಿ ಚುರುಕುಗೊಳಿಸಿ’

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಈಗಿರುವ ಬೀದಿದೀಪಗಳಿಗೆ ಬದಲಾಗಿ ಎಲ್‌ಇಡಿ ದೀಪಗಳನ್ನು ಅಳವಡಿಸುವ ಕಾಮಗಾರಿಯ ಅನುಷ್ಠಾನಕ್ಕೆ ಮೀನಮೇಷ ಎಣಿಸಲಾಗುತ್ತಿದೆ. ದಾಸರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಕಾಮಗಾರಿಗೆ ಕೂಡಲೇ ಚಾಲನೆ ನೀಡಬೇಕು’ ಎಂದು ಈ ಕ್ಷೇತ್ರದ ಶಾಸಕ ಆರ್. ಮಂಜುನಾಥ್ ಒತ್ತಾಯಿಸಿದ್ದಾರೆ.



‘ಈಗಿರುವ ಬೀದಿದೀಪಗಳನ್ನು ಎಲ್‌ಇಡಿ ದೀಪಗಳನ್ನಾಗಿ ಬದಲಿಸಲು ಒಂಟಿ ಪ್ಯಾಕೇಜ್ ಅಡಿ ಜಾಗತಿಕ ಟೆಂಡರ್ ಕರೆಯಲಾಗಿತ್ತು. ಈ ಪ್ರಕ್ರಿಯೆ ಪೂರ್ಣಗೊಂಡು ಕಾರ್ಯಾದೇಶ ನೀಡಿ ಎರಡು ವರ್ಷಗಳು ಕಳೆದರೂ ಕಾಮಗಾರಿ ಅನುಷ್ಠಾನಗೊಂಡಿಲ್ಲ. ಬೀದಿ ದೀಪಗಳು ಇಲ್ಲದ ಕಾರಣ, ದಾಸರಹಳ್ಳಿ ವ್ಯಾಪ್ತಿಯಲ್ಲಿ ರಾತ್ರಿಯ ವೇಳೆ ರಸ್ತೆ ಅಪಘಾತ ಹಾಗೂ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ’ ಎಂದು ಅವರು ಹೇಳಿದ್ದಾರೆ.

‘ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು. ತಪ್ಪಿದಲ್ಲಿ ಬಿಬಿಎಂಪಿ ವಿದ್ಯುತ್ ವಿಭಾಗದ ವತಿಯಿಂದ ಬೀದಿ ದೀಪಗಳನ್ನು ಖರೀದಿಸಲು ಸೂಕ್ತ ಅನುದಾನ ಒದಗಿಸಲು ಸಂಬಂಧಪಟ್ಟವರಿಗೆ ಸೂಚಿಸಬೇಕು’ ಎಂದು ಬಿಬಿಎಂಪಿ ಆಡಳಿತಾಧಿಕಾರಿಯವರಿಗೆ ಅವರು ಪತ್ರ ಬರೆದಿದ್ದಾರೆ.

ಹಾಪ್‌ಕಾಮ್ಸ್: ಗ್ರಾಹಕರಿಗೆ ಸಸಿ ವಿತರಣೆ

ಬೆಂಗಳೂರು: ‘ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘದ (ಹಾಪ್‌ಕಾಮ್ಸ್) ಸಂಸ್ಥಾಪಕ ಎಂ.ಎಚ್. ಮರಿಗೌಡ ಅವರ ಜನ್ಮದಿನದ ಅಂಗವಾಗಿ ಸಂಸ್ಥೆಯ ಮಳಿಗೆಗಳಲ್ಲಿ ₹500ಕ್ಕಿಂತ ಮೇಲ್ಪಟ್ಟು ಉತ್ಪನ್ನಗಳನ್ನು ಖರೀದಿಸುವ ಗ್ರಾಹಕರಿಗೆ ಹೂವಿನ ಅಥವಾ ಅಲಂಕಾರಿಕ ಸಸಿಗಳನ್ನು ಉಚಿತವಾಗಿ ವಿತರಿಸಲಾಗುವುದು’ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ ತಿಳಿಸಿದರು.

ಹಾಪ್‌ಕಾಮ್ಸ್ ಕೇಂದ್ರ ಕಚೇರಿಯಲ್ಲಿ ಗ್ರಾಹಕರಿಗೆ ಸಸಿ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ತೋಟಗಾರಿಕೆ ಇಲಾಖೆಯ ಪಿತಾಮಹ ಹಾಗೂ ಸಸ್ಯಪ್ರೇಮಿಯೂ ಆಗಿದ್ದ ಎಂ.ಎಚ್.ಮರಿಗೌಡ ಅವರನ್ನು ಸ್ಮರಿಸುವ ಉದ್ದೇಶದಿಂದ ಸಂಸ್ಥೆಯ ಆಯ್ದ 50ಕ್ಕೂ ಹೆಚ್ಚು ಮಳಿಗೆಗಳಲ್ಲಿ ಗ್ರಾಹಕರಿಗೆ 2 ಸಾವಿರ ಸಸಿ ಗಳನ್ನು ವಿತರಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು

‘ಶನಿವಾರವೇ ಸಾಕಷ್ಟು ಮಂದಿ ಗ್ರಾಹಕರು ಉತ್ಪನ್ನ ಖರೀದಿಸಿ, ಸಸಿಗಳನ್ನು ಪಡೆದಿದ್ದಾರೆ. ಸೋಮವಾರದಿಂದ ಸಸಿಗಳ ವಿತರಣೆ ಮುಂದುವರಿಯಲಿದೆ. ಬರುವ ವರ್ಷ ಗ್ರಾಹಕರಿಗೆ ಹಣ್ಣಿನ ಸಸಿಗಳನ್ನು ವಿತರಿಸಲು ಉದ್ದೇಶಿಸಲಾಗಿದೆ’ ಎಂದು ತಿಳಿಸಿದರು.

ಹಾಪ್‌ಕಾಮ್ಸ್ ಅಧ್ಯಕ್ಷ ಎನ್.ದೇವರಾಜು,‘ರೈತರ ಬಗ್ಗೆ ಕಳಕಳಿ ಮತ್ತು ದೂರದೃಷ್ಟಿ ಹೊಂದಿದ್ದ ಮರಿಗೌಡ ಅವರು ಹಾಪ್‌ಕಾಮ್ಸ್ ಸಂಸ್ಥೆ ಹುಟ್ಟುಹಾಕಿದರು. ರೈತರಿಗೆ ಒಳ್ಳೆಯ ಸಸಿಗಳು ಸಿಗಬೇಕೆಂದು ರಾಜ್ಯದ ಹಲವು ಸ್ಥಳಗಳಲ್ಲಿ ನರ್ಸರಿಗಳನ್ನು ತೆರೆದಿದ್ದರು. ಇದರಿಂದ ರೈತರಿಗೆ ಅನುಕೂಲವಾಗಿದೆ’ ಎಂದರು.

ಪೌಷ್ಟಿಕ ಆಹಾರ ಸೇವಿಸಿ

ರಾಮಾಶ್ರಮ:ವೈಭವದ ಶ್ರೀರಾಮ ಪಟ್ಟಾಭಿಷೇಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಮಾಯಣ ಪಾರಾಯಣದಿಂದ ಧಾರ್ಮಿಕ ವಾತಾವರಣ ನಿರ್ಮಾಣ ಸಾಧ್ಯವಾಗಲಿದೆ. ರಾಮಾಯಣದ ಸತ್ವ ಶಕ್ತಿಯೇ ಅಂತಹದ್ದು. ಅನೇಕ ಸನ್ನಿವೇಶಗಳು ಸ್ವತಃ ಅನುಭವಕ್ಕೆ ಬಂದಿವೆ’ ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ ತಿಳಿಸಿದರು.

ಗಿರಿನಗರದ ರಾಮಾಶ್ರಮದಲ್ಲಿ ‘ಶ್ರೀರಾಮಸಾಮ್ರಾಜ್ಯ ಪಟ್ಟಾಭಿಷೇಕ’ ನೆರವೇರಿಸಿ ಅವರು ಆಶೀರ್ವಚನ ನೀಡಿದರು. ‘ಆಡಳಿತ ಎಂದೊಡನೆ ರಾಮರಾಜ್ಯದ ನೆನಪಾಗುತ್ತದೆ. ರಾಮನ ನಂತರ ಕೋಟ್ಯಾಂತರ ರಾಜರು ಆಳ್ವಿಕೆ ನಡೆಸಿದರು. ಆದರೆ, ಇಂದಿಗೂ ರಾಮರಾಜ್ಯಕ್ಕೆ ಸಾಟಿಯಿಲ್ಲ. ಹಾಗೆಯೇ, ರಾಮಾಯಣದ ನಂತರ ಕೋಟಿಗಟ್ಟಲೆ ಕಾವ್ಯಗಳು ರಚನೆಯಾಗಿವೆ. ಆದರೂ ರಾಮಾಯಣಕ್ಕೆ ಸಾಟಿಯಾಗಬಲ್ಲ ಮತ್ತೊಂದು ಕಾವ್ಯವಿಲ್ಲ. ರಾಮಾಯಣದ ಒಂದೊಂದು ಸರ್ಗ ಓದುತ್ತಾ ಹೋದಾಗ ಒಂದೊಂದು ಭಾವ ಹಾಗೂ ಸಾಕ್ಷಾತ್ಕಾರ ಪ್ರಾಪ್ತವಾಗುತ್ತದೆ’ ಎಂದರು.

ರಾಮ ಮತ್ತು ಸೀತೆಗೆ ರಾಘವೇಶ್ವರ ಭಾರತಿ ಸ್ವಾಮೀಜಿ ಪೂಜೆ ಸಲ್ಲಿಸಿದರು.

‘ವಿಕೃತವಾದ ಮನಸ್ಸೇ ರಾವಣ. ಹತ್ತು ಇಂದ್ರಿಯಗಳೇ ರಾವಣನ ಹತ್ತು ತಲೆಗಳ ಪ್ರತೀಕ. ವಿವೇಕ ಎಂಬ ಬಾಣ ಪ್ರಯೋಗದಿಂದಷ್ಟೇ ಇದನ್ನು ನಿಗ್ರಹಿಸಿ, ರಾಮರಾಜ್ಯ ಸ್ಥಾಪಿಸಲು ಸಾಧ್ಯ’ ಎಂದು ಹೇಳಿದರು.

ಸೀತಾರಾಮಚಂದ್ರರಿಗೆ ಸಾಮ್ರಾಜ್ಯ ಪಟ್ಟಾಭಿಷೇಕದ ವಿಧಿಗಳನ್ನು ನೆರವೇರಿಸಿದ ಅವರು, ವಿವಿಧ ಪುಣ್ಯನದಿಗಳ ಜಲ, ಧಾನ್ಯ, ಮಂಗಲ ದ್ರವ್ಯಗಳಿಂದ ಅಭಿಷೇಕ ಮಾಡಿ, ದೇವರಾಜೋಪಚಾರ ಪೂಜೆ ನೆರವೇರಿಸಿದರು. ಮಠದ ಶಾಖೆಗಳು, ಅಂಗಸಂಸ್ಥೆಗಳು, ಆಡಳಿತ ವ್ಯವಸ್ಥೆ ಹಾಗೂ ಶಿಷ್ಯ ಸಮುದಾಯ ರಾಮನಿಗೆ ಪಟ್ಟಕಾಣಿಕೆ ಸಲ್ಲಿಸಿತು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ರಾಮನಗರ ವಿಭಾಗ, ಸಂಚಾರ ಶಾಖೆ
ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ ರಾಮನಗರ–562159.

ಸಂಖ್ಯೆ.ಕರಾಸಾ.ರಾನವಿ.ಸಂ.ವಾ/ 782:783/21–22 ದಿ.05.08.2021

“ಇ–ಟೆಂಡರ್ ಪ್ರಕಟಣೆ ಸಂ:05 & ಮಾನ್ಯುಯಲ್ ಟೆಂಡರ್ ಪ್ರಕಟಣೆ ಸಂ:06–21–22”

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಆನೇಕಲ್ ಹಾಗೂ ಕನಕಪುರ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು **ದಿ:27.08.2021ರಂದು 14:00 ಗಂಟೆಗೆ** ಇ–ಟೆಂಡರ್ ನಡೆಸಲು/ತೆರೆಯಲು ಸಮಯವನ್ನು ನಿಗಧಿಪಡಿಸಲಾಗಿರುತ್ತದೆ. **ದಿ:05.08.2021** ರಿಂದ ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://www.eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ದಿನಾಂಕ:25.08.2021ರ ಮಧ್ಯಾಹ್ನ 14:00 ಗಂಟೆಯವರೆಗೆ** ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ ಹಾಗೂ ಕೋಡಂಬಹಳ್ಳಿ ಹಾಗೂ ಸೋಲೂರು ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ ಮಾನ್ಯುಯಲ್–ಟೆಂಡರ್ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡವ ಸಲುವಾಗಿ **ದಿ:27.08.2021ರಂದು 12:00 ಗಂಟೆಗೆ** ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಮ್ಯಾನ್ಯುಯಲ್ ಟೆಂಡರ್‌ನ್ನು ನಡೆಸಲಾಗುವುದು. ಮಾನ್ಯುಯಲ್ ಟೆಂಡರ್ ಅರ್ಜಿಗಳನ್ನು **ದಿನಾಂಕ:05.08.2021** ರಿಂದ **ದಿನಾಂಕ:25.08.2021ರ 15:00 ಗಂಟೆಗಳವರೆಗೆ** ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159**ರಲ್ಲಿ ಸಂಪರ್ಕಿಸಲು ಕೋರಲಾಗಿದೆ. **ದೂ.ಸಂ:080–27272306** ಹಾಗೂ ವಿಭಾಗ ಸಂಚಲನಾಧಿಕಾರಿಗಳ **ಮೊಬೈಲ್ ಸಂ:7760990852.**

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ : ರಾಮನಗರ

ವಾಸಾಸಂಇ/ಬೆಂನ/1094/
ಅಲಕ್‌ನಂದ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC NOTICE

The General Public are hereby notified that my clients propose to purchase the Schedule Property belonging to Mr.V.Namakeerthi, S/o Late V.M. Venkatappa, resident of Horamavu, Krishnarajapuram Hobli, Bangalore East Taluk.

The General Public are hereby notified that if any person/s having any claim/s in respect of the Schedule Property or objections for the proposed sale transaction, may lodge their claims/objections with documentary proof to reach the undersigned within 7 days from the date of publication of this notice, failing which, thereafter my clients shall proceed to complete the sale transaction and claims/objections received beyond the stipulated period will not be entertained.

SCHEDULE PROPERTY

All that piece and parcel of immovable property being a residentially converted land bearing Survey No.74/1 of Horamavu Village, K.R.Puram Hobli, Bangalore East Taluk, vide Conversion Order dated 24.02.2005, No.ALN(P): SR:250/2004-05, by the Deputy Commissioner, Bangalore District, measuring 35 Guntas and including all rights, privilege, appurtenances thereto and bounded as follows:

East by : C.Byrappa's Property
West by : Road
North by : Road
South by : Fernandes Layout.

N. JAIPRAKASH RAO, VEENA RAO, N. ASHOK KUMAR
JAYPEE ASSOCIATES
“LAW FIRM”
No.38, “KRISHNA” 1st Cross, Malleswaram, BANGALORE - 560 003.
Phone No: 080-2356360, 23468742
E-mail :contact@jaypeeassociates.com
Date: 08.08.2021

ಕಾವೇರಿ ಆಸ್ಪತ್ರೆ ವತಿಯಿಂದ ಆರೋಗ್ಯ ಕ್ಷೇತ್ರದ ಯೋಧರಿಗೆ ಪ್ರಶಸ್ತಿ ಪಧಾನ, ನಾವಿನ್ಯತೆ ಮೆರೆದ ಆಸ್ಪತ್ರೆಗಳಿಗೆ ಪ್ರಶಸ್ತಿ

ಡಾ.ವಿಜಯಭಾಸ್ಕರನ್, ಅಧ್ಯಕ್ಷರು ಸಂಘಟನಾ ಸಮಿತಿ ಕೃತಜ್ಞ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು, ಕಾವೇರಿ ಆಸ್ಪತ್ರೆ (ಕೇಂದ್ರ) ಮತ್ತು ಶ್ರೀ ವಿಲ್ಫ್ರೆಡ್ ಸ್ಯಾಮ್ಸನ್ (ಡಾ. ವಿಜಯಭಾಸ್ಕರನ್ ಅವರ ಬಲಕ್ಕೆ) ಕೃತಜ್ಞಾ ಪುರಸ್ಕೃತರೊಂದಿಗೆ ಭಂಗಿ

ಕೊರೋನ ಸಾಂಕ್ರಮಿಕವನ್ನು ಹಿಮ್ಮೆಟ್ಟಿಸುವಲ್ಲಿ ಆರೋಗ್ಯ ಕ್ಷೇತ್ರದ ಪಾಲು ಹೆಚ್ಚು. ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಯೋಧರನ್ನು ಸನ್ಮಾನಿಸುವ ನಿಟ್ಟನಲ್ಲಿ ಕಾವೇರಿ ಆಸ್ಪತ್ರೆ ವತಿಯಿಂದ ಜುಲೈ 31ರಂದು ಕೃತಜ್ಞ ಕಾರ್ಯಕ್ರಮದ ಮೂಲಕ ಧನ್ಯವಾದ ಅರ್ಪಿಸಲಾಯಿತು. ಈ ಕಾರ್ಯಕ್ರಮಕ್ಕೆ 100 ಕ್ಕೂ ಹೆಚ್ಚು ಆರೋಗ್ಯ ಕ್ಷೇತ್ರದ ಪ್ರತಿನಿಧಿಗಳು ಭಾಗವಹಿಸಿ, ಯಶಸ್ವಿಗೊಳಿಸಿಕೊಟ್ಟರು, ಇದೇ ಕಾರ್ಯಕ್ರಮದಲ್ಲಿ ಕೋವಿಡ್ ಚಿಕಿತ್ಸೆಗಾಗಿ ಆರೋಗ್ಯ ಕ್ಷೇತ್ರದಲ್ಲಿ ನಾವಿನ್ಯತೆ ಮೆರೆದ ಆಸ್ಪತ್ರೆಗಳಿಗೆ ವಿಭಾಗವಾರು ಪ್ರಶಸ್ತಿ ನೀಡುವ ಮೂಲಕ ಪುರಸ್ಕರಿಸಲಾಯಿತು.

ಕಳೆದ 12 ದಿನಗಳಿಂದ 200ಕ್ಕೂ ಹೆಚ್ಚು ಆಸ್ಪತ್ರೆಗಳಿಗೆ ಕೃತಜ್ಞ ರಥದಲ್ಲಿ ತೆರಳಿದ ಕಾವೇರಿ ಆಸ್ಪತ್ರೆ ತಂಡವು ಅಲ್ಲಿನ ಆರೋಗ್ಯ ಕಾರ್ಯಕರ್ತರನ್ನು ಸನ್ಮಾನಿಸಲಾಗಿತ್ತು.

ಈ ವೇಳೆ ಮಾತನಾಡಿದ ಬೆಂಗ ಳೂರಿನ ಕಾವೇರಿ ಆಸ್ಪತ್ರೆಯ ಅಧ್ಯಕ್ಷರು ಹಾಗೂ ಸಂಘಟನಾ ಸಮಿತಿಯ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ವಿಜಯ ಭಾಸ್ಕರನ್, ಕೋವಿಡ್ ಸಂದರ್ಭದಲ್ಲಿ ಕಳೆದೆರಡು ವರ್ಷಗ ಳಿಂದ ಆರೋಗ್ಯ ಕ್ಷೇತ್ರದ ಸಿಬ್ಬಂದಿ ಜನರ ಸೇವೆ ಮಾಡುತ್ತಾ ಬಂದಿದ್ದಾರೆ. ಅವರಿಗೆ ಕೃತಜ್ಞತೆ ಸಲ್ಲಿಸಲು ನಮ್ಮ ಆಸ್ಪತ್ರೆ ಕಡೆಯಿಂದ ಈ ನೂತನ ಕಾರ್ಯಕ್ರಮ ನಡೆಸಿದ್ದೇವೆ. ಇದ ಲ್ಲದೇ ಕೋವಿಡ್ ಸಂದರ್ಭದಲ್ಲಿ ಸಾವನ್ನಪ್ಪಿದ ಆರೋಗ್ಯ ಕಾರ್ಯಕರ್ತರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಯಿತು. ಪದವೀಧರ ಮಕ್ಕಳಿಗೆ ಉದ್ಯೋಗ ಕೊಡಿಸುವ ಭರವಸೆಯನ್ನೂ ನೀಡಿದ್ದೇವೆ, ಹುತಾತ್ಮ ಆರೋಗ್ಯ ಕಾರ್ಯಕರ್ತರ ಮಕ್ಕಳು ಯಾವ ಸಂದರ್ಭದಲ್ಲಾದರೂ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸಬಹುದು ಎಂದು ಹೇಳಿದರು.

ಪ್ರಸ್ತುತಿ: ಪಿ.ವಿ, ಬ್ರ್ಯಾಂಡ್ ಸ್ಪಾಟ್

ಸಾಂಕ್ರಮಿಕ ಸಮಯದಲ್ಲಿ ಕೋವಿಡ್ ಚಿಕಿತ್ಸೆಗಾಗಿ ಅತ್ಯುತ್ತಮ ನಾವಿನ್ಯತೆ ಮೆರೆದ ವಿಭಾಗದಲ್ಲಿ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಪ್ರಶಸ್ತಿ ಪಡೆದುಕೊಂಡಿತು. ಕ್ಲಿನಿಕಲ್ ಮತ್ತು ನಾನ್ ಕ್ಲಿನಿಕಲ್ ವಿಭಾಗದಲ್ಲಿ ಕಿಮ್ಸ್ ಆಸ್ಪತ್ರೆಯು ಪ್ರಶಸ್ತಿ ಪಡೆದುಕೊಂಡಿತು. ಉಸಿರಾಟದ ತೊಂದರೆ ಹೊಂದಿರುವವರಿಗೆ ಕೈಗೆಟುಕುವ ದರದಲ್ಲಿ ಚಿಕಿತ್ಸೆ ನೀಡುವ ರೀತಿಯಲ್ಲಿ ಅವಿಷ್ಕಾರ ಮಾಡಲಾಗಿತ್ತು. ಲಾಂಡ್ರಿ ಬಾಯ್ಲರ್‌ಗಳಿಂದ ಆವಿಯನ್ನು ಘನೀಕರಿಸುವ ಮೂಲಕ ಆಮ್ಲಜನಕದ ಫ್ಲೋಮೀಟರ್‌ನಲ್ಲಿ ಬಳಸುವ ಬಟ್ಟಿ ನೀರನ್ನು ಹೊರತೆಗೆಯುವ ತಂತ್ರವನ್ನು ಇವರು ಆವಿಷ್ಕರಿಸಿದ್ದರು.

ಡಾ.ವಿಜಯಭಾಸ್ಕರನ್, ಅಧ್ಯಕ್ಷರು ಸಂಘಟನಾ ಸಮಿತಿ ಕೃತಜ್ಞೆ, ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು, ಕಾವೇರಿ ಆಸ್ಪತ್ರೆ,(ಬಲದಿಂದ 3 ನೇ) ಮತ್ತು ಡಾ. ಎಸ್ ಚಂದ್ರ ಕುಮಾರ್, ಕಾವೇರಿ ಆಸ್ಪತ್ರೆ ಸಮೂಹದ ಸ್ಥಾಪಕರು ಮತ್ತು ಕಾರ್ಯನಿರ್ವಾಹಕ, ಅಧ್ಯಕ್ಷರು, ಕೃತಜ್ಞಾ ಪ್ರಶಸ್ತಿಗಳ ತೀರ್ಪುಗಾರರ ಸದಸ್ಯರೊಂದಿಗೆ.

ಭಾರತೀಯ ವೈದ್ಯಕೀಯ ಸಂಘ (ಐಎಂಎ), ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್ ಅಸೋಸಿಯೇಷನ್ (ಪಿಎಎಎನ್ಎ) ಮತ್ತು ಎಲೆಕ್ಟ್ರಾನಿಕ್ಸ್ ಸಿಟಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಪ್ರಾಧಿಕಾರ (ಎಲಿಕ್ಸಾ) ನಂತಹ ಪ್ರಮುಖ ಸಂಸ್ಥೆಗಳು ನಮ್ಮ ಪ್ರಯತ್ನವನ್ನು ಶ್ಲಾಘಿಸಿದವು.

ಹುತಾತ್ಮ ಆರೋಗ್ಯ ಕಾರ್ಯಕರ್ತರ ಮಕ್ಕಳು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು www.kritagnya.org ಈ ವೆಬ್‌ಸೈಟ್‌ಗೆ ಭೇಟಿ ನೀಡಿ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

SOCIAL SERVICES

Others

HOME NURSES available for HOME/ HOSPITAL/ PATIENT CARE-24/7. MAJ Gandhinagar, Bangalore. Contact: 7022399993, 6366883838

BUSINESS

Business to Business

Business

50_ROOMS HOTEL, Off Kanakapura Main Road available for Rent or Revenue sharing basis with MG Contact: 9591400500.

Finance

URGENT LOAN Avail. @ 3.5% p.a. Personal, Business, Projects. all types loan in 5 days. Small Finace Ltd, Call & whatsApp :8130883900.

BANK / Private Loans for Property Purchase Construction, Apartment Converted Land Projects No Cibil Durga Ent 7019460997

Financial Services

WE ORGANISE Loans PL/BL/HL/LAP from Banks/NBFC. Unsecured chequeFin.for Business (Minimum Turnover 50L-pm). 50L-to-5 Cr. Call: 8904047577.

Business Offers

Finance

INVEST 10K-TO 2-Lacs in Trading, Multiple Businesses. Weekly/Monthly 10% secured Fixed Returns. Agents,VRS,RTD, Housewives, Freelancers Also Welcome (Good Income).Call:- 7892818780.

General

IS_YOUR BUSINESS_DOING good but children not interested & noone to support? you want to retire? To_sell your business or to manage your business or to find a partner Arun 9945699789

Machinery & Tools

A.ESSENTIAL OIL Fractional Column75feet-H for Sale Air Compressor-7.5hp, VacuumPump, Agitator reactor, water circulation motor 0.05hp. B.Commercial NewFreezer For Sale. 9Nos High Quality, Temp -25Cto+20c, Capacity-2tn,Size13x5.4x4.5 ft, Danfoss compressor, Digital Temp, Copper Pipe bounded,Stainless steel Body inside. C. Thermic Fluid Heater Motor 1hp &3hp Ct:Sathya 9884044255

PUBLIC NOTICE

NOTICE
Order No. ಬೆಂ.ಉ.ವಿ/ಕು.ಸ.ಕಾ/ಕಾ.ಹೆ.ಬ/6001/2020-21
The general public is hereby notified that the name of our degree college has been changed from **Lowry Memorial College, to LOWRY ADVENTIST COLLEGE,** Dooravaninagar, Bengaluru - 560016. The change has come into effect from **19th July 2021.** Please note that there has been no change in the Management and Address
- Secretary / Correspondent
Lowry Group of Institutions

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34. Ph: 2553 4194.
TENDER NOTICE
Quotations are invited from reputed Agencies for
Repair of ‘Broken Chairs’ to KRJS Institutions
For more details visit: **www.reddyjanasangha.org**

OTHERS

For Sale

IMMEDIATE SALE Leather SOFA Diwan teapoy teak dining curtains box diwan cot...call 9845414482, 7019263843

CONNECT

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮಸಂಸ್ಥೆ
ಕೋಟೆ, ಬೆಂಗಳೂರು – 560 002.
Ph : 080-26701027, Email ID : slncharities@gmail.com
ದಿನಾಂಕ: 10ನೇ ಆಗಸ್ಟ್ 2021ನೇ ಮಂಗಳವಾರ
ಜನೋಪಕಾರಿ ಶ್ರೀ ದೊಡ್ಡಣ್ಣ ಸ್ವಾಮಿರವರ ಶತಮಾನೋತ್ಸವ ಆರಾಧನಾ ಮಹೋತ್ಸವ
ಕೋವಿಡ್–19 ರ ಕಾರಣ, ಆರಾಧನಾ ಸಮಾರಂಭವು ಸಮಾಧಿ ಪೂಜೆಗೆ ಸೀಮಿತವಾಗಿದೆ ಮತ್ತು ಜನೋಪಕಾರಿ ಶ್ರೀ ದೊಡ್ಡಣ್ಣ ಸ್ವಾಮಿ ಅವರ ಸಾಕ್ಷ್ಯಚಿತ್ರವನ್ನು ಬೆಳಿಗ್ಗೆ 11.00 ಕ್ಕೆ ಬಿಡುಗಡೆ ಮಾಡಲಾಗುತ್ತದೆ.
ಸಮುದಾಯದ ಜನರು ಮತ್ತು ಹಿರಿಯ ವಿದ್ಯಾರ್ಥಿಗಳ ಭಾಗವಹಿಸುವಿಕೆಯ ಸಹಕಾರವನ್ನು ಕೋರಲಾಗಿದೆ.
ಸಹಿ/–
ಅಧ್ಯಕ್ಷರು ಮತ್ತು ಸದಸ್ಯರು
ಪ್ರಸಾದ: ಮಧ್ಯಾಹ್ನ 12:00 ಕ್ಕೆ

PERSONAL

Change of Name

I, SMT. Dukhna Devi W/o Shiv Narayan Mother/of NC(E) Ramdev Pal 829984K W/UP r/at. No.19, 1st cross, 1st floor, Murugeshpallya Bengaluru- 560017, Have changed my name to DUKHNA vide affidavit dated 07/08/2021 before notary Gangaraju B.N., Bangalore

I, H.V. Muralidhar S/o H.K. Vasantha Rao Husband/of Nalini K.R residing at No.23, 1st Cross, 3rd block, Grape garden, Thyagarajanagar, Bengaluru- 28. Have changed my minor son's name from C. Samahith to SAMAHITH. M vide affidavit dated 15/07/2021 before notary S.Jayanna, Bangalore

I, SMT. Archna D/o R.L. Maurya spouse of NC(E) Vijai Kumar 826907K S/W R/at. 76/6 Akash Vihar, Marathahalli, Bangalore-560037, have changed my name to ARCHNA MAURYA vide affidavit dated 07/08/2021 before notary Gangaraju B.N., Bangalore.

I, CHAYA PAUL RAAJ, R/at No. 09, Divine Shalom, Doddasanne, Devanahalli Taluk, Bangalore Rural District-562110 have changed my Name to CHHAYA PAUL RAAJ vide Affidavit dated 09.08.2021, sworn to before Notary K.H. Venkatappa, Chickballapur

I, JYOTI alias JYOTHI S. RAIKOD, W/o Sharanabasappa, R/a No. 317, 2nd floor, 6th cross, Mathikere, Bengaluru-560054, will henceforth be known as JYOTI, vide affidavit dated 02.08.2021 before Notary G.B. Turamari, Bangalore.

I, RUPHAA G.V W/o. Nagarjun S. residing at No.58/1, 18th main, J.C. Nagar, Kurabarahalli, Bangalore- 560086, have changed my name from Roopa G.V to RUPHAA G.V vide affidavit dated M.K. Devaki, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

ನೀರು ಪೂರೈಕೆಯಲ್ಲಿ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎನ್.ಸಿ. ಕಾಲೊನಿ ಸಮೀಪದ ಬೋರ್ ಬ್ಯಾಂಕ್ ರಸ್ತೆಯಲ್ಲಿ ಹಳೆಯ ಪೈಪ್ ತೆಗೆದು, ಹೊಸ ಪೈಪ್ ಅಳವಡಿಸುವ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ವಿವಿಧ ಪ್ರದೇಶಗಳಲ್ಲಿ ಇದೇ 9ರಂದು ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ನೀರು ಪೂರೈಕೆ ಇರುವುದಿಲ್ಲ ಎಂದು ಜಲಮಂಡಳಿ ಹೇಳಿದೆ.

ಬ್ಯಾಡರಹಳ್ಳಿ, ಹ್ಯಾರಿಸ್ ರಸ್ತೆ, ಮಿಲ್ಲರ್ಸ್ ರಸ್ತೆ, ಬೋರ್ ಬ್ಯಾಂಕ್ ರಸ್ತೆ, ಎನ್.ಸಿ.ಕಾಲೊನಿ, ಎಸ್.ಕೆ.ಗಾರ್ಡನ್, ಚಿನ್ನಪ್ಪ ಗಾರ್ಡನ್, ಎ.ಕೆ. ಕಾಲೊನಿ, ಪೆರಿಯಾರ್ ನಗರ, ಕುಶಾಲ್ ನಗರ, ಮುನೇಶ್ವರ ನಗರ, ಸಗಾಯಪುರ, ಬಿಡಿಎ ಬಡಾವಣೆ, ರಾಮ ಟೆಂಟ್‌ರಸ್ತೆ, ಪಿ ಆ್ಯಂಡ್ ಟಿ ಕಾಲೊನಿ, ಅನ್ವರ್ ಬಡಾವಣೆ, ಕಾಡುಗೊಂಡನಹಳ್ಳಿ, ಮಾರುತಿ ಸೇವಾನಗರ, ಜೀವನಹಳ್ಳಿ, ಹಚ್ಚಿನ್ಸ್ ರಸ್ತೆ, ಪುಲಿಕೇಶಿನಗರ, ಫ್ರೇಜರ್ ಟೌನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಡಿ.ಜೆ. ಹಳ್ಳಿಯಲ್ಲಿ ರೌಡಿ ಹತ್ಯೆ

ಬೆಂಗಳೂರು: ನಗರದ ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ರೌಡಿ ಮಜರ್‌ಖಾನ್ ಅಲಿಯಾಸ್ ಭಟ್ಟಿ ಮಜರ್ (38) ಎಂಬಾತನನ್ನು ಶನಿವಾರ ಕೊಲೆ ಮಾಡಲಾಗಿದೆ.

‘ಮೃತ ಮಜರ್‌ಖಾನ್, ಅಪರಾಧ ಹಿನ್ನೆಲೆಯುಳ್ಳವ. ಡಿ.ಜೆ. ಹಳ್ಳಿ ಠಾಣೆ ರೌಡಿ ಪಟ್ಟಿಯಲ್ಲಿ ಆತನ ಹೆಸರಿತ್ತು. ಶಿವರಾಜ ರಸ್ತೆಯಲ್ಲಿ ಶನಿವಾರ ಆತನ ಮೇಲೆ ದಾಳಿ ನಡೆಸಿದ್ದ ಪರಿಚಯಸ್ಥರೇ ಹತ್ಯೆ ಮಾಡಿರುವ ಶಂಕೆ ಇದೆ. ಕೊಲೆ ಆರೋಪದಿ ಇಬ್ಬರು ಮಹಿಳೆಯರು ಸೇರಿ ಐವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಮಜರ್‌ಗೆ ಎರಡು ಮದುವೆ ಆಗಿದ್ದು, ಏಳು ಮಕ್ಕಳಿದ್ದಾರೆ. ಆದರೂ ಆತ ಕೆಲ ತಿಂಗಳ ಹಿಂದೆ ಮತ್ತೊಬ್ಬ ಯುವತಿ ಜತೆ ಸಲುಗೆ ಬೆಳೆಸಿಕೊಂಡಿದ್ದ. ಮಜರ್ ವರ್ತನೆಯಿಂದ ಬೇಸತ್ತಿದ್ದ ಯುವತಿ, ಆತನನ್ನು ಬಿಟ್ಟು ಹೋಗಿದ್ದಳು. ಅದರಿಂದ ಕೆರಳಿದ್ದ ಮಜರ್, ಯುವತಿಯ ಸ್ನೇಹಿತನ ಮನೆ ಬಳಿ ಹೋಗಿ ಗಲಾಟೆ ಮಾಡಿದ್ದ. ಇದುವೇ ಕೊಲೆಗೆ ಕಾರಣ ಎಂಬುದು ಗೊತ್ತಾಗಿದೆ’ ಎಂದೂ ತಿಳಿಸಿದರು.

'ನಮ್ಮ ಮೆಟ್ರೊ' ಕಾಮಗಾರಿಯ ಪ್ರಗತಿ ಪರಿಶೀಲಿಸಿದ ಸಂಸದ ತೇಜಸ್ವಿ ಸೂರ್ಯ

ವಿಮಾನ ನಿಲ್ದಾಣ ಮಾರ್ಗ 2025ಕ್ಕೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ದ ಎರಡನೇ ಹಂತದಲ್ಲಿ ನಿರ್ಮಾಣವಾಗುತ್ತಿರುವ ಸಿಲ್ಕ್‌ಬೋರ್ಡ್–ಕೆ.ಆರ್. ಪುರ– ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗದ (2, 2ಎ ಮತ್ತು 2ಬಿ) ಕಾಮಗಾರಿಗಳು 2025ರೊಳಗೆ ಪೂರ್ಣಗೊಳ್ಳಲಿದ್ದು, ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ' ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಡೇರಿ ವೃತ್ತದ ಬಳಿ ನಡೆಯುತ್ತಿರುವ ಮೆಟ್ರೊ ಸುರಂಗ ಕೊರೆಯುವ ಕಾಮಗಾರಿಯನ್ನು ಸಂಸದ ತೇಜಸ್ವಿ ಸೂರ್ಯ ಶನಿವಾರ ಪರಿಶೀಲಿಸಿದರು. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ ಮತ್ತು ಇತರ ಅಧಿಕಾರಿಗಳು ಇದ್ದರು –ಪ್ರಜಾವಾಣಿ ಚಿತ್ರ

ಡೇರಿ ವೃತ್ತದ ಬಳಿ ಮೆಟ್ರೊ ಸುರಂಗ ಮಾರ್ಗ ಕೊರೆಯುತ್ತಿರುವ ಸ್ಥಳಕ್ಕೆ ಶನಿವಾರ ಭೇಟಿ ನೀಡಿ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಜಾಗತಿಕವಾಗಿ ತಂತ್ರಜ್ಞಾನ ಮತ್ತು ಇತರ ಕ್ಷೇತ್ರಗಳಲ್ಲಿ ಅತೀ ವೇಗವಾಗಿ ಮುನ್ನುಗ್ಗುತ್ತಿರುವ ಬೆಂಗಳೂರು ನಗರದ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಗೆ ಮೆಟ್ರೊ ರೈಲು ಸೌಕರ್ಯವೇ ಸೂಕ್ತ. ಗಡುವಿಗೂ ಮುನ್ನವೇ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು' ಎಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಪ್ರಸ್ತುತ 56 ಕಿ.ಮೀ. ಇರುವ ಮೆಟ್ರೊ ರೈಲು ಮಾರ್ಗದ ಉದ್ದವು 2025ರೊಳಗಾಗಿ 175 ಕಿ.ಮೀ.ಗೆ ಹೆಚ್ಚಲಿದೆ. ನಗರದ ಸಂಚಾರ ದಟ್ಟಣೆ ನಿರ್ವಹಣೆಗೆ ಬಿಎಂಆರ್‌ಸಿಎಲ್ ಅಧಿಕಾರಿಗಳು ಸಮಗ್ರ ಸಂಚಾರ ಯೋಜನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಕಾಮಗಾರಿಗೆ ಅಗತ್ಯವಿರುವ ಶೇ 99ರಷ್ಟು ಭೂಸ್ವಾಧೀನ ಪ್ರಕ್ರಿಯೆ ಈಗಾಗಲೇ ಮುಗಿದಿದೆ. ಕಾಮಗಾರಿ ತ್ವರಿತವಾಗಿ ನಡೆಯುತ್ತಿರುವುದಕ್ಕೆ ಭೂಸ್ವಾಧೀನ ನೀತಿಯಲ್ಲಿ ತಂದಿರುವ ಬದಲಾವಣೆಗಳು ಕೂಡ ಕಾರಣ' ಎಂದು ಅಭಿಪ್ರಾಯಪಟ್ಟರು.

ಸಾಮಾನ್ಯ ಸಂಚಾರ ಕಾರ್ಡ್: 'ಕೇಂದ್ರ ಸರ್ಕಾರವು ಇದೇ ಸೆಪ್ಟೆಂಬರ್ ಒಳಗಾಗಿ ಸಾಮಾನ್ಯ ಸಂಚಾರ ಗುರುತಿನ ಚೀಟಿಯನ್ನು (ಕಾಮನ್ ಮೊಬಿಲಿಟಿ ಕಾರ್ಡ್) ಮೆಟ್ರೊ ರೈಲು ಸೇವೆಗಳಿಗೂ ವಿಸ್ತರಿಸಲು ತೀರ್ಮಾನಿಸಿದೆ. ಈ ಕಾರ್ಡ್ ಅನ್ನು ದೇಶದಾದ್ಯಂತ ಎಲ್ಲ ವಿಧದ ಸಾರಿಗೆ ಸೌಲಭ್ಯಗಳನ್ನು ಪಡೆಯಲು ಬಳಸಬಹುದು' ಎಂದೂ ಅವರು ಹೇಳಿದರು.

10 ಸಾವಿರ ಸಸಿ: 'ಮೆಟ್ರೊ ಕಾಮಗಾರಿಯ ಸಂದರ್ಭದಲ್ಲಿ ತೆರವುಗೊಳಿಸಿರುವ ಮರಗಳಿಗೆ ಬದಲಾಗಿ 10 ಸಾವಿರಕ್ಕೂ ಅಧಿಕ ಸಸಿಗಳನ್ನು ನಿಗಮವು ನೆಟ್ಟು ಬೆಳೆಸಲಿದೆ. ಸಾರ್ವಜನಿಕರನ್ನೂ ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲಿದೆ' ಎಂದು ಸಂಸದ ಹೇಳಿದರು.

ಬಿಎಂಆರ್‌ಸಿಎಲ್ ನಿರ್ದೇಶಕ ರಾಧಾಕೃಷ್ಣ ರೆಡ್ಡಿ ಇದ್ದರು.

> **ಮೆಟ್ರೊ ನಿಲ್ದಾಣಗಳಿಗೆ ಫೀಡರ್ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ಸಾರಿಗೆ ಸಚಿವ ಶ್ರೀರಾಮುಲು ಅವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು**
> **ತೇಜಸ್ವಿ ಸೂರ್ಯ,** ಸಂಸದ

11, 12ರಂದು ಮೆಟ್ರೊ ರೈಲು ಭಾಗಶಃ ಸ್ಥಗಿತ

ನಮ್ಮ ಮೆಟ್ರೊದ ಕೆಂಗೇರಿ ವಿಸ್ತರಿತ ಮಾರ್ಗವನ್ನು ಅಂತಿಮ ಕಾರ್ಯಾಚರಣೆಗೆ ಸಜ್ಜುಗೊಳಿಸುವ ಕಾರ್ಯ ಕೈಗೆತ್ತಿಕೊಂಡಿರುವುದರಿಂದ ಆ.11 ಮತ್ತು 12ರಂದು ನೇರಳೆ ಮಾರ್ಗದ ವಿಜಯನಗರ ಮತ್ತು ಮೈಸೂರು ರಸ್ತೆ ಮೆಟ್ರೊ ನಿಲ್ದಾಣಗಳ ನಡುವೆ ಮೆಟ್ರೊ ರೈಲು ಸಂಚಾರ ಇರುವುದಿಲ್ಲ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ಹೇಳಿದೆ.

'ಈ ಎರಡು ದಿನ ಬೈಯಪ್ಪನಹಳ್ಳಿಯಿಂದ ವಿಜಯನಗರ ಮೆಟ್ರೊ ನಿಲ್ದಾಣಗಳ ನಡುವೆ ಮಾತ್ರ ಸೇವೆ ಲಭ್ಯ ಇರಲಿದೆ' ಎಂದು ನಿಗಮವು ಪ್ರಕಟಣೆಯಲ್ಲಿ ಹೇಳಿದೆ.

'ಕಾರ್ಯಾಚರಣೆ ಪೂರ್ಣಗೊಂಡ ನಂತರ, ಅಂದರೆ, ಆ. 13ರಿಂದ ಬೈಯಪ್ಪನಹಳ್ಳಿ ಮತ್ತು ಮೈಸೂರು ರಸ್ತೆ ನಿಲ್ದಾಣದವರೆಗಿನ ನೇರಳೆ ಮಾರ್ಗದಲ್ಲಿ ಎಂದಿನಂತೆ ಸೇವೆ ಲಭ್ಯ ಇರಲಿದೆ' ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಹಸಿರು ಮಾರ್ಗದ ನಾಗಸಂದ್ರದಿಂದ ರೇಷ್ಮೆ ಸಂಸ್ಥೆಯವರೆಗಿನ ಮೆಟ್ರೊ ರೈಲು ಸೇವೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದೂ ನಿಗಮ ಸ್ಪಷ್ಟಪಡಿಸಿದೆ.

ಕಳುವಾಗಿದ್ದ ₹3.90 ಲಕ್ಷ ಮೌಲ್ಯದ ಆಭರಣ ಜಪ್ತಿ

ಅಪರಾಧ ಸುದ್ದಿ

ಬೆಂಗಳೂರು: ಗಮನ ಬೇರೆಡೆ ಸೆಳೆದು ಚಿನ್ನಾಭರಣ ಕಳವು ಮಾಡುತ್ತಿದ್ದ ಆರೋಪದಡಿ ತಮಿಳುನಾಡಿನ ಏಳು ಮಂದಿಯನ್ನು ಉಪ್ಪಾರಪೇಟೆ ಪೊಲೀಸರು ಬಂಧಿಸಿದ್ದಾರೆ.

'ರಾಜು ನಾಯ್ಡು, ರವಿ, ದಾಮೋದರನ್, ರಾಘನ್ ಹಾಗೂ ಅವರ ಸಹಚರರನ್ನು ಬಂಧಿಸಲಾಗಿದೆ. ಅವರಿಂದ ₹ 3.90 ಲಕ್ಷ ಮೌಲ್ಯದ 62 ಗ್ರಾಂ ಚಿನ್ನಾಭರಣ, ಮೊಬೈಲ್, ಪಾಸ್‌ಪೋರ್ಟ್, ವಿಸಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಮೂರು ಅಥವಾ ಆರು ತಿಂಗಳಿಗೊಮ್ಮೆ ಬೆಂಗಳೂರಿಗೆ ಬಂದು ಸಾರ್ವಜನಿಕರ ಗಮನ ಬೇರೆಡೆ ಸೆಳೆದು ಕಳ್ಳತನ ಮಾಡುತ್ತಿದ್ದರು. ಬಸ್ ನಿಲ್ದಾಣ, ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ಸೋಗಿನಲ್ಲಿ ಓಡಾಡಿ ಕೃತ್ಯ ಎಸಗುತ್ತಿದ್ದರು.'

'ಜುಲೈ 17ರಂದು ಶಿವಮೊಗ್ಗದ ಸಾಗರ ತಾಲ್ಲೂಕಿನ ನೆಹರುನಗರದ ಅನ್ವರ್ ಸಾಬ್ ಹೊಸೂರು ಎಂಬುವರು ಮೆಜೆಸ್ಟಿಕ್‌ಗೆ ಬಂದಿದ್ದರು. ಅವರ ಬ್ಯಾಗ್‌ನ್ನು ಆರೋಪಿಗಳು ಕಳವು ಮಾಡಿದ್ದರು. ನಗದು, ಚಿನ್ನಾಭರಣ, ಪಾಸ್‌ಪೋರ್ಟ್, ವಿಸಾ, ಎಟಿಎಂ ಕಾರ್ಡ್‌ಗಳು ಹಾಗೂ ಇತರೆ ವಸ್ತುಗಳು ಬ್ಯಾಗ್‌ನಲ್ಲಿದ್ದವು. ಈ ಬಗ್ಗೆ ದಾಖಲಾದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದರು.

ಗ್ರೇಡಿಂಗ್ ಕದಿಯುತ್ತಿದ್ದವರ ಬಂಧನ

ಟೆಂಡರ್ ಶ್ಯೂರ್ ಯೋಜನೆಯಡಿ ಮಳೆ ನೀರು ಚರಂಡಿಗಳಿಗೆ ಅಳವಡಿಸಲಾಗಿದ್ದ ಕಬ್ಬಿಣದ ಗ್ರೇಡಿಂಗ್ ಕದಿಯುತ್ತಿದ್ದ ಆರೋಪದಡಿ ಆರು ಮಂದಿಯನ್ನು ಬಂಧಿಸಲಾಗಿದೆ.

'ಮಂಜುನಾಥ್, ಲಿಂಗರಾಜು, ಹರಕತ್ ಠಾಕೂರ್, ವಿನೋದ್, ಉದಯ್ ಹಾಗೂ ನರಸಿಂಹ ಬಂಧಿತರು. ಅವರಿಂದ ₹ 2.40 ಲಕ್ಷ ಮೌಲ್ಯದ 7 ಕಬ್ಬಿಣದ ಗ್ರೇಡಿಂಗ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾತ್ರಿ ವೇಳೆ ಕಾಮಗಾರಿ ಸ್ಥಳಕ್ಕೆ ಹೋಗುತ್ತಿದ್ದ ಆರೋಪಿಗಳು, ಗ್ರೇಡಿಂಗ್ ಕದ್ದುಕೊಂಡು ಆಟೊಗಳಲ್ಲಿ ಸಾಗಿಸುತ್ತಿದ್ದರು. ಅವುಗಳನ್ನು ಮಾಗಡಿ ಬಳಿ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದರು' ಎಂದೂ ತಿಳಿಸಿದರು.

ಹೊರರಾಜ್ಯಗಳಿಂದ ನಾಡ ಪಿಸ್ತೂಲ್ ತಂದು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರರಾಜ್ಯಗಳಿಂದ ನಾಡ ಪಿಸ್ತೂಲ್ ಹಾಗೂ ಬಂದೂಕುಗಳನ್ನು ತಂದು ನಗರದ ರೌಡಿಗಳು ಹಾಗೂ ಅಪರಾಧ ಹಿನ್ನೆಲೆಯುಳ್ಳವರಿಗೆ ಮಾರಾಟ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕಲಾಸಿಪಾಳ್ಯದ ನಿವಾಸಿ ಅಯಾಜ್ ವುಲ್ಲಾ (30), ಆರ್.ಟಿ. ನಗರದ ಸೈಯ್ಯದ್ ಸಿರಾಜ್ ಅಹಮ್ಮದ್ (42), ಆರ್.ಕೆ .ಹೆಗಡೆ ನಗರದ ಮೊಹಮ್ಮದ್ ಅಲಿ (32) ಹಾಗೂ ರಾಜಾನುಕುಂಟೆಯ ಅರುಣ್ ಕುಮಾರ್ (26) ಬಂಧಿತರು. ಅವರಿಂದ 5 ನಾಡ ಪಿಸ್ತೂಲ್, 2 ಬಂದೂಕು ಹಾಗೂ 19 ಜೀವಂತ ಗುಂಡುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಪ್ರಕರಣದ ಪ್ರಮುಖ ಆರೋಪಿ ಅಯಾಜ್ ವುಲ್ಲಾ, ಉತ್ತರ ಪ್ರದೇಶ ಹಾಗೂ ಇತರೆ ರಾಜ್ಯಗಳಲ್ಲಿರುವ ಅಕ್ರಮ ಶಸ್ತ್ರಾಸ್ತ್ರ ಪೂರೈಕೆದಾರರ ಜೊತೆ ಒಡನಾಟ ಹೊಂದಿದ್ದ. ರೈಲು ಹಾಗೂ ಬಸ್‌ಗಳ ಮೂಲಕ ಅವುಗಳನ್ನು ನಗರಕ್ಕೆ ತರುತ್ತಿದ್ದ. ಅವುಗಳನ್ನು ಲಕ್ಷಾಂತರ ರೂಪಾಯಿಗೆ ಖರೀದಿಸುತ್ತಿದ್ದ ರೌಡಿಗಳು, ಅಪರಾಧ ಕೃತ್ಯಕ್ಕೆ ಬಳಸುತ್ತಿದ್ದರು.' ಎಂದೂ ತಿಳಿಸಿದರು.

'ಇನ್ನೊಬ್ಬ ಆರೋಪಿ ಸೈಯದ್ ಸಿರಾಜ್ ಅಹಮ್ಮದ್ ವಿರುದ್ಧ ಕೆ.ಜಿ. ಹಳ್ಳಿ ಠಾಣೆಯಲ್ಲಿ ಈ ಹಿಂದೆಯೂ ಪ್ರಕರಣ ದಾಖಲಾಗಿತ್ತು. ಮತ್ತೊಬ್ಬ ಆರೋಪಿ ಮೊಹಮ್ಮದ್ ಅಲಿ ಹೆಸರು ಶಿವಾಜಿನಗರ ಠಾಣೆ ರೌಡಿ ಪಟ್ಟಿಯಲ್ಲಿದೆ. ಎಲ್ಲ ಆರೋಪಿಗಳು ಸೇರಿ ತಂಡ ಕಟ್ಟಿಕೊಂಡು ಕೃತ್ಯ ಎಸಗುತ್ತಿದ್ದರು' ಎಂದೂ ಹೇಳಿದರು.

ಸಿಸಿಬಿ ಪೊಲೀಸರು ಜಪ್ತಿ ಮಾಡಿದ ಶಸ್ತ್ರಾಸ್ತ್ರಗಳು

₹ 1 ಲಕ್ಷದಿಂದ ₹3 ಲಕ್ಷಕ್ಕೆ ಮಾರಾಟ

'ಆರೋಪಿಗಳು ನಾಡ ಪಿಸ್ತೂಲ್ ಹಾಗೂ ಬಂದೂಕುಗಳನ್ನು ₹ 1 ಲಕ್ಷದಿಂದ ₹ 3 ಲಕ್ಷ ಬೆಲೆಗೆ ಮಾರಾಟ ಮಾಡುತ್ತಿದ್ದರು. ಅಯಾಜ್‌ವುಲ್ಲಾ ಜೊತೆಯಲ್ಲಿ ಆತನ ಸಹೋದರರೂ ಕೃತ್ಯದಲ್ಲಿ ಭಾಗಿಯಾಗಿರುವುದು ಗೊತ್ತಾಗಿದೆ. ಪ್ರಕರಣದ ಬಗ್ಗೆ ತನಿಖೆ ಮುಂದುವರಿದಿದೆ' ಎಂದೂ ಪೊಲೀಸರು ಹೇಳಿದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ಕೆಲವು ಪ್ರದೇಶಗಳಲ್ಲಿ ಇದೇ 8ರಿಂದ 10ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5ರ ತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಭಾನುವಾರ ವಿದ್ಯುತ್ ಪೂರೈಕೆ ವ್ಯತ್ಯಯವಾಗುವ ಪ್ರದೇಶಗಳು: ಎಲೆಕ್ಟ್ರಾನಿಕ್ ಸಿಟಿ ಎರಡನೇ ಹಂತ, ವೀರಸಂದ್ರ, ದೊಡ್ಡನಾಗಮಂಗಲ, ಅನಂತನಗರ, ಶಾಂತಿಪುರ, ಬಯೋಕಾನ್, ಟೆಕ್ ಮಹೀಂದ್ರ, ಚೊಕ್ಕಸಂದ್ರ, ಕೋಣನಕುಂಟೆ ಕ್ರಾಸ್ ಅಡ್ಡರಸ್ತೆ, ತಲಘಟ್ಟಪುರ, ದೊಡ್ಡಕಲ್ಲಸಂದ್ರ, ಶ್ರೀನಿಧಿ ಬಡಾವಣೆ, ಆವಲಹಳ್ಳಿ, ಎಚ್.ಎಸ್.ಆರ್. ಬಡಾವಣೆ, ಟೀಚರ್ಸ್ ಕಾಲೊನಿ, ಜಕ್ಕಸಂದ್ರ, ವೆಂಕಟಾಪುರ.

ಮುತ್ತನಲ್ಲೂರು, ರಾಮಸಾಗರ, ಲಕ್ಷ್ಮಿಸಾಗರ, ನಾರಾಯಣಘಟ್ಟ, ಸಿಂಗೇನ ಅಗ್ರಹಾರ, ಗೋಪಸಂದ್ರ, ಅಲಿಬೊಮ್ಮಸಂದ್ರ, ಚಿಕ್ಕತಿಮ್ಮಸಂದ್ರ, ಹುಸ್ಕೂರು, ಘಟ್ಟಹಳ್ಳಿ, ಚಿಕ್ಕನಾಗಮಂಗಲ, ರಾಯಸಂದ್ರ ರಸ್ತೆ, ಬಾನಹಳ್ಳಿ, ಕೀರ್ತಿ ಬಡಾವಣೆ, ಟಿಸಿಪಿ ಬಡಾವಣೆ, ಚಂದಾಪುರ ವಕೀಲ್ ಬಡಾವಣೆ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಹೆನ್ನಾಗರ.

ಸೋಮವಾರ ವಿದ್ಯುತ್ ಪೂರೈಕೆ ವ್ಯತ್ಯಯವಾಗುವ ಪ್ರದೇಶಗಳು: ಮಾರತ್ತಹಳ್ಳಿ ಸರ್ವಿಸ್ ರಸ್ತೆ, ಜೆ.ಪಿ.ಟೆಕ್ ಪಾರ್ಕ್, ಅಡೋಬ್ ಟೆಕ್ ಪಾರ್ಕ್ ಮತ್ತು ಸುತ್ತಮುತ್ತಲಿನ ಪ್ರದೇಶ.

ರಾಹುಲ್ ಗಾಂಧಿ ಟ್ವಿಟರ್ ಖಾತೆ ಮತ್ತೆ ಸಕ್ರಿಯ

ನವದೆಹಲಿ: 'ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಟ್ವಿಟರ್ ಖಾತೆ ಶನಿವಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ಬಳಿಕ ಸಕ್ರಿಯಗೊಂಡಿದೆ' ಎಂದು ಕಾಂಗ್ರೆಸ್ ತಿಳಿಸಿದೆ.

ಅತ್ಯಾಚಾರ ಸಂತ್ರಸ್ತೆಯ ಕುಟುಂಬಸ್ಥರ ಜತೆಗಿನ ಫೋಟೊದೊಂದಿಗೆ ರಾಹುಲ್ ಗಾಂಧಿ ಅವರು ಇತ್ತೀಚೆಗೆ ಮಾಡಿದ್ದ ಪೋಸ್ಟ್ ಅನ್ನು ಟ್ವಿಟರ್ ತನ್ನ ವೇದಿಕೆಯಿಂದಲೇ ತೆಗೆದು ಹಾಕಿತ್ತು. ಇದಾದ ಮರುದಿನವೇ ಖಾತೆಯನ್ನೇ ಸ್ಥಗಿತಗೊಳಿಸಿತ್ತು. ಇದೀಗ ಖಾತೆ ಮರುಸ್ಥಾಪನೆಗೊಂಡಿದೆ ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

ಪಾನಮತ್ತನಾಗಿ ಅಡ್ಡಾದಿಡ್ಡಿ ಕಾರು ಚಾಲನೆ; ದುರ್ಮರಣ

ಬೆಂಗಳೂರು: ಬನಶಂಕರಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ಅಪಘಾತ ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

'ಪಾನಮತ್ತ ಚಾಲಕನೊಬ್ಬ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಸಿರುವುದು ಗೊತ್ತಾಗಿದೆ. ದ್ವಿಚಕ್ರ ವಾಹನದಲ್ಲಿದ್ದ ಇಬ್ಬರೂ ಸವಾರರು ಮೃತಪಟ್ಟಿದ್ದಾರೆ. ಅವರಿಬ್ಬರ ಹೆಸರು ಗೊತ್ತಾಗಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸುಚಿತ್ರ ಫಿಲಂ ಸಿಟಿ ಎದುರಿನ ರಸ್ತೆಯಲ್ಲಿ ಶನಿವಾರ ರಾತ್ರಿ ಈ ಘಟನೆ ನಡೆದಿದೆ. ಕಾರು ಚಾಲಕನಿಗೂ ಗಾಯವಾಗಿದ್ದು, ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಕೆನರಾ ಬ್ಯಾಂಕ್ केनरा बैंक Canara Bank
ಭಾರತ ಸರ್ಕಾರದ ಒಂದು ಉದ್ಯಮ भारत सरकार का उपक्रम A Government of India Undertaking
ಸಿಂಡಿಕೇಟ್ सिंडिकेट Syndicate Together We Can

ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಚೇರಿ, ನಂ. 86, ಎಂ. ಜಿ.ರಸ್ತೆ, ಬೆಂಗಳೂರು-560 001 ದೂ. 25310039/25310038

ಸ್ಥಳದ ಅವಶ್ಯಕತೆ

ಕೆಳಕಂಡ ಪ್ರದೇಶ/ಸ್ಥಳಗಳಲ್ಲಿ ಶಾಖೆಗಳಿಗೆ ನಮೂದಿಸಿರುವ ವಿದ್ಯುತ್ ಪ್ರಮಾಣ ಮತ್ತು ವಾಹನ ನಿಲುಗಡೆಗೆ ಸಾಕಾಗುವಷ್ಟು ಸ್ಥಳಾವಕಾಶವಿರುವ ವಾಣಿಜ್ಯ ಸ್ಥಳಕ್ಕಾಗಿ ಸ್ವತ್ತಿನ ಮಾಲೀಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಸ್ಥಳ	ಕ್ರ.ಸಂ.	ಸ್ಥಳ
1	ಜಯನಗರ 5ನೇ ಬ್ಲಾಕ್	7	ಆವಲಹಳ್ಳಿ ಯಲಹಂಕ ಸಮೀಪ
2	ಬಸವೇಶ್ವರ ರಸ್ತೆ	8	ಹುಣಸೇಮಾರನಹಳ್ಳಿ ಏರ್‌ಪೋರ್ಟ್ ರಸ್ತೆ
3	ರಾಮಮೂರ್ತಿ ನಗರ	9	ಉಲ್ಲಾಳು ಬೆಂಗಳೂರು
4	ಅಮೃತಹಳ್ಳಿ ಜಕ್ಕೂರು ಸಮೀಪ	10	ವಿಶ್ವೇಶ್ವರಯ್ಯ ಬಡಾವಣೆ
5	ಅನಂತಪುರ ಯಲಹಂಕ ಸಮೀಪ	11	ನಲ್ಲೂರುಹಳ್ಳಿ ಹೂಡಿ ಸಮೀಪ
6	ಜೆ ಪಿ ನಗರ 8ನೇ ಫೇಸ್	12	ಜೂಡಿಶಿಯಲ್ ಬಡಾವಣೆ ಯಲಹಂಕ ಸಮೀಪ

ನೆಲಮಹಡಿ/ವಾಸಮಾಡಲು ಸಿದ್ಧವಿರುವ ಆವರಣಕ್ಕೆ ಆದ್ಯತೆ ನೀಡಲಾಗುವುದು. ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್: https://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಿರುವ ಅರ್ಜಿ ನಮೂನೆಗಳನ್ನು ಮೇಲ್ಕಂಡ ಕಚೇರಿ ಇಲ್ಲವೆ ಬ್ಯಾಂಕಿನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಜಿಗಳನ್ನು ಈ ಮೇಲ್ಕಂಡ ಕಚೇರಿಯಲ್ಲಿ ಸಲ್ಲಿಸಲು ಕೊನೆಯ **ದಿನಾಂಕ 16.08.2021 ಮಧ್ಯಾಹ್ನ 3.00 ಗಂಟೆಯೊಳಗೆ.** ಇತರೆ ತಿದ್ದುಪಡಿಗಳಿದ್ದಲ್ಲಿ/ ಮಾರ್ಪಾಡುಗಳಿದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. **ಮಧ್ಯವರ್ತಿಗಳಿಗೆ ಅವಕಾಶವಿಲ್ಲ.**

ಸ್ಥಳ: ಬೆಂಗಳೂರು
ದಿನಾಂಕ: 08.08.2021
ಸಹಿ/ ಸಹಾಯಕ ಮಹಾ ಪ್ರಬಂಧಕರು, ಬೆಂಗಳೂರು ವೃತ್ತ.

'ಆರೋಗ್ಯ ಸ್ವಯಂಸೇವಕರ ಅಭಿಯಾನ'ಕ್ಕೆ ಚಾಲನೆ

'ಸೇವೆಯೇ ಬಿಜೆಪಿಯ ಜೀವಾಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೇವೆಯೇ ಬಿಜೆಪಿಯ ಜೀವಾಳ. ನಮ್ಮದು (ಬಿಜೆಪಿ) ಸೇವೆ. ಅವರದ್ದು (ಇತರ ಪಕ್ಷ) ಸ್ವಾರ್ಥ. ಇದೇ ವ್ಯತ್ಯಾಸ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಜ್ಯ ಬಿಜೆಪಿ ಹಮ್ಮಿಕೊಂಡಿರುವ 'ಆರೋಗ್ಯ ಸ್ವಯಂಸೇವಕರ ಅಭಿಯಾನ'ವನ್ನು ಹೋಟೆಲ್ ರಾಡಿಸನ್‌ನಲ್ಲಿ ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, 'ಜನರ ಆರೋಗ್ಯ ಕಾಪಾಡಲು ಮತ್ತು ರಾಜ್ಯದ ಅಭಿವೃದ್ಧಿಗೆ ಸರ್ಕಾರ ಸದಾ ಸಿದ್ಧ' ಎಂದರು.

'30 ವರ್ಷಗಳಿಂದ ರಾಜಕೀಯದಲ್ಲಿರುವ ನಾನು, ಬೇರೆ ಬೇರೆ ಪಕ್ಷಗಳನ್ನು ನೋಡಿದ್ದೇನೆ. ಇತರ ಪಕ್ಷಗಳಲ್ಲಿ ಇರುವವರ ವಿಚಾರಗಳು ಸ್ವಾರ್ಥದಿಂದ ಕೂಡಿರುತ್ತದೆ. ಆದರೆ, ಬಿಜೆಪಿಯ ಒಬ್ಬ ಸಾಮಾನ್ಯ ಕಾರ್ಯಕರ್ತ ಜನರ ಸಮಸ್ಯೆಗಳನ್ನು ಬಗೆಹರಿಸುವ ತುಡಿತ ಹೊಂದಿರುತ್ತಾನೆ. ಇಂಥ ಕಾರ್ಯಕರ್ತರು ಬಿಜೆಪಿಯ ಆಸ್ತಿ' ಎಂದರು.

'ಪ್ರಧಾನಿ ನರೇಂದ್ರ ಮೋದಿಯವರ ದಿಟ್ಟ, ಕಠಿಣ ನಿರ್ಧಾರಗಳ ಫಲವಾಗಿ ಕೋವಿಡ್ ಸೋಂಕನ್ನು ದೇಶದಲ್ಲಿ ಸಮರ್ಥವಾಗಿ ನಿಯಂತ್ರಿಸಲು ಸಾಧ್ಯವಾಯಿತು. ಕೋವಿಡ್ ಮೊದಲ ಅಲೆ ಬಂದಾಗ ಅದನ್ನು ಎದುರಿಸಲು ಸೂಕ್ತ ಆರೋಗ್ಯ ಮೂಲಸೌಲಭ್ಯಗಳು ಇರಲಿಲ್ಲ. ಮಾಸ್ಕ್‌ಗಳ ಲಭ್ಯತೆಯೂ ಸಾಕಷ್ಟು ಇರಲಿಲ್ಲ. ಆದರೆ, ಇಂದು ಆರೋಗ್ಯ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಸ್ವದೇಶಿ ಲಸಿಕೆ ತಯಾರಿಕೆಗೆ ಪ್ರಧಾನಿ ಪ್ರೇರೇಪಿಸಿದರು. ಅವರ ಪ್ರತಿಯೊಂದು ನಿರ್ಣಯದಲ್ಲಿ ಒಂದು ನೀತಿ, ತತ್ವ, ಗುರಿ ಇರುತ್ತದೆ' ಎಂದು ಮುಖ್ಯಮಂತ್ರಿ ಹೇಳಿದರು.

'ಆರೋಗ್ಯ ಸ್ವಯಂ ಸೇವಕರ ಅಭಿಯಾನ ಜಿಲ್ಲೆ, ತಾಲ್ಲೂಕು ಹಾಗೂ ಬೂತ್ ಮಟ್ಟದಲ್ಲಿ ನಡೆಯಲಿದೆ. ಈ ರೀತಿಯ ಕಾರ್ಯಕ್ರಮ ಇತರ ಪಕ್ಷಗಳಿಂದ ಸಾಧ್ಯವಿಲ್ಲ. ಅವರು ಅಧಿಕಾರ ಬಂದಾಗ ಕಬ್ಬಿದ್ದಂಗ ಇರ್ತಾರೆ, ಅಧಿಕಾರ ಹೋದಾಗ ಹತ್ತಿ ಕಟ್ಟಿಗೆ ರೀತಿ ಇರ್ತಾರೆ ಎಂಬಂತಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದಲ್ಲಿ ಹಗಲಿರುಳು ಶ್ರಮಿಸಿದ್ದೇವೆ. ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಅವಧಿಯಲ್ಲಿ ಆಮ್ಲಜನಕ ಸೌಲಭ್ಯದ 24 ಸಾವಿರಕ್ಕೂ ಹೆಚ್ಚು ಹಾಸಿಗೆ, 6 ಸಾವಿರ ಐಸಿಯು ಹಾಸಿಗೆಗಳನ್ನು ಸಿದ್ಧಪಡಿಸಿದ್ದೇವೆ' ಎಂದರು.

ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ರಾಜ್ಯ ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣಕುಮಾರ್, ಬಿಜೆಪಿ ಉಪಾಧ್ಯಕ್ಷರಾದ ತೇಜಸ್ವಿನಿ ಅನಂತಕುಮಾರ್ ಇದ್ದರು.

ರಾಜ್ಯ ಬಿಜೆಪಿ ಆಯೋಜಿಸಿರುವ ಆರೋಗ್ಯ ಸ್ವಯಂಸೇವಕರ ಅಭಿಯಾನ'ವನ್ನು ಕಿಟ್‌ಗಳನ್ನು ವಿತರಿಸುವ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಉದ್ಘಾಟಿಸಿದರು. ಎನ್. ರವಿಕುಮಾರ್, ತೇಜಸ್ವಿನಿ ಅನಂತಕುಮಾರ್ ಇದ್ದರು – ಪ್ರಜಾವಾಣಿ ಚಿತ್ರ

ಡಿ.ಜೆ. ಹಳ್ಳಿ ಗಲಭೆ; ಆರೋಪಿಗಳ ಮನೆ ಮೇಲೆ ಎನ್‌ಐಎ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೊಂಡನಹಳ್ಳಿ (ಕೆ.ಜೆ.ಹಳ್ಳಿ) ಹಾಗೂ ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಗಲಭೆ ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಆರೋಪಿಗಳ ಮನೆಗಳ ಮೇಲೆ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಶನಿವಾರ ದಾಳಿ ಮಾಡಿದರು.

'ಗೋವಿಂದಪುರ, ಕೆ.ಜಿ. ಹಳ್ಳಿ, ಡಿ.ಜೆ.ಹಳ್ಳಿ, ಪುಲಕೇಶಿನಗರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿರುವ ಏಳು ಮನೆಗಳ ಮೇಲೆ ದಾಳಿ ಮಾಡಲಾಗಿದೆ. ಹಲವು ದಾಖಲೆ ಹಾಗೂ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಎನ್‌ಐಎ ಮೂಲಗಳು ಹೇಳಿವೆ.

'2020ರ ಆಗಸ್ಟ್ 11ರಂದು ರಾತ್ರಿ ನಡೆದಿದ್ದ ಗಲಭೆ ಪ್ರಕರಣದಲ್ಲಿ 250ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿತ್ತು. ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನೂ ಸಲ್ಲಿಸಲಾಗಿತ್ತು. ಆರೋಪಿಗಳು ಎನ್ನಲಾದ ಹಬೀಬ್, ಪೀರ್‌ಪಾಷಾ, ರೆಹಮಾನ್, ಶಬ್ಬೀರ್ ಸೇರಿ 7 ಮಂದಿ ತಲೆಮರೆಸಿಕೊಂಡಿದ್ದಾರೆ. ಅವರದ್ದೇ ಮನೆಗಳ ಮೇಲೆ ದಾಳಿ ನಡೆಸಲಾಯಿತು' ಎಂದು ಮೂಲಗಳು ತಿಳಿಸಿವೆ.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 30 ಜಿಲ್ಲೆಗಳಿಗೆ ವಿವಿಧ ಇಲಾಖೆಗಳ ಹಿರಿಯ ಐಎಎಸ್ ಅಧಿಕಾರಿಗಳನ್ನು ಉಸ್ತುವಾರಿ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಿ ಶನಿವಾರ ಆದೇಶ ಹೊರಡಿಸಲಾಗಿದೆ.

ಹೊಸದಾಗಿ ರಚನೆಯಾಗಿರುವ ವಿಜಯನಗರ ಜಿಲ್ಲೆಗೆ ಉಸ್ತುವಾರಿ ಕಾರ್ಯದರ್ಶಿಯನ್ನು ನೇಮಿಸಿಲ್ಲ. ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪರಿಶೀಲನೆ, ಅಹವಾಲು ವಿಚಾರಣೆ, ದಿಢೀರ್ ಪರಿಶೀಲನೆ ಮತ್ತು ಯೋಜನೆ ಹಾಗೂ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ವರದಿ ಸಲ್ಲಿಸುವ ಅಧಿಕಾರವನ್ನು ಉಸ್ತುವಾರಿ ಕಾರ್ಯದರ್ಶಿಗಳಿಗೆ ನೀಡಲಾಗಿದೆ.

ಅಧಿಕಾರಿಗಳ ವಿವರ: ಡಾ. ಎನ್. ಮಂಜುಳಾ (ಬೆಂಗಳೂರು ನಗರ), ಪಿ. ಹೇಮಲತಾ (ಬೆಂಗಳೂರು ಗ್ರಾಮಾಂತರ), ತುಷಾರ್ ಗಿರಿನಾಥ್ (ರಾಮನಗರ), ಎನ್. ಮಂಜುನಾಥ್ ಪ್ರಸಾದ್ (ಚಿತ್ರದುರ್ಗ), ಉಮಾ ಮಹಾದೇವನ್ (ಕೋಲಾರ), ಎಲ್. ಕೆ. ಅತೀಕ್ (ಬೆಳಗಾವಿ), ಮನೋಜ್ ಕುಮಾರ್ ಮೀನಾ (ಚಿಕ್ಕಬಳ್ಳಾಪುರ), ಡಾ.ಎಸ್. ಸೆಲ್ವಕುಮಾರ್ (ಶಿವಮೊಗ್ಗ), ಎಸ್.ಆರ್. ಉಮಾಶಂಕರ್ (ದಾವಣಗೆರೆ), ಎನ್. ಜಯರಾಂ (ಮೈಸೂರು).

ಡಾ.ವಿ. ರಾಮ್ ಪ್ರಸಾತ್ ಮನೋಹರ್ (ಮಂಡ್ಯ), ಬಿ.ಬಿ. ಕಾವೇರಿ (ಚಾಮರಾಜನಗರ), ನವೀನ್ ರಾಜ್ ಸಿಂಗ್ (ಹಾಸನ), ವಿ. ಅನ್ಬುಕುಮಾರ್ (ಕೊಡಗು), ಸಿ. ಶಿಖಾ (ಚಿಕ್ಕಮಗಳೂರು), ಕ್ಯಾಪ್ಟನ್ ಮಣಿವಣ್ಣನ್ ಪಿ. (ಉಡುಪಿ), ವಿ. ಪೊನ್ನುರಾಜ್ (ದಕ್ಷಿಣ ಕನ್ನಡ), ರಾಕೇಶ್ ಸಿಂಗ್ (ತುಮಕೂರು), ಡಾ.ರವಿಕುಮಾರ್ ಸುರ್‌ಪುರ್ (ಧಾರವಾಡ).

ಮೊಹಮ್ಮದ್ ಮೊಹಿಸಿನ್ (ಗದಗ), ಡಿ. ರಂದೀಪ್ (ವಿಜಯಪುರ), ಕೆ.ಪಿ. ಮೋಹನ್ ರಾಜ್ (ಉತ್ತರ ಕನ್ನಡ), ಶಿವಯೋಗಿ ಸಿ. ಕಳಸದ (ಬಾಗಲಕೋಟೆ), ಗುಂಜನ್ ಕೃಷ್ಣ (ಕಲಬುರ್ಗಿ), ಮುನೀಶ್ ಮೌದ್ಗಿಲ್ (ಯಾದಗಿರಿ), ಡಾ. ವಿಶಾಲ್ ಆರ್. (ರಾಯಚೂರು), ಡಾ. ರಶ್ಮಿ ವಿ. ಮಹೇಶ್ (ಕೊಪ್ಪಳ), ಡಾ.ಎಂ.ಎನ್. ಅಜಯ್ ನಾಗಭೂಷಣ್ (ಬಳ್ಳಾರಿ), ರಿಚರ್ಡ್ ವಿನ್ಸೆಂಟ್ ಡಿಸೋಜ (ಬೀದರ್), ಮನೋಜ್ ಜೈನ್ (ಹಾವೇರಿ).

SHRI SHIDDESHWAR CO-OP. BANK LTD.,
ADMINISTRATIVE OFFICE, S.S. ROAD VIJAYAPUR-586101 (KARNATAKA)
PHONE NO.: 08352-251272,250069, Email.: shiddeshwarbank@gmail.com
web:www.shiddeshwarbank .com

APPOINTMENT
NOTIFICATION

APPLICATIONS ARE INVITED FROM INDIAN CITIZENS FOR THE POST OF CHIEF EXECUTIVE OFFICER ON A CONTRACT BASIS

1. **Age:** Above 50 years, and below 65 Years.
2. **Post Required:** 1 (One) Post
3. **Qualification:** As per fit and proper Criteria Prescribed by Reserve Bank of India No.RBI/2021-22/60DOR.GOV.REC.25/12.10.000/2021-22, Dated: 25-06-2021
4. **Eligibility:** The person shall be a graduate, preferably, with
   1) Qualification in banking/Co-operative banking such as CAIIB/Diploma in Banking and Finance/ Diploma in Co-Operative Business Management or equivalent qualification or
   2) Chartered/Cost Accountant/MBA(Finance); or
   3) Post graduation in any discipline.
   4) The person should have a combined experience of at least eight years at the middle/ senior management level in the banking sector (including the experience gained in the concerned UCB) or non – banking finance companies engaged in lending (loan companies) and asset financing.
   5) Knowledge of Kannada Language speaking & writing
   6) The tenure of CEO shall not be for a period more than five years at a time subject to a minimum period of three years at the time of first appointment.
5. **Salary:** Shall be commensurate with experience and qualification. However the candidate may indicate expected salary.
6. **Submission of Application :** Application should be submitted on white paper along with recent passport size photo and necessary documents of Qualification and experience in duplicate(self attested) to **Chairman Of NRC Shri. Shiddeshwar Co-Operative Bank Ltd.,Administrative Office, Shri. Shiddeshwar Road,Vijayapur-586101 Karnataka.**
7. **Last Date of Received application:** Application should reach by us on or before **25.08.2021**

General Instructions :

1) Before applying, the candidate should ensure that he/she fulfills the eligibility criteria of RBI and other norms mentioned in this advertisement, Bank reserves the right to accept or reject the application at any stage of the recruitment process without assigning any reason thereof. **2)**Candidates shall attend the interview at their own cost. **3)**Bank reserves the right to alter, revise, add or delete any of the conditions mentioned above, **4**) Decision of the Bank in all matters regarding eligibility of the candidate, the stages at which such scrutiny or eligibility is to be the undertaken, the documents to be produced for the purpose of interview, selection and any other matters relating to recruitment will be final and binding on the candidate. The decision of Reserve Bank of India will be final, for the final Selection of candidate for the appointment of CEO, among the short listed candidates by the NRC and BOD. No correspondence or personal enquires would be entertained by the bank in this regard. **5)** For any clarification please contact on **Mobile No.9353096653,**

Date:07-08-2021
Sd/- Chairman

ಸಂಚಾರ ಸೂಚನಾ ಗುರುತುಗಳು ಮಾಯ ● ದಂಡ ತೆರುವಂತೆ ಮಾಡುವ ಸಿಗ್ನಲ್‌ಗಳು

ವ್ಯವಸ್ಥೆ ಎಡವಟ್ಟು; ಮಾಡದ ತಪ್ಪಿಗೆ ದಂಡ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಸುಗಮ ಸಂಚಾರ ಉದ್ದೇಶದಿಂದ ನಗರದ ಬಹುತೇಕ ರಸ್ತೆಗಳಲ್ಲಿ ಸಿಗ್ನಲ್ ಹಾಗೂ ಸೂಚನಾ ಫಲಕಗಳ ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿರುವ ಕೆಲ ತಾಂತ್ರಿಕ ಎಡವಟ್ಟಿನಿಂದಾಗಿ ಸಾರ್ವಜನಿಕರು, ತಾವು ಮಾಡದ ತಪ್ಪಿಗೆ ದಂಡ ತೆರುವಂತಾಗಿದೆ.

ರಾಜಧಾನಿಯ ಪ್ರತಿಯೊಂದು ರಸ್ತೆಯಲ್ಲೂ ವಾಹನಗಳ ದಟ್ಟಣೆ ಸಾಮಾನ್ಯ. ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥೆ ರೂಪಿಸಿರುವುದಾಗಿ ಪೊಲೀಸರು ಹೇಳುತ್ತಾರೆ. ಆದರೆ, ವ್ಯವಸ್ಥೆಯ ಪರಿಶೀಲನೆಗೆ ನಿಂತಾಗ ಸಾಕಷ್ಟು ಲೋಪಗಳು ಕಂಡುಬರುತ್ತವೆ.

ಸ್ವಯಂಚಾಲಿತ ಹಾಗೂ ಮಾನವ ಚಾಲಿತ ಸಿಗ್ನಲ್ ವ್ಯವಸ್ಥೆ ನಗರದಲ್ಲಿದೆ. ಸಿಗ್ನಲ್‌ನಲ್ಲಿ ಅಳವಡಿಸಿರುವ ಕ್ಯಾಮೆರಾಗಳ ಮೂಲಕ ದಂಡ ವಿಧಿಸುವ ಕೆಲಸವಾಗುತ್ತಿದೆ. ಹೆಚ್ಚು ದಟ್ಟಣೆ ಉಂಟಾಗುವ ರಸ್ತೆಯಲ್ಲಿ ಮಾನವ ಚಾಲಿತ ಸಿಗ್ನಲ್ ನಿರ್ವಹಣೆ ಮಾಡುವುದು ತುಂಬಾ ಕಷ್ಟವಾಗುತ್ತದೆ. ಅಂಥ ಕಡೆ ಸ್ವಯಂಚಾಲಿತ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ಆದರೆ, ಅಂಥ ಸಿಗ್ನಲ್‌ಗಳ ತಪ್ಪು ಕಾರ್ಯಾಚರಣೆಯಿಂದ ಹಲವರಿಗೆ ದಂಡ ಬೀಳುತ್ತಿದೆ.

ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೆ, 'ಸಿಗ್ನಲ್ ಸರಿಪಡಿಸಲಾಗುವುದು' ಎಂದಷ್ಟೇ ಭರವಸೆ ಸಿಗುತ್ತಿದೆ. ಆದರೆ, ವಿಧಿಸಿದ ದಂಡ ಪಾವತಿ ಕಡ್ಡಾಯ ಎಂದೇ ಪೊಲೀಸರು ಹೇಳುತ್ತಿದ್ದಾರೆ. ತಾವು ತಪ್ಪು ಮಾಡದಿದ್ದರೂ ಹಲವರು ದಂಡ ಪಾವತಿಸುತ್ತಿದ್ದಾರೆ. ವ್ಯವಸ್ಥೆಯಲ್ಲಿರುವ ಎಡವಟ್ಟುಗಳನ್ನು ಪತ್ತೆ ಮಾಡಿ ಸರಿಪಡಿಸುವುದು ಇಲಾಖೆ ಕರ್ತವ್ಯ. ಅದನ್ನು ಬಿಟ್ಟು ಸಾಮಾನ್ಯ ಜನರ ಮೇಲೆಯೇ ದಂಡದ ಅಸ್ತ್ರ ಪ್ರಯೋಗಿಸುವುದು ಸರಿಯಲ್ಲ ಎಂಬುದು ಜನರ ವಾದ.

'ಬಳ್ಳಾರಿ ರಸ್ತೆಯ ಬಸವೇಶ್ವರ ವೃತ್ತದಲ್ಲಿ 2020ರಲ್ಲಿ ಬೆಳಿಗ್ಗೆ 7 ಗಂಟೆಗೆ ಕಾರಿನಲ್ಲಿ ಹೊರಟಿದ್ದೆ. ಸಿಗ್ನಲ್‌ನಲ್ಲಿ ಕೆಂಪು ದೀಪ ಹತ್ತಿತ್ತು. ಕೆಂಪು ಹೋಗಿ ಹಸಿರು ದೀಪ ಬರಲಿ ಎಂದು ಕಾಯುತ್ತ ನಿಂತಿದ್ದೆ. ನಿಗದಿತ ಸಮಯ ಮೀರಿ ಮೂರು ನಿಮಿಷ ಕಾದರೂ ಕೆಂಪು ದೀಪ ಆರಿರಲಿಲ್ಲ. ನನ್ನ ಹಿಂದೆಯೇ ಬಂದ ಹಲವರು, ಸಿಗ್ನಲ್ ಜಂಪ್ ಮಾಡಿಕೊಂಡು ಹೋದರು. ಸಿಗ್ನಲ್ ದುರಸ್ತಿಗೆ ಬಂದಿರಬಹುದೆಂದು ತಿಳಿದು ನಾನು ಮುಂದಕ್ಕೆ ಹೋಗಿದ್ದೆ' ಎಂದು ಶೇಷಾದ್ರಿಪುರ ನಿವಾಸಿ [illegible] ಹೇಳಿದರು.

'ಇತ್ತೀಚೆಗೆ ಮಲ್ಲೇಶ್ವರ ಬಳಿ ನನ್ನ ಕಾರು ತಡೆದಿದ್ದ ಪೊಲೀಸರು, ಹಳೇ ಪ್ರಕರಣಗಳ ಬಗ್ಗೆ ಪರಿಶೀಲಿಸಿದ್ದರು. ಚಾಲುಕ್ಯ ವೃತ್ತದಲ್ಲಿ ಸಿಗ್ನಲ್ ಜಂಪ್ ಮಾಡಿರುವುದಾಗಿ ಹೇಳಿದ್ದರು. ದಂಡ ಪಾವತಿಸುವಂತೆ ಪಟ್ಟು ಹಿಡಿದಿದ್ದರು. ಅಂದು ಸಿಗ್ನಲ್‌ನಿಂದಾಗಿ ಎಡವಟ್ಟು ಹೇಳಿದರೂ ಕೇಳಲಿಲ್ಲ. ಅನಿವಾರ್ಯವಾಗಿ ದಂಡ ಪಾವತಿಸಿದೆ. ಈ ಬಗ್ಗೆ ಪೊಲೀಸರಿಗೆ ಮನವಿ ಕೊಟ್ಟಿದ್ದೇನೆ' ಎಂದೂ ತಿಳಿಸಿದರು.

ಚಾಮರಾಜಪೇಟೆ ನಿವಾಸಿ, 'ಗಾಂಧಿ ಬಜಾರ್ ಬಳಿಯೇ ಸಿಗ್ನಲ್‌ಗಳ ಸಮಸ್ಯೆ ಇದೆ. ಕೆಂಪು ದೀಪ ಹೆಚ್ಚು ಸಮಯ ಹೊತ್ತಿರುತ್ತದೆ. ಹಾಳಾಗಿರಬಹುದೆಂದು ತಿಳಿದು ವಾಹನ ಮುಂದಕ್ಕೆ ಚಲಾಯಿಸಿದರೆ ಸಿಗ್ನಲ್ ಜಂಪ್ ಮಾಡಿದ ದಂಡ ಬೀಳುವುದು ಖಚಿತ. ಈ ಬಗ್ಗೆಯೇ ಪೊಲೀಸರ ಜೊತೆ ಹಲವರು ಬಾರಿ ಜಗಳ ಮಾಡಿದ್ದೇನೆ' ಎಂದರು.

ಸೂಚನಾ ಫಲಕಗಳೇ ಮಾಯ: ಸಂಚಾರ ನಿಯಮ ಪಾಲನೆಗಾಗಿ ರಸ್ತೆಯಲ್ಲಿ ಸೂಚನೆ ಫಲಕ ಹಾಗೂ ಚಿಹ್ನೆಗಳನ್ನು ಹಾಕಲಾಗಿದೆ. ಆದರೆ, ಇವುಗಳು ಬಹುಬೇಗನೇ ಹದಗೆಡುತ್ತಿವೆ. ಇದರಿಂದಾಗಿಯೂ ಜನರಿಗೆ ಸುಖಾಸುಮ್ಮನೇ ದಂಡ ಬೀಳುತ್ತಿದೆ.

'ರಸ್ತೆ ಅಕ್ಕ-ಪಕ್ಕ ಹಾಗೂ ಮಧ್ಯದ ಬಿಳಿಪಟ್ಟಿ, ಜೀಬ್ರಾ ಕ್ರಾಸಿಂಗ್ ಹಾಗೂ ಇತರೆಡೆ ಸೂಚನಾ ಗುರುತುಗಳೇ ಅಳಿಸಿ ಹೋಗುತ್ತಿವೆ. ಇಂಥ ಸ್ಥಳದಲ್ಲಿ ಕ್ಯಾಮೆರಾ ಮಾತ್ರ ಕೆಲಸ ಮಾಡುತ್ತಿವೆ. ಜೀಬ್ರಾ ಕ್ರಾಸಿಂಗ್‌ನಲ್ಲಿ ಗುರುತು ಇಲ್ಲದಿದ್ದರಿಂದ ಯಾರಾದರೂ ಅಲ್ಲಿ ವಾಹನ ನಿಲ್ಲಿಸಿದರೂ ದಂಡ ಬೀಳುತ್ತಿದೆ' ಎಂದು ಸಾರ್ವಜನಿಕರು ಹೇಳಿದರು.

ಜಾಗ ಮಾಡಿಕೊಟ್ಟವರಿಗೆ ದಂಡ: ಸಿಗ್ನಲ್‌ಗಳಲ್ಲಿ ತುರ್ತು ಸಂದರ್ಭಗಳಲ್ಲಿ ಹಿಂಬದಿ ವಾಹನಗಳನ್ನು ದಾರಿ ಮಾಡಿಕೊಟ್ಟವರಿಗೂ ದಂಡ ಬಿದ್ದಿದೆ. ಯಾರಿಗೂ ಸಹಾಯ ಮಾಡಲು ಹೋಗಿ ಕೆಲವರು ತಮ್ಮ ಮೇಲೆಯೇ ದಂಡ ಹಾಕಿಕೊಂಡು ಪಾವತಿಸಿದ್ದಾರೆ. ಅಂತಹ ದಂಡಗಳನ್ನು ಪ್ರಶ್ನಿಸಿದರೂ ಪೊಲೀಸರಿಂದ ಸಮರ್ಪಕ ಉತ್ತರ ಬಂದಿಲ್ಲ.

'ಕಚೇರಿಗೆ ಹೋಗುವಾಗ ಸಿಗ್ನಲ್‌ನಲ್ಲಿ ನಿಂತಿದ್ದೆ. ಹಿಂದಿನಿಂದ ಬಂದಿದ್ದ ಕಾರೊಂದರ ಚಾಲಕ, ಆಸ್ಪತ್ರೆಗೆ ಹೋಗಬೇಕು ಜಾಗ ಬಿಡಿ ಎಂದಿದ್ದರು. ತುರ್ತು ಅಗತ್ಯವಿರಬಹುದೆಂದು ತಿಳಿದು ಕಾರಿಗೆ ಜಾಗ ಮಾಡಿಕೊಟ್ಟೆ. ಅವಸರದಲ್ಲಿ ನನ್ನ ಬೈಕನ್ನು ಜೀಬ್ರಾ ಕ್ರಾಸಿಂಗ್ ಗುರುತಿನ ಮೇಲೆ ನಿಲ್ಲಿಸಿದ್ದೆ' ಎಂದು ಖಾಸಗಿ ಕಂಪನಿ ಉದ್ಯೋಗಿ ಪ್ರಭಾಕರ್ ಹೇಳಿದರು.

'ಒಂದ ವರ್ಷದ ನಂತರ ಬೈಕ್ ಹಿಡಿದಿದ್ದ ಪೊಲೀಸರು, ಹಳೇ ಪ್ರಕರಣ ಪರಿಶೀಲಿಸಿದ್ದರು. ಜೀಬ್ರಾ ಕ್ರಾಸಿಂಗ್ ಮೇಲೆ ಬೈಕ್ ನಿಲ್ಲಿಸಿದ್ದಕ್ಕೆ ದಂಡ ಬಿದ್ದಿರುವುದು ತಿಳಿಯಿತು. ಆಸ್ಪತ್ರೆಗೆ ಹೋಗುವವರಿಗೆ ದಾರಿ ಮಾಡಿಕೊಟ್ಟ ಬಗ್ಗೆ ಪೊಲೀಸರಿಗೆ ಹೇಳಿದರೂ ಕೇಳಲಿಲ್ಲ. ದಂಡ ಕಟ್ಟಿ ಬಂದೆ' ಎಂದೂ ತಿಳಿಸಿದರು.



ನಗರದ ರಸ್ತೆಯೊಂದರಲ್ಲಿ ಹಾಕಿದ್ದ ಜೀಬ್ರಾ ಕ್ರಾಸಿಂಗ್ ಗುರುತು ಅಳಿಸಿರುವುದು

ನಿತ್ಯ ಸಂಚಾರ ಸದಾ ಕಿರಿಕಿರಿ 3

ನೋಂದಣಿ ಸಂಖ್ಯೆ– ನಕಲಿ ಫಲಕ ಹಾವಳಿ

ನೋಂದಣಿ ಸಂಖ್ಯೆ ನಕಲಿ ಫಲಕಗಳ ಹಾವಳಿಯೇ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಯಾರದ್ದೋ ವಾಹನದ ನೋಂದಣಿ ಫಲಕವನ್ನು ಇನ್ನಾರೋ ತಮ್ಮ ವಾಹನಗಳ ಮೇಲೆ ಹಾಕಿಕೊಂಡು ಸುತ್ತಾಡುತ್ತಿದ್ದಾರೆ. ಇಂಥವರು ಸಂಚಾರ ನಿಯಮ ಉಲ್ಲಂಘಿಸಿದಾಗ, ಅಸಲಿ ವಾಹನದ ಮಾಲೀಕರಿಗೆ ದಂಡ ಬೀಳುತ್ತಿದೆ. ಇದರಿಂದ ನೊಂದ ಹಲವರು ಪೊಲೀಸರಿಗೆ ದೂರು ನೀಡುತ್ತಿದ್ದಾರೆ.

ವಿಜಯನಗರದ ವೈದ್ಯರೊಬ್ಬರು, 'ನನ್ನ ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆಯನ್ನು ಶಿವಾಜಿನಗರದ ಯುವಕನೊಬ್ಬ ತನ್ನ ವಾಹನಕ್ಕೆ ಹಾಕಿಕೊಂಡಿದ್ದ. ಆತ, 13 ಬಾರಿ ನಿಯಮ ಉಲ್ಲಂಘನೆ ಮಾಡಿದ್ದ. ಅದರ ನೋಟಿಸ್ ನನ್ನ ಮನೆಗೆ ಬಂದಿತ್ತು. ಸಂಚಾರ ನಿಯಂತ್ರಣ ಕೊಠಡಿಗೆ ದಾಖಲೆ ಸಮೇತ ದೂರು ನೀಡಿದ್ದೆ' ಎಂದರು.

'ಆತ ನಿತ್ಯವೂ ಒಂದಿಲ್ಲೊಂದು ನಿಯಮ ಉಲ್ಲಂಘನೆ ಮಾಡುತ್ತಿದ್ದ. ಅದರ ನೋಟಿಸ್‌ಗಳು ನನಗೆ ಬರಲಾರಂಭಿಸಿದ್ದವು. ಅಷ್ಟಾದರೂ ಪೊಲೀಸರು ಆತನನ್ನು ಹಿಡಿಯಲಿಲ್ಲ. ವಿಷಯವನ್ನು ಇಲಾಖೆ ಉನ್ನತ ಅಧಿಕಾರಿಗಳಿಗೆ ತಿಳಿಸಿದ್ದೆ. ಆದಾಗ್ಯೂ ಕೇವಲ ದಿನಗಳಲ್ಲಿ ಆತನನ್ನು ಹಿಡಿದರು' ಎಂದೂ ಹೇಳಿದರು.

ಉನ್ನತ ಅಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳ ಪರಿಚಯವಿರುವ ಸಾರ್ವಜನಿಕರು, ಇಂಥ ಪ್ರಕರಣಗಳಲ್ಲಿ ದಂಡದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಆದರೆ, ಸಾಮಾನ್ಯ ಜನ ದಂಡ ಕಟ್ಟದೇ ವಿಧಿಯಿಲ್ಲ ಎನ್ನುತ್ತಿದ್ದಾರೆ. ನಗರದಲ್ಲಿ ಎಲ್ಲೆಡೆ ಕ್ಯಾಮೆರಾಗಳು ಇದ್ದರೂ ನಕಲಿ ಫಲಕಗಳ ವಾಹನಗಳನ್ನು ಪತ್ತೆ ಮಾಡಲು ಪೊಲೀಸರಿಂದ ಸಾಧ್ಯವಾಗುತ್ತಿಲ್ಲ ಎಂದು ಜನ ಬೇಸರ ವ್ಯಕ್ತಪಡಿಸುತ್ತಿದ್ದಾರೆ.

'ಹಿರಿಯ ಅಧಿಕಾರಿಗಳೇ ಎ.ಸಿ ಕಾರಿನಿಂದ ಕೆಳಗಿಳಿದು ನೋಡಿ'

'ದಂಡ ಸಂಗ್ರಹವೇ ಮೂಲ ಗುರಿ' ಎನ್ನುತ್ತಿರುವ ಸಂಚಾರ ಪೊಲೀಸರು, ನಗರದ ಹಲವು ರಸ್ತೆಗಳಲ್ಲಿ ವಾಹನಗಳನ್ನು ಅಡ್ಡಗಟ್ಟುತ್ತಿದ್ದಾರೆ. ಆ ರಸ್ತೆಯಲ್ಲಿ ಸಾಗುವ ಜನರಿಗೆ ಮಾತ್ರ, ಪೊಲೀಸರ ಕಿರಿಕಿರಿ ಹೇಗಿರುತ್ತದೆ ಎಂಬುದು ಗೊತ್ತಿದೆ. ಹಿರಿಯ ಅಧಿಕಾರಿಗಳಿಗೂ ಕಿರಿಕಿರಿ ಗೊತ್ತಾಗಬೇಕಾದರೆ ಎ.ಸಿ ಕಾರಿನಿಂದ ಇಳಿದು ನೋಡಬೇಕು ಎಂದು ಸಾರ್ವಜನಿಕರು ಸವಾಲು ಹಾಕುತ್ತಿದ್ದಾರೆ.

'ಕಮಿಷನರ್, ಜಂಟಿ ಕಮಿಷನರ್, ಡಿಸಿಪಿ, ಎಸಿಪಿಗಳು ತಮ್ಮ ಪಾಡಿಗೆ ಕಾರಿನಲ್ಲಿ ಹೊರಟು ಹೋಗುತ್ತಾರೆ. ಅವರಿಗೆ ಪೊಲೀಸರು ಸೆಲ್ಯೂಟ್ ಸಹ ಮಾಡುತ್ತಾರೆ. ಈ ರೀತಿಯಾದರೆ ಅಧಿಕಾರಿಗಳಿಗೆ ಜನರ ಸಮಸ್ಯೆ ಹೇಗೆ ಅರ್ಥವಾಗುತ್ತದೆ. ಒಮ್ಮೆ ಸಾಮಾನ್ಯರಾಗಿ ಬೈಕ್‌ನಲ್ಲಿ ಸುತ್ತಾಡಬೇಕು. ಅವಾಗಲೇ ಪೊಲೀಸರು ಎಲ್ಲೆಲ್ಲಿ ಕೈ ಹಾಕಿ ನಿಲ್ಲಿಸುತ್ತಾರೆ. ಏನೆಲ್ಲ ದಾಖಲೆ ಕೇಳುತ್ತಾರೆ, ಸಲ್ಲದ ನೆಪ ಹೇಳಿ ಎಷ್ಟು ದಂಡ ಪೀಕುತ್ತಾರೆ ಎಂಬುದು ತಿಳಿಯುತ್ತದೆ' ಎಂದೂ ಸಾರ್ವಜನಿಕರು ಹೇಳಿದರು.

ಸಂಚಾರ ಸೂಚನೆಗಳ ಅರಿವಿರಲಿ



ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸುದ್ದಿ 2 ನಿಮಿಷ

'ರೈತರ ಪರ ಕೆಲಸ ಮಾಡುವೆ'

ಬೆಂಗಳೂರು: 'ಹಿಂದಿನ ಅವಧಿಯಲ್ಲಿ ಸಹಕಾರ ಸಚಿವನಾಗಿ ನಾನು ಮಾಡಿದ್ದ ಕೆಲಸವನ್ನು ಆಧರಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟದಲ್ಲಿ ಮತ್ತೆ ಅದೇ ಖಾತೆ ನೀಡಿದ್ದಾರೆ. ಈ ಅವಕಾಶವನ್ನು ಬಳಸಿಕೊಂಡು ರೈತರ ಪರವಾಗಿ ಮತ್ತಷ್ಟು ಕೆಲಸ ಮಾಡುತ್ತೇನೆ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

ಶನಿವಾರ ಖಾತೆ ಹಂಚಿಕೆ ಬಳಿಕ ಪ್ರತಿಕ್ರಿಯಿಸಿರುವ ಅವರು, 'ಸಹಕಾರ ಖಾತೆ ನೇರವಾಗಿ ರೈತರಿಗೆ ಸಂಬಂಧಿಸಿದ್ದು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಹಕಾರ ಇಲಾಖೆಯ ಮೂಲಕ 30 ಲಕ್ಷ ರೈತರಿಗೆ ₹ 20,810 ಕೋಟಿ ಸಾಲ ನೀಡುವ ಗುರಿ ಇದೆ. ಈವರೆಗೆ 8.39 ಲಕ್ಷ ರೈತರಿಗೆ ₹ 6,318 ಕೋಟಿ ಸಾಲ ವಿತರಿಸಲಾಗಿದೆ. ಸಂಪೂರ್ಣವಾಗಿ ಗುರಿ ಸಾಧಿಸಲು ಪ್ರಯತ್ನಿಸುತ್ತೇನೆ' ಎಂದಿದ್ದಾರೆ.

ನಿಯಮಿತವಾಗಿ ಸಹಕಾರ ಬ್ಯಾಂಕ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಹೊಸ ರೈತರಿಗೆ ಸಾಲ ನೀಡುವ ಮೂಲಕ ಅವರನ್ನು ಸಹಕಾರ ಸಂಸ್ಥೆಗಳ ವ್ಯಾಪ್ತಿಗೆ ತರಲಾಗುವುದು. ರಾಜ್ಯದ ರೈತರ ಅಭಿವೃದ್ಧಿಗೆ ಪೂರಕವಾಗಿ ಈ ಅವಕಾಶವನ್ನು ಬಳಸಿ-ಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.



ತಮಿಳುನಾಡಿಗೆ ರಾಜ್ಯ ಬಿಜೆಪಿಗರ ಬೆಂಬಲ:ಎಎಪಿ ಟೀಕೆ

ಬೆಂಗಳೂರು: 'ಕೇಂದ್ರ ಸರ್ಕಾರವು ಮೇಕೆದಾಟು ಯೋಜನೆಯ ವಿಚಾರದಲ್ಲಿ ರಾಜ್ಯಕ್ಕೆ ಮಾಡುತ್ತಿರುವ ದ್ರೋಹವನ್ನು ಖಂಡಿಸುವ ಬದಲು, ತಮಿಳುನಾಡಿನ ಪರ ನಿಂತಿರುವ ರಾಜ್ಯದ ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ ಟೀಕಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಅಣ್ಣಾಮಲೈ ಅವರು ಮೇಕೆದಾಟು ವಿರುದ್ಧ ಮಾಡಿದ್ದ ಟ್ವೀಟ್‌ಗೆ ಕರ್ನಾಟಕದವರಾದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಪ್ರತಿಕ್ರಿಯಿಸುವ ಮೂಲಕ ಬೆಂಬಲಿಸಿರುವುದು ಖಂಡನೀಯ. ರಾಜ್ಯದ ಜನರ ಕ್ಷಮೆ ಯಾಚಿಸುವಂತೆ ಅವರಿಗೆ ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೂಚಿಸಬೇಕು' ಎಂದು ಆಗ್ರಹಿಸಿದರು.

'ಬೆಂಗಳೂರಿನ ಅನೇಕ ವಾರ್ಡ್‌ಗಳಲ್ಲಿ ಈಗಾಗಲೇ ಕುಡಿಯುವ ನೀರಿಗೆ ಅಭಾವವಿದ್ದು, ಭವಿಷ್ಯದಲ್ಲಿ ದೊಡ್ಡ ಪ್ರಮಾಣದ ಹಾಹಾಕಾರ ಸೃಷ್ಟಿಯಾಗಲಿದೆ. ಇದಕ್ಕೆ ಮೇಕೆದಾಟು ಯೋಜನೆಯೇ ಪರಿಹಾರ. ಈ ಯೋಜನೆಯಿಂದ ತಮಿಳುನಾಡಿಗೆ ತೊಂದರೆ ಇಲ್ಲ. ಆದ್ದರಿಂದ ಈ ಯೋಜನೆ ಅನುಷ್ಠಾನಕ್ಕೆ ಯಾರ ಅಪ್ಪಣೆಯೂ ರಾಜ್ಯಕ್ಕೆ ಬೇಕಾಗಿಲ್ಲ. ಕೇಂದ್ರ ಸರ್ಕಾರದ ಈ ನಡೆಯ ವಿರುದ್ಧ ರಾಜ್ಯ ಬಿಜೆಪಿ ನಾಯಕರು ದನಿ ಎತ್ತಲಿ' ಎಂದು ಒತ್ತಾಯಿಸಿದರು.

ಚಿತ್ರಾವಳಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಸಂಪುಟದ ಸಹೋದ್ಯೋಗಿಗಳೊಂದಿಗೆ ವಿಜಯನಗರದಲ್ಲಿರುವ ಆದಿಚುಂಚನಗಿರಿ ಮಠಕ್ಕೆ ಶನಿವಾರ ರಾತ್ರಿಭೇಟಿ ನೀಡಿ ನಿರ್ಮಲಾನಂದನಾಥ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಸ್ವಾಮೀಜಿಯವರಿಗೆ ಫಲತಾಂಬೂಲ ನೀಡಿ ಗೌರವಿಸಿದರು. ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರ್. ಅಶೋಕ, ಬಿಜೆಪಿ ಮುಖಂಡ ಎ. ಆನಂದ್ ಇದ್ದರು.

ಬೆಂಗಳೂರಿನ ಆರ್ ಟಿ. ನಗರದಲ್ಲಿರುವ ತರಳಬಾಳು ಕೇಂದ್ರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಭೇಟಿ ನೀಡಿ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ ಶನಿವಾರ ಹಮ್ಮಿಕೊಂಡ ಮೂಳೆ ಮತ್ತು ಕೀಲು ತಪಾಸಣೆ ಸಪ್ತಾಹ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಡಾ.ಎಚ್.ಎಸ್. ಚಂದ್ರಶೇಖರ್ ಮಾತನಾಡಿದರು. ಸಂಸ್ಥೆಯ ಅಸ್ಥಿ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಟಿ.ಎಚ್. ಪ್ರಕಾಶಪ್ಪ, ಬೆನ್ನುಹುರಿ ಶಸ್ತ್ರಚಿಕಿತ್ಸಾ ವಿಭಾಗದ ಸಹ ಪ್ರಾಧ್ಯಾಪಕ ಡಾ.ಎನ್.ಎಸ್. ಮೋಹನ್, ಅರಿವಳಿಕೆ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಮಾಲತಿ ಅನಿಲ್‌ಕುಮಾರ್ ಇದ್ದರು.

ಸುದ್ದಗುಂಟೆ ಪಾಳ್ಯದ ಕ್ರೈಸ್ಟ್ ವಿದ್ಯಾಲಯದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಟಿಎಂ ಬಡಾವಣೆ, ಕೋರಮಂಗಲ ಹಾಗೂ ಆಡುಗೋಡಿ ವ್ಯಾಪ್ತಿಯ ಪತ್ರಿಕಾ ವಿತರಕರಿಗೆ ಶಾಸಕ ರಾಮಲಿಂಗಾ ರೆಡ್ಡಿ ಅವರು ದಿನಸಿ ಕಿಟ್ ವಿತರಿಸಿದರು.

ಕರ್ನಾಟಕ ರೆಡ್ಡಿ ಜನ ಸಂಘದಿಂದ ಪ್ರತಿಭಟನೆ

'ಸತೀಶ್ ರೆಡ್ಡಿಗೆ ಸಚಿವ ಸ್ಥಾನ ನೀಡಿ'

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಶಾಸಕ ಸತೀಶ್ ರೆಡ್ಡಿ ಅವರಿಗೆ ಸಚಿವ ಸ್ಥಾನ ನೀಡದೆ, ರೆಡ್ಡಿ ಸಮುದಾಯಕ್ಕೆ ತಾರತಮ್ಯ ಮಾಡಲಾಗಿದೆ ಎಂದು ಖಂಡಿಸಿ, ಕರ್ನಾಟಕ ರೆಡ್ಡಿ ಜನ ಸಂಘದ ಸದಸ್ಯರು ಕೋರಮಂಗಲದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಮೆರವಣಿಗೆ ಮೂಲಕ ಸರ್ಜಾಪುರ ರಸ್ತೆಯ ವಾಟರ್ ಟ್ಯಾಂಕ್ ಬಸ್ ನಿಲ್ದಾಣದ ಬಳಿ ರಸ್ತೆ ತಡೆದು ಪ್ರತಿಭಟನೆ ನಡೆಸಿದ ರೆಡ್ಡಿ ಸಮುದಾಯದವರು, ಶಾಸಕ ಸತೀಶ್ ರೆಡ್ಡಿ ಪರ ಘೋಷಣೆ ಕೂಗಿದರು.

'ಬಸವರಾಜ ಬೊಮ್ಮಾಯಿ ಅವರ ಸಚಿವ ಸಂಪುಟದಲ್ಲಿ ರೆಡ್ಡಿ ಸಮುದಾಯಕ್ಕೆ ಅನ್ಯಾಯವಾಗಿದೆ. ರಾಜ್ಯದ ದೊಡ್ಡ ಸಮುದಾಯವೊಂದನ್ನು ಕಡೆಗಣಿಸಿರುವುದು ಸರಿಯಲ್ಲ. ಮೂರು ಬಾರಿ ಶಾಸಕರಾಗಿರುವ ಸತೀಶ್ ರೆಡ್ಡಿಯವರಿಗೆ ರೆಡ್ಡಿ ಅವರಿಗೆ ಸಚಿವ ಸ್ಥಾನ ನೀಡಬೇಕು' ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಎರೆಹೊಸಹಳ್ಳಿಯ ವೇಮನಾನಂದ ಸ್ವಾಮೀಜಿ, 'ಪ್ರಬಲ ರೆಡ್ಡಿ ಸಮುದಾಯವನ್ನು ಕಡೆಗಣಿಸಿರುವುದು ಅಕ್ಷಮ್ಯ. ಹಿಂದಿನ ಸಿದ್ದರಾಮಯ್ಯ ಸಂಪುಟದಲ್ಲಿ ನಾಲ್ವರು ಸಮುದಾಯವನ್ನು ಪ್ರತಿನಿಧಿಸಿದ್ದರು. ಕೇವಲ ಒಂದು ಸಮುದಾಯದ ಓಲೈಕೆಗೆ ನಿಂತಿರುವ ಬಿಜೆಪಿಯ ನಡೆಯೇ ಮುಂದಿನ ದಿನಗಳಲ್ಲಿ ಮುಳುವಾಗಿ ಪರಿಣಮಿಸಲಿದೆ' ಎಂದರು.

ಸ್ಥಳೀಯ ಮುಖಂಡ ಎಸ್.ಕೆ.ನಟರಾಜ್,'ಬಿಬಿಎಂಪಿ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಬೇಕಾದರೆ ಸತೀಶ್ ರೆಡ್ಡಿ ಅವರಿಗೆ ಅಧಿಕಾರ ನೀಡಬೇಕು' ಎಂದು ಹೇಳಿದರು.

ರೆಡ್ಡಿಜನ ಸಂಘದ ಅಧ್ಯಕ್ಷ ಜಯರಾಮರೆಡ್ಡಿ, ಪ್ರಧಾನ ಕಾರ್ಯದರ್ಶಿ ಕೆ.ಎನ್.ಕೃಷ್ಣಾರೆಡ್ಡಿ, ನಿರ್ದೇಶಕ ಶೇಖರ್ ರೆಡ್ಡಿ, ಮಂಜುನಾಥ ರೆಡ್ಡಿ, ಸಾಯಿಬಾಬಾ ಶಿಕ್ಷಣ ಸಂಸ್ಥೆ ಮುಖ್ಯಸ್ಥ ಶ್ರೀನಿವಾಸ ರೆಡ್ಡಿ ಭಾಗವಹಿಸಿದ್ದರು.

ಕರ್ನಾಟಕ ರೆಡ್ಡಿ ಜನ ಸಂಘದ ಸದಸ್ಯರು ಸರ್ಜಾಪುರ ರಸ್ತೆಯ ವಾಟರ್ ಟ್ಯಾಂಕ್ ಬಸ್ ನಿಲ್ದಾಣದ ಬಳಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್‌ನಿಂದ ಸಂಸತ್ತಿನ ದುರ್ಬಳಕೆ: ಡಿವಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಗಾಸಸ್ ಗೂಢಚರ್ಯೆ ಆರೋಪವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷವು ಸಂಸತ್ತನ್ನೇ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಬಿಜೆಪಿ ಸಂಸದ ಡಿ.ವಿ. ಸದಾನಂದ ಗೌಡ ಆರೋಪಿಸಿದರು.

ಸಂಸದರಾದ ಪಿ.ಸಿ. ಮೋಹನ್ ಮತ್ತು ತೇಜಸ್ವಿ ಸೂರ್ಯ ಅವರೊಂದಿಗೆ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋವಿಡ್ ಸಂಕಷ್ಟದ ನಡುವೆಯೇ ಕೇಂದ್ರ ಸರ್ಕಾರ ಸಂಸತ್ ಅಧಿವೇಶನ ನಡೆಸುತ್ತಿದೆ. ಇಂತಹ ಸಂದರ್ಭದಲ್ಲಿ ಕಲಾಪಕ್ಕೆ ಅಡ್ಡಿಪಡಿಸುವ ಮೂಲಕ ಕಾಂಗ್ರೆಸ್ ಪಕ್ಷದ ನಾಯಕರು ಸಂಸತ್ತನ್ನೇ ಅವಮಾನಿಸುತ್ತಿದ್ದಾರೆ' ಎಂದು ದೂರಿದರು.

ಪೆಗಾಸಸ್ ಗೂಢಚರ್ಯೆ ಆರೋಪದಲ್ಲಿ ಹುರುಳಿಲ್ಲ. ಅದು ಕೂಡ 'ಟೂಲ್ ಕಿಟ್'ನಂತಹ ಪ್ರಯತ್ನದ ಭಾಗ. ಅದನ್ನೆ ಬಳಸಿಕೊಂಡು ಸಂಸತ್ ಕಲಾಪಕ್ಕೆ ಅಡ್ಡಿಪಡಿಸಲು ಕಾಂಗ್ರೆಸ್ ಜುಲೈ 19 ರಿಂದಲೇ ಪ್ರಯತ್ನ ಆರಂಭಿಸಿತ್ತು. ಕೋವಿಡ್ ಬಿಕ್ಕಟ್ಟಿನ ನಡುವೆಯೂ ಸಂಸತ್ ಅಧಿವೇಶನಕ್ಕೆ ಒತ್ತಾಯಿಸಿದ್ದ ಕಾಂಗ್ರೆಸ್ ಮುಖಂಡರೇ ಈಗ ಕಲಾಪಕ್ಕೆ ಅಡ್ಡಿಪಡಿಸುವ ಮೂಲಕ ಪಲಾಯನವಾದದ ಪ್ರದರ್ಶನ ಮಾಡುತ್ತಿದ್ದಾರೆ. ವಿರೋಧ ಪಕ್ಷಗಳು ಸಂಸತ್ ಅಧಿವೇಶನವನ್ನು ಸರಿಯಾಗಿ ಬಳಸಿಕೊಳ್ಳ ಬೇಕಿತ್ತು. ಕೃಷಿ ಸಂಬಂಧಿ ಕಾಯ್ದೆಗಳ ತಿದ್ದುಪಡಿ, ಕೋವಿಡ್ ಬಿಕ್ಕಟ್ಟು ಸೇರಿ ದಂತೆ ಹಲವು ಮಹತ್ವದ ವಿಚಾರಗಳು ಚರ್ಚೆಯ ಪಟ್ಟಿಯಲ್ಲಿದ್ದವು. ಹಿಂದೆ ರಫೇಲ್ ಹಗರಣದ ಹೆಸರಿನಲ್ಲಿ ಕಾಂಗ್ರೆಸ್ ಸದಸ್ಯರು ಸಂಸತ್ತಿನಲ್ಲಿ ಬೌದ್ಧಿಕ ದಿವಾಳಿತನ ಪ್ರದರ್ಶಿಸಿದ್ದರು. ಈಗಲೂ ಅದೇ ರೀತಿ ಆಗುತ್ತಿದೆ ಎಂದರು.

ಆ. 13ರವರೆಗೂ ಸಂಸತ್ ಕಲಾಪ ನಡೆಸುವುದು ನಿಶ್ಚಿತ. ಯಾವುದೇ ರೀತಿಯ ಒತ್ತಡಗಳಿಗೂ ಕೇಂದ್ರ ಮಣಿಯುವುದಿಲ್ಲ. ಜನಪರ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ ಮುಂದುವರಿಯಲಿದೆ. ಮುಂದಿನ ಒಂದು ವಾರವಾದರೂ ಕಾಂಗ್ರೆಸ್ ಸಂಸದರು ಕಲಾಪದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಹೇಳಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಒಪ್ಪಿಗೆ ಪಡೆಯಲು ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿ ಸಂಸದರ ಬೆಂಬಲವಿದೆ. ಎಲ್ಲರೂ ಒಗ್ಗೂಡಿ ಯೋಜನೆ ಪರವಾಗಿ ಹೋರಾಟ ನಡೆಸಲಾಗುವುದು ಎಂದರು.

ಖಾತೆ ಹಂಚಿಕೆ: ಸಚಿವ ಆನಂದ್‌ಸಿಂಗ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಸಂಪುಟದ ಸಚಿವರಿಗೆ ಖಾತೆ ಹಂಚಿಕೆ ಮಾಡಿರುವುದರ ಬೆನ್ನಲ್ಲೇ, ಸಚಿವ ಆನಂದ್ ಸಿಂಗ್ ಅಸಮಾಧಾನ ಹೊರಹಾಕಿದ್ದು, 'ನನ್ನ ಖಾತೆ ಬದಲಿಸದಿದ್ದರೆ ಕೇವಲ ಶಾಸಕನಾಗಿ ಉಳಿಯುವ ಬಗ್ಗೆ ಆಲೋಚಿಸಬೇಕಾಗುತ್ತದೆ' ಎಂದು ಸೂಚ್ಯವಾಗಿ ರಾಜೀನಾಮೆ ನೀಡುವ ಎಚ್ಚರಿಕೆ ನೀಡಿದ್ದಾರೆ.

'ನಾನು ಬಸವರಾಜ ಬೊಮ್ಮಾಯಿ ಹಾಗೂ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಬಳಿ ಯಾವ ಖಾತೆ ಬೇಕೆಂದು ಕೇಳಿದ್ದೆ. ನನ್ನ ಮನವಿಯನ್ನು ಪರಿಗಣಿಸುವುದಾಗಿ ಹೇಳಿದ್ದರು. ಆದರೆ, ಈಗ ಬೇರೆ ಖಾತೆ (ಪ್ರವಾಸೋದ್ಯಮ ಮತ್ತು ಪರಿಸರ)

ಕೊಡಲಾಗಿದೆ. ಇದರಿಂದ ನನಗೆ ಅಸಮಾಧಾನವಾಗಿರುವುದು ನಿಜ' ಎಂದು ಆನಂದ್ ಸಿಂಗ್ ಖಾಸಗಿ ಸುದ್ದಿ ವಾಹಿನಿಗೆ ಶನಿವಾರ ಬೆಳಿಗ್ಗೆ ನೀಡಿರುವ ಚುಟುಕು ಸಂದರ್ಶನದಲ್ಲಿ ಹೇಳಿದ್ದಾರೆ.

'ನೀನು ಮಾಡಿರುವ ತ್ಯಾಗಕ್ಕೆ ಇದೇ ಖಾತೆ ಲಾಯಕ್ಕು; ದೊಡ್ಡ ಖಾತೆ ನಿಭಾಯಿಸಲು ನೀನು ಅಸಮರ್ಥ ಎಂದಾದರೂ ನಮ್ಮ ನಾಯಕರು ಹೇಳಲಿ' ಎಂದು ಆನಂದ್‌ಸಿಂಗ್ ಅಸಮಾಧಾನ ಹೊರಹಾಕಿದರು.

'ಇಂಧನ ಮತ್ತು ಲೋಕೋಪಯೋಗಿ ಖಾತೆ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೆ' ಎಂದು ಸಚಿವರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ.

ಸಿ.ಎಂ-ದಳಪತಿಗಳ ವಿರುದ್ಧ ಪ್ರೀತಂ ಗುಡುಗು

ಹಾಸನ: 'ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿ ಅಧಿಕಾರ ವಹಿಸಿಕೊಂಡ ನಂತರ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರ ಮನೆಗೆ ಭೇಟಿ ನೀಡಿರುವುದಕ್ಕೆ ಕಾರ್ಯಕರ್ತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ' ಎಂದು ಬಿಜೆಪಿ ಶಾಸಕ ಪ್ರೀತಂ ಬೇಸರ ವ್ಯಕ್ತಪಡಿಸಿದರು.

'ದೇವೇಗೌಡರು ಹಿರಿಯರಲ್ಲವೇ, ಅದಕ್ಕಾಗಿ ಹೋಗಿರಬಹುದು ಎಂದು ಸಮಾಧಾನಪಡಿಸಿದ್ದೇನೆ. ಆದರೆ, ಸಂಪುಟ ವಿಸ್ತರಣೆ ಆಗದೆಯೇ ಅವರ ಮನೆಗೆ ಹೋಗೋದು ಬೇಕಿರಲಿಲ್ಲ ಎಂಬುದು ಕಾರ್ಯಕರ್ತರ ವಾದ' ಎನ್ನುತ್ತಲೇ ತಮ್ಮೊಳಗಿನ ವಿರೋಧವನ್ನು ಬಹಿ ರಂಗಪಡಿಸಿದರು. 'ದಿನ ಬೆಳಿಗ್ಗೆ ಎದ್ದು ಜೆಡಿಎಸ್ ನಾಯಕರ ವಿರುದ್ಧ ರಾಜಕೀಯವಾಗಿ ಗುದ್ದಾಡೋದು ಕಾರ್ಯಕರ್ತರು. ಅವರ ನೋವನ್ನು ಅರ್ಥಮಾಡಿಕೊಳ್ಳದೆ ಇವರು ರಾಜಕೀಯ ಮಾಡೋದು ಎಷ್ಟರಮಟ್ಟಿಗೆ ಸರಿ?' ಎಂದು ಪ್ರಶ್ನಿಸಿದರು.

ಸರಳ ದಸರೆಗೆ ಚಿಂತನೆ

ಎಚ್.ಡಿ.ಕೋಟೆ: 'ಕೋವಿಡ್‌ನಿಂದಾಗಿ ಈ ಬಾರಿ ಸರಳವಾಗಿ ದಸರೆ ಆಚರಿಸಲು ಚಿಂತಿಸಲಾಗಿದೆ. ರೂಪು ರೇಷೆ ಸಿದ್ಧಪಡಿಸಲು ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ತಾಲ್ಲೂಕಿನ ಬಾವಲಿ ಚೆಕ್‌ಪೋಸ್ಟ್‌ಗೆ ಶನಿವಾರ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಳೆದ ವರ್ಷ ದಸರಾಕ್ಕೆ ₹ 10 ಕೋಟಿ ಮಂಜೂರಾಗಿತ್ತು. ಆ ಪೈಕಿ ₹ 7 ಕೋಟಿ ಅನುದಾನ ಉಳಿದಿದೆ. ಈ ವರ್ಷದ ದಸರಾಕ್ಕೆ ಉಳಿಕೆ ಅನುದಾನವನ್ನೇ ಬಳಸಿಕೊಳ್ಳಲಾಗುವುದು' ಎಂದರು.

ಜಮೀರ್, ರೋಷನ್ ಜೈಲು ಸೇರುವುದು ಖಚಿತ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಸಾಗರ: 'ಹಲವು ಅಕ್ರಮಗಳನ್ನು ನಡೆಸಿರುವ ಶಾಸಕ ಜಮೀರ್ ಅಹ್ಮದ್ ಹಾಗೂ ಮಾಜಿ ಸಚಿವ ರೋಷನ್ ಬೇಗ್ ಜೈಲು ಸೇರುವುದು ಖಚಿತ' ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜಮೀರ್ ಮತ್ತು ಬೇಗ್ ಅವರದ್ದೇ ಸಮುದಾಯದ ಶ್ರಮಿಕ ವರ್ಗದವರಿಗೆ ಮೋಸ ಮಾಡಿ ಅಕ್ರಮ ಮಾರ್ಗದಲ್ಲಿ ಹಣ ಸಂಪಾದನೆ ಮಾಡಿದ್ದಾರೆ. ಇಂತಹ ವ್ಯಕ್ತಿಗಳ ಮೇಲೆ ಇ.ಡಿ ದಾಳಿ ನಡೆದರೆ ಅದು ರಾಜಕೀಯ ಪ್ರೇರಿತ ಎನ್ನಲು ಸಾಧ್ಯವಿಲ್ಲ. ಕಾಂಗ್ರೆಸ್ ಸರ್ಕಾರವಿದ್ದಾಗಲೂ ಇಂತಹ ದಾಳಿಗಳು ನಡೆದಿಲ್ಲವೇ' ಎಂದು ಪ್ರಶ್ನಿಸಿದರು.

ಶಿವಮೊಗ್ಗ ಜಿಲ್ಲೆಯಲ್ಲಿ ಈಡಿಗ ಜನಾಂಗ ಪ್ರಬಲವಾಗಿದೆ. ಜಿಲ್ಲೆಯ ಈಡಿಗ ಶಾಸಕರಿಗೆ ಸಚಿವ ಸ್ಥಾನ ನೀಡದೇ ಇರುವುದು ಎಷ್ಟು ಸರಿ ಎಂಬ ಪ್ರಶ್ನೆಗೆ, 'ಎಲ್ಲಾ ಜಾತಿಯವರಿಗೂ ಪ್ರಾತಿನಿಧ್ಯ ನೀಡುವುದು ಕಷ್ಟ. ನನ್ನನ್ನೇ ಈಡಿಗ ಎಂದು ಭಾವಿಸಿ' ಎಂದು ಉತ್ತರಿಸಿದರು.

ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಆಗ್ರಹ

'ಬಿಜೆಪಿಯ ಆಂತರಿಕ ಭಿನ್ನಮತ ಶಮನಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ದಿನಗಳಲ್ಲಿ ಬಿಜೆಪಿ ರಾಜ್ಯ ಘಟಕದಲ್ಲಿ ಆಂತರಿಕ ಭಿನ್ನಮತ ಕಾಣಿಸಿಕೊಳ್ಳುವ ಸಾಧ್ಯತೆಗಳು ಈಗಾಗಲೇ ಗೋಚರಿಸಿದೆ. ಇದನ್ನು ಆರಂಭದಲ್ಲೇ ಶಮನಗೊಳಿಸಲು ಪಕ್ಷದ ವರಿಷ್ಠರು ಮುಂದಾಗಬೇಕು' ಎಂದು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಆಗ್ರಹಿಸಿದರು.

ಇಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆಂತರಿಕ ಭಿನ್ನಮತ ಎಂಬುದು ಸೆರಗಿನಲ್ಲಿ ಬೆಂಕಿಯನ್ನು ಕಟ್ಟಿಕೊಂಡಂತೆ. ಇದು ಉಲ್ಬಣಗೊಂಡರೆ ಮುಖ್ಯಮಂತ್ರಿ ದುರ್ಬಲಗೊಳ್ಳುತ್ತಾರೆ. ಸರ್ಕಾರ ಕೂಡ ದುರ್ಬಲಗೊಳ್ಳುತ್ತದೆ. ಇದ ರಿಂದ ಆಡಳಿತ ಶಿಥಿಲಗೊಂಡು ಜನಹಿತ ಕಾರ್ಯಗಳಿಗೆ ಅಡಚಣೆ ಎದುರಾಗುತ್ತದೆ. ಆದ್ದರಿಂದ ಭಿನ್ನಮತ ಪುನರಾವರ್ತನೆ ಆಗದ ಹಾಗೆ ವರಿಷ್ಠರು ಕಾಳಜಿ ವಹಿಸಬೇಕು' ಎಂದರು.

'ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರೆ ವೀರಶೈವ–ಲಿಂಗಾಯತ ಸಮುದಾಯದ ಅರ್ಹ ನಾಯಕರೊಬ್ಬರನ್ನು ಆ ಸ್ಥಾನಕ್ಕೆ ಆಯ್ಕೆ ಮಾಡಬೇಕು ಎಂದು ಬಿಜೆಪಿ ವರಿಷ್ಠರಿಗೆ ಸಲಹೆ ನೀಡಲಾಗಿತ್ತು. ಇದಕ್ಕೆ ನಾಡಿನ ವಿವಿಧ ಮಠಾಧೀಶರು ಧ್ವನಿಗೂಡಿಸಿದ್ದರು. ವಾಸ್ತವ ಪರಿಸ್ಥಿತಿ ಹಾಗೂ ಪಕ್ಷದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ವರಿಷ್ಠರು ಸೂಕ್ತ ನಿರ್ಣಯ ಕೈಗೊಂಡಿದ್ದಾರೆ' ಎಂದರು.

ಸಂಕುಚಿತ ಉದ್ದೇಶವಿಲ್ಲ: 'ಈ ರಾಜಕೀಯ ಸಂಕ್ರಮಣ ಕಾಲಘಟ್ಟದಲ್ಲಿ ವಿವಿಧ ಸಮುದಾಯದ ಮಠಾಧೀಶರು ತಮ್ಮ ಸಲಹೆಗಳನ್ನು ಮುಂದಿಟ್ಟಿದ್ದು ನಾಡಿನ ಪ್ರಗತಿಯ ದೃಷ್ಟಿಯಿಂದ. ಇದರಲ್ಲಿ ಯಾವುದೇ ಸಂಕುಚಿತ ಉದ್ದೇಶವಿಲ್ಲ. ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ನೂತನ ಸಚಿವ ಸಂಪುಟ ಸಮತೋಲನದಿಂದ ಕೂಡಿದೆ. ಈ ಸಚಿವ ಸಂಪುಟದಲ್ಲಿ ಖಾಲಿ ಉಳಿದಿರುವ ಸ್ಥಾನಗಳಿಗೆ ಗೊಲ್ಲ ಸೇರಿದಂತೆ ಪ್ರಾತಿನಿಧ್ಯವಿಲ್ಲದ ಸಮುದಾಯಗಳಿಗೆ ಅವಕಾಶ ಕಲ್ಪಿಸಬೇಕು' ಎಂದರು.

'ಭ್ರಷ್ಟಾಚಾರ ರಹಿತ ಆಡಳಿತವನ್ನು ಸರ್ಕಾರ ಒದಗಿಸಬೇಕು. ಸಾಂಸ್ಥೀಕರಣಗೊಂಡಿರುವ ಭ್ರಷ್ಟಾಚಾರದ ಬೇರುಗಳು ಪಾತಾಳಕ್ಕೆ ಇಳಿದಿದ್ದರೆ, ಅದರ ರೆಂಬೆಕೊಂಬೆಗಳು ಗಗನಮುಖಿಯಾಗಿ ವ್ಯಾಪಿಸುತ್ತವೆ. ಸರ್ಕಾರದ ಮಟ್ಟದಲ್ಲಿ ಹಾಗೂ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ ನಿಯಂತ್ರಣಕ್ಕೆ ಕಠಿಣವಾದ ಮಾರ್ಗೋಪಾಯಗಳನ್ನು ಕಂಡುಹಿಡಿಯಬೇಕು' ಎಂದು ಹೇಳಿದರು.

ಕಲಬುರ್ಗಿಯ ಸುಲಫಲ ಮಠದ ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ, ಸೊನ್ನದ ಶಿವಾನಂದ ಸ್ವಾಮೀಜಿ, ಬಾಗಲಕೋಟೆಯ ಗುಳೇದಗುಡ್ಡದ ಬಸವರಾಜ ಪಟ್ಟದಾರ್ಯ ಸ್ವಾಮೀಜಿ, ಯಾದಗಿರಿಯ ಗುರುಮಠಕಲ್‌ನ ಶಾಂತ ವೀರ ಮುರುಘ ರಾಜೇಂದ್ರ ಸ್ವಾಮೀಜಿ, ಬೆಳಗಾವಿಯ ಉಗರಗೋಳದ ಮಹಾಂತ ಸ್ವಾಮೀಜಿ ಇತರರು ಇದ್ದರು.

'ಜಿಎಸ್‌ಟಿ ಪಾಲನ್ನು ಕೇಂದ್ರ ನೀಡಬೇಕು'

'ಸರ್ಕಾರವು ಪ್ರವಾಹ ಪೀಡಿತ ಪ್ರದೇಶಗಳ ಸಂತ್ರಸ್ತ ಜನರ ಪುನರ್ವಸತಿಗೆ ಅಗತ್ಯ ನೆರವು ನೀಡಬೇಕು. ಕೋವಿಡ್ ಹಾವಳಿಯಿಂದ ಜನರನ್ನು ರಕ್ಷಿಸಲು ತುರ್ತಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರವಿದೆ. ಹೀಗಾಗಿ, ನ್ಯಾಯಬದ್ಧ ಯೋಜನೆಗಳಿಗೆ ಕೇಂದ್ರ ಸರ್ಕಾರ ತ್ವರಿತವಾಗಿ ಸಮ್ಮತಿ ನೀಡಬೇಕು. ನ್ಯಾಯಯುತವಾಗಿ ಬರಬೇಕಾದ ಪ್ರವಾಹ ಪರಿಹಾರ ಹಾಗೂ ಜಿಎಸ್‌ಟಿ ಪಾಲನ್ನು ಒದಗಿಸಬೇಕು' ಎಂದು ವೀರಭದ್ರ ಚನ್ನಮಲ್ಲ ಸ್ವಾಮೀಜಿ ಒತ್ತಾಯಿಸಿದರು.



ವೀರಭದ್ರ ಚನ್ನಮಲ್ಲ ಸ್ವಾಮೀಜಿ

ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಕಿವಿಮಾತು

‘ಕೋವಿಡ್: ನಿರ್ಲಕ್ಷ್ಯ ಮಾಡಿದಲ್ಲಿ ಅಪಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ವಿರುದ್ಧದ ಹೋರಾಟದಲ್ಲಿ ಅಂತಿಮ ಘಟ್ಟದಲ್ಲಿದ್ದೇವೆ. ಈ ವೇಳೆ ನಿರ್ಲಕ್ಷ್ಯ ಮಾಡಿದಲ್ಲಿ ಮತ್ತೆ ಅಪಾಯದ ಪರಿಸ್ಥಿತಿಯನ್ನು ತಂದುಕೊಳ್ಳಬೇಕಾಗುತ್ತದೆ. ಆದ್ದರಿಂದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಜೊತೆಗೆ ಬದಲಾವಣೆಗೆ ಹೊಂದಿಕೊಂಡು ಸಾಗಬೇಕು’ ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಕಿವಿಮಾತು ಹೇಳಿದರು.

‘ನಮ್ಮ ಬೆಂಗಳೂರು ಪ್ರತಿಷ್ಠಾನ’ವು ಕೋವಿಡ್ 3ನೇ ಅಲೆ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕುರಿತು ಶನಿವಾರ ಹಮ್ಮಿಕೊಂಡಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜೀವ್ ಚಂದ್ರಶೇಖರ್

‘ಅನಿರೀಕ್ಷಿತಾಗಿ ಕಾಣಿಸಿಕೊಂಡ ಈ ಸಾಂಕ್ರಾಮಿಕ ಕಾಯಿಲೆ ಎಲ್ಲ ವಲಯಗಳಿಗೂ ಹೊಡೆತ ನೀಡಿದೆ. ಮೊದಲ ಅಲೆಗಿಂತ ಎರಡನೇ ಅಲೆ ಹೆಚ್ಚಿನ ಅಪಾಯವನ್ನು ತಂದೊಡ್ಡಿತು. ವಿದೇಶಗಳು ಕೂಡ ಇದಕ್ಕೆ ಹೊರತಾಗಿಲ್ಲ. ಪಂಜಾಬ್, ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಕೊರೊನಾ ಸೋಂಕು ದಿಢೀರ್ ಏರಿಕೆಯಾಗಲು ಅಲ್ಲಿನ ರಾಜ್ಯ ಸರ್ಕಾರಗಳ ವೈಫಲ್ಯವೂ ಕಾರಣ’ ಎಂದರು.

‘ಇನ್ನಷ್ಟು ದಿನ ನಾವು ವೈರಾಣುವಿನ ನಡುವೆಯೇ ಬದುಕಬೇಕಿದೆ. ಹಾಗಾಗಿ, ಮೈಮರೆಯಬಾರದು. ರೋಗವು ಸಂಪೂರ್ಣ ನಿಯಂತ್ರಣಕ್ಕೆ ಬರುವವರೆಗೂ ಎಚ್ಚರ ವಹಿಸಬೇಕು’ ಎಂದು ಕಿವಿಮಾತು ಹೇಳಿದರು.

‘ವಿಶ್ರಾಂತಿ ತೆಗೆದುಕೊಳ್ಳಲಿದೆ ವೈರಾಣು’

‘ಈಗ ದಕ್ಷಿಣ ಕನ್ನಡ, ಕೊಡಗು ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಸೋಂಕು ದೃಢ ಪ್ರಮಾಣ ಶೇ 5ಕ್ಕೆ ಏರಿಕೆಯಾಗುತ್ತಿದೆ. ವೈರಾಣು ವಿಶ್ರಾಂತಿ ತೆಗೆದುಕೊಂಡು ಹರಡಲು ಪ್ರಾರಂಭಿಸುತ್ತದೆ. ಕೋವಿಡ್ ವಿರುದ್ಧದ ಹೋರಾಟದಲ್ಲಿ ಮುಖಗವಸು ಮತ್ತು ಲಸಿಕೆ ಸಹಕಾರಿ. ಮನೆ ಮತ್ತು ಕಚೇರಿಗಳಲ್ಲಿ ಗಾಳಿ ಸಂಚಾರ ಉತ್ತಮ ವ್ಯವಸ್ಥೆ ಇರಬೇಕು’ ಎಂದು ಡಾ. ವಿಶಾಲ್ ರಾವ್ ತಿಳಿಸಿದರು.

‘ಲಸಿಕೆಯ ಬಗ್ಗೆ ಬೂಸ್ಟರ್ ಡೋಸ್ ಸೇರಿದಂತೆ ವಿವಿಧ ಗೊಂದಲ ಸೃಷ್ಟಿಸಲಾಗುತ್ತಿದೆ. ಬೇರೆ ಬೇರೆ ರೂಪಾಂತರಗಳು ಕಾಣಿಸಿಕೊಳ್ಳುತ್ತಿದ್ದರೂ ಅವುಗಳ ವಿರುದ್ಧ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಸದ್ಯ ಬಳಸುತ್ತಿರುವ ಲಸಿಕೆಗಳು ಹೊಂದಿವೆ’ ಎಂದರು.

ಸೌಲಭ್ಯ ಒದಗಿಸಲು ಸಾಧ್ಯವಾಗದು: ಎಚ್‌ಸಿಜಿ ಆಸ್ಪತ್ರೆಯ ಸೆಂಟರ್ ಆಫ್ ಅಕಾಡೆಮಿಕ್ ರಿಸರ್ಚ್‌ನ ಡೀನ್ ಡಾ. ವಿಶಾಲ್ ರಾವ್, ‘ಕೋವಿಡ್ ಎರಡನೇ ಅಲೆ ಹಲವು ಪಾಠಗಳನ್ನು ಕಲಿಸಿದೆ. ವೈರಾಣು ಕಾಲಕಾಲಕ್ಕೆ ರೂಪಾಂತರಗೊಳ್ಳಲಿದೆ. ಈ ಸೋಂಕಿನ ವಿರುದ್ಧ ವೈದ್ಯಕೀಯ ವಲಯ ಒಂದೂವರೆ ವರ್ಷದಿಂದ ಹೋರಾಟ ನಡೆಸುತ್ತಿದೆ. ಆಸ್ಪತ್ರೆಗಳನ್ನು ನಿಗದಿತ ಸಂಖ್ಯೆಯ ಜನರಿಗೆ ಮಾತ್ರ ನಿರ್ಮಿಸಲಾಗುತ್ತದೆ. ಎಲ್ಲರೂ ರೋಗಿಗಳಾಗುತ್ತಾ ಹೋದಲ್ಲಿ ಸೌಲಭ್ಯ ಒದಗಿಸಲು ಯಾರಿಂದಲೂ ಸಾಧ್ಯವಾಗದು’ ಎಂದು ಅವರು ತಿಳಿಸಿದರು.

ಶ್ವಾಸಕೋಶ ತಜ್ಞ ಡಾ. ವಿವೇಕ್ ಪಡೆಗಲ್, ‘ಹಾಸಿಗೆ ಕೊರತೆ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಎರಡನೇ ಅಲೆಯಲ್ಲಿ ಎದುರಿಸಿದ್ದೇವೆ. ಈ ಹಿಂದೆ ಎದುರಿಸಿದ ಸಮಸ್ಯೆಗಳನ್ನು ಜನ ಮರೆಯುತ್ತಿರುವುದು ವಿಪರ್ಯಾಸ. ಲಸಿಕೆಯನ್ನು ಆದಷ್ಟು ಬೇಗ ಪಡೆದುಕೊಳ್ಳಬೇಕು. ಸೋಂಕಿನ ಲಕ್ಷಣಗಳು ಕಾಣಿಸಿಕೊಂಡ ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಬೇಕು. ಸೌಮ್ಯ ಲಕ್ಷಣ ಹೊಂದಿದವರಿಂದಲೂ ಹಲವರಿಗೆ ಸೋಂಕು ಹರಡುವ ಸಾಧ್ಯತೆಯಿದೆ’ ಎಂದು ಎಚ್ಚರಿಸಿದರು.

ಗಡಿ ಜಿಲ್ಲೆಗಳಲ್ಲಿ ಅಧಿಕ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,610 ಮಂದಿ ಕೊರೊನಾ ಸೋಂಕಿತರಾಗಿರುವುದು ಶನಿವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.16 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.47 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಶೇ 1.08ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ರಾಜ್ಯದ 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ ಹಾಗೂ ಬಾಗಲಕೋಟೆಯಲ್ಲಿ ಹೊಸದಾಗಿ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 342, ಮೈಸೂರಿನಲ್ಲಿ 141 ಹಾಗೂ ಕೊಡಗಿನಲ್ಲಿ 81 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 357, ಉಡುಪಿಯಲ್ಲಿ 131 ಹಾಗೂ ಹಾಸನದಲ್ಲಿ 129 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ.

ಕೊರೊನಾ ಸೋಂಕಿತರಲ್ಲಿ 1,640 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.55 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 24,266ಕ್ಕೆ ಇಳಿಕೆಯಾಗಿದೆ.



ಕೋವಿಡ್ ಪೀಡಿತರಲ್ಲಿ 32 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 13 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಹಾಸನದಲ್ಲಿ 6, ಬೆಂಗಳೂರು ಹಾಗೂ ಕೋಲಾರದಲ್ಲಿ ತಲಾ 5, ದಕ್ಷಿಣ ಕನ್ನಡದಲ್ಲಿ 4, ಉಡುಪಿ, ಮಂಡ್ಯ ಹಾಗೂ ಧಾರವಾಡದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ 1.98ರಷ್ಟು ವರದಿಯಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಸ್ಪಷ್ಟನೆ

ವಾರಾಂತ್ಯ ಕರ್ಫ್ಯೂ ಸದ್ಯಕ್ಕಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಕೋವಿಡ್ ನಿಯಂತ್ರಣ ಸಲುವಾಗಿ ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸುವ ಪ್ರಸ್ತಾಪ ಸದ್ಯಕ್ಕೆ ಬಿಬಿಎಂಪಿ ಮುಂದಿಲ್ಲ' ಎಂದು ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟಪಡಿಸಿದರು.

‘ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿಗೆ ಹೊಂದಿಕೊಂಡ ಎಂಟು ಜಿಲ್ಲೆಗಳಲ್ಲಿ ಮಾತ್ರ ವಾರಾಂತ್ಯ ಕರ್ಫ್ಯೂ ಜಾರಿಯಲ್ಲಿದೆ. ಬೆಂಗಳೂರಿನಲ್ಲಿ ನಿತ್ಯ ಸರಾಸರಿ 450ರಷ್ಟು ಕೋವಿಡ್ ಪ್ರಕರಣಗಳು ಮಾತ್ರ ಪತ್ತೆಯಾಗುತ್ತಿವೆ. ನಗರದಲ್ಲಿ ಕೋವಿಡ್ ಪರೀಕ್ಷೆಗೆ ಒಳಪಟ್ಟವರಲ್ಲಿ ಸೋಂಕು ಪತ್ತೆ ದರ ಶೇಕಡ 1ಕ್ಕಿಂತ ಕಡಿಮೆ ಇದೆ. ರಾಜ್ಯದ ಗಡಿಭಾಗದ ಹಲವಾರು ಜಿಲ್ಲೆಗಳಲ್ಲಿ ಸೋಂಕು ಪತ್ತೆ ದರ ಶೇಕಡ 2ಕ್ಕಿಂತ ಇದೆ. ಸದ್ಯಕ್ಕೆ ನಗರದಲ್ಲಿ ವಾರಾಂತ್ಯ ಕರ್ಫ್ಯೂ ಜಾರಿಗೊಳಿಸುವ ಅಗತ್ಯ ಇಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ತಜ್ಞರ ಜೊತೆ ಮುಖ್ಯಮಂತ್ರಿ ಹಾಗೂ ಹಿರಿಯ ಸಚಿವರು ವಿಸ್ತೃತ ಚರ್ಚೆ ನಡೆಸಿ ಸೋಂಕು ಹರಡುವಿಕೆ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಂಡಿದ್ದಾರೆ. ನಗರದಲ್ಲಿ ರಾತ್ರಿ ಕರ್ಫ್ಯೂವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ. ಅದರ ಪ್ರಕಾರ ಪೊಲೀಸ್ ಇಲಾಖೆ ಕ್ರಮಕೈಗೊಳ್ಳಲಿದೆ’ ಎಂದು ಗೌರವ್ ಗುಪ್ತ ವಿಶ್ವಾಸ ವ್ಯಕ್ತಪಡಿಸಿದರು.

‘ಡೆಲ್ಟಾ ರೂಪಾಂತರಿ ಸೇರಿದಂತೆ ಕೊರೊನಾ ಹರಡುವ ಯಾವುದೇ ವೈರಾಣು ಪತ್ತೆಯಾದರೂ ಸೋಂಕಿತರಿಗೆ ಚಿಕಿತ್ಸೆ ನೀಡಿ ಅವರ ಯೋಗಕ್ಷೇಮ ನೋಡಿಕೊಳ್ಳಲು, ಅವರ ಜೊತೆ ಸಂಪರ್ಕ ಹೊಂದಿದವರನ್ನು ಪತ್ತೆ ಹಚ್ಚಿ ಸೋಂಕು ಹರಡದಂತೆ ತಡೆಯಲು ಬಿಬಿಎಂಪಿಯ ವಾರ್ಡ್ ಮಟ್ಟದ ಅಧಿಕಾರಿಗಳು ಕ್ರಮ ಕೈಗೊಳ್ಳಲಿದ್ದಾರೆ. ಸೋಂಕಿತರ ಸಂಪರ್ಕ ಪತ್ತೆ ಕಾರ್ಯವೂ ನಡೆಯುತ್ತಿದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ತಿಮಿಂಗಲದ ವಾಂತಿಯ ಮಾರಾಟ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಮೈಸೂರು: ತಿಮಿಂಗಲದ ವಾಂತಿ (ಅಂಬರ್‌ಗ್ರೀಸ್) ಮಾರಾಟ ಜಾಲವನ್ನು ಪತ್ತೆ ಹಚ್ಚಿರುವ ಅರಣ್ಯ ಸಂಚಾರ ದಳದ ಅಧಿಕಾರಿಗಳು ನಾಲ್ವರು ಆರೋಪಿಗಳನ್ನು ಕೊಡಗು ಜಿಲ್ಲೆಯ ಕುಶಾಲನಗರದ ಸಮೀಪ ಬಂಧಿಸಿದ್ದಾರೆ. ಅವರಿಂದ ಸುಮಾರು ₹ 16 ಕೋಟಿ ಮೌಲ್ಯದ 8.2 ಕೆ.ಜಿ ವಾಂತಿಯನ್ನು ವಶಪಡಿಸಿಕೊಂಡಿದ್ದಾರೆ.

ಕೊಡಗು ಜಿಲ್ಲೆಯ ಕೆ.ಎ.ಇಬ್ರಾಹಿಂ, ಬಿ.ಇ.ರಫೀಕ್, ತಾಹಿರ್ ನಕಾಶ್ ಹಾಗೂ ಕೇರಳದ ಕೆ.ಎಂ.ಜಾರ್ಜ್ ಬಂಧಿತರು. ಜಾಲದ ಪ್ರಮುಖ ಆರೋಪಿ ರಿಯಾಜ್ ಪರಾರಿಯಾಗಿದ್ದಾನೆ.

ನಗರದಲ್ಲಿ ಇಂದು

‘ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಯಕ್ಷಗಾನ ಸಾಹಿತ್ಯದ ಕೊಡುಗೆ’ ಕುರಿತು ಸಮಾವೇಶ: ಮಾತನಾಡುವವರು–ಪ್ರೊ.ಎಂ.ಎಲ್.ಸಾಮಗ, ಡಿ.ಎಸ್.ಶ್ರೀಧರ, ಗಿಂಡಿಮನೆ ಮೃತ್ಯುಂಜಯ, ಆನಂದರಾಮ ಉಪಾಧ್ಯ, ರವಿ ಮಡೋಡಿ, ಮಹಾಬಲೇಶ್ವರ ಭಟ್ಟ, ಅಜಿತ್ ಕಾರಂತ, ಅಶ್ವಿನಿ ಹೊದಲ, ವಿಮರ್ಶಾತ್ಮಕ ಅವಲೋಕನ–ಚಿಂತಾಮಣಿ ಕೂಡ್ಲೆಕೆರೆ, ಎಚ್.ಎಸ್.ವೆಂಕಟೇಶ ಮೂರ್ತಿ, ಚೆಕ್ಕರೆ ಶಿವಶಂಕರ, ಆಯೋಜನೆ–ಯಕ್ಷವಾಹಿನಿ, ಬೆಳಿಗ್ಗೆ 10 (ಆನ್‌ಲೈನ್ ಕಾರ್ಯಕ್ರಮ)

‘ಪ್ರಜಾಪ್ರಭುತ್ವ, ಫ್ಯಾಸಿವಾದ ಮತ್ತು ತಂತ್ರಜ್ಞಾನ’ ಕುರಿತು ಉಪನ್ಯಾಸ: ಆರ್.ಚಾಣಕ್ಯ, ಅಧ್ಯಕ್ಷತೆ–ಪ್ರೊ.ಎ.ಎಸ್.ನಟರಾಜ್, ಆಯೋಜನೆ–ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಆನಂದರಾಮ ಉಪಾಧ್ಯ ಅವರ ‘ಯಕ್ಷಪಥ’ ಪುಸ್ತಕ ಬಿಡುಗಡೆ: ಅರಳುಮಲ್ಲಿಗೆ ಪಾರ್ಥಸಾರಥಿ, ಭಾಗವಹಿಸುವವರು– ಆರ್.ವಾದಿರಾಜು, ರವಿ ಮಡೋಡಿ, ಆಯೋಜನೆ–ಸಾಹಿತ್ಯ ವಿಚಾರ ವೇದಿಕೆ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಎಚ್.ಕೆ.ರಂಗನಾಥ ನೆನಪು: ಉದ್ಘಾಟನೆ–‘ಮುಖ್ಯಮಂತ್ರಿ’ ಚಂದ್ರು, ಪುಷ್ಪನಮನ–ಎಂ.ಎಸ್.ವಿದ್ಯಾ, ಅಂಜನಾ ಪ್ರಭಾಕರ್, ಅತಿಥಿಗಳು–ಕೆ.ಆರ್.ಸುಧೀಂದ್ರ ಶರ್ಮ, ಎಚ್.ವಿ.ಕೃಷ್ಣಮೂರ್ತಿ, ‘ಎಚ್‌ಕೆಆರ್ ನೆನಪು’ ಸಂವಾದ–ಎಂ.ಎಸ್.ನರಸಿಂಹಮೂರ್ತಿ, ಕೃಷ್ಣ ಸುಬ್ಬರಾವ್, ವೈ.ವಿ.ಗುಂಡೂರಾವ್, ಆಯೋಜನೆ–ರಂಗ ಸಂಗ, ಭಾರತೀಯ ವಿದ್ಯಾಭವನ, ಕಲಾ ಗಂಗೋತ್ರಿ, ಸ್ಥಳ–ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4.30

ಮುಖ್ಯಮಂತ್ರಿ ಚಂದ್ರು

ಜೆಇಇ: ನಾರಾಯಣ ಸಂಸ್ಥೆ ಸಾಧನೆ

ಬೆಂಗಳೂರು: ಜೆಇಇ ಮುಖ್ಯ ಪರೀಕ್ಷೆಯಲ್ಲಿ ಸಹಕಾರ ನಗರದ ನಾರಾಯಣ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿ ಗೌರಬ್ ದಾಸ್ ಶೇ 100ರಷ್ಟು ಅಂಕ ಪಡೆದಿದ್ದಾರೆ.

ಗೌರಬ್ ದಾಸ್

ಪರೀಕ್ಷೆಯ ಫಲಿತಾಂಶದಲ್ಲಿ ದೇಶದಾದ್ಯಂತ 17 ವಿದ್ಯಾರ್ಥಿಗಳು ಶೇ 100ರಷ್ಟು ಅಂಕ ಪಡೆದಿದ್ದು, ಇದರಲ್ಲಿ ನಾರಾಯಣ ಸಮೂಹ ಶಿಕ್ಷಣ ಸಂಸ್ಥೆಗಳ 6 ವಿದ್ಯಾರ್ಥಿಗಳೂ ಸೇರಿದ್ದಾರೆ. ಕರ್ನಾಟಕದಿಂದ ಈ ಸಾಧನೆ ಮಾಡಿರುವ ಏಕೈಕ ವಿದ್ಯಾರ್ಥಿ ಗೌರಬ್ ದಾಸ್ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ನಾರಾಯಣ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಾಹಕ ನಿರ್ದೇಶಕ ಪುನೀತ್ ಕೊಥಾಪ, ವ್ಯವಸ್ಥಾಪಕ ನಿರ್ದೇಶಕರಾದ ಡಾ.ಪಿ.ಸಿಂಧೂರ ನಾರಾಯಣ, ನಿರ್ದೇಶಕರಾದ ಶರಣಿ ಮತ್ತು ಸಿಂಧೂರ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

29 ಕೆರೆಗಳ 47 ಎಕರೆ ಒತ್ತುವರಿ ತೆರವು

ಮೊದಲನೇ ಪುಟದಿಂದ...

ಕಳೆದ ಶನಿವಾರ ನಡೆಸಿದ ಕಾರ್ಯಾಚರಣೆಯಲ್ಲಿ 58 ಕೆರೆಗಳಲ್ಲಿ ಒತ್ತುವರಿಯಾಗಿದ್ದ 141 ಎಕರೆ ಜಾಗದಲ್ಲಿದ್ದ ಕಟ್ಟಡ ತೆರವುಗೊಳಿಸಿ ವಶಕ್ಕೆ ಪಡೆಯಲಾಗಿತ್ತು. ಈ ಶನಿವಾರ ಮತ್ತೆ ನಡೆಸಿರುವ ಕಾರ್ಯಾಚರಣೆಯಲ್ಲಿ 29 ಕೆರೆಗಳ ಒತ್ತುವರಿ ತೆರವು ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಆನೇಕಲ್ ತಾಲ್ಲೂಕಿನಲ್ಲಿ 10 ಕೆರೆಗಳಲ್ಲಿ ಒತ್ತುವರಿಯಾಗಿದ್ದ 15 ಎಕರೆ 23 ಗುಂಟೆ ಜಾಗವನ್ನು ವಶಕ್ಕೆ ಪಡೆಯಲಾಗಿದೆ. ಬೆಂಗಳೂರು ಪೂರ್ವ ತಾಲ್ಲೂಕಿನ 8 ಕೆರೆಗಳಲ್ಲಿ ಒತ್ತುವರಿಯಾಗಿದ್ದ 7 ಎಕರೆ 24 ಗುಂಟೆ ತೆರವುಗೊಳಿಸಲಾಗಿದೆ.

ಯಲಹಂಕ ತಾಲ್ಲೂಕಿನ 5 ಕೆರೆಯಲ್ಲಿ 13 ಎಕರೆ 10 ಗುಂಟೆ ಜಾಗದಲ್ಲಿದ್ದ ಕಟ್ಟಡ ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದೆ. ದಕ್ಷಿಣ ತಾಲ್ಲೂಕಿನ 4 ಕೆರೆಗಳ 5 ಎಕರೆ 9 ಗುಂಟೆ, ಉತ್ತರ ತಾಲ್ಲೂಕಿನ 2 ಕೆರೆಯಲ್ಲಿ ಒತ್ತುವರಿಯಾಗಿದ್ದ 5 ಎಕರೆ 7 ಗುಂಟೆ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಮನೆ, ಡೇರೆ ಸೂರುಗಳನ್ನು ಕಳೆದುಕೊಂಡವರು ಅಧಿಕಾರಿಗಳ ಜತೆ ಮಾತಿನ ಚಕಮಕಿಗೆ ಮುಂದಾದರು. ಪೊಲೀಸ್ ಭದ್ರತೆಯ ನಡುವೆ ಕಾರ್ಯಾಚರಣೆಯನ್ನು ಅಧಿಕಾರಿಗಳು ಮುಂದುವರಿಸಿದ್ದಾರೆ.

ಜಾಗ ಕಳೆದುಕೊಂಡ ನಿವೃತ್ತ ಎಂಜಿನಿಯರ್: ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯಪಾಲಕ ಎಂಜಿನಿಯರ್ ಒಬ್ಬರು ಒತ್ತುವರಿ ಮಾಡಿಕೊಂಡಿದ್ದ ಕೋಟ್ಯಾಂತರ ರೂಪಾಯಿ ಮೌಲ್ಯದ 14 ಎಕರೆ 8 ಗುಂಟೆ ಜಾಗ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಪ್ರದೇಶದ ಹುಲಿಮಂಗಲ ಗ್ರಾಮ ವ್ಯಾಪ್ತಿಯ ಗೋಮಾಳವನ್ನು ಅವರು ಒತ್ತುವರಿ ಮಾಡಿಕೊಂಡಿದ್ದರು. ವಾಣಿಜ್ಯ ಕಟ್ಟಡಗಳನ್ನು ಆ ಜಾಗದಲ್ಲಿ ನಿರ್ಮಿಸಿದ್ದರು. ಉಪವಿಭಾಗಾಧಿಕಾರಿ ಎಂ.ಜಿ. ಶಿವಣ್ಣ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಎಲ್ಲವನ್ನೂ ತೆರವುಗೊಳಿಸಲಾಯಿತು ಎಂದು ತಹಶೀಲ್ದಾರ್ ಪಿ. ದಿನೇಶ್ ತಿಳಿಸಿದರು.

‘ಈ ಜಾಗವನ್ನು ನಾನು ಖರೀದಿ ಮಾಡಿದ್ದೇನೆಯೇ ಹೊರತು ಒತ್ತುವರಿ ಮಾಡಿಲ್ಲ’ ಎಂದು ನಿವೃತ್ತ ಎಂಜನಿಯರ್ ಹಫೀಜ್ ಅಲವತ್ತುಕೊಂಡರು.

ಪ್ರಭಾವ ಬಳಸಿ ಉಳಿಸಿಕೊಳ್ಳುವ ವಿಫಲ ಯತ್ನ

ಬಲಿಷ್ಠರೇ ಹೆಚ್ಚಿನದಾಗಿ ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡಿದ್ದು, ಪ್ರಭಾವ ಬಳಸಿ ಉಳಿಸಿಕೊಳ್ಳುವ ಪ್ರಯತ್ನ ನಡೆಸುತ್ತಿದ್ದಾರೆ. ಆದರೆ, ಅಧಿಕಾರಿಗಳು ಫೋನ್ ಸ್ವಿಚ್ ಆಫ್ ಅಥವಾ ಏರೋಪ್ಲೇನ್ ಮೋಡ್‌ನಲ್ಲಿ ಇರಿಸಿಕೊಂಡು ಕಾರ್ಯಾಚರಣೆ ನಡೆಸುತ್ತಿದ್ದಾರೆ.

‘ಪ್ರಭಾವಿಗಳ ಶ್ರೀರಕ್ಷೆ ಇದೆ ಎಂದುಕೊಂಡು ಒತ್ತುವರಿ ಮಾಡಿದವರು ಈಗ ತೊಂದರೆಗೆ ಸಿಲುಕಿದ್ದು, ರಾಜಕಾರಣಿಗಳಿಗೆ ದುಂಬಾಲು ಬಿದ್ದು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಒಂದೆರಡು ದಿನ ಅವಕಾಶ ನೀಡಿದರೆ ನ್ಯಾಯಾಲಯದಿಂದ ತಡೆಯಾಜ್ಞೆ ತರುತ್ತೇವೆ ಎಂದು ಕೇಳಿಕೊಳ್ಳುತ್ತಿದ್ದಾರೆ. ಅದ್ಯಾವುದಕ್ಕೂ ಅವಕಾಶ ನೀಡದೆ ತೆರವುಗೊಳಿಸಲಾಗುತ್ತಿದೆ’ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು

ನಾರಾಯಣ ಶಾಲೆ ಸಾಧನೆ

ಬೆಂಗಳೂರು: ಸಿಬಿಎಸ್‌ಸಿ 10ನೇ ತರಗತಿ ಪರೀಕ್ಷೆಯಲ್ಲಿ ನಾರಾಯಣ ಸಮೂಹ ಶಾಲೆಯ ಇಬ್ಬರು ವಿದ್ಯಾರ್ಥಿಗಳು 500ಕ್ಕೆ 499 ಅಂಕ ಪಡೆದಿದ್ದಾರೆ.

ವಿದ್ಯಾರ್ಥಿಗಳಾದ ಬಿಹಾ ಕಾಶ್ಮೀನ್, ವಿ.ಲಲಿತ್ ಕಿಶೋರ್, ಪಿ.ಎನ್.ಶ್ವತಿ, ಅನನ್ಯ ಮಿಶ್ರಾ, ಸಂಜನಾ ಹಾಗೂ ಶ್ರೀಪಾದ್ ಬೋಡುಚಾರ್ಲಾ ತಲಾ ಶೇ 99ರಷ್ಟು ಅಂಕ ಪಡೆದಿದ್ದಾರೆ. ಪ್ರಣವ್ ತಲಿವಾಲ್ ಮತ್ತು ವಿ.ಅನುಷಾ ಶೇ 98ರಷ್ಟು ಅಂಕ ಗಳಿಸಿದ್ದಾರೆ.

ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ನಗರದ ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಶಾಲೆಯ ಸಭಾಂಗಣದಲ್ಲಿ ಅಭಿನಂದಿಸಲಾಯಿತು. ನಾರಾಯಣ ಸಮೂಹ ಸಂಸ್ಥೆಯ ಅಧ್ಯಕ್ಷ ಪುನೀತ್ ಕೊಥಾಪ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಈ ಪರೀಕ್ಷೆಯಲ್ಲಿ ರಾಜ್ಯದಾದ್ಯಂತ ನಾರಾಯಣ ಸಂಸ್ಥೆಗಳ 12 ವಿದ್ಯಾರ್ಥಿಗಳು ಶೇ 98ಕ್ಕಿಂತ ಹೆಚ್ಚಿನ ಅಂಕ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹೈದರಾಬಾದ್ ರೇಸ್

ನಾಟಿ ಡ್ಯಾನ್ಸರ್ ಗೆಲ್ಲುವ ನಿರೀಕ್ಷೆ

ಕೆ.ಮಹಿಪತಿ ರಾವ್ ಮೆಮೋರಿಯಲ್ ಗೋಲ್ಕಂಡ ಜುವೆನೈಲ್ ಮಿಲಿಯನ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾಟಿ ಡ್ಯಾನ್ಸರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.05ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಲೈಫ್ಸ್ ಸಾಂಗ್ 7, ಸೋಲಾಸ್ಟ್ 11, ಗ್ರೆಗೋರ್ ಕ್ಲೆಗೇನ್ 2
2ನೇ ರೇಸ್: ಲಂಬಾರ್ಡಿ 7, ಸೋವಿಯೆಟ್ ಪ್ರೈಡ್ 3, ರೆನೊ ಸ್ಟಾರ್ 2
3ನೇ ರೇಸ್: ಸಿಟಿ ಆಫ್ ಬ್ಲಿಸ್ 3, ಟೋಟಲ್ ಡಾರ್ಕ್ 10, ಹಲ್ಲೆ ಬೆರಿ 5
4ನೇ ರೇಸ್: ಪೀಕಿ ಬ್ಲೈಂಡರ್ಸ್ 4, ಫೈರ್ ಪವರ್ 7, ಸಫ್ರೋನ್ ಆರ್ಟ್ 8
5ನೇ ರೇಸ್: ಲೈನ್‌ವಿಲ್ಲರ್ 5, ಎನ್.ಆರ್.ಐ ವಿಶನ್ 2, ಡನ್‌ಕಿರ್ಕ್ 3
6ನೇ ರೇಸ್: ನಾಟಿ ಡ್ಯಾನ್ಸರ್ 4, ಕೊಲಂಬಿಯನ್ 3, ಬಗ್ಸಿ 2
7ನೇ ರೇಸ್: ಬಿಸ್ಟೇಟ್ 2, ಎನ್.ಆರ್.ಐ ಸನ್ 6, ಪ್ರೌಡ್ 3
8ನೇ ರೇಸ್: ಏಂಜೆಲ್ ಟೆಸೊರೊ 1, ಎನ್.ಆರ್.ಐ ಮ್ಯಾಜಿಕ್ 3, ಕಿಂಗ್ ಮೇಕರ್ 4

ಉತ್ತಮ ಬೆಟ್: ಸಿಟಿ ಆಫ್ ಬ್ಲಿಸ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8
1ನೇ ಟ್ರಬಲ್	**2ನೇ ಟ್ರಬಲ್**	**3ನೇ ಟ್ರಬಲ್**
1,2,3	3,4,5	6,7,8

‘ಸ್ವರ್ಣಯುಗ ತಂದುಕೊಟ್ಟಿದ್ದ ಕೃಷ್ಣದೇವರಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರೀ ಕೃಷ್ಣದೇವರಾಯರು ಸ್ವತಃ ಬಹುಭಾಷಾ ಪಂಡಿತರಾಗಿ, ತೆಲುಗು ಮತ್ತು ಕನ್ನಡಕ್ಕೆ ಸ್ವರ್ಣಯುಗ ತಂದ ಮಹನೀಯ’ ಎಂದು ಉಪ ರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು ಅಭಿಪ್ರಾಯಪಟ್ಟರು.

ತೆಲುಗು ವಿಜ್ಞಾನ ಸಮಿತಿ ಆಯೋಜಿಸಿದ್ದ 512ನೇ ಶ್ರೀ ಕೃಷ್ಣ ದೇವರಾಯರ ಪಟ್ಟಾಭಿಷೇಕ ಮಹೋತ್ಸವ ಮತ್ತು ತೆಲುಗು ವಿಜ್ಞಾನ ಸಮಿತಿಯ 70ನೇ ಸಂಸ್ಥಾಪನಾ ದಿನೋತ್ಸವದ ಕಾರ್ಯಕ್ರಮದಲ್ಲಿ ಅವರು ಆನ್‌ಲೈನ್ ಮೂಲಕ ಸಂದೇಶ ನೀಡಿದರು.

‘ಅಮುಕ್ತ ಮೌಲ್ಯದ’ ಎಂಬ ಗ್ರಂಥ ಬರೆದು ಸಾಹಿತ್ಯ ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸಿದರು. ಕೃಷಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಮೂಲಕ ರೈತರಿಗೆ ನೆರವಾದ ಜನಪ್ರಿಯ ನಾಯಕರವರು’ ಎಂದು ಬಣ್ಣಿಸಿದರು.

‘ಮಾತೃಭಾಷೆಯಲ್ಲಿ ಮಕ್ಕಳಿಗೆ ಶಿಕ್ಷಣ ನೀಡಿದರೆ ವಿದ್ಯಾರ್ಥಿಗಳ ಸಾಮರ್ಥ್ಯ ಹೆಚ್ಚುತ್ತದೆ. ತಮಿಳುನಾಡಿನಲ್ಲಿ ದ್ವಿಭಾಷಾ ಸೂತ್ರ ಅನುಸರಿಸಲಾಗುತ್ತಿದೆ. ತೆಲುಗು ಮತ್ತು ಕನ್ನಡ ಭಾಷಾ ವಿದ್ಯಾರ್ಥಿಗಳಿಗೆ ಇದರಿಂದ ಅನ್ಯಾಯವಾಗುತ್ತಿದೆ. ಮಾತೃಭಾಷೆಯಲ್ಲಿ ಅವರು ಶಿಕ್ಷಣ ಪಡೆದರೂ 10ನೇ ತರಗತಿ ಪರೀಕ್ಷೆ ಬರೆಯಲು ತಮಿಳುನಾಡು ಸರ್ಕಾರ ಅನುಮತಿ ನೀಡುತ್ತಿಲ್ಲ. ಈ ಪರಿಸ್ಥಿತಿಯಲ್ಲಿ ತೆಲುಗು ಮತ್ತು ಕನ್ನಡ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಇದಕ್ಕೆ ಶಾಶ್ವತ ಪರಿಹಾರ ದೊರಕಬೇಕಿದೆ’ ಎಂದು ಎಂದು ಸಮಿತಿ ಅಧ್ಯಕ್ಷ ಡಾ. ಎ.ರಾಧಾಕೃಷ್ಣ ರಾಜು ಹೇಳಿದರು.

ಸಂಸದ ಡಿ.ವಿ. ಸದಾನಂದಗೌಡ ಮತ್ತು (ಎಡದಿಂದ) ತೆಲುಗು ವಿಜ್ಞಾನ ಸಮಿತಿ ಪದಾಧಿಕಾರಿ ಗಂಗರಾಜು, ಸಮಿತಿ ಅಧ್ಯಕ್ಷ ಎ. ರಾಧಾಕೃಷ್ಣ ರಾಜು, ಸಮಿತಿಯ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಕೆ.ಮುನಿಸ್ವಾಮಿ ರಾಜು, ಸಮಿತಿ ಪದಾಧಿಕಾರಿಗಳಾದ ವರದರಾಜು ಮತ್ತು ಲಕ್ಷ್ಮಿ ರೆಡ್ಡಿ ಅವರು ಶ್ರೀಕೃಷ್ಣದೇವರಾಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

JOCKEY
FACTORY SECONDS
UPTO 50% OFF*
INNERWEAR | LEISUREWEAR | ACTIVEWEAR
KIDSWEAR | SOCKS
• 10 am to 8 pm • Open on Sundays • Master/Visa Card Accepted
* T & C apply

Venues in Bangalore
• Jayanagar: Srinivasa Sagar Kalyana Mahal, T.Mariyappa Road, 2nd Block, (Near Ashoka Pillar) - 560 011
• Banashankari: Nagalakshmi Kalyana Mantapa, No.5, II Stage, Near Post Office - 560 070
• Infantry Road: Safina Plaza, No.84/85 - 560 001
• Malleswaram: The Canara Union, No.42, 8th Main, Canara Union Road - 560 003
• Vijay Nagar: Five O Gallery, No.50, 17th Cross, M.C. Road, Near Vijay Nagar Bus Stop - 560 040
• Rajajinagar: Raja Rajeshwari Kalyana Mantapa, 2nd Block, Dr. Rajkumar Road - 560 010
• Rajarajeswari Nagar: Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
• Bannerghatta Road: Santhome Parish Church Hall, Hulimavu, Near Meenakshi Mall - 560 076
• Kundalahalli Gate: S K R Convention Hall, #68, Thubarahalli, Varthur Main Road - 560 066
• Koramangala: Apoorva International, #35A, Raheja Arcade, Opp Star Box - 560 095
• Basavanagudi: Amolak Apparels, #104, Bull Temple Road, Near Ramakrishna Ashram - 560 019
Org. by: Surya Agency Pvt. Ltd.

ಭಾರತದಲ್ಲಿ ಹಿಂದೆಂದೂ ಕಾಣದ ಬೃಹತ್ ರಿಯಾಯಿತಿ
100% ORIGINALS
INTERNATIONAL BRAND
ನೇರವಾಗಿ ಬ್ರ್ಯಾಂಡೆಡ್ ಗಾರ್ಮೆಂಟ್ಸ್ ಕಂಪನಿಯಿಂದ SALE
Only 2 Days 08th & 09th August'21
ದಿ ಲಲಿತ್ ಅಶೋಕ್, ಬೆಂಗಳೂರಿನಲ್ಲಿ
ಭಾರತದ ಹಲವಾರು ಪ್ರೀಮಿಯಂ ಮಾಲ್‌ಗಳು ಮತ್ತು ಶೋರೂಂಗಳಿಂದ ಸಾಮೂಹಿಕವಾಗಿ ಸ್ಟಾಕ್‌ನ್ನು ಸಂಗ್ರಹಿಸಿಡಲಾಗಿದೆ. ಸಾಂಕ್ರಾಮಿಕ ರೋಗದ ಲಾಕ್‌ಡೌನ್‌ನಿಂದಾಗಿ ಈ ಪ್ರೀಮಿಯಂ ಮಾಲ್‌ಗಳು ಮತ್ತು ಶೋರೂಂಗಳು ಪರಸ್ಪರ ಈ ನಿರ್ಧಾರಕ್ಕೆ ಬಂದಿವೆ. ಬೆಂಗಳೂರಿನ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ರೀಟೇಲ್ ಗ್ರಾಹಕರು ಈಗ ನೇರವಾಗಿ ಪೂರ್ಣ ದಾಸ್ತಾನನ್ನು ಎನ್‌ಕ್ಯಾಶ್ ಮಾಡಿಕೊಳ್ಳಬಹುದು.
ಮೂರನೇ ಅಲೆಯ ಮಾರಕ ಭಯದಿಂದ ಬಾಂಬೆ ಎಕ್ಸ್‌ಪೋರ್ಟ್ ಕಂ. ಸಂಕಷ್ಟದಲ್ಲಿದೆ.
All the above mentioned Premium International Brands will be now sold at:
Premium T-Shirt MRP worth 2500-3000............Rs. 250/- to 450/- only
Casual/Formal pant MRP worth 4000-6000........Rs. 600/- to 800/- only
Ladies/Gents Denims MRP worth 2500-7000.....Rs. 550/- to 1250/- only
JACK & JONES Swet Shirts & Sweaters MRP 3000-4500 .... Rs. 800/- Only
Mix Garments of Ladies, Gents & Kids of
MRP worth Rs. 1000-3000 will be sold only at Rs. 200/- to Rs. 600/-
Sports Shoes/Pure Leather Shoes
MRP worth Rs. 2000-8000 will be sold only at Rs. 450/- to Rs. 1950/-
100% Original Gents & Ladies Under Garments Rs. 100/- to Rs. 190/-
ಸೂಚನೆ : 1. ಈ ಮಾರಾಟವನ್ನು ಇತರೆ ಮಾರಾಟ ಮೇಳಗಳಿಗೆ ಹೋಲಿಸಬೇಡಿ.
ಈ ಮಾರಾಟವನ್ನು ವಿಶೇಷವಾಗಿ ರೀಟೇಲ್ ಗ್ರಾಹಕರಿಗೆ ಮಾತ್ರ ಇಡಲಾಗಿದೆ.
2. ಗಾರ್ಮೆಂಟ್ ದಾಸ್ತಾನು ಮುಗಿದ ಕೂಡಲೆ ಕೌಂಟರ್‌ನ್ನು ಮುಚ್ಚಲಾಗುವುದು.
3. ಸೂಟ್‌ಕೇಸ್ ಮತ್ತು ಬ್ಯಾಗ್‌ಗಳನ್ನು ಹಾಲ್ ಒಳಗೆ ಅನುಮತಿಸುವುದಿಲ್ಲ.

ಕೊಡುಗೆ 2 ದಿನಗಳು ಮಾತ್ರ 08th & 09th August'21
ಸ್ಥಳ:
The LaLiT Ashok
Kumarakrupa Road, Opp.Golf Club, High Grounds,
Sale Time: 10am to 9.00pm (Sunday Open)
ENTRY FREE
The Venue(s) are 100% Safe and sanitized to highest standards
PARKING FREE

ಸಂಘನಿಷ್ಠರ ಅದೃಷ್ಟ: 'ವಲಸಿಗ'ರೂ ಇಷ್ಟ

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ

ಬೆಂಗಳೂರು: ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರಕ್ಕೆ ಅಂಟಿದ್ದ ಕಳಂಕ ತೊಳೆಯಲು ಮುಂದಾಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ತಮ್ಮ ಸಹೋದ್ಯೋಗಿಗಳಿಗೆ ಖಾತೆ ಹಂಚಿಕೆ ಮಾಡುವಾಗ ಎಚ್ಚರದ ಹೆಜ್ಜೆ ಇಟ್ಟಿದ್ದಾರೆ. ವರಿಷ್ಠರ ನಿರ್ದೇಶನದಂತೆ ಜಾಣ್ಮೆಯಿಂದ ಖಾತೆ ಹಂಚಿಕೆ ನಿರ್ವಹಿಸಿರುವ ಸಿ.ಎಂ ಅವರ ಈ ನಡೆಯಿಂದಾಗಿ ಸಂಘ ಪರಿವಾರದ ನಿಷ್ಠರಿಗೆ ಪ್ರಮುಖ ಖಾತೆಯ ಅದೃಷ್ಟ ಒದಗಿದೆ. 'ವಲಸಿಗ'ರ ಮೇಲಿನ 'ಇಷ್ಟ'ವನ್ನೂ ಬಿಡದೇ ನಾಜೂಕಿನ ನಡೆ ಇಟ್ಟಿದ್ದಾರೆ. ಇಲ್ಲಿ, ಯಡಿಯೂರಪ್ಪ ಸರ್ಕಾರದ 'ಛಾಯೆ' ಕಳೆದು, ಸರ್ಕಾರಕ್ಕೆ ವರ್ಚಸ್ಸು ಕೊಡುವ ಯತ್ನ ಕಾಣಬರುತ್ತದೆ. ಭ್ರಷ್ಟಾಚಾರದ ಹಿಡಿತ ಸಡಿಲಿಸಿ, ಸಹೋದ್ಯೋಗಿಗಳ ಬೀಸುವಿಕೆಗೆ ಕಡಿವಾಣ ಒಡ್ಡುವಲ್ಲಿ ಯಶಸ್ವಿಯಾಗುತ್ತಾರಾ ಎಂದು ಕಾದು ನೋಡಬೇಕು. ಯಡಿಯೂರಪ್ಪ ಸಂಪುಟದಲ್ಲಿದ್ದ ಬಹುತೇಕರು ಯಡಿಯೂರಪ್ಪ ನವರ ಬೆನ್ನಿಗೆ ನಿಂತವರೇ. ತಮ್ಮ ನಾಯಕ ಬಿಜೆಪಿ ತೊರೆದು ಕೆಜೆಪಿ ಕಟ್ಟಿದಾಗ, ಪಕ್ಷನಿಷ್ಠೆ ತೊರೆದಿದವರು. ಕಾರಜೋಳರಿಗೆ ಆಯಕಟ್ಟಿನ ಜಲಸಂಪನ್ಮೂಲ ಖಾತೆ, ಹಿರೀಕರಾದರೂ ಇಲ್ಲಿಯವರೆಗೆ ಪ್ರಬಲ ಖಾತೆ ಕಾಣದಿದ್ದ ಸಿ.ಸಿ. ಪಾಟೀಲರಿಗೆ ಮತ್ತು ಮುರುಗೇಶ ನಿರಾಣಿ ಅವರಿಗೆ ಪ್ರಮುಖ ಖಾತೆ ನೀಡಿದ್ದು, ಪಂಚಮಸಾಲಿ ಸಮುದಾಯದವರಿಗೆ ಎರಡು ಪ್ರಮುಖ ಖಾತೆ ನೀಡಲಾಗಿದೆ ಎಂಬ ಸಂದೇಶವನ್ನು ರವಾನಿಸಿದಂತಿದೆ. ಉಪಮುಖ್ಯಮಂತ್ರಿ ಪಟ್ಟಕ್ಕೆ ಬೇಡಿಕೆ ಇಟ್ಟಿದ್ದ ಬಿ.ಶ್ರೀರಾಮುಲು ಅವರಿಗೆ ಸಾರಿಗೆ ಜತೆಗೆ, ಹೊಸದಾಗಿ ಸೃಷ್ಟಿಸಲಾಗಿರುವ ಪರಿಶಿಷ್ಟ ಪಂಗಡ ಕಲ್ಯಾಣ ಸಚಿವಾಲಯದ ಜವಾಬ್ದಾರಿ ವಹಿಸಲಾಗಿದೆ. ಅದೃಷ್ಟದ ಬೆನ್ನೇರಿಯೇ ಸಿ.ಎಂ ಆಗಿರುವ ಬೊಮ್ಮಾಯಿ ಸಂಘ ನಿಷ್ಠರಿಗೆ ಅದೇ ಅವಕಾಶ ಕಲ್ಪಿಸಿದ್ದಾರೆ. ಮೊದಲ ಬಾರಿಗೆ ಸಚಿವರಾದ ಆರಗ ಜ್ಞಾನೇಂದ್ರರಿಗೆ ಗೃಹ, ಸುನೀಲ್ ಕುಮಾರ್‌ಗೆ ಇಂಧನದಂತಹ ಮಹತ್ವದ ಖಾತೆಗಳು ಲಭಿಸಿವೆ. ಸಚಿವರಾಗಿ ಅನುಭವ ಇಲ್ಲದಿ ದ್ದರೂ ಶಾಸಕರಾಗಿ ಹಿರೀಕರಾದ ಆರಗ ಜ್ಞಾನೇಂದ್ರ ಅವರಿಗೆ ಗೃಹ ಖಾತೆ ಸಿಗಲು 'ಸಂಘ ನಿಷ್ಠೆ'ಯೇ ಪ್ರಮುಖ ಕಾರಣ. ಸುನೀಲ್ ಕುಮಾರ್‌ಗೆ ಕನ್ನಡ ಸಂಸ್ಕೃತಿ ಜತೆಗೆ 'ಇಂಧನದಂತಹ ಪ್ರಮುಖ ಹೊಣೆ ನೀಡಿರುವುದು ಹೊಸ ತಲೆಮಾರನ್ನು ಮುನ್ನೆಲೆಗೆ ತರುವ ಯತ್ನದ ಭಾಗ. ಸಂಘದ ಸಿದ್ಧಾಂತವನ್ನೇ ನೆಚ್ಚಿಕೊಂಡಿದ್ದ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಸಮಾಜ ಕಲ್ಯಾಣ, ಹಿಂದುಳಿದವರ ಕಲ್ಯಾಣದ ಗುರುತರ ಹೊಣೆ ಸಿಕ್ಕಿದೆ. ಇದೇ ಮಾದರಿಯ ಮತ್ತೊಬ್ಬ ವ್ಯಕ್ತಿ ಬಿ.ಸಿ.ನಾಗೇಶ್‌ಗೂ ಅದೇ ಕಾರಣಕ್ಕೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಖಾತೆ ಹುಡುಕಿಕೊಂಡು ಬಂದಿದೆ. ಹಿರಿತನದ ಕಾರಣಕ್ಕೆ ಕೆ.ಎಸ್.ಈಶ್ವರಪ್ಪ ಅವರಿಗೆ ಗ್ರಾಮೀಣಾಭಿವೃದ್ಧಿಯಂತಹ ದೊಡ್ಡ ಖಾತೆ ಮತ್ತೆ ಅವರ ಹೆಗಲೇರಿದೆ.

ವಲಸಿಗರೂ ಇಷ್ಟ: ಬಿಜೆಪಿ ಸೇರಿ, ಸಚಿವರಾದವರಲ್ಲಿ ಬಹುತೇಕರ ಖಾತೆ ಬದಲಾಗಿಲ್ಲ. ಮಾತುಕೊಟ್ಟಂತೆ ಸಚಿವರಾಗಿ ಮುಂದುವರಿದಿದ್ದು, ಖಾತೆಯನ್ನು ಉಳಿಸಲಾಗಿದೆ. ಪಕ್ಷ ನಿಷ್ಠೆ, ಸಮರ್ಪಕ ಕಾರ್ಯನಿರ್ವಹಣೆ ಇಲ್ಲದಿದ್ದರೆ ಅದಕ್ಕೂ ಮುಲಾಜಾಗುವುದು ಎಂಬ ಸಂದೇಶವನ್ನೂ ಅವರಿಗೆ ರವಾನಿ ಸಿದಂತಿದೆ.

ಜೊಲ್ಲೆಗೆ ಹಿನ್ನಡೆ: ಭ್ರಷ್ಟಾಚಾರದ ಆರೋಪ ಸಹಿಸಲಾಗದು ಎಂಬ ಸಂದೇಶವನ್ನು ಶಶಿಕಲಾ ಜೊಲ್ಲೆ ಅವರ ಖಾತೆ ಬದಲಾವಣೆ ಮೂಲಕ ನೀಡಲಾಗಿದೆ. ಬಿ.ಎಲ್.ಸಂತೋಷ್ ಪ್ರಭಾವ ಬಳಸಿ ಸಂಪುಟ ಸೇರಿದ್ದ ಜೊಲ್ಲೆ ಅವರಿಗೆ ಹಳೆಯ ಖಾತೆ ಸಿಕ್ಕಿಲ್ಲ. ಎಷ್ಟೇ ಪ್ರಭಾವವಿದ್ದರೂ ಆರೋಪ ಬಂದರೆ ಹಿಂಬಡ್ತಿ ಖಚಿತ ಎಂಬ ಸೂಕ್ಷ್ಮ ಎಚ್ಚರಿಕೆಯನ್ನು ಮುಖ್ಯಮಂತ್ರಿ ಕೊಟ್ಟಂತಿದೆ.

ನಿರಾಣಿ- ಸಿಂಗ್ ಹಿತಾಸಕ್ತಿ ಸಂಘರ್ಷ?

ಉದ್ಯಮಿ ಮುರುಗೇಶ ನಿರಾಣಿ ಅವರಿಗೆ ಬೃಹತ್ ಕೈಗಾರಿಕೆ, ಪರಿಸರ ನಿಯಮಗಳ ಉಲ್ಲಂಘನೆ ಆರೋಪ ಎದುರಿಸುತ್ತಿರುವ ಆನಂದ್ ಸಿಂಗ್ ಅವರಿಗೆ ಪರಿಸರ ಇಲಾಖೆ ಹೊಣೆ ವಹಿಸಿರುವುದು ಚರ್ಚೆಗೆ ಗ್ರಾಸವಾಗಿದೆ.

ಉದ್ಯಮಿಗೆ ಕೈಗಾರಿಕೆ ಖಾತೆ ನೀಡಿರುವುದು ಹಿತಾಸಕ್ತಿ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ. ಸ್ವಂತ ಹಿತಾಸಕ್ತಿಗೆ ಆದ್ಯತೆಯಾದರೆ ಎಷ್ಟು ಸರಿ ಎಂಬ ವಾದವೂ ಈಗ ಮುನ್ನೆಲೆಗೆ ಬಂದಿದೆ. ಗಣಿ ಉದ್ಯಮಿಯೂ ಆದ ಆನಂದ್ ಸಿಂಗ್ ಮೇಲೆ, ಹಿಂದೆ ಅಕ್ರಮ ಗಣಿಗಾರಿಕೆಯ ಆಪಾದನೆಗಳಿದ್ದವು. ಅವರಿಗೆ ಈ ಖಾತೆ ನೀಡಿರುವುದೂ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಬಿಎಸ್‌ವೈಗೆ ಸಂಪುಟ ದರ್ಜೆ ಸ್ಥಾನಮಾನ

ಬಿ.ಎಸ್.ಯಡಿಯೂರಪ್ಪ ಅವರಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶನಿವಾರ ಆದೇಶ ಹೊರಡಿಸಿರುವುದು ಚರ್ಚೆಯ ಮುನ್ನೆಲೆಗೆ ಬಂದಿದೆ.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಇರುವವರೆಗೆ ಯಡಿಯೂರಪ್ಪ ಅವರಿಗೆ ಈ ಸೌಲಭ್ಯ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶನಿವಾರ ಹೊರಡಿಸಿದ ಆದೇಶದಲ್ಲಿ ತಿಳಿಸಿದೆ.

> ಯಡಿಯೂರಪ್ಪ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ. ಖಾತೆ ಹಂಚಿಕೆ ಕುರಿತು ಅಸಮಾಧಾನವಿದೆ. 2-3 ದಿನಗಳಲ್ಲಿ ನಿರ್ಧಾರ ತಿಳಿಸುವೆ
> **ಎಂ.ಟಿ.ಬಿ. ನಾಗರಾಜ್,** ಪೌರಾಡಳಿತ, ಸಣ್ಣ ಕೈಗಾರಿಕೆ ಸಚಿವ

> ಸಚಿವ ಸ್ಥಾನ ಸಿಗದಿರುವುದು ಮತ್ತು ಖಾತೆ ಹಂಚಿಕೆ ವಿಚಾರದಲ್ಲಿ ಅಸಮಾಧಾನ ವ್ಯಕ್ತಪಡಿಸಿರುವ ಎಲ್ಲರ ಜತೆಗೂ ಚರ್ಚಿಸಿ ಮನವೊಲಿಸಲಾಗುವುದು
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ನಾನು ಕೇಳಿದ್ದ ಖಾತೆ ಸಿಗಬಹುದು ಎಂಬ ಉತ್ಸಾಹದಲ್ಲಿದ್ದೆ. ಹಾಗಾಗಿಲ್ಲ. ಸಿ.ಎಂ ಭೇಟಿ ಮಾಡಿ ಮನವಿ ಮಾಡುತ್ತೇನೆ. ಸ್ಪಂದಿಸದಿದ್ದರೆ ಬರೀ ಶಾಸಕನಾಗಿ ಉಳಿಯುವ ಬಗ್ಗೆ ಚಿಂತಿಸಲಾಗುವುದು
> **ಆನಂದ್ ಸಿಂಗ್,** ಸಚಿವ

ಯಾವ ಸಚಿವರಿಗೆ ಯಾವ ಖಾತೆ?

ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿ)	ಹಣಕಾಸು, ಬೆಂಗಳೂರು ಅಭಿವೃದ್ಧಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಗುಪ್ತಚರ ಮತ್ತು ಹಂಚಿಕೆಯಾಗದ ಎಲ್ಲ ಖಾತೆಗಳು
ಗೋವಿಂದ ಎಂ. ಕಾರಜೋಳ	ಜಲ ಸಂಪನ್ಮೂಲ
ಕೆ.ಎಸ್. ಈಶ್ವರಪ್ಪ	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಆರ್. ಅಶೋಕ	ಕಂದಾಯ
ಬಿ. ಶ್ರೀರಾಮುಲು	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ
ವಿ. ಸೋಮಣ್ಣ	ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ
ಉಮೇಶ ವಿ. ಕತ್ತಿ	ಅರಣ್ಯ, ಆಹಾರ ಮತ್ತು ನಾಗರಿಕ ಪೂರೈಕೆ
ಎಸ್. ಅಂಗಾರ	ಮೀನುಗಾರಿಕೆ, ಬಂದರು ಮತ್ತು ಒಳನಾಡು ಸಾರಿಗೆ
ಜೆ.ಸಿ. ಮಾಧುಸ್ವಾಮಿ	ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರ
ಆರಗ ಜ್ಞಾನೇಂದ್ರ	ಗೃಹ (ಗುಪ್ತಚರ ಬಿಟ್ಟು)
ಡಾ.ಸಿ.ಎನ್. ಅಶ್ವತ್ಥನಾರಾಯಣ	ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ ಅಭಿವೃದ್ಧಿ
ಸಿ.ಸಿ. ಪಾಟೀಲ	ಲೋಕೋಪಯೋಗಿ
ಆನಂದ್ ಸಿಂಗ್	ಪರಿಸರ ಮತ್ತು ಜೀವಿಶಾಸ್ತ್ರ, ಪ್ರವಾಸೋದ್ಯಮ
ಕೋಟ ಶ್ರೀನಿವಾಸ ಪೂಜಾರಿ	ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಅಭಿವೃದ್ಧಿ
ಪ್ರಭು ಚವ್ಹಾಣ	ಪಶು ಸಂಗೋಪನೆ
ಮುರುಗೇಶ್ ಆರ್. ನಿರಾಣಿ	ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಅರಬೈಲ್ ಶಿವರಾಂ ಹೆಬ್ಬಾರ್	ಕಾರ್ಮಿಕ
ಎಸ್.ಟಿ. ಸೋಮಶೇಖರ್	ಸಹಕಾರ
ಬಿ.ಸಿ. ಪಾಟೀಲ	ಕೃಷಿ
ಬಿ.ಎ. ಬಸವರಾಜ (ಬೈರತಿ)	ನಗರಾಭಿವೃದ್ಧಿ (ಕೆಯುಡಬ್ಲ್ಯುಎಸ್‌ಡಿಬಿ ಮತ್ತು ಕೆಯುಐಡಿಎಫ್‌ಸಿ ಸೇರಿದಂತೆ ಹಾಗೂ ಬಿಬಿಎಂಪಿ, ಬಿಡಿಎ, ಬಿಎಂಆರ್‌ಡಿಎ, ಬಿಎಂಆರ್‌ಸಿಎಲ್ ಬಿಟ್ಟು)
ಡಾ.ಕೆ. ಸುಧಾಕರ್	ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ
ಕೆ. ಗೋಪಾಲಯ್ಯ	ಅಬಕಾರಿ
ಶಶಿಕಲಾ ಜೊಲ್ಲೆ	ಮುಜರಾಯಿ, ಹಜ್ ಮತ್ತು ವಕ್ಫ್
ಎಂ.ಟಿ.ಬಿ. ನಾಗರಾಜು	ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮಗಳು
ಕೆ.ಸಿ. ನಾರಾಯಣಗೌಡ	ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡೆ
ಬಿ.ಸಿ. ನಾಗೇಶ್	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ವಿ. ಸುನೀಲ್ ಕುಮಾರ್	ಇಂಧನ, ಕನ್ನಡ ಮತ್ತು ಸಂಸ್ಕೃತಿ
ಹಾಲಪ್ಪ ಆಚಾರ್	ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಅಂಗವಿಕಲರು ಮತ್ತು ಹಿರಿಯ ನಾಗರಿಕರ ಸಬಲೀಕರಣ
ಶಂಕರ ಬಿ. ಪಾಟೀಲ ಮುನೇನಕೊಪ್ಪ	ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ
ಮುನಿರತ್ನ	ತೋಟಗಾರಿಕೆ, ಯೋಜನೆ, ಮೇಲುಸ್ತುವಾರಿ ಮತ್ತು ಸಾಂಖ್ಯಿಕ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಉಪ ನಿರ್ದೇಶಕರವರ ಕಛೇರಿ, ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ, ಅಜ್ಜಂಪುರ, ಚಿಕ್ಕಮಗಳೂರು
Mail: amruthmahal18@gmail.com ಕಛೇರಿ ದೂರವಾಣಿ ಸಂ: 08261-245122
ಕ್ರ.ಸಂ.ಉಪನಿ/ಅಮತಸಂಕೇಅ/ಅಮಹೋ/ಹರಾಜು/2020-21 ದಿನಾಂಕ : 07-08-2021

ಅಮೃತ್ ಮಹಲ್ ಹೋರಿ ಕರುಗಳ ಹರಾಜು ಮುಂದೂಡಿಕೆ

ಸರ್ಕಾರಿ ಆದೇಶ ಸಂಖ್ಯೆ: ಆರ್.ಡಿ.158 ಟಿ.ಎನ್.ಆರ್ 2020 ದಿ: 06.08.2021 ದಿ: 07.08.2021 ರಂತೆ ದಿ: 09.08.2021 ಸೋಮವಾರ ಬೆಳಗ್ಗೆ 09.30 ಘಂಟೆಗೆ ಜಾನುವಾರು ಸಂವರ್ಧನಾ ಕ್ಷೇತ್ರ, ಬೀರೂರು, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ (ಕಡೂರು ಮತ್ತು ಬೀರೂರು ಮಧ್ಯ ಭಾಗದಲ್ಲಿ ರಾಜ್ಯ ಹೆದ್ದಾರಿ ಸಂಖ್ಯೆ 206) ಇಲ್ಲಿ ನಿಗದಿಪಡಿಸಿದ್ದ ಅಮೃತ್ ಮಹಲ್ ಹೋರಿಕರುಗಳ ಹರಾಜು ಪ್ರಕ್ರಿಯೆಯನ್ನು ಕೋವಿಡ್-19 ಮೂರನೇ ಅಲೆಯನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರದ ಮುಂದಿನ ಆದೇಶದ ವರೆಗೆ ಮುಂದೂಡಲಾಗಿದೆ ಎಂದು ಉಪನಿರ್ದೇಶಕರು, ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ, ಅಜ್ಜಂಪುರ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
ಸಹಿ/-
ಉಪ ನಿರ್ದೇಶಕರು
ಅಮೃತ್ ಮಹಲ್ ತಳ ಸಂವರ್ಧನಾ ಕೇಂದ್ರ, ಅಜ್ಜಂಪುರ,

ಬೆಂಗಳೂರು ವಿಶ್ವವಿದ್ಯಾಲಯ
NAAC Accredited with 'A' GRADE
ಪರೀಕ್ಷಾ ಭವನ, ಜ್ಞಾನಭಾರತಿ, ಬೆಂಗಳೂರು-560 056.
ಸಂಖ್ಯೆ:ಇಎಕ್ಸ್-II/ಪಿಹೆಚ್.ಡಿ/ಬಾಉಸೀ/ಕೌನ್ಸಿಲಿಂಗ್/202122 ದಿನಾಂಕ: 07-08-2021

ಅಧಿಸೂಚನೆ
ಆಯ್ಕೆಯಾಗದೆ ಬಾಕಿ ಉಳಿದಿರುವ ಪಿಹೆಚ್.ಡಿ. ಸೀಟುಗಳನ್ನು ದಿನಾಂಕ: 12-08-2021 ರಂದು ಭರ್ತಿ ಮಾಡುವ ಬಗ್ಗೆ.

ಬೆಂಗಳೂರು ವಿಶ್ವವಿದ್ಯಾಲಯವು ನಡೆಸಿದ ಪಿಹೆಚ್.ಡಿ. ಸೀಟುಗಳ ಹಂಚಿಕೆ ಪ್ರಕ್ರಿಯೆಯಲ್ಲಿ (Ph. D. Counselling) ಆಯ್ಕೆಯಾಗದೆ ಬಾಕಿ ಉಳಿದಿರುವ ಸೀಟುಗಳನ್ನು ಭರ್ತಿ ಮಾಡಲು ದಿನಾಂಕ: 12-08-2021 ರಂದು ಬೆಳಗ್ಗೆ 9.30 ಗಂಟೆಗೆ (ಕನ್ನಡ ಅಧ್ಯಯನ ಕೇಂದ್ರ ವಿಭಾಗ, ಇಂಗ್ಲೀಷ್ ವಿಭಾಗ, ಇತಿಹಾಸ ವಿಭಾಗ, ಅರ್ಥಶಾಸ್ತ್ರ ವಿಭಾಗ, ಸಮಾಜಶಾಸ್ತ್ರ ವಿಭಾಗ, ರಾಜ್ಯಶಾಸ್ತ್ರ ವಿಭಾಗ,ಪ್ರದರ್ಶನ ಕಲಾ ವಿಭಾಗ, ಗ್ರಾಮೀಣಾಭಿವೃದ್ಧಿ ವಿಭಾಗ, ಸಂವಹನ ವಿಭಾಗ, ಗಣಿತಶಾಸ್ತ್ರ ವಿಭಾಗ, ಪರಿಸರ ವಿಜ್ಞಾನ ವಿಭಾಗ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಶಿಕ್ಷಣ ವಿಭಾಗ, ದೈಹಿಕ ಶಿಕ್ಷಣ ವಿಭಾಗ, ವಾಣಿಜ್ಯ ವಿಭಾಗ ಮತ್ತು ನಿರ್ವಹಣಾ ವಿಭಾಗ) ಸ್ನಾತಕೋತ್ತರ ವಿಭಾಗಗಳಲ್ಲಿ ನಡೆಸಲು ನಿರ್ಣಯಿಸಲಾಗಿದೆ. ಅದರಿಂದ, ಜೇಷ್ಠತಾ ಪಟ್ಟಿಯಲ್ಲಿದ್ದು ಆಯ್ಕೆಯಾಗದೆ ಇರುವ ಅರ್ಹ ವಿದ್ಯಾರ್ಥಿಗಳು ಈ ಪ್ರವೇಶ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದೆಂದು ತಿಳಿಸಲಾಗಿದೆ.
ಸಹಿ/-, ಕುಲಸಚಿವರು (ಮೌಲ್ಯಮಾಪನ)

ಕರ್ನಾಟಕ ಸರ್ಕಾರ
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
ಶ್ರೀರಾಮ ಕಾಂಪ್ಲೆಕ್ಸ್, ಆಂಜನೇಯ ದೇವಸ್ಥಾನದ ಎದುರು, ಸ್ಟೇಡಿಯಂ ರೋಡ್, ಚಿತ್ರದುರ್ಗ-577501
Ph:- 08194-235134 e-mail:- domcta123@gmail.com
ಸಂ. ಅಸಂಇ/ಆಹಾರ ಟೆಂಡರ್/ಸಿಆರ್-78/2021-22 ದಿನಾಂಕ: 06.08.2021

ಟೆಂಡರ್ ಪ್ರಕಟಣೆ
(ಜಿಓಕೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2021-22ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು/ಮೆಟ್ರಿಕ್ ನಂತರದ ಬಾಲಕರ/ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಆಹಾರ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in) ನಲ್ಲಿ ವಿವರಗಳನ್ನು ಪಡೆದು ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ಅಥವಾ ದೂರವಾಣಿ ಸಂಖ್ಯೆ: 08194-235134 ಇಲ್ಲಿಗೆ ಸಂಪರ್ಕಿಸಬಹುದು.
ವಿವರಗಳು:- (1) 2021-22ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು/ವಿದ್ಯಾರ್ಥಿನಿಲಯಗಳಿಗೆ ಆಹಾರ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಟೆಂಡರ್ ಆಹ್ವಾನಿಸುವ ಕುರಿತು. (2) ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 04.09.2021. (3) ಇಎಂಡಿ ಮೊತ್ತ:- ರೂ. 2,98,500/-
DIPR/CTA/MCA/342/2021-22
ಸಹಿ/- ಜಿಲ್ಲಾ ಅಧಿಕಾರಿಗಳು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)
ಪೊಲೀಸ್ ಕಮೀಷನರ್‌ರವರ ಕಛೇರಿ, ಮೈಸೂರು ನಗರ.
ಸಂಖ್ಯೆ:ಸಿಓಪಿ/ಸಂಗ್ರಹ/ಟೆಂಡರ್/148/2021-22 ದಿನಾಂಕ: 03.08.2021

ಟೆಂಡರ್ ಪ್ರಕಟಣೆ
(ONLY THROUGH "e-Procurement SYSTEM)

ಮೈಸೂರು ನಗರದಲ್ಲಿ ಸುಗಮ ಸಂಚಾರ ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ನಗರದ ಪ್ರಮುಖ ರಸ್ತೆಗಳಲ್ಲಿ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸುವ ಅಥವಾ 'ವಾಹನ ನಿಲುಗಡೆ ನಿಷೇಧ' ಸ್ಥಳಗಳಲ್ಲಿ ನಿಲುಗಡೆ ಮಾಡಲಾದ ವಾಹನಗಳನ್ನು ಖಾಸಗಿ ರೆಕ್ಕರ್ ವಾಹನಗಳನ್ನು ಬಳಸಿ ಲಿಫ್ಟ್ ಮಾಡಿ ನಗರದ ಐದು ಸಂಚಾರ ಠಾಣೆಗಳಲ್ಲಿ ನಿಲುಗಡೆ ಮಾಡಲು ರೆಕ್ಕರ್ ವಾಹನಗಳನ್ನು (Towing Vehicle) ಮೂರು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲು ಇ-ಪ್ರಕ್ಯೂರ್‌ಮೆಂಟ್ ರೀತ್ಯ 30 ದಿನಗಳ ಟೆಂಡರ್ ಆಹ್ವಾನಿಸಲಾಗಿದೆ.
Sl.No.: 1. **Name of the work:** "Providing towing vehicles from the owners of private towing vehicles to Mysuru city Traffic Police for the towing of two wheelers and four wheelers vehicles which are parked haphazardly and causing obstruction to free movement of traffic and general public on monthly rotation basis for the period of three years". **No. of Vehicles:** 05 No.s
"e-Procurement" Portal ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭದ ದಿ: 03.08.2021ರ ಸಂಜೆ 05.00 ಗಂಟೆಗೆ-ಮಾಹಿತಿಯನ್ನು "eproc.karnataka.gov.in" ವೆಬ್‌ಸೈಟ್‌ನಲ್ಲಿ ಹಾಗೂ "e-Procurement Help desk Phone Numbers: +91 80 46010000, +91 80 68948777 or email at **support@eprochelpdesk.com** ನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಯನ್ನು ಪೊಲೀಸ್ ಕಮೀಷನರ್‌ರವರ ಕಛೇರಿಯ ಸಂಗ್ರಹ ಶಾಖೆಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. Phone Number - 0821-2418575.
ಸಹಿ/- ಪೊಲೀಸ್ ಕಮೀಷನರ್, ಮೈಸೂರು ನಗರ
DIPR/DDMYS/MCA/377/2021-22

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು.
ಡಿ.ಸಿ.ಆಫೀಸ್ ಕಾಂಪೌಂಡ್, ಡಿ.ಸಿ ಆಫೀಸ್ ಹಿಂಭಾಗ, ತುಮಕೂರು - 572101.
ದೂ: 0816-2278014 email: dobcmtumkur@gmail.com
ಸಂಖ್ಯೆ:ಬಿಸಿಎಂ-4/ಆ.ಟೆಂಡರ್/ಸಿಆರ್-05(1-10)/2021-22 ದಿನಾಂಕ: 05.08.2021

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2021-22ನೇ ಸಾಲಿಗೆ ತುಮಕೂರು ಜಿಲ್ಲೆಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಆಶ್ರಮ ಶಾಲೆಗಳಿಗೆ ಆಹಾರ ಪದಾರ್ಥಗಳು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪ್ರತ್ಯೇಕವಾಗಿ ತಾಲ್ಲೂಕುವಾರು ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಲ್ಲಿ ಹಾಗೂ website:http://eproc.karnataka.gov.in ರಲ್ಲಿ ದಿನಾಂಕ: 06.08.2021 ರಿಂದ ಪಡೆಯಬಹುದಾಗಿದೆ. e-portal ನಲ್ಲಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 04.10.2021ರ ಮಧ್ಯಾಹ್ನ 3.00ಗಂಟೆಗೆ ನಿಗದಿಪಡಿಸಿದೆ.
DIPR/TUM/211/MCA/2021-22
ಸಹಿ/- ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ತುಮಕೂರು
ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ (ಪೂ&ಪ), ಸಯ್ಯಾಜಿರಾವ್ ರಸ್ತೆ
ಮೈಸೂರು - 570024 ಇ-ಮೇಲ್: eeemccmys@gmail.com
ಸಂಖ್ಯೆ: ಮೈನಪಾ/ಕಾಇಂ(ಪೂ&ಪ)/ಟಿಎನ್-28/21-22 ದಿನಾಂಕ: 06-08-2021

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿವಿಧ ಅನುದಾನದಡಿ ಒಟ್ಟು 47 ಕಾಮಗಾರಿಗಳನ್ನು (ಒಟ್ಟು ಮೊತ್ತ ರೂ.594.53 ಲಕ್ಷಗಳು) (ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 113975, 114086, 112822, 114639, 115888, 111557, 113991, 114651, 112970, 112966, 103037, 111558, 106444, 115680, 84225, 114078, 114095, 110615, 103274, 117011, 116582, 111441, 116696, 111567, 111549, 111532, 111560, 84167, 111555, 111716, 111554, 111535, 111507, 115669, 86086, 99433, 103592, 115708, 118757, 118755, 118754, 118759, 118753, 118752, 118751, 118749, 118747) ಮೇಲೆ ಕಾಣಿಸಿದ ಉಲ್ಲೇಖದನ್ವಯ ಟೆಂಡರನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಚೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 11-08-2021ರ ನಂತರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ https://eproc.karnataka.gov.in ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ: 26-08-2021 ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ: 27-08-2021. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ) ಕಚೇರಿಯಿಂದ ಪಡೆಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಅಭಿಯಂತರರು
ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/YC/386/2021-22

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಸಹಾಯಕ ನಿರ್ದೇಶಕರ ಕಛೇರಿ, ಜಿಲ್ಲಾ ಕ್ರೀಡಾಂಗಣ, ನವನಗರ ಬಾಗಲಕೋಟೆ
ದೂರವಾಣಿ: 08354-235896 E-ail:adyssbgk@gmail.com
ಸಂ:ಸನಿ/ಯುಸಕ್ರೀ/ಬಾ/09/2021-22 ದಿನಾಂಕ:06-08-2021

ಬಾಗಲಕೋಟೆ ಕ್ರೀಡಾ ಶಾಲೆ/ನಿಲಯದ ಕ್ರೀಡಾಪಟುಗಳಿಗೆ ಸೆಪ್ಟೆಂಬರ್-2021 ರಿಂದ ಜೂನ್-2022 ರ ಮಾಹೆಗಾಗಿ ಭೋಜನ ವ್ಯವಸ್ಥೆ ಮಾಡಲು ಅಲ್ಪಾವಧಿ ಇ-ಪ್ರೊಕ್ಯೂರ್ಮೆಂಟ್ ಪ್ರಕಟಣೆ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಬಾಗಲಕೋಟೆ ಜಿಲ್ಲಾ ಕ್ರೀಡಾ ವಸತಿ ಶಾಲೆ/ನಿಲಯಕ್ಕೆ 2021-22 ನೇ ಸಾಲಿನ ಸೆಪ್ಟೆಂಬರ್-2021 ರಿಂದ ಜೂನ್-2022 ರವರೆಗೆ ಕ್ರೀಡಾಪಟುಗಳಿಗೆ ಊಟೋಪಹಾರ ಒದಗಿಸಲು ಅರ್ಹ ಗುತ್ತಿಗೆದಾರರನ್ನು ನೇಮಿಸುವ ಸಲುವಾಗಿ ಇ-ಪ್ರೊಕ್ಯೂರ್ಮೆಂಟ ಪೋರ್ಟಲ್ ಮೂಲಕ 4 ನೇ ಬಾರಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ ಅರ್ಹ ಟೆಂಡರದಾರರು ಈ ಕೆಳ ಕಾಣಿಸಿದ ನಿಯಮಗಳನ್ವಯ ಇ-ಪ್ರೊಕ್ಯೂರ್ಮೆಂಟ ಮೂಲಕ ಟೆಂಡರ್ ಸಲ್ಲಿಸಲು ತಿಳಿಸಲಾಗಿದೆ.

ಟೆಂಡರ್ ಪ್ರಕಟಣೆ ದಿನಾಂಕ	07/08/2021
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	22/08/2021, ಸಮಯ-11.00 ಗಂ
ಟೆಂಡರಿನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	24/08/2021, ಸಮಯ-11.00 ಗಂ
ಟೆಂಡರಿನ ಅರ್ಥಿಕ ಬಿಡ್ ತೆರೆಯುವ ದಿನಾಂಕ	25/08/2021, ಸಮಯ-11.00 ಗಂ
ಟೆಂಡರ ಮೊತ್ತ	72,00,000/-
ಟೆಂಡರಿನ ಇ.ಎಂ.ಡಿ ಮೊತ್ತ ರೂ	1,44,000/-

ಹೆಚ್ಚಿನ ಮಾಹಿತಿಗಾಗಿ https://Eproc.karnataka.gov.in ನಲ್ಲಿ ಹಾಗೂ ಕಚೇರಿಯ ದೂರವಾಣಿ ಸಂಖ್ಯೆ 08354-235896 ಹಾಗೂ 9008338138 ಗೆ ಸಂಪರ್ಕಿಸಬಹುದಾಗಿದೆ
ಸಹಿ/- ಸಹಾಯಕ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಾಗಲಕೋಟೆ
ವಾ.ಸಾ.ಇ/ಬಾ/205/2021-22/ದೇಶಪಾಂಡೆಪಬ್ಲಿಸಿಟಿ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ವಾರಾಹಿ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ಜಿಲ್ಲೆ - 576229
ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:ಕಾಇಂ/ಕನೀನಿನಿ/ವಾಯೋವಿ/ಪಿಬಿ/ಟೆಂಡರ್/03/2021-22/435 ದಿನಾಂಕ: 04.08.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ವೇದಿಕೆ) (Two tender document system)

ವಾರಾಹಿ ನೀರಾವರಿ ಯೋಜನೆಯಡಿ ವಾರಾಹಿ ಯೋಜನಾ ವಿಭಾಗದ ವ್ಯಾಪ್ತಿಯಡಿ ಕಾರ್ಯ ನಿರ್ವಹಿಸುತ್ತಿರುವ ನಂ.1 ವಾರಾಹಿ ಯೋಜನಾ ಉಪವಿಭಾಗ ಕಛೇರಿಗೆ ಸಂಬಂಧಿಸಿದ ಕಾಮಗಾರಿಯನ್ನು ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಸಂಬಂಧಪಟ್ಟ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ವಿವರಗಳು ಕೆಳಕಂಡಂತಿರುತ್ತದೆ.
1) ಗುತ್ತಿಗೆದಾರರು www.eproc.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. 2) ಟೆಂಡರಿಗಿಟ್ಟ ಮೊತ್ತ ರೂ.99.66 ಲಕ್ಷ. 3) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಬಹುದಾದ ದಿ: 09.08.2021 4) ಗುತ್ತಿಗೆದಾರರು ಟೆಂಡರ್ ಬಗ್ಗೆ ಸ್ಪಷ್ಟೀಕರಣ ಕೇಳಲು ದಿ: 12.08.2021 5) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಲು ಕೊನೆಯ ದಿ: 16.08.2021 6) ತಾಂತ್ರಿಕ ಬಿಡ್‌ನ್ನು ತೆರೆಯುವ ದಿ: 18.08.2021 ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in, www.knnlindia.com ಅಂತರ್ಜಾಲ ಅಥವಾ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ವಾರಾಹಿ ಯೋಜನಾ ವಿಭಾಗ, ಇವರನ್ನು ಸಂಪರ್ಕಿಸುವುದು.
ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ, www.eproc.karnataka.gov.in ವೆಬ್‌ಸೈಟ್ ನಲ್ಲಿ ಪ್ರಚುರಪಡಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ, ವಾರಾಹಿ ಯೋಜನಾ ವಿಭಾಗ, ಸಿದ್ಧಾಪುರ, ಉಡುಪಿ ಜಿಲ್ಲೆ
DIPR/UDUPI/MCA/270/21-22 Dt: 07.08.2021

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಗದಗ-582101
ದೂರವಾಣಿ : 08372-237300, 236009 ಫ್ಯಾಕ್ಸ್ : 08372-236135
e-mail : deo.gadag@gmail.com
ನಂ: ADMIN/OUTSOURCE/CR-57/h1/2021-22 ದಿನಾಂಕ : 07-08-2021

ಇ-ಟೆಂಡರ ಪ್ರಕಟಣೆ

ಗದಗ ಜಿಲ್ಲಾಡಳಿತ ಭವನದ ನಿರ್ವಹಣೆಗೆ ನೋಂದಾಯಿತ ಏಜನ್ಸಿ/ ಸಂಸ್ಥೆಗಳಿಂದ eProcurement ಮೂಲಕ eProcurement No. ADM/OUTSOURCE/CR-57/h1/2021-22 ನೇದ್ದಲ್ಲಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ ಸಲ್ಲಿಸಲು ದಿನಾಂಕ : 24-08-2021 ಅಂತಿಮ ದಿನವಾಗಿದ್ದು ಆಸಕ್ತ ಏಜನ್ಸಿ/ ಸಂಸ್ಥೆಯವರು eProcurement ಮೂಲಕ ಟೆಂಡರ್ ಸಲ್ಲಿಸಬಹುದಾಗಿದೆ.
ವಾಸಾಸಂಇ/ಗದಗ/ಎಂ.ಸಿ.ಎ/198/21-22 ಸಹಿ/- ಜಿಲ್ಲಾಧಿಕಾರಿಗಳು, ಗದಗ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಧಾರವಾಡ ವಿಭಾಗ, ಧಾರವಾಡ : ವಾಣಿಜ್ಯ ಶಾಖೆ

ಇ-ಟೆಂಡರ್ ಪ್ರಕಟಣೆ ಸಂಖ್ಯೆ:03/2021
(ಇ-ಪ್ರೊಕ್ಯೂರಮೆಂಟ್ ಮೂಲಕ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಧಾರವಾಡ ವಿಭಾಗ ವ್ಯಾಪ್ತಿಯ ವಿವಿಧ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ/ಆಗಲಿರುವ ವಾಣಿಜ್ಯ ಮಳಿಗೆಗಳು, ಶುದ್ಧ ಕುಡಿಯುವ ನೀರಿನ ಘಟಕಗಳು, ಹಾಗೂ ಸ್ವಚ್ಛತಾ ಗುತ್ತಿಗೆಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿ : 06/08/2021 ರಿಂದ ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್-ಕಂ-ಹರಾಜು ಆಹ್ವಾನಿಸಲಾಗಿದೆ, ಟೆಂಡರ್-ಕಂ-ಹರಾಜು ದಸ್ತಾವೇಜಗಳನ್ನು ದಿನಾಂಕ : 24/08/2021ರ ವೇಳೆ: 17:00 ವರೆಗೆ ಇ-ಪ್ರೊಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ "http/www/eproc.karnataka.in" ಮೂಲಕ ಡೌನಲೋಡ ಮಾಡಿಕೊಳ್ಳಬಹುದು, ದಿನಾಂಕ : 26/08/2021ರ ವೇಳೆ 17:00 ಘಂಟೆಯವರೆಗೆ ಆನ್ ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿರುತ್ತದೆ. ದಿನಾಂಕ : 27/08/2021 ರಂದು 11:00 ಗಂಟೆಗೆ ಇ-ಟೆಂಡರ್ ತೆರೆಯಲಾಗುವುದು. ಇ-ಪ್ರೊಕ್ಯೂರಮೆಂಟ್ ಸೆಲ್‌ನಿಂದ DSC (Digital Signature Certificate) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. **ಬಿಡ್‌ದಾರರು ಸದರಿ ಮಳಿಗೆಗಳ ವಾಸ್ತವಿಕ ಸ್ಥಿತಿಗತಿ/ವಿಸ್ತೀರ್ಣಗಳ ಕುರಿತು ನಿಖರವಾಗಿ ಅರಿತುಗೊಂಡು ಬಿಡ್ ಮಾಡುವುದು** ಮತ್ತು ಹೆಚ್ಚಿನ ಮಾಹಿತಿ/ವಿವರಗಳಿಗಾಗಿ ವಿಭಾಗೀಯ ಕಚೇರಿ, ವಾಕರಸಾ ಸಂಸ್ಥೆ, ಧಾರವಾಡ ವಿಭಾಗ ಧಾರವಾಡ ರವರನ್ನು ಸಂಪರ್ಕಿಸಲು ಕೋರಲಾಗಿದೆ.
❖ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 7760982552 / 7760996271 ಸಂಪರ್ಕಿಸಬಹುದಾಗಿದೆ.
ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ವಾ.ಕ.ರ.ಸಾ.ಸಂಸ್ಥೆ, ಧಾರವಾಡ ವಿಭಾಗ
ವಾಸಾಸಂಇ/ಧಾ/ಎಂಸಿಎ/377/2021-22

GTTC
ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ
ಭವಿಷ್ಯದ ತಂತ್ರಜ್ಞಾನಕ್ಕಾಗಿ ಕೌಶಲ್ಯ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ
GOVERNMENT TOOL ROOM & TRAINING CENTRE
GOLDEN YEARS GOLDEN JUBILEE 50
ಪ್ರವೇಶ ಪ್ರಕಟಣೆ : 2021-22
ಡಿಪ್ಲೋಮಾ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಜಿಟಿಟಿಸಿ ಎಂದರೇನು..?
ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ವು, 1972ರಲ್ಲಿ ಸ್ಥಾಪನೆಗೊಂಡು, ರಾಜ್ಯಾದ್ಯಂತ 28 ಡಿಪ್ಲೋಮಾ ಕಾಲೇಜುಗಳನ್ನು ಹೊಂದಿದ್ದು, ಡಿಪ್ಲೋಮಾ ಮತ್ತು ಪೋಸ್ಟ್ ಡಿಪ್ಲೋಮಾ ಹಾಗೂ ಎಮ್.ಟೆಕ್ ಕೋರ್ಸ್‌ಗಳನ್ನು ನಡೆಸುವ "AICTE" ಯಿಂದ ಅನುಮೋದನೆಗೊಂಡ ಅತ್ಯುನ್ನತ ತಾಂತ್ರಿಕ ಶಿಕ್ಷಣ ಸಂಸ್ಥೆಯಾಗಿದೆ. ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಆಶ್ರಯದಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಜಿಟಿಟಿಸಿ ಡಿಪ್ಲೋಮಾ ಕೋರ್ಸ್‌ಗಳ ವಿಶೇಷತೆ
- ಜಿಟಿಟಿಸಿ ಡಿಪ್ಲೋಮಾ ಕೋರ್ಸುಗಳನ್ನು ಕ್ಲಾಸ್‌ರೂಮ್ ತರಬೇತಿಗಳಿಗಷ್ಟೇ ಸೀಮಿತಗೊಳಿಸದೆ ಪ್ರಾಯೋಗಿಕ ಹಾಗೂ ರಚನಾತ್ಮಕ ಕಲಿಕೆಗೆ ಒತ್ತು ನೀಡಿ ರೂಪಿಸಲಾಗಿದೆ.
- ವಿದ್ಯಾರ್ಥಿಗಳಿಗೆ ಪಠ್ಯಕ್ರಮಗಳ ಜೊತೆಗೆ ಅತ್ಯಾಧುನಿಕ ಯಂತ್ರೋಪಕರಣಗಳಾದ ಸಿ.ಎನ್.ಸಿ. ಯಂತ್ರಗಳು, - ರೋಬೋಟ್‌ಗಳು, 3ಡಿ ಮುದ್ರಕಗಳು, ಸಿ.ಎಮ್.ಎಮ್ ಇತ್ಯಾದಿಗಳನ್ನು ಬಳಸಿ ಕಲಿಸಿಕೊಡಲಾಗುತ್ತದೆ.
- ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ವಿನ್ಯಾಸ ಮತ್ತು ಸಿಮ್ಯುಲೇಶನ್ ಸಾಫ್ಟ್‌ವೇರ್‌ಗಳನ್ನು ಬಳಸಿ ಪಾಠ ಮಾಡಲಾಗುತ್ತದೆ.
- ಕೈಗಾರಿಕೆ ಮತ್ತು ಕಂಪನಿಗಳ ಸಮಾಲೋಚನೆಯೊಂದಿಗೆ ಪಠ್ಯಕ್ರಮವನ್ನು ಇಂದಿನ ಮಾರುಕಟ್ಟೆಗಳ ಅಗತ್ಯಗಳಿಗನುಗುಣವಾಗಿ ವಿನ್ಯಾಸಗೊಳಿಸಲಾಗಿದೆ.
- ಜಿಟಿಟಿಸಿ ಡಿಪ್ಲೋಮಾ, ಪಿ.ಡಿ.ಟಿ.ಡಿ ಮತ್ತು ಎಮ್.ಟೆಕ್ ಇನ್ ಟೂಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇದುವರೆಗೂ ಕೈಗಾರಿಕೆಗಳಲ್ಲಿ ಉತ್ತಮ ಉದ್ಯೋಗಾವಕಾಶಗಳಿವೆ. ದೇಶ, ವಿದೇಶಗಳಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಇರುವ ಬೇಡಿಕೆಯೇ ಇದಕ್ಕೆ ಸಾಕ್ಷಿಯಾಗಿದೆ.

"ಜಿಟಿಟಿಸಿ ಪ್ರಾರಂಭದಿಂದ ಇಲ್ಲಿಯವರೆಗೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶವನ್ನು ಪಡೆದುಕೊಳ್ಳಲು ನೆರವಾಗಿದೆ"
ಜಿಟಿಟಿಸಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿದವರಿಗೆ ಲ್ಯಾಟರಲ್ ಎಂಟ್ರಿ ಮೂಲಕ ಇಂಜನಿಯರಿಂಗ್ ಕೋರ್ಸ್‌ಗಳಿಗೆ ದ್ವಿತೀಯ ವರ್ಷಕ್ಕೆ ನೇರ ಪ್ರವೇಶ ಹೊಂದಲು ಅವಕಾಶವಿರುತ್ತದೆ
ಎಸ್.ಸಿ/ಎಸ್.ಟಿ, ಒಬಿಸಿ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಸೌಲಭ್ಯವಿರುತ್ತದೆ
ಕೈಗಾರಿಕಾ ಪ್ರಾಯೋಜಿತ ಅಭ್ಯರ್ಥಿಗಳಿಗಾಗಿ ಡಿಪ್ಲೋಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್ ಕೋರ್ಸ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ.

ಜಿಟಿಟಿಸಿ ಡಿಪ್ಲೋಮಾ ಕೋರ್ಸ್‌ಗಳು

ತರಬೇತಿ ಕಾರ್ಯಕ್ರಮಗಳು	ವಿದ್ಯಾರ್ಹತೆ	ತರಬೇತಿಯ ಅವಧಿ (ವರ್ಷಗಳಲ್ಲಿ)	ಕೇಂದ್ರಗಳು
ಡಿಪ್ಲೋಮಾ ಇನ್ ಟೂಲ್ & ಡೈ ಮೇಕಿಂಗ್ (DTDM)	10ನೇ ತರಗತಿ	3+1	ಜಿಟಿಟಿಸಿಯ 28 ಕೇಂದ್ರಗಳು
ಡಿಪ್ಲೋಮಾ ಇನ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್ (DPM)	10ನೇ ತರಗತಿ	3+1	ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರಗಿ, ಧಾರವಾಡ ಮತ್ತು ಮಂಗಳೂರು
ಡಿಪ್ಲೋಮಾ ಇನ್ ಮೆಕ್ಯಾಟ್ರಾನಿಕ್ಸ್ (DMCH)	10ನೇ ತರಗತಿ	3+1	ಬೆಂಗಳೂರು, ಗೌರಿಬಿದನೂರು, ಚಿಕ್ಕೋಡಿ, ಗೋಕಾಕ್, ಉಡುಪಿ, ಚಿತ್ರದುರ್ಗ, ಚಳ್ಳಕೆರೆ ಕೊಪ್ಪಳ ಮತ್ತು ಯಾದಗಿರಿ
ಡಿಪ್ಲೋಮಾ ಇನ್ ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಇಂಜಿನಿಯರಿಂಗ್ (DEC)	10ನೇ ತರಗತಿ	3	ಬೆಂಗಳೂರು

ಕಡ್ಡಾಯ ಒಂದು ವರ್ಷದ ಇಂಟರ್ನ್‌ಶಿಪ್ ತರಬೇತಿಯಿಂದಾಗಿ ವಿದ್ಯಾರ್ಥಿಗಳು ಕೈಗಾರಿಕಾ ವಾತಾವರಣಕ್ಕೆ ಹೊಂದಿಕೊಳ್ಳಲು ಸುಲಭವಾಗುತ್ತದೆ. ಈ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಸಹ ನೀಡಲಾಗುತ್ತದೆ.

ಜಿಟಿಟಿಸಿ ಡಿಪ್ಲೋಮಾ ಕೋರ್ಸುಗಳು ಎಐಸಿಟಿಇ (AICTE) ಹಾಗೂ ಡಿಟಿಇ (DTE) ಯಿಂದ ಅನುಮೋದಿತಗೊಂಡಿವೆ.

■ ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ
(DTE/AICTE ನಿಯಮಗಳ ಅನ್ವಯ ಪ್ರವೇಶ ಮಾನದಂಡಗಳಿರುತ್ತವೆ). ಅರ್ಹತೆ: 10ನೇ ತರಗತಿ ಅಥವಾ CBSE, ICSE ಯಲ್ಲಿ ತತ್ಸಮಾನ ವಿದ್ಯಾರ್ಹತೆ ಪಡೆದಿರಬೇಕು. ಪ್ರವೇಶ: ಮೆರಿಟ್-ಕಮ್ ರೋಸ್ಟರ್ ಸಿಸ್ಟಂ ಮತ್ತು ಕೌನ್ಸೆಲಿಂಗ್ ಮೂಲಕ [ವಿದ್ಯಾರ್ಥಿಯು ಕರ್ನಾಟಕದಲ್ಲಿ ಕನಿಷ್ಠ 5 ವರ್ಷಗಳ ಅವಧಿ ಅಧ್ಯಯನ ಮಾಡಿರಬೇಕು]
■ ಐ.ಟಿ.ಐ ಪೂರ್ಣಗೊಳಿಸಿದ ಅರ್ಹ ಅಭ್ಯರ್ಥಿಗಳಿಗೆ 2ನೇ ವರ್ಷದ ಡಿಪ್ಲೋಮಾ ತರಬೇತಿಗಳಿಗೆ ನೇರ ಪ್ರವೇಶ

100% Placement ನೆರವು

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಉನಿ.ನ/1103/ಎಂಸಿಎ/2021-22

ಸೀಮಿತ ಪ್ರವೇಶಗಳು ಮಾತ್ರ. ಬೇಗನೇ ಅವಕಾಶವನ್ನು ಉಪಯೋಗಿಸಿಕೊಳ್ಳಿರಿ

ಕರ್ನಾಟಕ ರಾಜ್ಯಾದ್ಯಂತ ಜಿಟಿಟಿಸಿ ಡಿಪ್ಲೋಮಾ ಕಾಲೇಜುಗಳು 28
ಬೆಂಗಳೂರು । ಮೈಸೂರು । ಹಾಸನ । ಮಂಗಳೂರು । ಕಲಬುರಗಿ । ಬೆಳಗಾವಿ । ದಾಂಡೇಲಿ । ಹೊಸಪೇಟೆ । ಹರಿಹರ । ಧಾರವಾಡ । ಕೂಡಲಸಂಗಮ । ಮದ್ದೂರು । ಕನಕಪುರ । ಲಿಂಗಸುಗೂರು । ಗುಂಡ್ಲುಪೇಟೆ । ಕಡೂರು । ಹುಮ್ನಾಬಾದ್ । ಕೋಲಾರ । ತುಮಕೂರು । ಶಿವಮೊಗ್ಗ । ಗೌರಿಬಿದನೂರು । ಚಿಕ್ಕೋಡಿ । ಗೋಕಾಕ್ । ಉಡುಪಿ । ಯಾದಗಿರಿ । ಚಿತ್ರದುರ್ಗ । ಚಳ್ಳಕೆರೆ । ಕೊಪ್ಪಳ

ಸಹಾಯವಾಣಿ: 1800-572-6252
ವೆಬ್‌ಸೈಟ್: www.gttc.co.in
www.karunadu.karnataka.gov.in/gttc
ಪ್ರವೇಶ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
GTTC Karnataka

ಎಸ್ಸೆಸ್ಸೆಲ್ಸಿ ಫಲಿತಾಂಶ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2020–21ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಸೋಮವಾರ (ಆಗಸ್ಟ್ 9) ಮಧ್ಯಾಹ್ನ 3.30ಕ್ಕೆ ಪ್ರಕಟವಾಗಲಿದೆ.

ಮಂಡಳಿಯ ಸಭಾಂಗಣದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಫಲಿತಾಂಶ ಪ್ರಕಟಿಸಲಿದ್ದಾರೆ ಎಂದು ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ದೇಶಕಿ ಸುಮಂಗಲಾ ತಿಳಿಸಿದ್ದಾರೆ.

ಈ ಬಾರಿ ಎಲ್ಲ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡಲು ಸರ್ಕಾರ ಈಗಾಗಲೇ ನಿರ್ಧರಿಸಿದೆ. ಕೋರ್ ವಿಷಯಗಳಿಗೆ ಜುಲೈ 19 ಮತ್ತು ಭಾಷಾ ವಿಷಯಗಳಿಗೆ 22ರಂದು ಪರೀಕ್ಷೆ ನಡೆದಿತ್ತು.

ಭಾರತದಲ್ಲಿ ಜಾನ್ಸನ್ ಆ್ಯಂಡ್ ಜಾನ್ಸನ್ ಸಂಸ್ಥೆಯ ಒಂದೇ ಡೋಸ್ ಲಸಿಕೆ ಶೀಘ್ರದಲ್ಲಿ ಲಭ್ಯ

ಮತ್ತೊಂದು ಕೋವಿಡ್ ಲಸಿಕೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಜಾನ್ಸನ್ ಆ್ಯಂಡ್ ಜಾನ್ಸನ್ ಕಂಪನಿಯ ಒಂದೇ ಡೋಸ್ ಕೋವಿಡ್ ಲಸಿಕೆಯ ತುರ್ತು ಬಳಕೆಗೆ ಭಾರತದಲ್ಲಿ ಅನುಮೋದನೆ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವೀಯ ಶನಿವಾರ ತಿಳಿಸಿದ್ದಾರೆ. ಇದು ಕೊರೊನಾ ಸೋಂಕಿನ ವಿರುದ್ಧ ದೇಶದ ಸಾಮೂಹಿಕ ಹೋರಾಟಕ್ಕೆ ಮತ್ತಷ್ಟು ಬಲ ತುಂಬಿದೆ ಎಂದು ಸಚಿವರು ಟ್ವೀಟ್ ಮಾಡಿದ್ದಾರೆ.

ಅಮೆರಿಕ ಮೂಲದ ಈ ಔಷಧ ಕಂಪನಿಯು, ತುರ್ತು ಬಳಕೆಗೆ ಅನುಮತಿ ನೀಡುವಂತೆ ಕೋರಿ ಶುಕ್ರವಾರ ಅರ್ಜಿ ಸಲ್ಲಿಸಿತ್ತು. ಅದೇ ದಿನ ಭಾರತದ ಔಷಧ ನಿಯಂತ್ರಕರು (ಡಿಸಿಜಿಐ) ಅನುಮೋದನೆ ನೀಡಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಾಂಕ್ರಾಮಿಕ ರೋಗಕ್ಕೆ ಅಂತ್ಯಹಾಡುವ ಉದ್ದೇಶದಿಂದ ಕೋವಿಡ್ ಲಸಿಕೆಗಳು ವೇಗವಾಗಿ ಜನರಿಗೆ ಲಭ್ಯವಾಗುವಂತೆ ಮಾಡುವಲ್ಲಿ ಸರ್ಕಾರ ತೆಗೆದುಕೊಂಡ ಈ ನಿರ್ಧಾರ ಪ್ರಮುಖ ಹೆಜ್ಜೆ ಎಂದು ಕಂಪನಿ ಪ್ರತಿಕ್ರಿಯಿಸಿದೆ.

‘18 ವರ್ಷ ಹಾಗೂ ಅದಕ್ಕೆ ಮೇಲ್ಪಟ್ಟ ವಯೋಮಾನದವರಿಗೆ ಒಂದೇ ಡೋಸ್ ಲಸಿಕೆ ನೀಡಲಾಗುತ್ತದೆ. ಇದರ ತುರ್ತು ಬಳಕೆಗೆ ಭಾರತದ ಅನುಮೋದನೆ ನೀಡಿದ್ದು ಸಂತೋಷಕರ’ ಎಂದು ಜಾನ್ಸನ್ ಆ್ಯಂಡ್ ಜಾನ್ಸನ್ ತಿಳಿಸಿದೆ.

> **ಐದು ಲಸಿಕೆಗಳಿಗೆ ಅನುಮತಿ**
>
> ದೇಶದಲ್ಲಿ ಈವರೆಗೆ ಐದು ಲಸಿಕೆಗಳು ತುರ್ತು ಬಳಕೆಗೆ ಅನುಮೋದನೆ (ಇಯುಎ) ಪಡೆದಿವೆ. ಸೀರಂ ಇನ್‌ಸ್ಟಿಟ್ಯೂಟ್‌ನ ಕೋವಿಶೀಲ್ಡ್, ಭಾರತ್ ಬಯೋಟೆಕ್‌ನ ಕೋವ್ಯಾಕ್ಸಿನ್, ರಷ್ಯಾದ ಸ್ಪುಟ್ನಿಕ್–ವಿ, ಮೊಡೆರ್ನಾ ಮತ್ತು ಈಗ ಜಾನ್ಸನ್ ಆ್ಯಂಡ್ ಜಾನ್ಸನ್ (ಜೆ&ಜೆ) ಕಂಪನಿಯ ಲಸಿಕೆಗಳು ಈ ಪಟ್ಟಿಯಲ್ಲಿವೆ.

‘ಮೂರನೇ ಹಂತದ ಕ್ಲಿನಿಕಲ್ ಪ್ರಯೋಗದ ಪರಿಣಾಮವನ್ನು ಆಧರಿಸಿ ಔಷಧದ ತುರ್ತು ಬಳಕೆಗೆ ಅನುಮೋದನೆ ನೀಡಲಾಗಿದೆ. ಅಧ್ಯಯನ ಮಾಡಿದ ಎಲ್ಲಾ ಪ್ರದೇಶಗಳಲ್ಲೂ, ಲಸಿಕೆಯು ಶೇ 85ರಷ್ಟು ಪರಿಣಾಮಕಾರಿಯಾಗಿದೆ ಹಾಗೂ ಕೋವಿಡ್–19 ಸಂಬಂಧಿತ ಸಮಸ್ಯೆಗಳಿಂದ ಆಸ್ಪತ್ರೆಗೆ ದಾಖಲಾಗುವುದನ್ನು ತಡೆಯುವಲ್ಲಿ ಹಾಗೂ ಸಂಭಾವ್ಯ ಸಾವಿನಿಂದ ರಕ್ಷಣೆ ನೀಡುವಲ್ಲಿ ಪರಿಣಾಮಕಾರಿಯಾಗಿರುವುದು ಸಾಬೀತಾಗಿದೆ. ಲಸಿಕೆ ತೆಗೆದುಕೊಂಡ 28 ದಿನಗಳ ಬಳಿಕ ಅದರ ಪರಿಣಾಮ ಶುರುವಾಗುತ್ತದೆ’ ಎಂದು ಕಂಪನಿ ವಕ್ತಾರರು ತಿಳಿಸಿದ್ದಾರೆ.

ವಯಸ್ಸಿನ ಆಧಾರದ ಮೇಲೆ ಎರಡು ಗುಂಪುಗಳನ್ನು ಮಾಡಿ, ಸುಮಾರು 600 ಜನರ ಮೇಲೆ ಲಸಿಕೆಯ 3ನೇ ಹಂತದ ಕ್ಲಿನಿಕಲ್ ಪ್ರಯೋಗ ನಡೆಸಲು ಕಂಪನಿ ಅನುಮೋದನೆ ಕೋರಿತ್ತು. ಆದರೆ ಜುಲೈ 29ರಂದು ತನ್ನ ಅರ್ಜಿ ವಾಪಸ್ ಪಡೆದಿತ್ತು.

‘ಆದರೆ, ಕೇಂದ್ರ ಸರ್ಕಾರದ ಹೊಸಮಾರ್ಗಸೂಚಿ ಪ್ರಕಾರ ಅರ್ಜಿಯನ್ನು ವಾಪಸ್ ಪಡೆಯಿತು. ಬೇರೊಂದು ದೇಶದ ಔಷಧ ನಿಯಂತ್ರಕರಿಂದ ಲಸಿಕೆಗೆ ಪ್ರಮಾಣಪತ್ರ ಸಿಕ್ಕಿದ್ದರೆ, ಮತ್ತೆ ಭಾರತದಲ್ಲಿ ಕ್ಲಿನಿಕಲ್ ಪ್ರಯೋಗ ನಡೆಸಲು ವಿನಾಯಿತಿ ನೀಡಲಾಗುತ್ತದೆ ಎಂದು ಸರ್ಕಾರ ತನ್ನ ಹೊಸ ಮಾರ್ಗಸೂಚಿಯಲ್ಲಿ ತಿಳಿಸಿತ್ತು’ ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಮೆರಿಕ, ಬ್ರಿಟನ್, ಯುರೋಪ್ ಮತ್ತು ಜಪಾನ್‌ನ ಔಷಧ ನಿಯಂತ್ರಕರಿಂದ ನಿರ್ಬಂಧಿತ ಬಳಕೆಗಾಗಿ ಅನುಮೋದಿಸಲಾಗಿರುವ ಲಸಿಕೆಗಳು ಅಥವಾ ವಿಶ್ವ ಆರೋಗ್ಯ ಸಂಸ್ಥೆಯ ತುರ್ತು ಬಳಕೆಯ ಪಟ್ಟಿಯಲ್ಲಿ ಇರುವ ಲಸಿಕೆಗಳು ಭಾರತದಲ್ಲಿ ಕ್ಲಿನಿಕಲ್ ಪ್ರಯೋಗಗಳನ್ನು ನಡೆಸಬೇಕಾಗಿಲ್ಲ ಎಂದು ಸರ್ಕಾರ ತಿಳಿಸಿತ್ತು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್ ಬುಕ್, ಯೂ ಟ್ಯೂಬ್, ಟ್ವಿಟರ್ ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಕ್ಲಬ್ ಹೌಸ್

ಕವಿತೆ ಬರೆಯುವ ಕಷ್ಟ- ಸುಖ

ಹೀಗೊಂದು ಆಪ್ತ ಮಾತುಕತೆ

ಭಾಗವಹಿಸುವವರು: ಶಶಿಕಲಾ ವಸ್ತ್ರದ, ಎಂ. ಆರ್. ಕಮಲ, ಶ್ರೀದೇವಿ ಕೆರೆಮನೆ, ನಂದಿನಿ ಹೆದ್ದುರ್ಗ, ಸುಬ್ಬು ಹೊಲೆಯಾರ್, ಆರಿಫ್ ರಾಜಾ ಮತ್ತು ನೀವು

ಬೆಳಿಗ್ಗೆ 10.30 ರಿಂದ 12.30ರವರೆಗೆ

ಪ್ರಜಾವಾಣಿ ಆಲದಮರ

ಪಾಡ್‌ಕಾಸ್ಟ್: ಇಂದಿನ ವಿಶೇಷ- ವೈದ್ಯ ಮಿತ್ರ ಕಥಾ ಸಾಗರ,

ಪ್ರತೀದಿನ: ದಿನದ ಸೂಕ್ತಿ, ವಚನವಾಣಿ, ಸಂಪಾದಕೀಯ, ಪ್ರಚಲಿತ

ನಾಳೆ

ಸಂವಾದ: ರಾಜ್ಯದ ಆರ್ಥಿಕ ಸ್ಥಿತಿ– ಗತಿ ಎತ್ತ ಸಾಗುತ್ತಿದೆ?

ಭಾಗವಹಿಸುವವರು: ಆರ್.ಎಸ್. ದೇಶಪಾಂಡೆ, ನಿವೃತ್ತ ನಿರ್ದೇಶಕ- ಐಸೆಕ್

ಕೆ.ಸಿ. ರಘು, ಸಾರ್ವಜನಿಕ ನೀತಿ ವಿಶ್ಲೇಷಕ

ಪಿ.ಎಂ.ರಘುನಂದನ್, ಹಿರಿಯ ಪತ್ರಕರ್ತ

ಸೋಮವಾರ ಬೆಳಿಗ್ಗೆ 11ರಿಂದ 12ರವರೆಗೆ

7 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿದ್ದು, ಕರಾವಳಿ ಮತ್ತು ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಆ.8 ಮತ್ತು 9ರಂದು ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಕರಾವಳಿಯಲ್ಲಿ ಗಂಟೆಗೆ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, 3.6 ಮೀಟರ್‌ಗಳಷ್ಟು ಎತ್ತರದ ಅಲೆಗಳು ಏಳುವ ಸೂಚನೆ ಇದ್ದು, ಮೀನುಗಾರರು ಇದೇ 11ರವರೆಗೆ ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ಎಚ್ಚರಿಸಿದೆ.

ಒಳನಾಡಿನಲ್ಲಿ ಆ.10ರಿಂದ 12ರ ವರೆಗೆ ಮಳೆ ಪ್ರಮಾಣ ಕಡಿಮೆ ಇರಲಿದೆ ಎಂದು ಇಲಾಖೆ ತಿಳಿಸಿದೆ.

ಮಳೆ–ಎಲ್ಲಿ, ಎಷ್ಟು?: ಸುಬ್ರಹ್ಮಣ್ಯ, ಆಗುಂಬೆಯಲ್ಲಿ ಶನಿವಾರ ತಲಾ 10 ಸೆಂ.ಮೀ ಮಳೆಯಾಗಿದೆ. ಮಡಿಕೇರಿ 9, ಬೆಳ್ತಂಗಡಿ 7 ಸೆಂ.ಮೀ. ಮಳೆಯಾಗಿದೆ.

ರೈತರ ಮಕ್ಕಳಿಗೆ ಶಿಷ್ಯವೇತನ

ಪಿಯು ವಿದ್ಯಾರ್ಥಿಗೆ ₹2,500, ಬಾಲಕಿಯರಿಗೆ ₹ 3000

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಮಾಣವಚನ ಸ್ವೀಕರಿಸಿದ ತಕ್ಷಣ ತೆಗೆದುಕೊಂಡಿದ್ದ ನಿರ್ಧಾರದಂತೆ ರೈತರ ಮಕ್ಕಳಿಗೆ ವಿಶೇಷ ಶಿಷ್ಯವೇತನ ನೀಡುವ ಯೋಜನೆ ಜಾರಿಗೆ ಕೃಷಿ ಇಲಾಖೆ ಶನಿವಾರ ಆದೇಶ ಹೊರಡಿಸಿದೆ. ಇದಕ್ಕಾಗಿ ₹ 1,000 ಕೋಟಿಯನ್ನು ವೆಚ್ಚ ಮಾಡಲಾಗುವುದು ಎಂದು ಮುಖ್ಯಮಂತ್ರಿ ಪ್ರಕಟಿಸಿದ್ದಾರೆ.

ಸಾಗುವಳಿ ಮಾಡುತ್ತಿರುವ ಕೃಷಿ ಜಮೀನು ಹೊಂದಿರುವ ರೈತರ ಕುಟುಂಬದ ಮಕ್ಕಳಿಗೆ ಈ ಯೋಜನೆಯಡಿ ವಿಶೇಷ ಶಿಷ್ಯವೇತನ ನೀಡಲಾಗುತ್ತದೆ. ರಾಜ್ಯದ ನೋಂದಾಯಿತ ಶಿಕ್ಷಣ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದಿರುವ ರೈತ ಕುಟುಂಬದ ವಿದ್ಯಾರ್ಥಿಗಳು ಈ ಶಿಷ್ಯವೇತನಕ್ಕೆ ಅರ್ಹರಾಗಿರುತ್ತಾರೆ.

ಪಿಯುಸಿ, ಐಟಿಐ ಅಥವಾ ತತ್ಸಮಾನ ತರಗತಿಗಳಲ್ಲಿ ಓದುತ್ತಿರುವ ಬಾಲಕರಿಗೆ ₹ 2,500 ಮತ್ತು ಬಾಲಕಿಯರಿಗೆ ತಲಾ ₹ 3,000 ಶಿಷ್ಯವೇತನ ದೊರಕಲಿದೆ. ಪದವಿ, ಎಂಬಿಬಿಎಸ್, ಎಂಜಿನಿಯರಿಂಗ್ ಪದವಿ ಹಾಗೂ ಪದವಿಗೆ ಸಮನಾದ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ತಲಾ ₹ 5,000 ಮತ್ತು ವಿದ್ಯಾರ್ಥಿನಿಯರಿಗೆ ತಲಾ ₹ 5,500 ಶಿಷ್ಯವೇತನ ಪ್ರಕಟಿಸಲಾಗಿದೆ.

ಕಾನೂನು ಪದವಿ, ಅರೆ ವೈದ್ಯಕೀಯ, ಬಿ. ಫಾರ್ಮಾ, ನರ್ಸಿಂಗ್ ಮತ್ತು ಇತರ ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ₹ 7,500 ಮತ್ತು ವಿದ್ಯಾರ್ಥಿನಿಯರಿಗೆ ₹ 8,000 ಶಿಷ್ಯವೇತನ ನೀಡಲಾಗುತ್ತದೆ. ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಎಲ್ಲ ಸ್ನಾತಕೋತ್ತರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ₹ 10,000, ವಿದ್ಯಾರ್ಥಿನಿಯರಿಗೆ ₹ 11,000 ಶಿಷ್ಯವೇತನ ಘೋಷಿಸಲಾಗಿದೆ.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಪೋಷಕರು ಸಾಗುವಳಿ ಮಾಡುತ್ತಿರುವ ಕೃಷಿ ಜಮೀನು ಹೊಂದಿರಬೇಕು. ಪೋಷಕರು ಇಲ್ಲವಾದಲ್ಲಿ, ವಿದ್ಯಾರ್ಥಿಗಳ ಹೆಸರಿನಲ್ಲಿ ಕೃಷಿ ಜಮೀನು ಇರಬೇಕು. ಈ ಯೋಜನೆಯಡಿ ಒಬ್ಬ ವಿದ್ಯಾರ್ಥಿ ಒಮ್ಮೆ ಮಾತ್ರ ಶಿಷ್ಯವೇತನ ಪಡೆಯಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರಾಜ್ಯ ಸರ್ಕಾರದ ಅನುದಾನದಲ್ಲಿ ನೀಡುವ ಇತರೆ ಸಾಮಾನ್ಯ ಶಿಷ್ಯವೇತನಗಳನ್ನು ಯೋಜನೆಯ ಫಲಾನುಭವಿಗಳು ಆ ಅವಧಿಯಲ್ಲಿ ಪಡೆಯುವಂತಿಲ್ಲ. ಮೆರಿಟ್, ಅರ್ಹತಾ ಪರೀಕ್ಷೆ, ರ‍್ಯಾಂಕ್ ಆಧಾರದಲ್ಲಿ ನೀಡುವ ಶಿಷ್ಯವೇತನ ಅಥವಾ ಪ್ರಶಸ್ತಿಗಳಿಗೆ ಈ ನಿರ್ಬಂಧ ಅನ್ವಯಿಸುವುದಿಲ್ಲ. ಒಂದು ಸೆಮಿಸ್ಟರ್ ಅಥವಾ ವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡು, ಪುನಃ ಪರೀಕ್ಷೆ ಎದುರಿಸಿದವರು ಈ ಶಿಷ್ಯವೇತನಕ್ಕೆ ಅರ್ಹರಾಗುವುದಿಲ್ಲ ಎಂದು ಷರತ್ತು ವಿಧಿಸಲಾಗಿದೆ.

ಈ ವರ್ಷದಿಂದಲೇ ‘ರಾಷ್ಟ್ರೀಯ ಶಿಕ್ಷಣ ನೀತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ (2021-22) ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬರಲಿದೆ.

ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕುಮಾರ ಜಿ ನಾಯ್ಕ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪಿ. ಪ್ರದೀಪ್ ಮತ್ತು ಇತರ ಹಿರಿಯ ಅಧಿಕಾರಿಗಳ ಜತೆ ಶನಿವಾರ ಸಮಾಲೋಚನೆ ನಡೆಸಿದ ಬಳಿಕ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಈ ವಿಷಯ ತಿಳಿಸಿದ್ದಾರೆ.

ಹೊಸ ನೀತಿಯ ಬಗ್ಗೆ ವಿವರಿಸಿದ ಅಶ್ವತ್ಥನಾರಾಯಣ, ‘ಈ ವರ್ಷ ಬಿ.ಎ, ಬಿ.ಎಸ್ಸಿ ಅಧ್ಯಯನಕ್ಕೆ ಆಯಾ ಕಾಲೇಜುಗಳಲ್ಲಿ ಲಭ್ಯವಿರುವ ಎರಡು ವಿಷಯಗಳನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬೇಕು. ಮೂರನೇ ವರ್ಷದ ಆರಂಭದಲ್ಲಿ ಒಂದು ಐಚ್ಛಿಕ, ಇನ್ನೊಂದು ಐಚ್ಛಿಕವಲ್ಲದ ವಿಷಯವಾಗಿ ಅಥವಾ ಎರಡೂ ವಿಷಯಗಳನ್ನು ಐಚ್ಛಿಕವಾಗಿ ಆಯ್ಕೆಗೆ ಅವಕಾಶವಿದೆ.ಇವುಗಳ ಜೊತೆಗೆ ಕನ್ನಡ ಮತ್ತು ಇನ್ನೊಂದು ಭಾಷಾ ವಿಷಯ ಆಯ್ಕೆ ಮಾಡಿಕೊಳ್ಳಬೇಕು. ಪಿಯುಸಿ ಅಥವಾ 10+2 ಹಂತದಲ್ಲಿ ಕನ್ನಡ ಕಲಿಯದವರಿಗೆ, ಕನ್ನಡ ಮಾತೃಭಾಷೆ ಅಲ್ಲದವರಿಗೆ ಬೇರೆ ಪಠ್ಯಕ್ರಮ ರೂಪಿಸಿ ಬೋಧಿಸಲು ಅವಕಾಶ ನೀಡಲಾಗಿದೆ’ ಎಂದರು.

‘ವಿದ್ಯಾರ್ಥಿ ಪ್ರಥಮ ವರ್ಷದಲ್ಲಿ ರಾಷ್ಟ್ರೀಯ ಕುಶಲತೆಯ ಅರ್ಹತಾ ಚೌಕಟ್ಟಿನ 5ನೇ ಹಂತದ ನಿಗದಿತ ಪಠ್ಯ ಅಧ್ಯಯನ ಮಾಡಿ, ಅವಶ್ಯಕ ಅಂಕಗಳನ್ನು ಗಳಿಸಿ ಕಾರಣಾಂತರಗಳಿಂದ ಅಧ್ಯಯನದಿಂದ ನಿರ್ಗಮಿಸಿದರೆ ಪ್ರಮಾಣಪತ್ರ ನೀಡಲಾಗುವುದು. ಎರಡನೇ ವರ್ಷದ ಅಧ್ಯಯನ ಮುಂದುವರಿಸಿ ರಾಷ್ಟ್ರೀಯ ಕುಶಲತೆಯ ಅರ್ಹತಾ ಚೌಕಟ್ಟಿನ 6ನೇ ಹಂತದ ನಿಗದಿತ ಪಠ್ಯವನ್ನು ಅಧ್ಯಯನ ಮಾಡಿ ನಿರ್ಗಮಿಸಿದರೆ ಡಿಪ್ಲೊಮಾ, ಮೂರನೇ ವರ್ಷದ ಅಧ್ಯಯನ ಮುಂದುವರಿಸಿ 3ನೇ ಹಂತದ ನಿಗದಿತ ಪಠ್ಯವನ್ನು ಅಧ್ಯಯನ ಮಾಡಿದರೆ ಪದವಿ ನೀಡಲಾಗುವುದು’ ಎಂದು ಹೇಳಿದರು.

‘ಅಧ್ಯಯನ ಮಾಡುತ್ತಿರುವ ಸಂಸ್ಥೆಯಲ್ಲಿ ನಾಲ್ಕನೇ ವರ್ಷದ ಅಧ್ಯಯನ ಲಭ್ಯವಿದ್ದರೆ 8ನೇ ಹಂತದಲ್ಲಿ ಆಯ್ಕೆ ಮಾಡಿದ ಐಚ್ಛಿಕ ವಿಷಯಗಳ ಅಧ್ಯಯನ ಮುಂದುವರಿಸಿ ಅಧ್ಯಯನ ಪೂರ್ಣಗೊಳಿಸಿದರೆ ಸ್ನಾತಕ ಆನರ್ಸ್ ಪದವಿ ನೀಡಲಾಗುವುದು. ನಾಲ್ಕನೇ ವರ್ಷದಲ್ಲಿ ಸಂಶೋಧನೆಯು ಅಧ್ಯಯನದ ಭಾಗವಾದರೆ, ಅಂಥ ಸ್ನಾತಕ ಆನರ್ಸ್ ಪದವೀಧರರು ನೇರವಾಗಿ ಪಿಎಚ್.ಡಿ ಅಧ್ಯಯನಕ್ಕೆ ಸೇರಲು ಅರ್ಹರು. ವಿದ್ಯಾರ್ಥಿ ಅಧ್ಯಯನ ಮಾಡುವ ಸಂಸ್ಥೆಯಲ್ಲಿ ಸ್ನಾತಕ ಆನರ್ಸ್ ಪದವಿ ಲಭ್ಯವಿಲ್ಲದಿದ್ದರೆ, ನಾಲ್ಕನೇ ವರ್ಷದ ಸ್ನಾತಕ ಆನರ್ಸ್ ಪದವಿಗೆ ಬೇರೊಂದು ಸಂಸ್ಥೆಯನ್ನು ಸೇರಲು ಅವಕಾಶವಿದೆ’ ಎಂದೂ ವಿವರಿಸಿದರು.

ಎಸ್‌ಸಿ, ಎಸ್‌ಟಿ ಜಮೀನು ಮಾರಾಟ: ಪರಿಷ್ಕೃತ ಸುತ್ತೋಲೆ

ಬೆಂಗಳೂರು: ಸರ್ಕಾರದಿಂದ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡದವರಿಗೆ (ಎಸ್‌ಟಿ) ಮಂಜೂರಾಗಿರುವ ಜಮೀನನ್ನು ಮಾರಾಟ ಮಾಡುವ ಸಂದರ್ಭದಲ್ಲಿ ಜಮೀನಿನ ಮೂಲ ಮಂಜೂರಾತಿದಾರರು ಅಥವಾ ಅವರ ಕಾನೂನುಬದ್ಧ ವಾರಸುದಾರರು ಸಂಬಂಧಪಟ್ಟ ಅಧಿಕಾರಿಯ ಎದುರು ಖುದ್ದು ಹಾಜರಾಗಿ ಅರ್ಜಿ ಸಲ್ಲಿಸಬೇಕು ಎಂದು ಕಂದಾಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಎಸ್‌ಸಿ, ಎಸ್‌ಟಿ ಸಮುದಾಯದವರಿಗೆ ಮಂಜೂರಾಗಿರುವ ಜಮೀನಿನ ಮಾರಾಟದ ವೇಳೆಯಲ್ಲಿ ‘ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಭೂಮಿಗಳ ಪರಭಾರೆ ನಿಷೇಧ) ಕಾಯ್ದೆ -1978’ ನಿಯಮಗಳನ್ನು ಪಾಲಿಸಬೇಕು. ಜೊತೆಗೆ, ಜಮೀನು ಮಾರಾಟ ಪ್ರಕರಣವೊಂದರಲ್ಲಿ ಹೈಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪಿನಲ್ಲಿರುವ ಈ ಅಂಶಗಳನ್ನೂ ಗಂಭೀರವಾಗಿ ಪರಿಗಣಿಸಬೇಕು ಎಂದು ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

KISHORE VAIGYANIK PROTSAHAN YOJANA

किशोर वैज्ञानिक प्रोत्साहन योजना

KVPY

NATIONAL FELLOWSHIPS FOR STUDENTS INTERESTED IN RESEARCH CAREERS

KVPY Fellowship-2021

- **Stream SA**: Students enrolled in/planning to join XI Standard (Science Subjects) during the academic year 2021–22 and aspiring to join an undergraduate program in basic sciences (B.Sc/B.S./B.Stat./B.Math./Int. M.Sc./Int. M.S.) during the academic year 2023-24.
- **Stream SX**: Students enrolled in/planning to join XII standard (Science Subjects) during the academic year 2021–22 and aspiring to join an undergraduate program in basic sciences (B.Sc./B.S./B.Stat./B.Math./Int. M.Sc./Int. M.S.) during the academic year 2022-23.
- **Stream SB**: Students enrolled in/planning to join First Year B.Sc./B.S./B.Stat./B.Math./Int. M.Sc./Int. M.S. in basic sciences during the academic year 2021-22.

Rank certificates will also be available to an extended list of candidates.

1	Start of online submission of Application	12th July 2021@ 1700 Hrs.
2	Last date for closing of online Application	25th August 2021
3	KVPY Aptitude Test	7th November 2021

For more details please visit: http:// www.kvpy.iisc.ac.in

Convener, KVPY, IISc, Bengaluru-560 012

ಕರಾವಳಿ, ಮಲೆನಾಡು ಭಾಗದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಉತ್ತಮ ಮಳೆಯಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಮನೆಗಳು ಪೂರ್ಣ ಹಾಗೂ 6 ಮನೆಗಳು ಭಾಗಶಃ ಹಾನಿಯಾಗಿವೆ. 46 ವಿದ್ಯುತ್ ಕಂಬಗಳು ಜಖಂಗೊಂಡಿವೆ.

ಸುಬ್ರಹ್ಮಣ್ಯ ಬಳಿ ಯಡಕುಮೇರಿಯಲ್ಲಿ ಶುಕ್ರವಾರ ರಾತ್ರಿ ರೈಲು ಹಳಿಗೆ ಬಂಡೆ ಉರುಳಿದ್ದು, ಅರ್ಧ ಗಂಟೆ ರೈಲು ಸಂಚಾರ ವಿಳಂಬವಾಗಿತ್ತು. ಕುಮಾರಧಾರ, ನೇತ್ರಾವತಿ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದೆ.

ಉಡುಪಿ ಜಿಲ್ಲೆಯಲ್ಲಿ ಶುಕ್ರವಾರ, ಚಿಕ್ಕಮಗಳೂರು ಜಿಲ್ಲೆ ಮಲೆನಾಡು ಭಾಗದಲ್ಲಿ ಶನಿವಾರ ಸಾಧಾರಣ ಮಳೆಯಾಗಿದೆ. ಶೃಂಗೇರಿ ತಾಲ್ಲೂಕು ಬೆಟ್ಟಗೆರೆಯಲ್ಲಿ ಪ್ರಯಾಣಿಕರ ತಂಗುದಾಣ ಕುಸಿದಿದೆ. ತುಂಗಾ,ಭದ್ರಾ, ಹೇಮಾವತಿ ನದಿಗಳಲ್ಲಿ ಹರಿವು ಏರಿದೆ.

ಕಾರವಾರ ವರದಿ: ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಂಗಾರು ಮತ್ತೆ ಚುರುಕಾಗಿದ್ದು, ಕಾರವಾರ ಸೇರಿ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಯಿತು. ಅಂಕೋಲಾ, ಹೊನ್ನಾವರ, ಭಟ್ಕಳ, ಮುಂಡಗೋಡ, ಶಿರಸಿ ಭಾಗದಲ್ಲಿ ಮಳೆಯಾಗಿದೆ.

ಶಿವಮೊಗ್ಗ ವರದಿ: ಜಿಲ್ಲೆಯ ವಿವಿಧೆಡೆ ಶನಿವಾರ ಸಾಧಾರಣ ಮಳೆಯಾಗಿದೆ. ಕಳೆದ 24 ಗಂಟೆಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 14.27 ಮಿ.ಮೀ ಸರಾಸರಿ ಮಳೆಯಾಗಿದೆ.

ಕೊಡಗು ವರದಿ: ಜಿಲ್ಲೆಯ ಮಡಿಕೇರಿ, ನಾಪೋಕ್ಲು, ಕಕ್ಕಬ್ಬೆ, ಚೇರಂಬಾಣೆ, ಬಕ್ಕ, ಭಾಗಮಂಡಲ ಭಾಗದಲ್ಲಿ ಶನಿವಾರ ದಿನವಿಡೀ ಮಳೆಯಾಗಿದೆ. ನಿರಂತರ ಮಳೆಯಿಂದ ಮುಕ್ಕೋಡ್ಲು-ಹೆಮ್ಮೆತ್ತಾಳು ಸಣ್ಣ ಸೇತುವೆ ಕುಸಿದಿದೆ.

ಹಾಸನ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ. ಮೈಸೂರು ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ.

ಗರಿಷ್ಠ ಮಳೆ (ಸೆಂ.ಮೀಗಳಲ್ಲಿ)

ಉಡುಪಿ	
ಮೂಡೂರು	12.1
ಇಡು	10.7
ದಕ್ಷಿಣ ಕನ್ನಡ	
ಸುಳ್ಯೇರಿ	11.6
ಚಿಕ್ಕಮಗಳೂರು	
ಕೆರೆಕಟ್ಟೆ	10.3

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	118.12	20,019	5,369
ಹಾರಂಗಿ	2,859	2,855.85	12,557	9,396
ಕಬಿನಿ	2284.00	2,282.43	12,700	15,000
ಹೇಮಾವತಿ	2,922	2,920.35	11,532	5,950
ಲಿಂಗನಮಕ್ಕಿ	1,819	1,810.80	24,716	-
ಸೂಪಾ (ಮೀ)	564	553.95	16,038	3,365
ಮಾಣಿ	594	584.02	4,867	-
ತುಂಗಭದ್ರಾ	1,633	1,631.95	60,604	56,864
ಮಲಪ್ರಭಾ	2079.5	2,076.40	6,741	1,394
ಘಟಪ್ರಭಾ	2175	2,172.23	13,177	16,649
ಭದ್ರಾ	186	184.7	19,402	18,465
ಆಲಮಟ್ಟಿ (ಮೀ)	519.60	519.12	1,08,844	43,903
ನಾರಾಯಣಪುರ (ಮೀ)	492.25	491.87	80,000	81,010

* ನೆಲಮಟ್ಟದಿಂದ

ಬಾಲಕಿ ಸಾವು

ಚಿಕ್ಕಜಾಜೂರು (ಚಿತ್ರದುರ್ಗ ಜಿಲ್ಲೆ): ಸಮೀಪದ ಬಾಣಗೆರೆ ಗ್ರಾಮದಲ್ಲಿ ಶನಿವಾರ ಬೆಳಿಗ್ಗೆ 5.30ಕ್ಕೆ ಮನೆಯ ಗೋಡೆ ಕುಸಿದಿದ್ದು, ಅರ್ಪಿತಾ (13) ಹೆಸರಿನ ಬಾಲಕಿ ಮೃತಪಟ್ಟಿದ್ದಾಳೆ. ತಂದೆ ರವಿಕುಮಾರ್‌ಗೆ ಗಾಯಗಳಾಗಿವೆ.

ತಾಯಿ ಹಾಗೂ ಮತ್ತೊಬ್ಬ ಮಗಳು ಕಸ ಗುಡಿಸಲು ಹೊರಗೆ ಬಂದಿದ್ದರಿಂದ ಪಾರಾಗಿ ದ್ದಾರೆ. ಮಳೆಯಿಂದಾಗಿ ಗೋಡೆ ಶಿಥಿಲಗೊಂಡು ಬಿರುಕು ಬಿಟ್ಟಿತ್ತು.

ನಿಧನ ವಾರ್ತೆ

ರಾಜಶೇಖರ ಸಿಂಧೂರ

ಸವಣೂರ: ಶಿಗ್ಗಾವಿ–ಸವಣೂರ ಕ್ಷೇತ್ರದ ಮಾಜಿ ಶಾಸಕ ರಾಜಶೇಖರ ಸಿಂಧೂರ (60) ಶನಿವಾರ ಪಟ್ಟಣದ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ ಪತ್ನಿ ಅಲಕಾ, ಪುತ್ರ, ಪುತ್ರಿ ಇದ್ದಾರೆ.

2004ರ ಚುನಾವಣೆಯಲ್ಲಿ ಶಿಗ್ಗಾವಿ-ಸವಣೂರ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಸಿಗದೆ, ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಜಯಗಳಿಸಿದ್ದರು. 2008ರಲ್ಲಿ ಬಸವರಾಜ ಬೊಮ್ಮಾಯಿ ಇದೇ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿದಾಗ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ಈ ಮೂಲಕ ಬಸವರಾಜ ಬೊಮ್ಮಾಯಿ ಅವರಿಗೆ ಗಟ್ಟಿನೆಲೆ ಒದಗಿಸಿಕೊಡುವಲ್ಲಿ ಕಾರಣಕರ್ತರಾದರು.

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಸಾವಯವ ಮಿಷನ್ ನಿರ್ದೇಶಕರಾಗಿ, ಕಾರಡಗಿ ಸುಕ್ಷೇತ್ರದ ವೀರಭದ್ರೇಶ್ವರ ದೇವಸ್ಥಾನದ ಟ್ರಸ್ಟ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಬಿ.ಸಿ.ಪಾಟೀಲ ಸೇರಿ ಹಲವರು ಅಂತಿಮ ದರ್ಶನ ಪಡೆ ದರು. ಪಟ್ಟಣದ ವೀರಶೈವ ರುದ್ರಭೂಮಿ ಯಲ್ಲಿ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿತು.

‘ಇಂದಿರಾ ಕ್ಯಾಂಟೀನ್ ಹೆಸರು ಬದಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದಿರಾ ಕ್ಯಾಂಟೀನ್‌ಗಳ ಹೆಸರನ್ನು ಅನ್ನಪೂರ್ಣೇಶ್ವರಿ ಕ್ಯಾಂಟೀನ್ ಎಂದು ಬದಲಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ಮನವಿ ಮಾಡಿದ್ದೇನೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಟ್ವೀಟ್ ಮಾಡಿದ್ದಾರೆ.

‘ಕನ್ನಡಿಗರು ಆಹಾರ ಸೇವಿಸುವಾಗ ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ಏಕೆ ನೆನಪಿಸಿಕೊಳ್ಳಬೇಕು ಎಂಬುದಕ್ಕೆ ನನಗೆ ಯಾವ ಕಾರಣಗಳೂ ಕಾಣುತ್ತಿಲ್ಲ’ ಎಂದು ಅವರು ಹೇಳಿದ್ದಾರೆ.

ಟ್ವಿಟರ್‌ನಲ್ಲೇ ಈ ಹೇಳಿಕೆಗೆ ಹಲವರು ಆಕ್ಷೇಪ ಎತ್ತಿದ್ದಾರೆ. ಇಂದಿರಾ ಗಾಂಧಿ ಅವರನ್ನು ಚಿಕ್ಕಮಗಳೂರಿನಿಂದ ಲೋಕಸಭೆಗೆ ಆಯ್ಕೆ ಮಾಡಿದ್ದನ್ನು ಕೆಲವರು ನೆನಪಿಸಿದ್ದಾರೆ.

‘ಬೆಂಗಳೂರಿನ ವೀರ ಸಾವರ್ಕರ್ ಮೇಲ್ಸೇತುವೆ ಹೆಸರನ್ನು ರಾಯಣ್ಣ ಮೇಲ್ಸೇತುವೆ ಎಂದು ಬದಲಿಸಿ’ ಎಂಬ ಬೇಡಿಕೆಯನ್ನೂ ಒಬ್ಬರು ಮುಂದಿಟ್ಟಿದ್ದಾರೆ.

> **ಹೆಸರು ಬದಲಿಸಿದರೆ ಹುಷಾರ್: ಕಾಂಗ್ರೆಸ್**
>
> ಇಂದಿರಾ ಗಾಂಧಿ ಕ್ಯಾಂಟೀನ್ ಹೆಸರು ಬದಲಿಸಲಿ ಎಂದು ಸಿ.ಟಿ.ರವಿ ಅವರ ಟ್ವೀಟ್‌ಗೆ ರಾಜ್ಯ ಕಾಂಗ್ರೆಸ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.
>
> ‘ಇಂದಿರಾ ಗಾಂಧಿ ಕ್ಯಾಂಟೀನ್ ಹೆಸರು ಬದಲಿಸಿದರೆ ಪರಿಣಾಮ ನೆಟ್ಟಗಿರುವುದಿಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಗುಡುಗಿದರೆ, ‘ಈ ಪ್ರಯತ್ನ ದ್ವೇಷದ ರಾಜಕಾರಣ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.
>
> ‘ಹೆಸರು ಬದಲಿಸಲು ರವಿ ಸಲಹೆ ಕೊಟ್ಟಿದ್ದಾರೆ. ಹೆಸರು ಬದಲಿಸಲು ಮುಂದಾಗಲಿ, ಆಮೇಲೆ ಕಾಂಗ್ರೆಸಿಗರು ಏನು ಮಾಡುತ್ತಾರೆ ಎಂಬುದನ್ನು ತೋರಿಸುತ್ತೇವೆ’ ಎಂದು ಶಿವಕುಮಾರ್ ಎಚ್ಚರಿಕೆ ನೀಡಿದರು.

ಅಣ್ಣಾಮಲೈಗೆ ರವಿ ಬೆಂಬಲ: ಟೀಕೆ

ಬೆಂಗಳೂರು: ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಿಸುವ ಕರ್ನಾಟಕದ ಯೋಜನೆ ವಿರೋಧಿಸಿ ಉಪವಾಸ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ ಬಿಜೆಪಿ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರ ಟ್ವೀಟ್ ಅನ್ನು ಮರು ಟ್ವೀಟ್ ಮಾಡಿ ಬೆಂಬಲಿಸಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರ ನಡೆಗೆ ತೀವ್ರ ಟೀಕೆವ್ಯಕ್ತವಾಗಿದೆ.

ತಂಜಾವೂರಿನಲ್ಲಿ ಇದೇ 5ರಂದು ನಡೆದ ಉಪವಾಸ ಸತ್ಯಾಗ್ರಹದಲ್ಲಿ ಭಾಗಿಯಾದ ಫೋಟೊಗಳನ್ನು ಹಂಚಿಕೊಂಡಿದ್ದ ಅಣ್ಣಾಮಲೈ, ‘ಯೋಜನೆ ಜಾರಿಗೆ ಒತ್ತಡ ಹೇರದಂತೆ ಕರ್ನಾಟಕದ ಸಹೋದರ, ಸಹೋದರಿಯರಲ್ಲಿ ಮನವಿ ಮಾಡುತ್ತೇನೆ’ ಎಂದು ಸಂದೇಶ ಹಾಕಿದ್ದರು. ಅದನ್ನು ಶಾಸಕರೂ ಆಗಿರುವ ರವಿ ಮರು ಟ್ವೀಟ್ ಮಾಡಿ ಬೆಂಬಲಿಸಿದ್ದಾರೆ.

ಆರ್ಯ ವೈಶ್ಯ ಅಭಿವೃದ್ಧಿ ನಿಗಮದ ಸೌಲಭ್ಯ

ಸಾಲ ಮರುಪಾವತಿಗೆ ಮೊಬೈಲ್ ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ ಸಾಲಸೌಲಭ್ಯ ಪಡೆದಿರುವ ಫಲಾನುಭವಿಗಳು ಆನ್‌ಲೈನ್ ಮೂಲಕವೇ ಮರುಪಾವತಿ ಮಾಡಲು ‘ಮೊಬೈಲ್ ಆ್ಯಪ್’ ಅಭಿವೃದ್ಧಿಪಡಿಸಲಾಗಿದೆ’ ಎಂದು ನಿಗಮದ ಅಧ್ಯಕ್ಷ ಡಿ.ಎಸ್. ಅರುಣ್ ಶನಿವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು, ‘ಫಲಾನುಭವಿಗಳು ಸಾಲ ಮರುಪಾವತಿಗೆ ಜಿಲ್ಲಾ ಕಚೇರಿಗಳಿಗೆ ಪ್ರಯಾಣಿಸುವುದನ್ನು ತಪ್ಪಿಸಲು ಹಾಗೂ ಆರ್ಥಿಕ ವೆಚ್ಚದ ಹೊರೆ ತಗ್ಗಿಸುವ ಉದ್ದೇಶದಿಂದ ಡಿಜಿಟಲ್ ಪಾವತಿಗೆ ಅನುವು ಮಾಡಿಕೊಡಲಾಗಿದೆ’ ಎಂದರು.

‘ಗೂಗಲ್ ಪೇ, ಫೋನ್ ಪೇ, ಪೇಟಿಎಂ ಮೂಲಕ ಫಲಾನುಭವಿಗಳು ಡಿಜಿಟಲ್ ಪಾವತಿ ಮಾಡಬಹುದು. ಈ ಮೊಬೈಲ್ ಆ್ಯಪ್ ಪ್ರಾಯೋಗಿಕ ಹಂತದಲ್ಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶೀಘ್ರದಲ್ಲೇ ಚಾಲನೆ ನೀಡಲಿದ್ದಾರೆ’ ಎಂದರು.

‘ನಿಗಮವು ಕಳೆದ ಎರಡು ವರ್ಷಗಳಲ್ಲಿ ₹15.50 ಕೋಟಿ ಅನುದಾನದಲ್ಲಿ 1,565 ಫಲಾನುಭವಿಗಳಿಗೆ ಸಾಲಸೌಲಭ್ಯ ಒದಗಿಸಿದೆ. ಮೊದಲ ಸಾಲಿನಲ್ಲಿ ₹ 1 ಕೋಟಿಯಷ್ಟು ಮರುಪಾವತಿ ಸ್ವೀಕೃತವಾಗಿದೆ’ ಎಂದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಕೆ.ದೀಪಶ್ರೀ, ‘ನಿಗಮವು 2021-22ನೇ ಸಾಲಿನಲ್ಲಿ ‘ಆರ್ಯ ವೈಶ್ಯ ಆಹಾರ ವಾಹಿನಿ’ ಯೋಜನೆಯಡಿ ಫುಡ್ ಟ್ರಕ್ ಸೌಲಭ್ಯ, ‘ವಾಸವಿ ಜಲಶಕ್ತಿ ಯೋಜನೆ’ಯಡಿ ಕೊಳವೆ ಬಾವಿ ಕೊರೆಸಲು ಸಾಲ, ‘ಜ್ಞಾನ ಜ್ಯೋತಿ ಯೋಜನೆ’ಯಡಿ ಪಿಯುಸಿ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣೆ ಹಾಗೂ ಕೊರೊನಾದಿಂದ ಮೃತಪಟ್ಟ ಫಲಾನುಭವಿಗಳ ಸಾಲಮನ್ನಾ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ’ ಎಂದು ಹೇಳಿದರು.

> **ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ**
>
> ‘ಕರ್ನಾಟಕ ಆರ್ಯ ವೈಶ್ಯ ಮಹಾಸಭಾ ಹಾಗೂ ವಾಸವಿ ಅಕಾಡೆಮಿ ಆಶ್ರಯದಲ್ಲಿ 2022ರ ಯುಪಿಎಸ್‌ಸಿ ಪರೀಕ್ಷೆಯ ಆಕಾಂಕ್ಷಿಗಳಿಗೆ ಉಚಿತವಾಗಿ ತರಬೇತಿ ನೀಡಲಾಗುವುದು. ಈ ಬಾರಿ ಬೇರೆ ಸಮುದಾಯದ ಅಭ್ಯರ್ಥಿಗಳೂ ಸೇರಿದಂತೆ 100 ಮಂದಿಗೆ ತರಬೇತಿ ನೀಡಲು ನಿರ್ಧರಿಸಲಾಗಿದೆ’ ಎಂದು ಡಿ.ಎಸ್.ಅರುಣ್ ತಿಳಿಸಿದರು. ‘ಅರ್ಜಿ ಸಲ್ಲಿಸಲು ಆ.12 ಕೊನೆಯ ದಿನ. ಆಸಕ್ತರು www.vasaviacademy.comನಿಂದ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ 8073499217 ಅನ್ನು ಸಂಪರ್ಕಿಸಬಹುದು’ ಎಂದೂ ಹೇಳಿದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22265383

website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಡಿಪಿಆರ್–03/5327/2021–22 ದಿನಾಂಕ: 05.08.2021

ಟೆಂಡರ್ ಆಹ್ವಾನ ಪ್ರಕಟಣೆ

(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಯೋಜನೆಗೆ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸುವುದಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು / ಸಂಸ್ಥೆಗಳಿಂದ ದ್ವಿ–ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ.

ಕಾಮಗಾರಿಯ ಹೆಸರು: ತುಮಕೂರು ಜಿಲ್ಲೆಯಲ್ಲಿ ಪ್ರಸ್ತಾಪಿತ ಮಧುಗಿರಿ ಕೈಗಾರಿಕಾ ಪ್ರದೇಶದ ರಚನೆಗಾಗಿ ಆರ್ಥಿಕ ವಿಶ್ಲೇಷಣೆ, ಸರ್ವೆ, ಬಡಾವಣೆ ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ವೆಚ್ಚ ರಚನೆಯೊಂದಿಗೆ ವಿವರವಾದ ಯೋಜನಾ ವರದಿ (ಡಿ.ಪಿ.ಆರ್) ಸಿದ್ದಪಡಿಸುವ ಸಲಹಾ ಸೇವೆಯನ್ನು ಒದಗಿಸುವುದು. (ವಿಸ್ತೀರ್ಣ 336ಎ 11ಗು) 2ನೇ ಕರೆ.

ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 19.08.2021, ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–

ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/DDU/Zen/R.O:1096/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮಕ್ಕೆ ಒಳಪಟ್ಟಿದೆ)

ಸಂಖ್ಯೆ:– ಮುಇಂ(ವಿ)/ಕಾನಿಇಂ(ಸಿ)/ಸಕಾಇಂ(ಸಿ)/2021–22/2057–61 ದಿನಾಂಕ:–07/08/2021

ಟೆಂಡರ್ ಪ್ರಕಟಣೆ

(ಇ–ಪ್ರೋಕ್ಯುರಮೆಂಟನ ಮುಖಾಂತರ ಮಾತ್ರ)

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ನಿಯಮಿತದ ಪರವಾಗಿ, ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರು, ಇ–ಪ್ರೋಕ್ಯುರಮೆಂಟ್ ಹೊರಡಿಸಿರುವ https:// eproc.karnataka.gov.in ಮೂಲಕ ಈ ಕೆಳಕಂಡ ಕೆಲಸಗಳಿಗಾಗಿ ಅರ್ಹ ಲೋಕೋಪಯೋಗಿ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ಕಾಮಗಾರಿಯ ಹೆಸರು: 1) ಅಫಜಲಪೂರ ತಾಲೂಕಿನ ಚೌಡಾಪೂರ ಗ್ರಾಮದಲ್ಲಿ ಉಪವಿಭಾಗ ಕಟ್ಟಡ ನಿರ್ಮಿಸುವದು. (ಬಿಡ್ ವಿಚಾರಣೆ ಸಂ: ಜೆಸ್ಕಾಂ/ಕಾ&ಪಾ/ ಕಲಬುರಗಿ/ ಕಾಮಗಾರಿ/ಟೆಂಡರ್/ಬಂಡವಾಳ–1 ದಿನಾಂಕ:29–07–2021) 2) ಕಲಬುರಗಿ ಜಿಲ್ಲೆಯ ಚಿಂಚೋಳಿಯಲ್ಲಿ ಉಪವಿಭಾಗ ಕಟ್ಟಡ ನಿರ್ಮಿಸುವದು. (ಬಿಡ್ ವಿಚಾರಣೆ ಸಂ: ಜೆಸ್ಕಾಂ/ಕಾ&ಪಾ/ ಕಲಬುರಗಿ/ ಕಾಮಗಾರಿ/ ಟೆಂಡರ್/ಬಂಡವಾಳ–2 ದಿನಾಂಕ:29–07–2021). ಟೆಂಡರ್‌ನ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): ಕನಿಷ್ಠ ಮತ್ತು ಗರಿಷ್ಠ : 9599700.00. ಕ್ರ.ಸಂ. 1 ಮತ್ತು 2ರ ಮುಂಗಡ ಮೊತ್ತ (ರೂ.ಲಕ್ಷಗಳಲ್ಲಿ)– ಇಲ್ಲ. ಕ್ರ.ಸಂ. 1 ಮತ್ತು 2ರ ಕೆಲಸದ ಅವಧಿ (ಮಳೆಗಾಲ ಸೇರಿ)–12 ತಿಂಗಳುಗಳು. ಅರ್ಹ ಗುತ್ತಿಗೆದಾರರು– ಕ್ಲಾಸ್–1 ಮತ್ತು ಮೇಲ್ಪಟ್ಟು.

ಟೆಂಡರ್ ಅರ್ಜಿದಾರರು https:// eproc.karnataka.gov.in ನಲ್ಲಿ ಲಾಗ್ ಆನ್ ಮಾಡಿ ಟೆಂಡರಗೆ ಸಲ್ಲಿಸಬೇಕಾಗಿರುವ ದಾಖಲೆಗಳನ್ನು ನಿಗದಿತ ದಿನಾಂಕ ಮತ್ತು ವೇಳೆಯಲ್ಲಿ ಅಪ್ಲೋಡ್‌ಮಾಡಬಹುದಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು ಟೆಂಡರ್ ವಿವರಗಳನ್ನು ಈ ಕೆಳಗಿನ ವೆಬಸೈಟ್ https:// eproc.karnataka.gov.in ನಲ್ಲಿ ದಿನಾಂಕ:–09–08–2021 ರಂದು ಅಥವಾ ನಂತರ ಲಾಗ್ ಆನ್‌ಮಾಡಿ ಪಡೆದುಕೊಳ್ಳಬಹುದಾಗಿದೆ. ಟೆಂಡರನಲ್ಲಿ ಭಾಗವಹಿಸುವ ಗುತ್ತಿಗೆದಾರರು ಇ– ಪ್ರೋಕ್ಯುರಮೆಂಟ್ ಪೋರ್ಟಲ್‌ನಲ್ಲಿ ನೋಂದಣಿಯನ್ನು ಹೊಂದಿರಬೇಕು ಹಾಗೂ ಆನ್‌ಲೈನ್ ಮುಖಾಂತರ ಮಾತ್ರ ಅರ್ಜಿಯನ್ನು ಸಲ್ಲಿಸಬೇಕು.ಇತರೆ ಯಾವುದೇ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಲಾದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಕ್ಯಾಲೆಂಡರ ಆಫ್ ಇವೆಂಟ್ಸ ಮತ್ತು ವಿಸ್ತರಿಸಿದ ದಿನಾಂಕ: 1) ವಿವರಣೆ ಮತ್ತು ಮಾಹಿತಿಯನ್ನು ಪಡೆಯುವುದು ಕೊನೆಯ ದಿನಾಂಕ ಮತ್ತು ಸಮಯ: 21–08–2021 ರ 17:30 ಗಂಟೆವರೆಗೆ. 2) ತುಂಬಿದ ಎಲೆಕ್ಟ್ರಾನಿಕ ಬಿಡ್ ಶೀಟಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 24–08–2021 ರ 17:30 ಗಂಟೆವರೆಗೆ. 3) ಟೆಕ್ನಿಕಲ್ ಬಿಡ್ ಶೀಟಗಳನ್ನು ತೆರೆಯುವ ದಿನಾಂಕ ಮತ್ತು ಸಮಯ 26–08–2021 ರ11.30 ಗಂಟೆಗೆ. 4) ದರ ಪಟ್ಟಿಯನ್ನು (price Bid) ತೆರೆಯುವ ದಿನಾಂಕ ಮತ್ತು ಸಮಯ: ಯಶಸ್ವಿಯಾದ ಟೆಕ್ನಿಕಲ್ ಬಿಡದಾರರಿಗೆ ತಿಳಿಸಲಾಗುವುದು.

ಸಹಿ/– ಮುಖ್ಯ ಅಭಿಯಂತರರು (ವಿದ್ಯುತ್)

ಕಾ ಮತ್ತು ಪಾ ವಲಯ ಜೆಸ್ಕಾಂ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/510/ಎಂ.ಸಿ&ಎ/2021–22

ವಿದ್ಯುತ್ ಸಂಬಂಧಿತ ದೂರುಗಳಿಗೆ 1912 ಗೆ ಕರೆ ಮಾಡಿ URJA MITRA APP ಡೌನಲೋಡ್ ಮಾಡಿಕೊಳ್ಳಿ

'ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಮೈಸೂರಿನಲ್ಲಿ ನಡೆಸುತ್ತಿರುವ ತಾಯಿ ಮತ್ತು ಶಿಶುವು ಮಗುವಿನ ಸಂಸ್ಥೆ (ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆ)ಯಲ್ಲಿ ಶ್ರವಣದೋಷವುಳ್ಳ ಮಕ್ಕಳು ಕಲಿಕೆಯಲ್ಲಿ ನಿರತರಾಗಿರುವುದು

ಕಲಿತದ್ದನ್ನೆಲ್ಲ ಮರೆತ ವಿಶೇಷ ಮಕ್ಕಳು!

• ಕೆ.ಎಸ್.ಗಿರೀಶ

ಮೈಸೂರು: 'ವಿಶೇಷ ಮಕ್ಕಳು, ಅದರಲ್ಲೂ ಶ್ರವಣದೋಷವುಳ್ಳ ಮಕ್ಕಳು ಕಲಿತದ್ದನ್ನೆಲ್ಲ ಮರೆತಿದ್ದಾರೆ. ಅವರಿಗೆ ಅದನ್ನೆಲ್ಲ ನೆನಪಿಸಿ ಮುಂದಿನ ಪಾಠಗಳನ್ನು ಹೇಳಿಕೊಡಬೇಕಾದ ಸನ್ನಿವೇಶ ಎದುರಾಗಿದೆ' ಎಂದು ನಗರದ 'ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್'ನ ಅಪ್ಪ ಸಮಾಲೋಚಕಿ ಪರಿಮಳಾಮೂರ್ತಿ ವಿಷಾದಿಸುತ್ತಾರೆ.

ವಿಶೇಷ ಮಕ್ಕಳಿಗೆ ತಾಯಿಂದಿರ ಮೂಲಕ ತರಬೇತಿ ನೀಡಿ ಮುಖ್ಯವಾಹಿನಿಯ ಶಾಲೆಗಳಿಗೆ ಕಳುಹಿಸುವ ಅಪರೂಪದ ಶಾಲೆ ಇದಾಗಿದೆ. ಈ ಶಾಲೆಯ ವಿಶೇಷ ಮಕ್ಕಳಿಗೆ, ಅವರು ಕಲಿತಿದ್ದನ್ನು ಮತ್ತೆ ಕಲಿಸುವುದೇ ಶಿಕ್ಷಕರು ಮತ್ತು ಪೋಷಕರಿಗೆ ದೊಡ್ಡ ಸವಾಲಾಗಿದೆ. ವಿವಿಧ ಜಿಲ್ಲೆಗಳ 26 ತಾಯಂದಿರು ತಮ್ಮ ವಿಶೇಷ ಮಕ್ಕಳೊಂದಿಗೆ ಶಾಲೆಯ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದಾರೆ.

'ಸಾಮೂಹಿಕ ಕಲಿಕೆಯಿಂದ ಬಹುಬೇಗ ಮಕ್ಕಳು ಮುಖ್ಯವಾಹಿನಿಗೆ ಬರುತ್ತಾರೆಯೇ ಹೊರತು, ಆನ್‌ಲೈನ್‌ನ ಏಕಾಂಗಿ ಕಲಿಕೆಯಿಂದಲ್ಲ. ಕೋವಿಡ್ ವಿಶೇಷ ಮಕ್ಕಳ ಕಲಿಕೆಯನ್ನೇ ಕಿತ್ತುಕೊಂಡಿದ್ದು ಆರ್ಥಿಕ ನಷ್ಟಕ್ಕಿಂತ ದೊಡ್ಡ ನಷ್ಟ' ಎಂಬುದು ಪರಿಮಳಾ ಅವರ ಪ್ರತಿಪಾದನೆ.

ಮಗು ಮತ್ತು ನಾನು ಕುಟುಂಬದಿಂದ ದೂರವಾಗಿ ಲಾಕ್‌ಡೌನ್ ಸಮಯದಲ್ಲಿ ಹಾಸ್ಟೆಲ್‌ನಲ್ಲೇ ಉಳಿದುಕೊಂಡೆವು. ಮಗುವಿನ ಕಲಿಕೆ ಹಿನ್ನಡೆಯಾಗಿದೆ. ಮುಂದೇನು ಎಂಬ ಪ್ರಶ್ನೆ ಕಾಡುತ್ತಿದೆ

ವೀಣಾ ಬಿರಾದಾರ, ವಿಜಯಪುರ

'ಮಕ್ಕಳಿಗೆ ಶ್ರವಣದೋಷ ಪರಿಹರಿಸುವ ಸಾಧನ (ಹಿಯರಿಂಗ್ ಏಡ್) ಅಳವಡಿಸುವ ಪ್ರಕ್ರಿಯೆಯೂ ಸರಾಗವಾಗಿ ನಡೆಯದೆ, ತಾಯಂದಿರು ಮಕ್ಕಳಿಗೆ ಕಲಿಸುವುದು ಕಷ್ಟಕರವಾಗಿದೆ' ಎಂದರು.

ವಿಶೇಷ ಮಕ್ಕಳ ಪೋಷಕರಿಗೆ ಲಸಿಕೆ ಹಾಕಬೇಕು ಎಂಬ ನಿಯಮವನ್ನು ಮುಂಚಿತವಾಗಿಯೇ ಸರ್ಕಾರ ಜಾರಿಗೊಳಿಸಬೇಕಿತ್ತು. ಹಾಗೆ ಮಾಡದೇ ಇದ್ದುದರಿಂದ ಅವರ ಶಿಕ್ಷಣಕ್ಕೆ ತೊಡಕಾಗಿತ್ತು. ವಯಸ್ಕ ವಿಶೇಷ ಮಕ್ಕಳ ಪೋಷಕರಿಗೆ ಮೊದಲು ಲಸಿಕೆ ನೀಡಿ, ಎಳೆಯ ವಿಶೇಷ ಮಕ್ಕಳ ಪೋಷಕರನ್ನು ನಿರ್ಲಕ್ಷಿಸಿದ್ದರಿಂದ, ಕಲಿಕೆಗೆ ತೊಂದರೆಯಾಯಿತು ಎಂಬ ಅಭಿಪ್ರಾಯವೂ ಇದೆ.

ಕೋವಿಡ್ ದಿನಗಳಲ್ಲಿ ಶಾಲಾ ಮಕ್ಕಳ ಕಲಿಕೆ ಸ್ವರೂಪ– ಡಿಎಸ್‌ಇಆರ್‌ಟಿ ಸಮೀಕ್ಷೆ

ಪಾಠ ವೀಕ್ಷಣೆ ಶೇ 70; ದುಡಿಮೆಯಲ್ಲಿ ಶೇ 30!

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೋವಿಡ್ ರಜಾ ಅವಧಿಯಲ್ಲಿ ಶೇ 70ರಷ್ಟು ಮಕ್ಕಳು ಟಿವಿ, ಮೊಬೈಲ್ ಬಳಸಿ ಪಾಠ ವೀಕ್ಷಿಸಿದ್ದರೆ, ಶೇ 30ರಷ್ಟು ಮಕ್ಕಳು ದುಡಿಮೆಯಲ್ಲಿ ತೊಡಗಿಸಿಕೊಂಡಿದ್ದರು. ಹೀಗೆ ಪಾಠ ವೀಕ್ಷಿಸಿರುವ ಮಕ್ಕಳ ಪೈಕಿ, ಅರ್ಧದಷ್ಟು ಮಂದಿ ಪಾಠದ ಜೊತೆಗೆ ಮೊಬೈಲ್‌ನಲ್ಲಿ ಆಟವನ್ನೂ ಆಡಿದ್ದಾರೆ, ಇತರ ಕಾರ್ಯಕ್ರಮಗಳನ್ನೂ ವೀಕ್ಷಿಸಿದ್ದಾರೆ!

ಶಾಲೆಗಳು ಮುಚ್ಚಿದ್ದರಿಂದ ನೇರ ತರಗತಿ ಬೋಧನೆ ನಡೆಯದ ಹಿನ್ನೆಲೆಯಲ್ಲಿ ಮಕ್ಕಳ ಕಲಿಕೆಯ ಸ್ವರೂಪ, ಗಳಿಸಿಕೊಂಡ ಕೌಶಲ ಅರಿಯಲು ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ನಡೆಸಿದ ಸಮೀಕ್ಷೆಯಲ್ಲಿ ಬಹಿರಂಗವಾದ ಅಂಶವಿದು.

ಆನ್‌ಲೈನ್ ಕಲಿಕಾ ವ್ಯವಸ್ಥೆಯಲ್ಲಿ ಶೇ 70ರಷ್ಟು ವಿದ್ಯಾರ್ಥಿಗಳು ಅದಲ್ಲೊಂದು ರೀತಿಯಲ್ಲಿ ತೊಡಗಿಸಿಕೊಂಡಿದ್ದರು ಎನ್ನುವುದು ಸಮೀಕ್ಷೆಯಿಂದ ಗೊತ್ತಾಗಿದೆ. ಆದರೆ, ಈ ಮಕ್ಕಳ ಕಲಿಕೆಯ ಪ್ರಮಾಣ ಎಷ್ಟು ಮತ್ತು ಅವರು ಏನು ಕಲಿಯಬೇಕಿತ್ತೋ ನಿರೀಕ್ಷಿಸಲಾಗಿತ್ತು ಎಂಬ ಬಗ್ಗೆ ಸಮೀಕ್ಷೆಯಲ್ಲಿ ಮಾಹಿತಿ ಇಲ್ಲ.

ಮೊಬೈಲ್‌ನಲ್ಲಿ ಪಾಠ ವೀಕ್ಷಿಸಿದ ಎಲ್ಲರೂ ಎಲ್ಲ ಸಮಯದಲ್ಲಿ ಆಟ ಆಡದೇ ಇರಬಹುದು. ಪಾಠ ಅವಧಿ ಮುಗಿದ ಬಳಿಕ ಒಂದಷ್ಟು ಹೊತ್ತು ಆಟಗಳಲ್ಲಿ ತೊಡಗಿಸಿಕೊಂಡಿರುವ ಸಾಧ್ಯತೆಯೂ ಹೆಚ್ಚು. ಎಲ್ಲರೂ ದಿನವಿಡೀ ಮೊಬೈಲ್ ಬಳಸಿದ್ದಾರೆ ಎಂಬ ದತ್ತಾಂಶವೂ ಲಭ್ಯವಿಲ್ಲ. ಆದರೆ, ಮೊಬೈಲ್ ಹೊಂದಿರುವ ಒಂದಷ್ಟು ಪ್ರಮಾಣದ ಮಕ್ಕಳು ಅದರ ಚಟ ಬೆಳೆಸಿಕೊಳ್ಳುವ ಸಾಧ್ಯತೆ ಇದ್ದು, ಪೋಷಕರ ಜೊತೆ ಈ ಬಗ್ಗೆ ಮಾತನಾಡಿದರೆ ಗೊತ್ತಾಗಬಹುದು ಎಂದೂ ವರದಿ ಹೇಳಿದೆ.

ದುಡಿಮೆಯಲ್ಲಿ ತೊಡಗಿಸಿಕೊಂಡ ಮಕ್ಕಳ ಪ್ರಮಾಣ ಶೇ 30ಕ್ಕಿಂತಲೂ ಹೆಚ್ಚಿರುವ ಸಾಧ್ಯತೆಯೂ ಇದೆ. ಈ ರೀತಿ ತೊಡಗಿಸಿಕೊಂಡ ಮಕ್ಕಳ ಹಿನ್ನೆಲೆ ಏನು? 'ಬಿಡುವಿನ ವೇಳೆಯಲ್ಲಿ ಸಂಪಾದನೆ ಮಾಡಿಕೊಳ್ಳುತ್ತಿದ್ದೇವೆ. ಉಳಿದಂತೆ ತರಗತಿಗಳಲ್ಲಿ ಹಾಜರಾಗಿದ್ದೇವೆ' ಎನ್ನುವ ಮಕ್ಕಳಲ್ಲಿ ಉದ್ಯೋಗದ ಆಯಾಸವು ಕಲಿಕೆಯನ್ನು ಯಾವ ರೀತಿ ಪ್ರಭಾವಿಸುತ್ತದೆ ಎಂಬ ಬಗ್ಗೆ ಹೆಚ್ಚಿನ ಅಧ್ಯಯನದಿಂದ ತಿಳಿಯಬೇಕಾಗಿದೆ ಎಂದೂ ಸಮೀಕ್ಷೆಯಲ್ಲಿದೆ.

ಮೊಬೈಲ್, ಟಿವಿ ವೀಕ್ಷಣೆಯಲ್ಲಿ ಸರ್ಕಾರಿ ಶಾಲಾ ಮಕ್ಕಳ ಪ್ರಮಾಣ ಜಾಸ್ತಿ ಇರುವುದು ಗೊತ್ತಾಗಿದೆ.

ಪೋಷಕರು ತಮ್ಮ ಮೊಬೈಲ್ ಅನ್ನು ಮಕ್ಕಳಿಗೆ ನೀಡಿದರೂ, ಪಾಠ ಇಲ್ಲದೇ ಇದ್ದಾಗ ಅದನ್ನು ವಾಪಸು ಪಡೆದಿರುವ ಸಾಧ್ಯತೆಗಳೇ ಹೆಚ್ಚು. ಖಾಸಗಿ ಶಾಲೆಗಳ ಮಕ್ಕಳು ಮನೆಯಲ್ಲಿಯೇ ಖಾಸಗಿ ಟ್ಯೂಷನ್ ಪಡೆಯುತ್ತಿದ್ದರು. ಸಾಮಾನ್ಯವಾಗಿ ಈ ಮಕ್ಕಳ ಪೋಷಕರು ಔಪಚಾರಿಕ ಕಲಿಕೆಯ ಯಶಸ್ಸಿನ ಬಗ್ಗೆ ಸ್ಪಷ್ಟ ಕಾಳಜಿ ಹೊಂದಿದ್ದಾರೆ. ಈ ನೆಲೆಯಲ್ಲಿ ಯೋಚಿಸಿದಾಗ ಲಾಕ್‌ಡೌನ್ ಅವಧಿಯಲ್ಲಿಯೂ ಮಕ್ಕಳನ್ನು ಪಠ್ಯ ಕಲಿಕೆಯಲ್ಲಿ ಒತ್ತಾಯ ಪೂರ್ವಕವಾಗಿಯಾದರೂ ತೊಡಗಿಸಿಕೊಂಡಿರುವ ಅನುಮಾನ ಮೂಡುತ್ತದೆ ಎಂದೂ ವರದಿಯಲ್ಲಿದೆ.

ಕಲಿಕಾ ನಿರಂತರತೆಗೆ 'ಪರ್ಯಾಯ ಶಿಕ್ಷಣ'

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲೂ ಶಾಲೆಗಳು ಆರಂಭಗೊಳ್ಳುವುದು ವಿಳಂಬ ಆಗುತ್ತಿರುವುದರಿಂದ ಮಕ್ಕಳ ಕಲಿಕೆಯಲ್ಲಿ ನಿರಂತರತೆ ಕಾಯ್ದುಕೊಳ್ಳಲು ತರಗತಿವಾರು, ವಿಷಯವಾರು ಮತ್ತು ಮಾಧ್ಯಮವಾರು 'ಪರ್ಯಾಯ ಶೈಕ್ಷಣಿಕ ಯೋಜನೆ' ರೂಪಿಸಲಾಗಿದೆ. ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ವೆಬ್‌ಸೈಟ್‌ನಲ್ಲಿ ಈ ಯೋಜನೆಯನ್ನು ಅಪ್‌ಲೋಡ್ ಮಾಡಲಾಗಿದೆ. ಸ್ಥಳೀಯ ಸನ್ನಿವೇಶ ಮತ್ತು ಕಲಿಕೆಯ ರೀತಿಗೆ ಅನುಗುಣವಾಗಿ ಚಟುವಟಿಕೆಯನ್ನು ರೂಪಿಸಿಕೊಳ್ಳುವಂತೆ ಶಿಕ್ಷಕರಿಗೆ ಸೂಚಿಸಲಾಗಿದೆ.

ವಿ. ಅನ್ಬುಕುಮಾರ್, ಆಯುಕ್ತ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

ಶೈಕ್ಷಣಿಕ ವರ್ಷ– 2020–21
ವಿದ್ಯಾರ್ಥಿಗಳಲ್ಲಿ ಗ್ಯಾಜೆಟ್‌ಗಳು– ಇಂಟರ್‌ನೆಟ್ ಸಂಪರ್ಕ (1ರಿಂದ 10ನೇ ತರಗತಿ)

1,05,09,367	ಒಟ್ಟು ವಿದ್ಯಾರ್ಥಿಗಳು
93,01,805	ಪರಿಶೀಲನೆಗೆ ಒಳಗಾದವರು
31,27,524	ಸ್ಮಾರ್ಟ್ ಫೋನ್/ ಟ್ಯಾಬ್ಲೆಟ್ ಇಲ್ಲದವರು
8,65,259	ಟಿವಿ, ರೇಡಿಯೊ ಎರಡೂ ಇಲ್ಲದವರು
4,88,826	ಇ–ಮೇಲ್ ಇರುವವರು

ಮಕ್ಕಳ ಶಿಕ್ಷಣ ಕುರಿತಂತೆ ಪೋಷಕರು ಪೂರ್ವ ಕಲ್ಪನೆಗಳಿಗೆ ಅನುಗುಣವಾಗಿ ಅವರು ಯೋಚಿಸಿರುವುದು ಮತ್ತು ಅದೇ ನಿಟ್ಟಿನಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲು ಯತ್ನಿಸುತ್ತಿರುವುದರ ಬಗ್ಗೆ ಹಾಗೂ ಪೋಷಕರ ಗ್ರಹಿಕೆಗಳು ಮಕ್ಕಳ ಮೇಲೆ ಯಾವ ರೀತಿ ಪ್ರಭಾವಿಸಬಲ್ಲುದು, ಮಕ್ಕಳ ಸ್ವಾತಂತ್ರ್ಯವನ್ನು ಯಾವ ರೀತಿ ಮೊಟಕುಗೊಳಿಸಬಹುದು ಎಂಬ ಬಗ್ಗೆಯೂ ಅಧ್ಯಯನ ನಡೆಸುವುದು ಸೂಕ್ತ ಎಂದೂ ವರದಿ ಹೇಳಿದೆ.

ಕೋವಿಡ್ ರಜಾ ದಿನಗಳಲ್ಲಿ ಕಲಿಕೆ, ಕೌಶಲ ಗಳಿಕೆ, ಆಟೋಟ, ಸುತ್ತಾಟ, ಮಾತುಕತೆಗಳಲ್ಲಿ ಸರ್ಕಾರಿ ಶಾಲೆಯ ಮಕ್ಕಳು ಅತ್ಯಂತ ಹೆಚ್ಚು ತೊಡಗಿಸಿಕೊಂಡಿದ್ದಾರೆ. ಸರ್ಕಾರಿ ಶಾಲೆಯ ಮಕ್ಕಳು ಸ್ವ ಕಲಿಕೆಗೆ ಹೆಚ್ಚು ಆದ್ಯತೆ ಕೊಟ್ಟಿದ್ದರೆ, ಖಾಸಗಿ ಶಾಲೆಗಳ ಮಕ್ಕಳು ಮೊಬೈಲ್ ಅಥವಾ ಇತರ ಮಾರ್ಗಗಳ ಮೂಲಕ ಶಿಕ್ಷಕರು ಮತ್ತು ಹಿರಿಯರನ್ನು ಆಶ್ರಯಿಸಿರುವುದನ್ನು ಈ ಅಧ್ಯಯನ ಗುರುತಿಸಿದೆ. ನಗರದ ಖಾಸಗಿ ಶಾಲಾ ವಿದ್ಯಾರ್ಥಿಗಳಿಗೆ ಔಪಚಾರಿಕ ಕಲಿಕೆಗೆ ಹಿರಿಯರ ಮಾರ್ಗದರ್ಶನ ಲಭಿಸಿದೆ ಎಂದೂ ವರದಿಯಲ್ಲಿದೆ.

ಅವರಾಗಿಯೇ ಬಿಟ್ಟರೆ: ಮಕ್ಕಳನ್ನು ಅವರಾಗಿಯೇ ಇರಲು ಬಿಟ್ಟರೆ, ಅವರು ನಡೆಸುವ ಎಲ್ಲ ಚಟುವಟಿಕೆಯಲ್ಲೂ ಒಂದಷ್ಟು ಕಲಿಕೆ ಕಟ್ಟಿಕೊಳ್ಳುತ್ತಾರೆ. ಕೋವಿಡ್ ರಜೆಯ ಸಂದರ್ಭದಲ್ಲಿ ತಮ್ಮ ಬಿಡುವಿನ ವೇಳೆಯಲ್ಲಿ ಮಕ್ಕಳ ಸದಾ ಟಿವಿ ಮುಂದೆ ಬಿದ್ದಿರುತ್ತಾರೆ ಅಥವಾ ಮೊಬೈಲ್‌ನಲ್ಲಿ ಆಟವಾಡುತ್ತಲೇ ಇರುತ್ತಾರೆ ಎಂಬ ಹಲವು ಗ್ರಹಿಕೆಗಳಿಗೆ ಯಾವುದೇ ಗಟ್ಟಿಯಾದ ತಳಹದಿಗಳಿಲ್ಲ. ಆದರೆ, ಗ್ರಾಮೀಣ ಮತ್ತು ನಗರ ಪ್ರದೇಶದ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳ ವಿದ್ಯಾರ್ಥಿಗಳು ಒಂದಲ್ಲ ಒಂದು ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು. ಶಾಲೆಗಳಿಗೆ ಸಂಬಂಧಿಸಿದ ಚಟುವಟಿಕೆಯಲ್ಲಿ ಶಿಕ್ಷಕರ ಮತ್ತು ಪೋಷಕರ ಮಾರ್ಗದರ್ಶನದ ಅಗತ್ಯವನ್ನು ಈ ಸಮೀಕ್ಷೆ ಒತ್ತಿ ಹೇಳಿದೆ.

ಎಲ್ಲ ವೃತ್ತಿಪರ ಕೋರ್ಸ್‌ಗಳ ಆನ್‌ಲೈನ್ ಬೋಧನೆ ಕಷ್ಟ. ಅನುಭವದ ಕಲಿಕೆಯೂ ಅಗತ್ಯ. ಆನ್‌ಲೈನ್ ಶಿಕ್ಷಣ ಉಪ್ಪಿನಕಾಯಿಯಂತಿರಬೇಕು. ಸಾಂಪ್ರದಾಯಿಕ ಶಿಕ್ಷಣವೂ ಸುಧಾರಣೆಯಾಗಬೇಕು. ತರಗತಿಯೊಳಗೆ ತಂತ್ರಜ್ಞಾನ ಬರಬೇಕು.

ಪ್ರೊ. ಕರಿಸಿದ್ದಪ್ಪ, ವಿಟಿಯು ಕುಲಪತಿ

ವೈದ್ಯಕೀಯ ಶಿಕ್ಷಣದಲ್ಲಿ ಪ್ರಾಯೋಗಿಕ ಕಲಿಕೆ ಮುಖ್ಯ, ಈಗಿನ ವ್ಯವಸ್ಥೆಯಲ್ಲಿ ಬೋಧನೆ ಮತ್ತು ಕಲಿಕಾ ಗುಣಮಟ್ಟ ನಿರೀಕ್ಷಿಸುವುದೂ ಸೂಕ್ತವಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿ ಪರಿಣಾಮಕಾರಿ ಸುಧಾರಣೆಗೆ ಒತ್ತು ನೀಡಬೇಕಿದೆ.

ಡಾ.ಪಿ.ಜಿ. ಗಿರೀಶ್, ನಿರ್ದೇಶಕರು,ವೈದ್ಯಕೀಯ ಶಿಕ್ಷಣ ಇಲಾಖೆ

ಬೇಕಿದೆ ಮೌಲ್ಯಮಾಪನ

ಒಂದನೇ ಪುಟದಿಂದ

ಕಲಿತ ಮತ್ತು ಕಲಿಯದ ಪಾಠಗಳ ಗುಂಗಿನಲ್ಲಿ ವಿದ್ಯಾರ್ಥಿಗಳು ಮುಂದಿನ ತರಗತಿಗಳತ್ತ ನಡೆದಿದ್ದಾರೆ.

ಎಸ್‌ಎಸ್‌ಎಲ್‌ಸಿ, ಪ್ರಥಮ ಪಿಯುಸಿ ಪರೀಕ್ಷೆಯಲ್ಲಿ ಪಡೆದ ಅಂಕ ಆಧರಿಸಿ, ಪದವಿಪೂರ್ವ ಶಿಕ್ಷಣ ಇಲಾಖೆಯು ಪರೀಕ್ಷೆಯನ್ನೇ ನಡೆಸದೆ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಿಸಿದ್ದು ವ್ಯಾಪಕ ಟೀಕೆಗೆ ಗುರಿಯಾಗಿದೆ.

ಮೌಲ್ಯಮಾಪನದ ಮಾನದಂಡವಾದ ವಾರ್ಷಿಕ ಪರೀಕ್ಷೆಯ ಗೈರು ಹಾಜರಿಯಲ್ಲೇ ವಿದ್ಯಾರ್ಥಿಗಳು ಪದವಿ, ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ದಾಂಗುಡಿ ಇಟ್ಟಿದ್ದಾರೆ. ಆದರೆ, ಪದವಿ ಪೂರೈಸಿರುವ, ಎಂಜಿನಿಯರಿಂಗ್, ವೈದ್ಯಕೀಯದಂಥ ವೃತ್ತಿ ಶಿಕ್ಷಣ ಪಡೆಯುತ್ತಿರುವವರಿಗೆ ಕೋವಿಡ್ ಕಾಲಘಟ್ಟವು 'ತಾವೇನು ಕಲಿತೆವು? ಮುಂದೆ ಈ ಕಲಿಕೆ ನೆರವಿಗೆ ಬರುತ್ತದೆಯೇ' ಎಂಬ ಆತಂಕ ಮೂಡಿಸಿದೆ.

ಅದಕ್ಕೆ ಪೂರಕವಾಗಿ, '2021ರಲ್ಲಿ ಉತ್ತೀರ್ಣರಾದವರು ಅರ್ಜಿ ಸಲ್ಲಿಸುವಂತಿಲ್ಲ' ಎಂದು ಬ್ಯಾಂಕೊಂದು ನೀಡಿದ್ದ ನೇರ ಸಂದರ್ಶನದ ಜಾಹೀರಾತು ವೈರಲ್ ಆಗಿದ್ದನ್ನು ಗಮನಿಸಬಹುದು. ಅಂದರೆ, ಈ ವರ್ಷದಲ್ಲಿ ಉತ್ತೀರ್ಣರಾದವರ ಕಲಿಕೆ–ಸಾಮರ್ಥ್ಯದ ಬಗ್ಗೆ ಉದ್ಯೋಗದಾತ ಸಂಸ್ಥೆಗಳಲ್ಲಿ ಅನುಮಾನ ಮೂಡಿದೆ. ಕೋವಿಡ್ ಮುಂದುವರಿದ ಸಂದರ್ಭದಲ್ಲಿ ಇಂಥ ಅನುಮಾನಗಳಿಗೆ ಉತ್ತರ ನೀಡುವಂಥ ಬೋಧನೆ, ಕಲಿಕೆಯ ಹೊಸ ಮಾದರಿ ರೂಪಿಸುವುದರ ಕಡೆಗೆ ಸರ್ಕಾರ ಮತ್ತು ಇಲಾಖೆ ಗಮನ ಹರಿಸಿಲ್ಲ.

ಪೂರ್ವ ಪ್ರಾಥಮಿಕ ಶಾಲೆಯ ಮಕ್ಕಳಿಗೆ ವಿಡಿಯೊ ನೋಡಿ ಕಲಿಯುವ ಶಕ್ತಿ ಇರುವುದಿಲ್ಲ. ಮನೆಯಲ್ಲಿದ್ದು ಬೊಜ್ಜು, ಒಂಟಿತನ, ಖಿನ್ನತೆ ಕಾಡುತ್ತಿದೆ

ಡಾ. ಸುಜ್ಞಾನಿದೇವಿ ಪಾಟೀಲ, ಮಕ್ಕಳ ಹಾಗೂ ಹದಿಹರೆಯದವರ ಮನೋರೋಗ ತಜ್ಞೆ, ಧಾರವಾಡ

ವಿಡಿಯೋ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೋಧನೆ–ಕಲಿಕೆ ಮೌಲ್ಯಮಾಪನ ಬಗ್ಗೆ ಗಮನ ಸೆಳೆದರೆ, ವಿಶ್ವವಿದ್ಯಾಲಯಗಳ ಕುಲಪತಿಗಳಿಂದ ಶಾಲಾ ಶಿಕ್ಷಕರವರೆಗೆ ಎಲ್ಲರೂ ಆನ್‌ಲೈನ್ ಕಲಿಕೆಗೆ ಇರುವ ಮೂಲಸೌಕರ್ಯ ಕೊರತೆ, ಅಡಚಣೆ ಹಾಗೂ ಹೆಚ್ಚಿದ ಒತ್ತಡದ ಬಗ್ಗೆಯೇ ಮಾತನಾಡುತ್ತಾರೆ. ತರಗತಿಯಲ್ಲಿನ ಬೋಧನೆ, ಕಲಿಕೆ ಕುರಿತು ಅಪಾರ ಪ್ರೀತಿಯನ್ನೂ ತೋರುತ್ತಾರೆ.

'ಆನ್‌ಲೈನ್ ಕಲಿಕೆಯು ಸಮಯ–ಖರ್ಚು ಉಳಿಸಿದೆ, ಪ್ರಯಾಣದ ಶ್ರಮ–ಇಂಧನದ ಬಳಕೆ ಕಡಿಮೆ ಮಾಡಿದೆ ಎಂಬ ಪ್ರತಿಪಾದನೆ ವ್ಯಾವಹಾರಿಕ ದೃಷ್ಟಿಯಿಂದಷ್ಟೇ ಗಮನ ಸೆಳೆಯುತ್ತವೆ. ಶಿಕ್ಷಕರ ವ್ಯಕ್ತಿತ್ವ, ಪ್ರಯೋಗಾಲಯದ ನೇರ ಪಾಠ, ಸಾಮೂಹಿಕವಾಗಿ ಕಲಿಯುವ ಪ್ರಕ್ರಿಯೆ ವಿದ್ಯಾರ್ಥಿಗಳನ್ನು ಪ್ರಭಾವಿಸುವ, ವ್ಯಕ್ತಿತ್ವ ರೂಪಿಸುವ ಸಾಧ್ಯತೆಗಳಿದ್ದರೆ ಮಾತ್ರ ಶಿಕ್ಷಣ ಸಾರ್ಥಕ' ಎಂಬುದು ಚಿಂತಕ ಪ್ರೊ.ಮುಜಾಫರ್ ಅಸ್ಸಾದಿ ಅವರ ಪ್ರತಿಪಾದನೆ.

'ಶಾಲೆಗೆ ಹೋಗಿ ಕಲಿಯಬೇಕಾದ ಸಾಮುದಾಯಿಕ ಜೀವನದ ಅನುಭವವೇ ಇಲ್ಲದ ಸ್ಥಿತಿಯಲ್ಲಿ ಮಕ್ಕಳು ಮನುಷ್ಯರಾಗುವುದು ಹೇಗೆ? ಅಂಥ ಪ್ರಯತ್ನಗಳ ಬಗ್ಗೆ ಚರ್ಚೆಗಳಿಲ್ಲದೆ ಶಿಕ್ಷಣ ವ್ಯವಸ್ಥೆ ಮುಂದುವರಿಯುತ್ತಿದೆ' ಎನ್ನುವುದು ಮೈಸೂರಿನ ಗೃಹಿಣಿ ರಮ್ಯಾ ಅವರ ಅಭಿಪ್ರಾಯ.

ಆನ್‌ಲೈನ್ ಕಲಿಕೆ ಪ್ರಕ್ರಿಯೆಯಲ್ಲಿ, ಹದಿಹರೆಯದ ವಿದ್ಯಾರ್ಥಿಗಳು ತಪ್ಪುದಾರಿ ತುಳಿದಿರುವ ವರದಿಗಳೂ ಆತಂಕ ತಂದಿವೆ.

ಕೋವಿಡ್ ಕಾಲದ ಬಿಡುವಿನ ವೇಳೆಯನ್ನು ಸದ್ಬಳಕೆ ಮಾಡಿಕೊಂಡವರೂ ಶಾಲಾ–ಕಾಲೇಜುಗಳಲ್ಲಿದ್ದಾರೆ ಎಂಬ ಅರಿವಿನಲ್ಲೇ ಬೋಧನೆ–ಕಲಿಕೆಯ ಮೌಲ್ಯಮಾಪನದ ಅಗತ್ಯವನ್ನೂ ಸರ್ಕಾರ ಮನಗಾಣಬೇಕಾಗಿದೆ. ಶಿಕ್ಷಕರು–ಪೋಷಕರು–ವಿದ್ಯಾರ್ಥಿಗಳ ನಡುವಿನ ಸಂವಾದ, ಸಮನ್ವಯದಿಂದಷ್ಟೇ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ. ಅದಕ್ಕೆ ಆನ್‌ಲೈನ್ ಕಾಲದ ಶಿಕ್ಷಣ ವ್ಯವಸ್ಥೆಯ ಮೌಲ್ಯಮಾಪನದೊಂದಿಗೇ ಮುನ್ನಡೆಯುವುದು ಅಗತ್ಯ.

ಕಲಬುರ್ಗಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕಿ ಆನ್‌ಲೈನ್ ಪಾಠ ಮಾಡಿದರು

ನೆಟ್‌ವರ್ಕ್‌ಗಾಗಿ ಮರ ಏರುವ ಸಾಹಸ

ಹಳ್ಳಿಗಳಲ್ಲಿ ಆನ್‌ಲೈನ್ ಶಿಕ್ಷಣ ಮರೀಚಿಕೆ!

ಪ್ರಜಾವಾಣಿ ವಾರ್ತೆ

ಕಲಬುರ್ಗಿ/ಮೈಸೂರು: ಕಲ್ಯಾಣ ಕರ್ನಾಟಕ, ಮಲೆನಾಡು ಭಾಗದ ಕಾಡಂಚಿನ ಜಿಲ್ಲೆಗಳು ಹಾಗೂ ರಾಜ್ಯದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಆನ್‌ಲೈನ್ ಪಾಠ ಮರೀಚಿಕೆಯಾಗಿದೆ.

ಚಾಮರಾಜನಗರ ಜಿಲ್ಲೆಯ ಹನೂರು, ಗುಂಡ್ಲುಪೇಟೆ ತಾಲ್ಲೂಕುಗಳ ಕಾಡಂಚಿನ ಪ್ರದೇಶಗಳು, ಕೊಡಗು ಜಿಲ್ಲೆಯ ತೆರ್ಮೆಮೊಟ್ಟೆ, ಪಾಲಂಗಾಲ, ಬಾರಿಕಾಡು, ಕೊಟ್ಟೋಳಿ, ಹಾಸನ ಜಿಲ್ಲೆಯ ಮಲೆನಾಡು ಪ್ರದೇಶದ ಸಕಲೇಶಪುರ, ಆಲೂರು ಭಾಗದಲ್ಲಿ ಕಾಲೇಜು ವಿದ್ಯಾರ್ಥಿಗಳು ಆನ್‌ಲೈನ್ ಪಾಠ ಕೇಳಲು ಬೆಟ್ಟಗುಡ್ಡಗಳನ್ನು ಎಡತಾಕಬೇಕು. ಮರ ಹತ್ತಬೇಕು!

ಹೆತ್ತೂರು, ಶುಕ್ರವಾರಸಂತೆ, ಯಸಳೂರು ಹೋಬಳಿಗಳಲ್ಲಿ ಕಾಡಾನೆ ಹಾವಳಿಯ ಭಯ. ಪದವಿಯ ಪ್ರಾಯೋಗಿಕ ತರಗತಿಗಳಿಗೆ ವಿದ್ಯಾರ್ಥಿಗಳೇ ಕಡಿಮೆ. ಪ್ರೌಢ ಶಾಲೆ, ಪಿಯು ಹಂತದ ವಿದ್ಯಾರ್ಥಿಗಳ ಪೈಕಿ ಹಲವರಲ್ಲಿ ಸ್ಮಾರ್ಟ್‌ಫೋನ್‌ಗಳಿಲ್ಲ. ಮನೆಯ ಹಿರಿಯರ ಫೋನ್‌ನಲ್ಲಿರುವ ಇಂಟರ್‌ನೆಟ್ ಡೇಟಾ ಸಾಕಾಗುವುದಿಲ್ಲ.

ಆನ್‌ಲೈನ್ ತರಗತಿಗಳು ಶುರುವಾಗುವ ಹೊತ್ತಿಗೇ ಕುಟುಂಬದ ಮುಖ್ಯಸ್ಥರು ಫೋನ್ ಜೊತೆಗೆ ಹೊರಗೆ ಹೋಗುವುದೇ ಹೆಚ್ಚು. ಕೆಲವರು ಮಕ್ಕಳಿಗೆಂದೇ ಫೋನ್ ಕೊಡಿಸಿದ್ದರೂ ಹಳ್ಳಿಗಳಲ್ಲಿ 3ಜಿ, 4ಜಿ ವೇಗದ ಇಂಟರ್‌ನೆಟ್ ಸೌಲಭ್ಯವಿಲ್ಲ. ಝೂಮ್, ಗೂಗಲ್ ಮೀಟ್, ವಾಟ್ಸ್, ಯೂಟ್ಯೂಬ್ ಮೊಬೈಲ್ ಅಪ್ಲಿಕೇಶನ್‌ಗಳು ತೆರೆದುಕೊಳ್ಳುವುದಿಲ್ಲ.

ತೆಲಂಗಾಣ ಗಡಿಯಲ್ಲಿರುವ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕೊಳ್ಳೂರಿನ ಪೋಷಕ ಬಾಬುರಾವ್ ಶೆಂಬೆಳ್ಳಿ ಪ್ರಕಾರ, 'ಕರ್ನಾಟಕದ ನೆಟ್‌ವರ್ಕ್ ಸರಿಯಾಗಿ ಸಿಗುವುದಿಲ್ಲ. ಆಗಾಗ ತೆಲಂಗಾಣದ ನೆಟ್‌ವರ್ಕ್ ಬಂದರೂ ಉಪಯೋಗವಾಗುವುದಿಲ್ಲ. ಮಕ್ಕಳು ಮಾಳಿಗೆ ಏರಲೇಬೇಕು'.

'ಆನ್‌ಲೈನ್ ತರಗತಿಗಳಿಗೆ ಅರ್ಧದಷ್ಟು ವಿದ್ಯಾರ್ಥಿಗಳು ಹಾಜರಾಗುತ್ತಿದ್ದಾರೆ. ಕೆಲವರು ಪರೀಕ್ಷೆಗಷ್ಟೇ ಬರುತ್ತಿದ್ದಾರೆ. ಆನ್‌ಲೈನ್ ಪಾಠ ಶುರುವಾದ ಬಳಿಕ ಒತ್ತಡ ಹೆಚ್ಚಾಗಿದೆ' ಎಂದು ರಾಯಚೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ.ಜೆ.ಎಲ್. ವೀರಣ್ಣ ಹೇಳಿದರು.

'ನಗರದ ವಿದ್ಯಾರ್ಥಿಗಳಲ್ಲಿ ಸ್ಮಾರ್ಟ್‌ಫೋನ್‌ಗಳಿವೆ. ಹಳ್ಳಿಗಳ ಕಡುಬಡವರು ಮಕ್ಕಳಿಗೆ ಸ್ಮಾರ್ಟ್ ಫೋನ್ ಕೊಡಿಸು ವುದನ್ನು ಕನಸಿನಲ್ಲೂ ಯೋಚಿಸಲಾರರು' ಎನ್ನುತ್ತಾರೆ ಗುಲಬರ್ಗಾ ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನ್ ಪ್ರೊ.ಎಚ್.ಟಿ. ಪೋತೆ.

'ಪಿ.ಯು.ಗೆ ಭೌತಿಕ ತರಗತಿಗಳು ಆರಂಭವಾಗಿಲ್ಲ. ವಿಜ್ಞಾನ ವಿಭಾಗದವರಿಗೆ ಪ್ರಾಯೋಗಿಕ ತರಗತಿ ನಡೆಸಲು ಆಗುತ್ತಿಲ್ಲ. ಕಾಲೇಜಿನಲ್ಲಿ ತರಗತಿ ನಡೆಸಿದಷ್ಟು ತೃಪ್ತಿ ಆನ್‌ಲೈನ್ ಪಾಠದಲ್ಲಿ ಸಿಗುತ್ತಿಲ್ಲ' ಎನ್ನುತ್ತಾರೆ ಕಲಬುರ್ಗಿಯ ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನ ಪ್ರಾಚಾರ್ಯ ದೇವನಗೌಡ ಪಾಟೀಲ.

(ಪೂರಕ ಮಾಹಿತಿ: ಚಂದ್ರಕಾಂತ ಮಸಾನಿ, ನಾಗರಾಜ ಚಿನಗುಂಡಿ, ಮನೋಜಕುಮಾರ್ ಗುದ್ದಿ, ಕೆ.ಎ.ಆದಿತ್ಯ, ಕೆ.ಎಸ್.ಸುನೀಲ್, ಎಂ.ಎನ್.ಯೋಗೇಶ್, ವಿ.ಸೂರ್ಯನಾರಾಯಣ, ಎನ್. ನವೀನ್‌ಕುಮಾರ್. ಚಂದ್ರಹಾಸ ಹಿರೇಮಳಲಿ)

ನೋ ನೆಟ್‌ವರ್ಕ್, ನೋ ವೋಟಿಂಗ್!

ಶಿವಮೊಗ್ಗ: ಇಲ್ಲಿನ ಕುದರೂರು ಜಿಲ್ಲಾ ಪಂಚಾಯ್ತಿ ಕ್ಷೇತ್ರದ ಗ್ರಾಮಗಳಲ್ಲಿ ಮೊಬೈಲ್ ನೆಟ್‌ವರ್ಕ್ ಸಿಗದೆ, ಕರೂರು ಹೋಬಳಿಯ ಗ್ರಾಮಸ್ಥರು 'ನೋ ನೆಟ್‌ವರ್ಕ್, ನೋ ವೋಟಿಂಗ್' ಎನ್ನುತ್ತಾ ಪಂಚಾಯಿತಿ ಚುನಾವಣೆ ಬಹಿಷ್ಕರಿಸಲು ಮುಂದಾಗಿದ್ದಾರೆ.

ತೀರ್ಥಹಳ್ಳಿ, ಹೊಸನಗರ ತಾಲ್ಲೂಕಿನಲ್ಲಿ ಹಾಜರಾತಿ ದಾಖಲಿಸುವುದೂ ಕಷ್ಟವಾಗಿದೆ. ಸಿಗ್ನಲ್ ಸಿಗುವ ಕಡೆ ಟೆಂಟ್ ನಿರ್ಮಿಸಿ ಪಾಠ ಕೇಳಬೇಕು. ಅಲ್ಲಿ ಸಿಡಿಲು, ಮರ ಬೀಳುವ ಅಪಾಯವೂ ಉಂಟು.

ಶರಾವತಿ ನದಿಯ ಹಿನ್ನೀರಿನಿಂದ ಆವೃತವಾಗಿರುವ ಸಾಗರ ತಾಲ್ಲೂಕಿನ ಗ್ರಾಮಗಳಲ್ಲಿ ನೆಟ್‌ವರ್ಕ್‌ಗಾಗಿ ನಾಲ್ಕೈದು ಕಿ.ಮೀ. ಹೋಗಬೇಕು. ಬಾಲಕಿಯರೊಂದಿಗೆ ಪೋಷಕರೂ ಗುಡ್ಡಕ್ಕೆ ಹೋಗಬೇಕಾಗಿದ್ದು, ಕೃಷಿಗೂ ಹಿನ್ನಡೆಯಾಗಿದೆ.

ಅಣ್ಣನ ಫೋನ್‌ನಲ್ಲಿ ಪಾಠ ಪೂರ್ತಿ ಕೇಳುವುದರೊಳಗೆ 1 ಜಿ ಬಿ ಡೇಟಾ ಮುಗಿದಿರುತ್ತದೆ. ಸ್ಮಾರ್ಟ್ ಫೋನ್ ಇಲ್ಲದವರು ಪಾಠವನ್ನೇ ಕೇಳಿಲ್ಲ.

–ಸುಮಾ ದೇವೇಂದ್ರಪ್ಪ, ದ್ವಿತೀಯ ಪಿಯು ವಿದ್ಯಾರ್ಥಿನಿ, ಕಲಬುರ್ಗಿ ತಾಲ್ಲೂಕಿನ ಜಂಬಗಾ (ಬಿ) ಗ್ರಾಮ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 8-8-1996

• **ಸೆ.7ರಿಂದ ಕಾಶ್ಮೀರ ಚುನಾವಣೆ: ಉಸ್ತುವಾರಿಗೆ ಸೇನೆ ಬಳಕೆ ಇಲ್ಲ**

ನವದೆಹಲಿ, ಆಗಸ್ಟ್ 7(ಪಿಟಿಐ)– ಒಂಬತ್ತು ವರ್ಷಗಳ ಅಂತರದ ಬಳಿಕ ಗಲಭೆ ಪೀಡಿತ ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನಸಭೆಗೆ ಸೆಪ್ಟೆಂಬರ್ ತಿಂಗಳ 7, 16, 21 ಮತ್ತು 30 ರಂದು ನಾಲ್ಕು ಹಂತಗಳಲ್ಲಿ ಚುನಾವಣೆ ನಡೆಯಲಿದೆ.

ವಿಧಾನಸಭೆಯ 87 ಸ್ಥಾನಗಳಿಗೆ ಈ ಚುನಾವಣೆ ನಡೆಯಲಿದ್ದು ಪ್ರತಿಯೊಂದು ಹಂತದ ಚುನಾವಣೆಗೆ ಪ್ರತ್ಯೇಕ ಅಧಿಸೂಚನೆಯನ್ನು ಈ ತಿಂಗಳ 14, 23, 27 ಮತ್ತು ಮುಂದಿನ ತಿಂಗಳ 6 ರಂದು ಹೊರಡಿಸಲಾಗುವುದು ಎಂದು ಚುನಾವಣಾ ಆಯುಕ್ತರಾದ ಜಿ.ವಿ.ಜಿ. ಕೃಷ್ಣಮೂರ್ತಿ ಮತ್ತು ಡಾ.ಎಂ. ಎಸ್.ಗಿಲ್ ಅವರು ಪ್ರಕಟಿಸಿದ್ದಾರೆ.

ಈ ಕುರಿತಾಗಿ ಸರ್ವಸಮ್ಮತ ತೀರ್ಮಾನಕ್ಕೆ ಬರಲಾಗಿದೆ ಎಂದು ಅವರು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 8-8-1971

• **ಅಮೆರಿಕದ 'ಹಗೆತನದ' ಕೃತ್ಯಗಳ ಬಗ್ಗೆ ಭಾರತದ ಪ್ರತಿಭಟನೆ**

ನವದೆಹಲಿ, ಆಗಸ್ಟ್ 7– ಭಾರತದ ವಿರುದ್ಧ ಪಾಕಿಸ್ತಾನಕ್ಕೆ ನೀಡುತ್ತಿರುವ ಮಿಲಿಟರಿ ಮತ್ತು ರಾಜತಾಂತ್ರಿಕ ಬೆಂಬಲಕ್ಕಾಗಿ ಭಾರತವು ಅಮೆರಿಕಕ್ಕೆ ಪ್ರತಿಭಟನೆ ಸಲ್ಲಿಸಿದೆಯೆಂದು ತಿಳಿದು ಬಂದಿದೆ.

ಇದನ್ನು ತಾನು 'ಹಗೆತನದ ಕ್ರಮವೆಂದು' ಭಾವಿಸುವುದಾಗಿಯೂ ಭಾರತ ಅಮೆರಿಕಕ್ಕೆ ಸ್ಪಷ್ಟವಾಗಿ ತಿಳಿಸಿದೆ.

ಪ್ರತಿಭಟನೆ ಪತ್ರಗಳನ್ನು ದೆಹಲಿಯಲ್ಲಿರುವ ಅಮೆರಿಕ ರಾಯಭಾರಿ ಕಚೇರಿಗೂ ವಾಷಿಂಗ್ಟನ್‌ನಲ್ಲಿರುವ ಅಮೆರಿಕ ವಿದೇಶಾಂಗ ವ್ಯವಹಾರ ಕಚೇರಿಗೂ ಸಲ್ಲಿಸಲಾಗಿದೆ.

ಅಮೆರಿಕದ ಬೆಂಬಲದೊಡನೆ ಭಾರತದ ವಿರುದ್ಧ ಯುದ್ಧದ ಒತ್ತಡ ಮತ್ತು ಸಮರ ಬೆದರಿಯತ್ತ ಅಮೆರಿಕದ ಗಮನವನ್ನೂ ಸೆಳೆಯಲಾಗಿದೆ.

ದಿನ ಭವಿಷ್ಯ

ಭಾನುವಾರ ಆಗಸ್ಟ್ 8, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆಶ್ಲೇಷಾ ಅಮಾವಾಸೆ ಗಂ. 30-35 (ಸಾ. 6-28) ಭಾನುವಾರ ನಿತ್ಯ ನಕ್ಷತ್ರ ಪುಷ್ಯ ಗಂ. 8-12 (ಬೆ. 9-31) ವ್ಯತೀಪಾತ ನಾಮ ಯೋಗ ಗಂ. 46-41 ನಾಗ ಕರಣ ಗಂ. 30-35 ವಿಷ ಗಂ. 41-18 ಅಮೃತಾಭಾವಃ : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-10 ಸೂರ್ಯಾಸ್ತ: 6-41 ಅದೃಷ್ಟ ಸಂಖ್ಯೆ 5 6

ಮೇಷ: ಕಲಾವಿದರು, ಕವಿಗಳಿಗೆ, ಕಲಾರಂಗದಲ್ಲಿ ತೊಡಗಿಕೊಂಡವರಿಗೆ ಹೆಚ್ಚಿನ ಆದಾಯ. ರಾಜಕಾರಣಿಗಳ ಮಾತಿಗೆ ಮರುಳಾಗುವ ಸಾಧ್ಯತೆ. ಹಿತ ಶತ್ರುಗಳ ಭರವಸೆಗಳ ಬಗ್ಗೆ ಎಚ್ಚರಿಕೆ ಅಗತ್ಯ.

ವೃಷಭ: ಶೃಂಗಾರ ಸಾಮಗ್ರಿಗಳು, ಸೌಂದರ್ಯ ವರ್ಧಕಗಳ ವ್ಯಾಪಾರಸ್ಥರಿಗೆ ಉತ್ತಮ ಲಾಭ. ಉದ್ಯೋಗದಲ್ಲಿರುವವರಿಗೆ ಸ್ಥಾನ ಬದಲಾವಣೆ ಅಥವಾ ಬಡ್ತಿಯಿಂದಾಗಿ ಉತ್ತಮ ಆದಾಯ ಲಭಿಸಲಿದೆ. ಉತ್ತಮ ಆರೋಗ್ಯ.

ಮಿಥುನ: ಆಡಳಿತಾತ್ಮಕ ಹುದ್ದೆಯಲ್ಲಿರುವವರಿಗೆ ಗೌರವಾದರಗಳು ಲಭಿಸಲಿದೆ. ಬರಹಗಾರರಿಗೆ, ಕಲಾವಿದರುಗಳು ಪ್ರಶಸ್ತಿ ಫಲಕಗಳಿಗೆ ಭಾಜನರಾಗುವ ಸಾಧ್ಯತೆ. ಮಕ್ಕಳು ನೇತ್ರ ಸಂಬಂಧಿ ತೊಂದರೆ ಅನುಭವಿಸಬೇಕಾದೀತು.

ಕರ್ಕಾಟಕ: ಹೊಸ ಆದಾಯ ಮೂಲಕ್ಕಾಗಿ ಹುಡುಕಾಟದಲ್ಲಿ ಯಶಸ್ಸು. ಕಲಾವಿದರು, ನಟರು, ಸಂಗೀತಗಾರರಿಗೆ ಉತ್ತಮ ದಿನವಾಗಿದ್ದು ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯಾಗಲಿದೆ. ವಾಹನ ಖರೀದಿಯಲ್ಲಿ ಎಚ್ಚರಿಕೆ ಉತ್ತಮ.

ಸಿಂಹ: ಸಹಕಾರ ಸಂಘ ಮುಂತಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ಉತ್ತಮ ಹುದ್ದೆಯನ್ನು ಹೊಂದಿರುವುದು ನಿಮ್ಮ ಕೆಲಸಗಳು ನೆರವಾಗಲಿವೆ. ಬಂಧುಗಳ ಆಗಮನದಿಂದಾಗಿ ಮನೆಯಲ್ಲಿ ಹಬ್ಬದ ವಾತಾವರಣ ನೆಲೆಸಲಿದೆ.

ಕನ್ಯಾ: ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಸಾಧ್ಯತೆ. ಹೊಸ ಪುಸ್ತಕ ಅಥವಾ ಗ್ರಂಥ ಸಂಪಾದನೆಯಾಗಲಿದೆ. ವಿವಾಹದ ವಿಷಯದಲ್ಲಿ ನೇರ ಮಾತುಕತೆಯಿಂದಾಗಿ ಯಶಸ್ವಿ. ವಿದ್ಯಾರ್ಥಿಗಳಿಗೆ ಶುಭ.

ತುಲಾ: ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗಲಿದ್ದೀರಿ. ರಾಜಕೀಯ ಭವಿಷ್ಯದ ಬಗ್ಗೆ ಪ್ರಭಾವಿ ರಾಜಕಾರಣಿಗಳೊಂದಿಗೆ ಚರ್ಚೆಯಲ್ಲಿ ಭಾಗವಹಿಸಿ ಮಹತ್ತರ ನಿರ್ಣಯವೊಂದನ್ನು ಕೈಗೊಳ್ಳುವ ಸಾಧ್ಯತೆ.

ವೃಶ್ಚಿಕ: ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ. ಮಹಿಳೆಯರಿಗೆ ಧಾರ್ಮಿಕ ಕಾರ್ಯಗಳಲ್ಲಿ ಬಿಡುವಿಲ್ಲದ ಕೆಲಸ. ಸಂಪಾದನೆಯಲ್ಲಿ ಏರುಮುಖವನ್ನು ಕಾಣುವಿರಿ. ವಾದವಿವಾದಗಳು ಬಗೆಹರಿದು ನಿರಾಳತೆ.

ಧನು: ಆದಾಯ–ಖರ್ಚುಗಳ ಬಗ್ಗೆ ಗಮನ ಅಗತ್ಯ. ಮಿತವಾದ ಆಹಾರ ಸೇವನೆಯಿಂದ ಆರೋಗ್ಯದಲ್ಲಿ ಸುಧಾರಣೆ ಕಂಡುಕೊಳ್ಳಬಹುದು. ಸಂಸಾರದಲ್ಲಿ ನೆಮ್ಮದಿ. ಬೆಂಕಿಯ ವಿಷಯದಲ್ಲಿ ಜಾಗೃತಿ ಅಗತ್ಯ.

ಮಕರ: ರಂಗಕಲಾವಿದರಿಗೆ ವಿಶೇಷವಾಗಿ ಹಾಸ್ಯ ಕಲಾವಿದರಿಗೆ ವಿಶೇಷ ಗೌರವ ಮನ್ನಣೆ. ಮಾತುಗಳಿಗೆ ಮನ್ನಣೆ ಹೊಂದುವಿರಿ. ಸಹೋದ್ಯೋಗಿಗಳ ಉತ್ತಮ ಸಹಕಾರದಿಂದಾಗಿ ಕಾರ್ಯಬಾಹುಳ್ಯದ ನಡುವೆಯೂ ನೆಮ್ಮದಿ.

ಕುಂಭ: ರಕ್ಷಣಾ ಕಾರ್ಯದಲ್ಲಿ ತೊಡಗಿದವರಿಗೆ ಎಲ್ಲಿಲ್ಲದ ಕಾರ್ಯಬಾಹುಳ್ಯ. ಸತ್ಕಾರ ಸಮಾರಂಭಗಳಲ್ಲಿ ಭಾಗಿ. ವಾಹನ ಮತ್ತು ಯಂತ್ರಗಳ ಬಿಡಿಭಾಗಗಳ ವ್ಯಾಪಾರದಿಂದಾಗಿ ವಿಶೇಷ ಲಾಭ. ಉತ್ತಮ ಆರೋಗ್ಯವು ನಿಮ್ಮದಾಗಲಿದೆ.

ಮೀನ: ಸಂಶೋಧನಾ ಕಾರ್ಯಗಳಲ್ಲಿ ತೊಡಗಿದವರಿಗೆ ಹೊಸ ಸಂಶೋಧನೆಗೆ ಆರ್ಥಿಕ ಸಹಕಾರ ದೊರೆತು ಕೆಲಸಗಳು ನಿರ್ವಿಘ್ನವಾಗಿ ನಡೆಯಲಿದೆ. ಆರಕ್ಷಕ/ರಕ್ಷಣಾ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಬಿಡುವಿಲ್ಲದ ಕೆಲಸ.

ನಿಮ್ಮ ಜನ್ಮದಿನ 8-ಆಗಸ್ಟ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಶೈಕ್ಷಣಿಕ ರಂಗದಲ್ಲಿ ಕೆಲಸ ಮಾಡುವವರಿಗೆ ಇದು ಒಳ್ಳೆಯ ವರ್ಷವಾಗಲಿದೆ. ಹಿರಿಯ ಅಧಿಕಾರಿಗಳೊಡನೆ ಉನ್ನತ ಮಟ್ಟದ ವಿಚಾರಗೋಷ್ಠಿ ಹಾಗೂ ಭೋಜನಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ. ಸಮಾರಂಭಗಳಲ್ಲಿ ಗಣ್ಯವ್ಯಕ್ತಿಗಳಾಗಿ ವಿಜೃಂಭಿಸುವ ಅವಕಾಶಗಳು ಒದಗಿಬರಲಿವೆ.

ಪದಬಂಧ 4682

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚಕ್ರವಿಟ್ಟಾಗ ಬಂದಿರುವ ಬಿಕ್ಕಟ್ಟಿನ ಪರಿಸ್ಥಿತಿ! (4)
3.ಈತ ಸಂಪ್ರದಾಯವನ್ನು ಅನುಸರಿಸುವವನು (4)
5. ಹಾಡುವವನು ಇಲ್ಲಿದ್ದಾನೆ (3)
6.ಸೂರ್ಯನ ಇನ್ನೊಂದು ಹೆಸರು (4)
8.ಯತಿಗೆ ಸಿಕ್ಕಿರುವ ಸೋಡಿ (4)
10.ಈ ರೀತಿ ಮುಕ್ಕು! (4)
12.ಆದರವಿಲ್ಲದ್ದು ತಿರುವು ಮುರುವಾಗಿದೆ (4)
14.ಮಯದೊಳಗಿರುವ ಪರ್ವತದ ಹೆಸರುಹುಡುಕಿ! (3)
15.ಬೆಲೆಬಾಳುವ ಮಣಿಗಳ ಆಶ್ರಯ ಸ್ಥಾನ (4)
16.ಬುನಾದಿಗೊಂದು ಪರ್ಯಾಯ ಪದ (4)

ಮೇಲಿಂದ ಕೆಳಕ್ಕೆ
1.ನಾಲ್ಕು ಕಾಲುಗಳನ್ನುಳ್ಳದ್ದು (4)
2.ಛಲ ಸ್ವಭಾವದವನು (4)
3. ಹೆಣ್ಣು ದುಂಬಿಯಿದು (4)
4.ಈ ತರ ಇಯತ್ತೆ ಕಾಣುತ್ತದೆ (4)
7.ಮುಸಲ್ಮಾನ ದೊರೆ (3)
9.ಟೊಣಪ ಇಲ್ಲಿ ತಿರುಗಿದ್ದಾನೆ (3)
10. ಹೂಳಿಟ್ಟ ನಿಧಿ ಕರದಲ್ಲಿದೆ (4)
11.ಅತ್ಯಂತ ಮಧುರವಾದುದು (4)
12.ಸೂಜಿಗಲ್ಲು ಇಲ್ಲಿದೆ (4)
13.ಬಹಳ ಒಜ್ಜೆಯು ಉಲ್ಟಾ ಪಲ್ಟಾಆಗಿಬಿಟ್ಟಿದೆ (4)

1			2	■	3			4
	■	■		■		■	■	
	■	■	5			■	■	
6	7			■	8		9	
■		■	■	■	■	■		■
10			11	■	12			13
	■	■	14			■	■	
	■	■		■		■	■	
15				■	16			

4681ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಾತಾವರಣ 3.ವಿಧಾತ 5.ವಿಧಾನಸೌಧ 7.ಸಲಗ 8.ಶುಭಗಳಿಗೆ 11.ಆಸ್ತಿಕ 12.ಪಾಕಪ್ರವೀಣ 14.ದಶಕ 15.ಮ್ಲಾನವದನ

ಮೇಲಿಂದ ಕೆಳಕ್ಕೆ: 1.ವಾಸ್ತವಿಕ 2.ವಪನ 4.ತರಂಗ 6.ಸೌರಭ 7.ಸಲಿಗೆ 8.ಶುನಕ 9.ಳಿದಕ 10.ಜಾಣತನ 11.ಆಸ್ವಾದ 13.ಪ್ರಸವ

ಸುಡೊಕು 5068

	2	1		8				
			1		6			
3		5		2			8	
	8	7					1	
		4	7	6	3	8		9
5	9						7	
	3	2		7		1		5
1			2		5			
	5			4		2	3	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5067 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭೀಮನ ಅಮಾವಾಸ್ಯೆ: ದಾಂಪತ್ಯದ ಆದರ್ಶ

• ಎಸ್. ಸೂರ್ಯಪ್ರಕಾಶ ಪಂಡಿತ್

ದಾಂಪತ್ಯದ ಹಿರಿಮೆಯನ್ನೂ ಗೃಹಸ್ಥಾಶ್ರಮದ ಗರಿಮೆಯನ್ನೂ ಎತ್ತಿಹಿಡಿಯುವ ವ್ರತಗಳಲ್ಲಿ ಒಂದು ಭೀಮೇಶ್ವರವ್ರತ. ಇದು ಭೀಮನ ಅಮಾವಾಸ್ಯೆಎಂದೇ ಪ್ರಸಿದ್ಧಿ.

ಭಾರತೀಯ ಸಂಸ್ಕೃತಿಯಲ್ಲಿ ದಿನವೂ ಒಂದಲ್ಲ ಒಂದು ವ್ರತ, ಪರ್ವ ಇದ್ದೇ ಇರುತ್ತದೆ. ಇವುಗಳಲ್ಲಿ ಎಲ್ಲವನ್ನೂ ನಾವು ಪ್ರಧಾನವಾಗಿ ಆಚರಿಸುವುದಿಲ್ಲ. ಹೀಗಾಗಿ ನೂರಾರು ವ್ರತಗಳ ಬಗ್ಗೆ ನಮಗೆ ಪರಿಚಯವೇ ಇರುವುದಿಲ್ಲ. ನಮಗೆ ತಿಳಿದಿರುವಂಥ ವ್ರತಗಳನ್ನೂ ಪರ್ವಗಳನ್ನೂ ಒಮ್ಮೆ ಅವಲೋಕಿಸಿದರೂ ಸಾಕು, ಎಲ್ಲ ಆಚರಣೆಗಳ ಹಿಂದಿರುವ ಏಕಸೂತ್ರವೊಂದು ಸ್ಪಷ್ಟವಾಗಿ ಗೋಚರಿಸುತ್ತದೆ. ನಮ್ಮ ಬಹುಪಾಲು ಹಬ್ಬ-ಹರಿದಿನಗಳು ನಮ್ಮ ಕೌಟುಂಬಿಕ ಮೌಲ್ಯಗಳನ್ನು ಎತ್ತಿಹಿಡಿಯುವಂಥದ್ದೇ ಆಗಿರುವುದು ಕಾಕತಾಳೀಯವಲ್ಲ.

ನಮ್ಮ ಸಂಸ್ಕೃತಿಯ ವಿಶಿಷ್ಟತೆ ಎಂದರೆ ಕುಟುಂಬದ ವ್ಯವಸ್ಥೆಯ ಬಗ್ಗೆ ನಮಗಿರುವ ಆದರ್ಶ. ನಮ್ಮ ಜೀವನದ ಸಾರ್ಥಕತೆಗೆ ನೆರವಾಗುವ ಸಾಮಾಜಿಕ ಮಹಾಸಂಸ್ಥೆಯೇ ನಮ್ಮ ಕುಟುಂಬ ಎಂಬ ನಿಲುವು ನಮ್ಮದು. ಕುಟುಂಬದ ಕೇಂದ್ರವೇ ದಾಂಪತ್ಯ. ಈ ದಾಂಪತ್ಯ ಎಂಬ ಕೇಂದ್ರದ ಸುತ್ತಲೂ ಬೆಳೆದಿರುವಂಥ ವಿಶಾಲ ಮೌಲ್ಯಗಳೇ ಗೃಹಸ್ಥಾಶ್ರಮ ಎನಿಸಿಕೊಂಡಿದೆ. ಎಲ್ಲ ಆಶ್ರಮಗಳಿಗಿಂತಲೂ ಗೃಹಸ್ಥಾಶ್ರಮವೇ ಶ್ರೇಷ್ಠ; ನಮ್ಮ ಜೀವನಕ್ಕೆ ಧನ್ಯತೆಯನ್ನು ಒದಗಿಸುವಂಥದ್ದೇ ಗೃಹಸ್ಥಾಶ್ರಮ ಎಂಬ ಉದ್ಗಾರಗಳು ನಮ್ಮ ಸಂಸ್ಕೃತಿಗೆ ಸಹಜ ಸ್ವಭಾವವೇ ಆಗಿದೆ. ಹೀಗೆ ದಾಂಪತ್ಯದ ಹಿರಿಮೆಯನ್ನೂ ಗೃಹಸ್ಥಾಶ್ರಮದ ಗರಿಮೆಯನ್ನೂ ಎತ್ತಿಹಿಡಿಯುವ ವ್ರತಗಳಲ್ಲಿ ಒಂದು ಭೀಮೇಶ್ವರವ್ರತ. ಇದು ಭೀಮನ ಅಮಾವಾಸ್ಯೆ ಎಂದೇ ಪ್ರಸಿದ್ಧಿ.

ನಮ್ಮ ಜೀವನ ಸಂತೋಷವಾಗಿರಬೇಕು ಎಂದರೆ ನಮ್ಮ ಕುಟುಂಬ ಸಂತೋಷವಾಗಿರಬೇಕು. ಹೌದು, ಸಮಾಜವೂ ಒಂದು ಕುಟುಂಬವೇ, ದೇಶವೂ ಒಂದು ಕುಟುಂಬವೇ. ಆದರೆ ಈ ವಿಶಾಲ್ಯ ನಮಗೆ ಒದಗಬೇಕಾದರೆ ನಮ್ಮ 'ಮನೆ' ಎಂಬ ಕುಟುಂಬ ಸದೃಢವಾಗಿರಬೇಕು, ಸಂತೋಷವಾಗಿರಬೇಕು. ಇಂಥ ಆದರ್ಶಮಯವೂ ಆನಂದಮಯವೂ ಆದ ಕುಟುಂಬ ಹೇಗಿರುತ್ತದೆ? ಈ ಪದ್ಯದಲ್ಲಿ ಅಂಥದೊಂದು ಚಿತ್ರಣ ಇದೆ:

ಇಂದು ಭೀಮನ ಅಮಾವಾಸ್ಯೆ

ಸನ್ನಿತ್ರ ಸದ್ಧನಂ ಸ್ವಯೋಷಿತಿ ರತಿಶ್ಚಾಜ್ಞಾಪರಾಃ ಸೇವಕಾಃ
ಸಾನಂದಂ ಸದನಂ ಸುತಾಶ್ಚ ಸುಧಿಯಃ ಕಾಂತಾ ಮನೋಹಾರಿಣೀ |
ಆತಿಥ್ಯಂ ಶಿವಪೂಜನಂ ಪ್ರತಿದಿನಂ ಮಿಷ್ಟಾನ್ನಪಾನಂ ಗೃಹೇ
ಸಾಧೋಃ ಸಂಗಮುಪಾಸತೇ ಹಿ ಸತತಂ ಧನ್ಯೋ ಗೃಹಸ್ಥಾಶ್ರಮಃ ||

'ಗೃಹಸ್ಥನಿಗೆ ಒಳ್ಳೆಯ ಸ್ನೇಹಿತರಿರುತ್ತಾರೆ; ಧನಕನಕಗಳೂ ಇರುತ್ತವೆ; ಪ್ರೀತಿಯನ್ನು ಕೊಡುವ ಹೆಂಡತಿಯೂ ಇರುತ್ತಾಳೆ; ಕೆಲಸಕ್ಕೆ ನೆರವಾಗುವ ಸೇವಕರೂ ಇರುತ್ತಾರೆ; ಇಷ್ಟೇ ಅಲ್ಲ, ಇದ್ದ ಮನೆ ಅಂಥ ಮನೆಯಲ್ಲಿ ಆನಂದ ಸಹಜವಾಗಿಯೇ ಇರುತ್ತದೆ; ಇದರ ಜೊತೆಗೆ ಮಕ್ಕಳು ಬುದ್ಧಿವಂತರು; ಹೆಂಡತಿ ಸುಂದರಿ. ಇಷ್ಟೆಲ್ಲ ಸಂತೋಷ, ಅನುಕೂಲಗಳು ಇದ್ದಾಗ ಅತಿಥಿಸತ್ಕಾರಕ್ಕೆ ಕೊರತೆಯಿರದೂ ಇದ್ದೀತೆ? ಮನೆಯಲ್ಲಿ ಪೂಜೆ ವ್ರತ ಹಬ್ಬಗಳ ಸಂಭ್ರಮ; ದೇವತಾಕಾರ್ಯವೂ ನಿರಂತರ. ಇವೆಲ್ಲಕ್ಕೂ ಮೀರಿದ ಗುಣವಾಗಿ ಹಲವರು ಸಜ್ಜನರ ಸ್ನೇಹ. ಇಷ್ಟೆಲ್ಲ ಸಂತಸಗಳ ನೆಲೆಯನ್ನು ಒದಗಿಸಿರುವ ಗೃಹಸ್ಥಾಶ್ರಮವೇ ಧನ್ಯ, ಅಲ್ಲವೆ?'

ಇಂಥದೊಂದು ಸಂತೋಷಕ್ಕೆ ಮನೆ ಆಶ್ರಯವಾಗಬೇಕಾದರೆ ಮೊದಲು ಅದಕ್ಕೆ ತಕ್ಕ ದಾಂಪತ್ಯ ಸಿದ್ಧವಾಗಬೇಕು. ಎಂದರೆ ಹೆಣ್ಣಿಗೆ ತಕ್ಕ ಗಂಡು, ಗಂಡಿಗೆ ತಕ್ಕ ಹೆಣ್ಣು ಒಂದಾಗಿ, ಸತಿ-ಪತಿಗಳಾಗಬೇಕು. ಇದೇ ದಾಂಪತ್ಯ. ಹೆಣ್ಣೊಬ್ಬಳು ತನಗೆ ಒಳ್ಳೆಯ ಗಂಡ ದೊರೆಯಲಿ ಎಂದು ಆಶಿಸುವುದು ಸಹಜ. ಹೀಗೆಯೇ ಗಂಡು ಕೂಡ ತನಗೆ ತಕ್ಕ ಹೆಂಡತಿ ದೊರೆಯಲಿ ಎಂದು ಬಯಸುವುದೂ ಸಹಜ. ಹೀಗೆ ಪರಸ್ಪರ ಹೊಂದಾಣಿಕೆಯಾಗುವ ಹೆಣ್ಣು-ಗಂಡು 'ದಂಪತಿ'ಯಾದರೆ ಆಗ ಅದು ಸಂತೋಷಮಯವಾದ ಕುಟುಂಬಕ್ಕೆ ಮೂಲವಾಗುತ್ತದೆ. ಇಂಥದೊಂದು ಆದರ್ಶವೇ ಭೀಮನ ಅಮಾವಾಸ್ಯೆಯ ವ್ರತದಲ್ಲಿ ನಾವು ಕಾಣಬಹುದು. ಇನ್ನು ಮದುವೆಯಾಗದ ಹೆಣ್ಣು ತನಗೆ ಭೀಮನಂಥ ಗಂಡ ಸಿಗಲಿ ಎಂದೂ, ಆಗಷ್ಟೆ ಮದುವೆಯಾಗಿರುವ ಹೆಣ್ಣು ತನ್ನ ಗಂಡ ಭೀಮನಂತೆ ಆಗಲಿ ಎಂದೂ ಪ್ರಾರ್ಥಿಸಿ ಆಚರಿಸುವ ವ್ರತವೇ ಭೀಮನ ಅಮಾವಾಸ್ಯೆಯ ವಿಶೇಷತೆ. ಭೀಮ ಎಂದರೆ ಶಿವ. ಆದರ್ಶ ದಾಂಪತ್ಯಕ್ಕೆ ಉದಾಹರಣೆ ಎಂದರೆ ಶಿವ-ಪಾರ್ವತಿ; ಜಗತ್ತಿನ ಆದಿದಂಪತಿಗಳು. ಶಿವ ತನ್ನ ಅರ್ಧ ಶರೀರವನ್ನೇ ತನ್ನ ಹೆಂಡತಿಗೆ ಕೊಟ್ಟವನು. ಹೀಗಾಗಿ ಇಂಥ ಶಿವನನ್ನು ದಾಂಪತ್ಯದ ಸೌಖ್ಯಕ್ಕಾಗಿ ಆರಾಧಿಸುವುದು ಯುಕ್ತವೇ ಆಗಿದೆ.

ದಾಂಪತ್ಯದ ಸಾರ್ಥಕತೆ ಕೇವಲ ಹೆಣ್ಣನ್ನು ಮಾತ್ರವೇ ಅವಲಂಬಿಸಿಲ್ಲ. ಹೀಗಾಗಿ ಒಳ್ಳೆಯ ಗಂಡನಿಗಾಗಿ ಹೆಣ್ಣು ಪ್ರಾರ್ಥಿಸುವಂತೆಯೇ, ಗಂಡು ಕೂಡ ಒಳ್ಳೆಯ ಹೆಂಡತಿಗಾಗಿ ಪ್ರಾರ್ಥಿಸಬೇಕು ಎಂಬ ಧ್ವನಿಯೂ ಈ ವ್ರತದ ಆಚರಣೆಯಲ್ಲಿ ಇದ್ದೇ ಇದೆ. ಪಾರ್ವತಿಯ ತಪಸ್ಸಿನ ಫಲ ಶಿವನಾದರೆ, ಶಿವನ ತಪಸ್ಸಿನ ಫಲ ಪಾರ್ವತಿ ಎಂಬುದನ್ನು ನಾವು ಮರೆಯುವಂತಿಲ್ಲ.

ಸಂಕ್ಷಿಪ್ತ ಸುದ್ದಿ

ತಿರುಪತಿ: ವಿಶೇಷ ದರ್ಶನ ಟಿಕೆಟ್‌ಗಳ ಸಂಖ್ಯೆ ಹೆಚ್ಚಳ

ಹೈದರಾಬಾದ್: ವೆಂಕಟೇಶ್ವರ ದೇವರ ವಿಶೇಷ ದರ್ಶನಕ್ಕಾಗಿ ಆನ್‌ಲೈನ್ ಮೂಲಕ ಪ್ರತಿ ದಿನ ವಿತರಿಸುವ ಆಗಸ್ಟ್ ತಿಂಗಳ ಟಿಕೆಟ್‌ಗಳ ಸಂಖ್ಯೆಯನ್ನು 5,000 ದಿಂದ 8,000ಕ್ಕೆ ಹೆಚ್ಚಿಸಲಾಗಿದೆ ಎಂದು ತಿರುಪತಿ ತಿರುಮಲ ದೇವಸ್ಥಾನ (ಟಿಟಿಡಿ) ಶನಿವಾರ ತಿಳಿಸಿದೆ.

'ಕೋವಿಡ್–19 ಪ್ರಕರಣಗಳ ತೀವ್ರತೆ ಆಧರಿಸಿ ಟಿಕೆಟ್‌ಗಳ ಸಂಖ್ಯೆಯನ್ನು ಪರಿಷ್ಕರಿಸಲಾಗುವುದು' ಎಂದು ಟಿಟಿಡಿ ಸಿಇಒ ಡಾ.ಜವಾಹರ್ ರೆಡ್ಡಿ ಮನವಿ ಮಾಡಿದ್ದಾರೆ.

ಪಾಕ್‌ನಲ್ಲಿ ಹಿಂದೂ ದೇಗುಲ ಮೇಲೆ ದಾಳಿ: 50 ಜನರ ಬಂಧನ

ಲಾಹೋರ್: ಪಂಜಾಬ್ ಪ್ರಾಂತ್ಯದಲ್ಲಿನ ಹಿಂದೂ ದೇವಸ್ಥಾನದ ಮೇಲೆ ನಡೆದ ದಾಳಿಗೆ ಸಂಬಂಧಿಸಿ ಪೊಲೀಸ್ ಇಲಾಖೆ 50ಕ್ಕೂ ಹೆಚ್ಚು ಜನರನ್ನು ಶನಿವಾರ ಬಂಧಿಸಿದೆ.

ಘಟನೆಗೆ ಸಂಬಂಧಿಸಿ 150ಕ್ಕೂ ಹೆಚ್ಚು ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿ ಉಸ್ಮಾನ್ ಬುಜ್ದಾರ್ ಟ್ವೀಟ್ ಮಾಡಿದ್ದಾರೆ.

ಅಮೆರಿಕ: ನಿತ್ಯ 1 ಲಕ್ಷ ಕೋವಿಡ್ ಪ್ರಕರಣ



ಬಾಲ್ಟಿಮೋರ್ (ಅಮೆರಿಕ) (ಎಪಿ): ಅಮೆರಿಕದಲ್ಲಿ ಈಗ ಪ್ರತಿ ದಿನ ಒಂದು ಲಕ್ಷ ಕೋವಿಡ್–19ರ ಹೊಸ ಸೋಂಕಿನ ಪ್ರಕರಣಗಳು ವರದಿಯಾಗುತ್ತಿದ್ದು, ಇದು ದೇಶದಲ್ಲಿ 'ಡೆಲ್ಟಾ' ರೂಪಾಂತರ ಸೋಂಕು ವೇಗವಾಗಿ ಹರಡುತ್ತಿರುವ ಸೂಚನೆಯಾಗಿದೆ ಎಂದು ಆರೋಗ್ಯ ಅಧಿಕಾರಿಗಳು ಎಚ್ಚರಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಜನುಮ ದಿನದ ಸವಿನೆನಪು



ಡಾ. ಎಂ. ಸಿ. ರವೀಂದ್ರನಾಥ್
(08-08-1950 : 09-08-2012)
ಸಂಸ್ಥಾಪಕರು:
ಆಕ್ಸ್‌ಫರ್ಡ್ ವಿದ್ಯಾಸಂಸ್ಥೆಗಳು
ನಾಗರಭಾವಿ & ಉಲ್ಲಾಳ, ಬೆಂಗಳೂರು.
MCR NATH CONSTRUCTIONS & BUILDERS

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮಧ್ಯಪ್ರದೇಶದಲ್ಲಿ 8,832 ಜನರ ರಕ್ಷಣೆ • ಬಂಗಾಳ: ಉಕ್ಕಿ ಹರಿದ ನದಿಗಳು

ಉತ್ತರ ಭಾರತ: ಪ್ರವಾಹ, ರಕ್ಷಣಾ ಕಾರ್ಯ ಚುರುಕು

ಭೋಪಾಲ್/ಕೋಟಾ/ಕೋಲ್ಕತ್ತ (ಪಿಟಿಐ): ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಭಾರಿ ಮಳೆ ಬೀಳುತ್ತಿದೆ. ರಾಜಸ್ಥಾನ, ಮಧ್ಯಪ್ರದೇಶ ಹಾಗೂ ಪಶ್ಚಿಮ ಬಂಗಾಳ ಹೆಚ್ಚು ಬಾಧಿತವಾಗಿದ್ದು, ಜನರು ಪರದಾಡುತ್ತಿದ್ದಾರೆ.

ಪಶ್ಚಿಮ ಬಂಗಾಳದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗುತ್ತಿದ್ದು, ಜನರ ಸ್ಥಳಾಂತರ ಹಾಗೂ ಪರಿಹಾರ ಕಾರ್ಯ ಸಮರೋಪಾದಿಯಲ್ಲಿ ನಡೆಯುತ್ತಿದೆ.

ಮಧ್ಯಪ್ರದೇಶದ ಚಂಬಲ್ ಮತ್ತು ಗ್ವಾಲಿಯರ್ ವಲಯದಲ್ಲಿ ಮಳೆ ಮತ್ತು ಪ್ರವಾಹದಿಂದ ಸಂಭವಿಸಿದ ಅವಘಡಗಳಲ್ಲಿ ಮೃತಪಟ್ಟವರ ಸಂಖ್ಯೆ 24ಕ್ಕೆ ಏರಿದೆ.

ಗ್ವಾಲಿಯರ್, ಶಿವಪುರಿ, ಶಿಯೋಪುರ್, ದಾತಿಯಾ, ಅಶೋಕ್‌ನಗರ, ಗುಣ, ಭಿಂಡ್ ಮತ್ತು ಮೊರೆನಾ ಜಿಲ್ಲೆಗಳಲ್ಲಿ ಮಳೆ, ಪ್ರವಾಹದ ಪರಿಣಾಮ ತೀವ್ರವಾಗಿತ್ತು. 1,250 ಗ್ರಾಮಗಳು ಇದರ ಪರಿಣಾಮಕ್ಕೆ ಗುರಿಯಾಗಿದ್ದವು ಎಂದು ಎಂದು ಕಂದಾಯ ಇಲಾಖೆಯ ಕಾರ್ಯದರ್ಶಿ ಜ್ಞಾನೇಶ್ವರ್ ಪಾಟೀಲ್ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಮಧ್ಯಪ್ರದೇಶದಲ್ಲಿ 24, ಪಶ್ಚಿಮ ಬಂಗಾಳದಲ್ಲಿ 23 ಜನರ ಸಾವು
- ರಕ್ಷಣಾ ಕಾರ್ಯ: ವಾಯುಪಡೆಯ ಹೆಲಿಕಾಪ್ಟರ್‌ಗಳ ಬಳಕೆ

'ಪ್ರವಾಹ ಪೀಡಿತ ಪ್ರದೇಶಗಳಿಂದ ಈ ವರೆಗೆ 8,832 ಜನರನ್ನು ರಕ್ಷಿಸಲಾಗಿದೆ. 29,280 ಜನರನ್ನು ಸುರಕ್ಷಿತ ಜಾಗಗಳಿಗೆ ಸ್ಥಳಾಂತರಿಸಲಾಗಿದೆ' ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಶನಿವಾರ ಹೇಳಿದ್ದಾರೆ.

ಉಕ್ಕಿ ಹರಿಯುತ್ತಿರುವ ನದಿಗಳು: ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯಲ್ಲಿ ಗಂಗಾ, ಫುಲ್ಹಾರ್ ಹಾಗೂ ಮಹಾನಂದ ನದಿಗಳಲ್ಲಿ ನೀರಿನ ಪ್ರಮಾಣ ಹೆಚ್ಚುತ್ತಿದ್ದು, ಅಪಾಯ ಮಟ್ಟ ಮೀರಿ ಹರಿಯುತ್ತಿವೆ.

ಹೂಗ್ಲಿ ಜಿಲ್ಲೆಯಲ್ಲಿ ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕಿರುವ ಜನರಿಗೆ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ಗಳ ಮೂಲಕ ಆಹಾರ ಪೊಟ್ಟಣಗಳನ್ನು ಒದಗಿಸಲಾಗುತ್ತಿದೆ. ಎನ್‌ಡಿಆರ್‌ಎಫ್

ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಖಾನಾಕುಲ್ ಪ್ರದೇಶದಲ್ಲಿ ವಾಯುಪಡೆಯ ಹೆಲಿಕಾಪ್ಟರ್ ರಕ್ಷಣಾ ಕಾರ್ಯದಲ್ಲಿ ತೊಡಗಿರುವುದು –ಪಿಟಿಐ ಚಿತ್ರ

ಸಿಬ್ಬಂದಿ, ಆಹಾರ, ಔಷಧಗಳು ಹಾಗೂ ಪರಿಹಾರ ಸಾಮಗ್ರಿಗಳನ್ನು ವಿತರಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಭಾಗದ ಜಿಲ್ಲೆಗಳಾದ ದಕ್ಷಿಣ 24 ಪರಗಣ, ಪೂರ್ವ ಮೇದಿನಿಪುರ ಹಾಗೂ ಹೌರಾ ಜಿಲ್ಲೆಗಳಲ್ಲಿ ಪ್ರವಾಹದಿಂದ ಜನರು ಪರದಾಡುವಂತಾಗಿದೆ.

ದಾಮೋದರ ವ್ಯಾಲಿ ಕಾರ್ಪೊರೇಷನ್ (ಡಿವಿಸಿ)ವ್ಯಾಪ್ತಿಯ ಅಣೆಕಟ್ಟುಗಳಿಂದ 29,000 ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗಿದೆ.

ರಾಜಸ್ಥಾನ; ಓಂ ಬಿರ್ಲಾರಿಂದ ವೈಮಾನಿಕ ಸಮೀಕ್ಷೆ: ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಕೋಟಾ ಜಿಲ್ಲೆಯಲ್ಲಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಶನಿವಾರ ವೈಮಾನಿಕ ಸಮೀಕ್ಷೆ ನಡೆಸಿದರು.

'ಕೋಟಾ ಜಿಲ್ಲೆಯ ಸಂಗೋಡ್ ಪ್ರದೇಶದಲ್ಲಿ ಶನಿವಾರ 140 ಜನರನ್ನು ರಕ್ಷಿಸಿ, ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು. ಪರಿಸ್ಥಿತಿ ಈಗ ನಿಯಂತ್ರಣದಲ್ಲಿದೆ' ಎಂದು ಜಿಲ್ಲಾಧಿಕಾರಿ ಉಜ್ವಲ್ ರಾಠೋಡ್ ತಿಳಿಸಿದ್ದಾರೆ.

ಚಿನ್ನದ ಬಾಂಡ್ 5ನೇ ಕಂತು ಸೋಮವಾರ ಆರಂಭ

ನವದೆಹಲಿ (ಪಿಟಿಐ): ಚಿನ್ನದ ಬಾಂಡ್ ಯೋಜನೆಯ ಪ್ರಸಕ್ತ ಹಣಕಾಸು ವರ್ಷದ ಐದನೇ ಕಂತು ಸೋಮವಾರದಿಂದ ಆರಂಭವಾಗಲಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡಿಕೆ ಬೆಲೆಯನ್ನು ಪ್ರತಿ ಗ್ರಾಂಗೆ ₹ 4,790 ನಿಗದಿಪಡಿಸಿದೆ.

ಸೋಮವಾರ ಬಾಂಡ್ ಖರೀದಿ ಆರಂಭವಾಗಲಿದ್ದು ಶುಕ್ರವಾರ ಮುಕ್ತಾಯವಾಗಲಿದೆ. ಇದೇ 17ರಂದು ಬಾಂಡ್ ವಿತರಣೆ ಆಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಆನ್‌ಲೈನ್ ಮೂಲಕ ಬಾಂಡ್ ಖರೀದಿಗೆ ಅರ್ಜಿ ಸಲ್ಲಿಸುವವರಿಗೆ ₹ 50 ವಿನಾಯಿತಿ ಸಿಗಲಿದೆ. ಹೀಗಾಗಿ ಇವರಿಗೆ ಬಾಂಡ್ ಬೆಲೆಯು ಪ್ರತಿ ಗ್ರಾಂಗೆ ₹ 4,740 ಇರಲಿದೆ. ನಾಲ್ಕನೇ ಕಂತಿನಲ್ಲಿ ಪ್ರತಿ ಗ್ರಾಂಗೆ ₹ 4,807ರಂತೆ ದರ ನಿಗದಿಪಡಿಸಲಾಗಿತ್ತು.

2021ರ ಮೇ ತಿಂಗಳಿನಿಂದ 2021ರ ಸೆಪ್ಟೆಂಬರ್‌ವರೆಗೆ ಒಟ್ಟು ಆರು ಕಂತುಗಳಲ್ಲಿ ಚಿನ್ನದ ಬಾಂಡ್ ಯೋಜನೆಯನ್ನು ಜಾರಿಗೊಳಿಸುವುದಾಗಿ ಕೇಂದ್ರ ಸರ್ಕಾರವು ಈಗಾಗಲೇ ಹೇಳಿದ್ದು, ಅದರಂತೆ ಐದನೇ ಕಂತು ಸೋಮವಾರದಿಂದ ಆರಂಭವಾಗಲಿದೆ.

ಕೇಂದ್ರ ಸರ್ಕಾರದ ಸಮ್ಮುಖದಲ್ಲಿ ಆರ್‌ಬಿಐ ಈ ಬಾಂಡ್‌ಗಳನ್ನು ವಿತರಣೆ ಮಾಡುತ್ತದೆ.

ಬ್ಯಾಂಕ್‌ಗಳು, ಅಯ್ದ ಅಂಚೆ ಕಚೇರಿಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ರಾಷ್ಟ್ರೀಯ ಮತ್ತು ಮುಂಬೈ ಷೇರು ವಿನಿಮಯ ಕೇಂದ್ರಗಳಲ್ಲಿ ಈ ಬಾಂಡ್‌ಗಳನ್ನು ಮಾರಾಟ ಮಾಡಲಾಗುತ್ತದೆ.

ಕನಿಷ್ಠ ಹೂಡಿಕೆ 1 ಗ್ರಾಂ ಇರಲಿದೆ. ವ್ಯಕ್ತಿಗಳು ಖರೀದಿಸಬಹುದಾದ ಗರಿಷ್ಠ ಪ್ರಮಾಣ 4 ಕೆ.ಜಿ. ಹಿಂದೂ ಅವಿಭಕ್ತ ಕುಟುಂಬಕ್ಕೆ 4 ಕೆ.ಜಿ ಹಾಗೂ ಟ್ರಸ್ಟ್‌ಗಳಿಗೆ 20 ಕೆ.ಜಿಯ ಗರಿಷ್ಠ ಮಿತಿ ನಿಗದಿಯಾಗಿದೆ.

ಇ-ಅಸೆಸ್‌ಮೆಂಟ್: ಕುಂದುಕೊರತೆಗೆ ಮೂರು ಇ-ಮೇಲ್

ನವದೆಹಲಿ (ಪಿಟಿಐ): ವಿದ್ಯುನ್ಮಾನ ಮೌಲ್ಯಮಾಪನ (ಇ-ಅಸೆಸ್‌ಮೆಂಟ್, ಫೇಸ್‌ಲೆಸ್ ಅಸೆಸ್‌ಮೆಂಟ್) ಯೋಜನೆಯಡಿ ತೆರಿಗೆದಾರರು ಕುಂದು ಕೊರತೆಗಳನ್ನು ದಾಖಲಿಸಲು ಆದಾಯ ತೆರಿಗೆ ಇಲಾಖೆಯು ಮೂರು ಅಧಿಕೃತ ಇ-ಮೇಲ್ ವಿಳಾಸಗಳನ್ನು ನೀಡಿದೆ. ಈ ಸಂಬಂಧ ಶನಿವಾರ ಅಧಿಸೂಚನೆ ಹೊರಡಿಸಿದೆ.

ಈ ಕುರಿತು ಇಲಾಖೆಯು ತನ್ನ ಅಧಿಕೃತ ಟ್ವಿಟರ್ ಹ್ಯಾಂಡಲ್‌ನಲ್ಲಿ ತಿಳಿಸಿದೆ.

ಮೂರು ಇ-ಮೇಲ್ ವಿಳಾಸಗಳು: ಮೌಲ್ಯಮಾಪನ ಕ್ಕಾಗಿ samadhan.faceless.assessment@incometax.gov.in ದಂಡಕ್ಕೆ ಸಂಬಂಧಿಸಿದಂತೆ samadhan.faceless.penalty@incometax.gov.in ಮನವಿ ಸಲ್ಲಿಸಲು samadhan.faceless.appeal@incometax.gov.in

ಬ್ಯಾಂಕ್ ಆಫ್ ಬರೋಡಾಗೆ ಲಾಭ

ನವದೆಹಲಿ (ಪಿಟಿಐ): ಬ್ಯಾಂಕ್ ಆಫ್ ಬರೋಡಾ (ಬಿಒಬಿ) ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ₹ 1,209 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹ 864 ಕೋಟಿಗಳಷ್ಟು ನಷ್ಟ ಅನುಭವಿಸಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹472

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1460 (1460)
ಸೋಯಾ (ರಿಫೈನ್ಡ್)	₹1390 (1398)
ಸೂರ್ಯಕಾಂತಿ (ರಿಫೈನ್ಡ್)	₹1465 (1475)
ಪಾಮೋಲಿನ್	₹1255 (1258)

ಮುಂಬೈ ಧಾರಣೆ

ಶೇಂಗಾ

7-8-2021

ಜಾವಾ 70/80(ಹೊಸ)	9950-10000
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	9550-9600
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1470)
ಹೊಸ ವಾರದ ಡೆಲಿವರಿ	1465 (1465)
ಸೋಯಾ ಕಚ್ಚಾ	1355 (1365)
ಪಾಮ್ ವಾರದ ಡೆಲಿವರಿ	1253 (1256)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1395)

ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 46,800 (47,100)
ಬೆಳ್ಳಿ ಕೆ.ಜಿ 65,100 (66,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬ್ಯಾಡಗಿ	
ಕೋಕ	10000-22500
ಹೊಸತು	23500-45000
ಹಳತು	42500-52000
ಚಿತ್ರದುರ್ಗ	
ಅಪಿ	41419-41829
ಬೆಟ್ಟೆ	35600-36000
ಕೆಂಪುಗೋಟು	29610-30079
ರಾಶಿ	40939-41369
ಸಿದ್ದಾಪುರ	
ಬಿಳೆಗೋಟು	28980-34599

ಚಾಲಿ	37699-41299
ಕೋಕ	24731-29890
ಕೆಂಪುಗೋಟು	29289-31899
ರಾಶಿ	40549-41299
ತಟ್ಟಿಬೆಟ್ಟೆ	36800-36800
ಶಿರಸಿ	
ಬೆಟ್ಟೆ	33689-39198
ಬಿಳೆಗೋಟು	26199-3644
ಚಾಲಿ	35399-41738
ರಾಶಿ	39321-42699

ರಾಮನಗರ ರೇಷ್ಮೆಗೂಡು	
ಮಿಶ್ರತಳಿ	249-512
ದ್ವಿತಳಿ	271-533

ಮೂಡಿಗೆರೆ ಕಾಫಿ

	ಮುದ್ದುಮನೆ
ಎಪಿ	13500
ಎಸಿ	5665
ಆರ್‌ಪಿ	6000
ಆರ್‌ಸಿ	3355

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್
Water Proofing Materials
ಲೀಕೇಜ್.. ಲೀಕೇಜ್.. ನಿಮ್ಮ ಮನೆ, ಕಚೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್
Commercial Land
General
REQUIRE 4500-6000 sqft of Land suitable to construct an office building on joint development basis only, in Bangalore City. The office space is for a prestigious bank for a long lease with high rentals. Contact: 9494334334.

ಉದ್ಯೋಗಾವಕಾಶ
Drivers
ದೊಡ್ಡ ಸಂಸ್ಥೆ ಇಂಡಸ್ಟ್ರಿಯಲ್ ಎರಿಯಾದಲ್ಲಿರುವ ಕಾರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿಗೆ ಅನುಭವವುಳ್ಳ ಆಟೋ ಚಾಲಕರು ಬೇಕಾಗಿದ್ದಾರೆ. ಸಂಪರ್ಕಿಸಿ: ಫೋನ್: 09940136089

General
ಇಂಡೇನ್ ಬೇಕಾಗಿದ್ದಾರೆ ಬೆಂಗಳೂರಿನ ಸುಪ್ರಸಿದ್ಧ ಕಂಪನಿಯಲ್ಲಿ ಆಫೀಸ್ ಕೆಲಸಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ (SSLC to Any Degree Pass/Fail) ಸಂಬಳ 18,000/-ರಿಂದ 65,000/- ದವರೆಗೆ ವಸತಿಯೊಂದಿಗೆ ಇಂದೇ ಸಂಪರ್ಕಿಸಿ: ಸುಬ್ರಹ್ಮಣ್ಯ 9538032277, 9538075599

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ಪವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಇರುತ್ತದೆ. ಸಂಪರ್ಕಿಸಿ: 7760014526, 9739544856

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕ/ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ7th, SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೊಂದಿಗೆ ESI/PFನೊಂದಿಗೆ ಸಂಬಳ:16,500ರಿಂದ 45000/-ದವರೆಗೆ. 9538250222, 9538191333

ತಕ್ಷಣ ಬೇಕಾಗಿದ್ದಾರೆ ಬೆಂಗಳೂರು&ಕರ್ನಾಟಕದಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ,ಫ್ಯಾಕ್ಟರಿಗಳಿಗೆ,ಶೋರೂಂಗಳಿಗೆಯುವಕರು ವಿದ್ಯಾರ್ಹತೆಯುಳ್ಳವರು ವಿದ್ಯಾರ್ಹತೆಯಿಲ್ಲದವರೂ ವಸತಿಯೊಂದಿಗೆ ಸಂಬಳ+OT,17,200/- 47000/-.8884412822, 9986083666

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ ವಸತಿಯೊಂದಿಗೆ Salary+OT 16,800-45000/-. 9980295449, 9902839010

ಫ್ಯಾಕ್ಟರಿ ಮತ್ತು ಡಿಸ್ ಪ್ಯಾಚ್ ಸಹಾಯಕ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು: 30 ವರ್ಷಕ್ಕಿಂತ ಕಡಿಮೆ, ಅಥವಾ 12ನೇ ತರಗತಿ ಉತ್ತೀರ್ಣ, ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಸ್ಥಳ: 'ಇಂಡಸ್ಟ್ರಿಯಲ್, ಪೀಣ್ಯ ಮೊದಲನೆ ಹಂತ, ಬೆಂಗಳೂರು-560 058 ಸಂಪರ್ಕಿಸಿ: 9822747289.

WORK FROM home with training, fresh graduates or 10+2 call 7605058339

Marketing & Sales
WANTED EXPERIENCED Sales Managers for Cement. Contact: 9916449766/ 9986696546, acecemex@gmail.com

WANTED DRA/NON DRA Field Executives/ Telecallers for Bangalore, Attractive Salary, PF+ESI Contact: 9113602995/ 8867052293.

Office Boys/ Peon
ಆಫೀಸ್‌ಬಾಯ್ ಬೇಕಾಗಿದ್ದಾರೆ. ಕೆ.ಆರ್.ಪುರಂ ರೈಲ್ವೆ ಸ್ಟೇಷನ್ ಹತ್ತಿರವಿರುವ ಆಫೀಸ್‌ನಲ್ಲಿ ಕೆಲಸಮಾಡಲು, ದ್ವಿಚಕ್ರ ವಾಹನ ಹೊಂದಿರಬೇಕು, ಸಂಬಳ 15,000=00. ಸಂಪರ್ಕಿಸಿ: 9845058243

Part-Time Jobs
FULL TIME/WORK From Home ಮನೆಯಲ್ಲಿ ಕುಳಿತು ವಾರಕ್ಕೆ 34 ಸಾವಿರ ಗಳಿಸಿ. ಯಾವುದೇ ವಿದ್ಯಾರ್ಹತೆ 100% ಕೆಲಸ ಗ್ಯಾರಂಟಿ ಉಚಿತ ವಸತಿ:9538190368, 9538440549

WANTED MARRIED hindu couple husband as driver not more than 40 years and wife as Cook for a family of 5 at Bangalore Good salary Accommodation and food Police verification will be made Call 9741900909

ವ್ಯಾಪಾರ
Business to Business
Agriculture
ಗೋಕುಲ ಆರ್ಗನಿಕ್:ಸಾವಯವ ಕೃಷಿ, ಸಾವಯವ ಡೇರಿ, ಫಾರ್ಮ್ ಹಸು ಸಾಕಣೆ, (A 2 ಹಾಲು), ಆರ್ಗನಿಕ್ ಸ್ಟೋರ್, ಫ್ರ್ಯಾಂಚೈಸಿಗಳನ್ನು ಆರಂಭಿಸಲು ಹಾಗೂ ಸರಕಾರದ ಸಬ್ಸಿಡಿಗಾಗಿ ಸಂಪರ್ಕಿಸಿ: 9966926680, 9270182350

Finance
ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ಥಿರಾಸ್ತಿ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

ಓದುಗರ ಗಮನಕ್ಕೆ

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

HEALTH SPECIAL
ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
ಲೈಂಗಿಕ ರೋಗಗಳು, ಉದ್ರೇಕದ ಸಮಸ್ಯೆ, ಲೈಂಗಿಕ ನಿರಾಸಕ್ತಿ, ನಿದ್ರಾ ಸ್ಖಲನ, ಶೀಘ್ರ ಸ್ಖಲನ, ಲಿಂಗ ಚಿಕ್ಕದಾಗುವುದು, ನರ ದೌರ್ಬಲ್ಯ, ಅತಿಯಾದ ಮೊದಲೇ ಸ್ಖಲನ, ಆತಂಕ, ದೌರ್ಬಲ್ಯ, ಕಡಿಮೆ ವೀರ್ಯಾಣು, ಮುಟ್ಟು ಮೈಥುನದ ಅಡ್ಡಪರಿಣಾಮ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

ASTRO YATRA
ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ ಉಚಿತ
ನಂ.1 ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ದುರ್ಗಾಪ್ರಸಾದ್ 9845770900
ಕೇರಳ ಹಾಗೂ ಕೊಳ್ಳೇಗಾಲದ ರುಂಡಮಾಲಿನಿ ಪೂಜಾಶಕ್ತಿಯಿಂದ 2 ದಿನದಲ್ಲಿ ಪರಿಹಾರ

ಭವಿಷ್ಯ
Astrology
ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ಪೆಷಲಿಸ್ಟ್‌ರವರ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್ ಉಚಿತ ಭವಿಷ್ಯ ಪರಿಹಾರ ಶ್ರೀಕೃಷ್ಣ ದೂರವಿದ್ದ 7022443071

ಶ್ರೀಕ್ರೃಷ್ಣ ನರಸಿಂಹಸ್ವಾಮಿ ಜ್ಯೋತಿಷ್ಯರು ಪ್ರೀತಿ ಪ್ರೇಮ ವಶೀಕರಣ, ಸಂಸಾರ ವಶೀಕರಣ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಶಾಶ್ವತ ಪರಿಹಾರ. ರಾಘವೇಂದ್ರ ಗುರೂಜಿ 7337678002

ಉಚಿತ ಭವಿಷ್ಯ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ವಶೀಕರಣ, ಪುರುಷವಶೀಕರಣ,ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿಗೂ 100% ಶಾಶ್ವತ ಪರಿಹಾರ.ಮಂತ್ರಾಲಯ ಪಂಡಿತ್.ನಾಗರ್ ಶರ್ಮ.8217374106

ಅಂಭಾಭವಾನಿ ಜ್ಯೋತಿಷ್ಯಾಲಯ ಕೊಳ್ಳೇಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2 ದಿನದಲ್ಲಿ ಪರಿಹಾರ.9886755306

ಉಚಿತ ಭವಿಷ್ಯವಾಣಿ ವಶೀಕರಣ ಸ್ಪೆಷಲಿಸ್ಟ್ ಸರ್ವಸಿದ್ಧಿ ಸಾಧಕರು ಜ್ಯೋತಿಷ್ಯಶಾಸ್ತ್ರಜ್ಞರು 9900277438. ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ. 100% ಗ್ಯಾರಂಟಿ ಪರಿಹಾರ.

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು, ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವೈಯಕ್ತಿಕ
Lost
ಕಳೆದಿದೆ
ಸಂಪರ್ಕಿಸಿ: 9448787693

ಪ್ರಜಾವಾಣಿ
ಭಾನುವಾರದ
ಪುರವಣಿ
ಭಾನುವಾರ, 8 ಆಗಸ್ಟ್ 2021

ಚಾಕೊಲೇಟ್ ಮ್ಯೂಸಿಯಂನ ಚಾರಿತ್ರಿಕ ನಗರ 9



ಕನಸು ಬಿತ್ತುವ ಅಜ್ಜಿ ಮನೆ 11

ಟೋಕಿಯೊದಲ್ಲಿ ಬೆಳಗಿದ ಭಾರತದ ಸ್ತ್ರೀಶಕ್ತಿ

ಪ್ರಣತಿ ನಾಯಕ್

ಹೆಣ್ಮಕ್ಳೇ ಸ್ಟ್ರಾಂಗು ಗುರು!

ಟೋಕಿಯೊ ಒಲಿಂಪಿಕ್ ಕೂಟದ ಸಂದೇಶ ತುಂಬಾ ಸ್ಪಷ್ಟವಾಗಿದೆ. ಭಾರತೀಯ ಕ್ರೀಡಾರಂಗದಲ್ಲಿ ಸ್ತ್ರೀಶಕ್ತಿ ಈಗ ಫಳ ಫಳ ಹೊಳೆಯಲಾರಂಭಿಸಿದೆ. ಉಜ್ವಲ ಭವಿಷ್ಯದ ಕುರಿತು ಭರವಸೆಯನ್ನೂ ಮೂಡಿಸಿದೆ...

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲದಿದ್ದರೂ ಹಾಕಿಪ್ರಿಯರ ಮನಗೆದ್ದ ಮಹಿಳಾ ಹಾಕಿ ತಂಡ

ವಂದನಾ ರಾವ್

ಭಾರತೀಯ ಮಹಿಳೆಯರು ಮೂಲತಃ ಕಠಿಣ ಪರಿಶ್ರಮಿಗಳು. ಅವರಿಗೆ ಅವಕಾಶ ಮತ್ತು ಸ್ವಾತಂತ್ರ್ಯ ಸಿಕ್ಕರೆ ಏನು ಬೇಕಾದರೂ ಸಾಧಿಸುತ್ತಾರೆ. ವಿಶ್ವ ಭೂಪಟದಲ್ಲಿ ದೇಶದ ಹೆಸರು ರಾರಾಜಿಸುವಂತೆ ಮಾಡುತ್ತಾರೆ. ಟೋಕಿಯೊ ಒಲಿಂಪಿಕ್ ಕೂಟ ಅದಕ್ಕೊಂದು ಉತ್ತಮ ನಿದರ್ಶನ. ಮೀರಾಬಾಯಿ ಚಾನು, ಪಿ.ವಿ. ಸಿಂಧು, ಲವ್ಲಿನಾ ಬೋರ್ಗೊಹೈನ್ ಜಯಿಸಿರುವ ಪದಕಗಳ ಹಿಂದಿನ ಶ್ರಮ ಸಣ್ಣದಲ್ಲ.

ಈ ಕೂಟದಲ್ಲಿ ಸ್ಪರ್ಧಿಸಿರುವ ಒಬ್ಬೊಬ್ಬ ಹೆಣ್ಣುಮಗಳಿಗೂ ವಿಭಿನ್ನ ಕತೆಗಳಿವೆ. ಅವರು ಪಟ್ಟ ಪರಿಶ್ರಮ, ಅನುಭವಿಸಿದ ಕಷ್ಟಗಳು ಹಲವಾರು. ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ಅವರ ಕತೆಯನ್ನೇ ನೋಡಿ. ಬಡತನ, ಸಾಮಾಜಿಕ ಅಡೆತಡೆಗಳನ್ನು ಆ ಹುಡುಗಿ ಮೀರಿ ಬಂದ ರೀತಿ ಅಮೋಘವಾದದ್ದು. ಡಿಸ್ಕಸ್ ಥ್ರೋನಲ್ಲಿ ಕಮಲ್‌ಪ್ರೀತ್ ಕೌರ್ ಸಾಧನೆ ಮೆಚ್ಚುವಂತಹದ್ದು. ಇನ್ನುಳಿದ ಕ್ರೀಡೆಗಳಲ್ಲಿಯೂ ಹೆಣ್ಣುಮಕ್ಕಳ ಸಾಧನೆ ಗಮನಾರ್ಹ. ಇದು ಭಾರತದಲ್ಲಿ ಮಹಿಳಾ ಕ್ರೀಡೆಯು ಬೆಳೆಯುತ್ತಿರುವುದರ ದ್ಯೋತಕ. ಇನ್ನಷ್ಟು, ಮಗದಷ್ಟು ಬೆಳೆಯುವ ಅವಕಾಶವೂ ಇದೆ ಎಂಬುದು ಇಲ್ಲಿ ಮುಖ್ಯ.

ಪಿ.ವಿ. ಸಿಂಧು... ಪದಕಕ್ಕೆ ಸಿಹಿಮುತ್ತು

ಲವ್ಲಿನಾ ಬೋರ್ಗೊಹೈನ್

ಆದರೆ ಹೆಣ್ಣುಮಕ್ಕಳು ಏನಾದರೂ ಸಾಧಿಸಬೇಕೆಂದರೆ ಮೊತ್ತಮೊದಲು ಹೆತ್ತವರ ಬೆಂಬಲ ಮುಖ್ಯ. ಕುಟುಂಬ ಜೊತೆಯಾಗಿ ನಿಂತರೆ ಮುಂದಿನ ಹಾದಿ ಸುಲಭ. ನಾನು ಮಂಗಳೂರಿನ ಸಂಪ್ರದಾಯಸ್ಥ ಬ್ರಾಹ್ಮಣರ ಕುಟುಂಬದಲ್ಲಿ ಜನಿಸಿದ್ದು. ಹೆಣ್ಣುಮಕ್ಕಳಿಗೆ ನಿಯಮಗಳು ಹೆಚ್ಚು. 18–19ನೇ ವಯಸ್ಸಿಗೆ ಮದುವೆ ಮಾಡುವ ರೂಢಿಯೂ ನಮ್ಮಲ್ಲಿತ್ತು. ಶಾರ್ಟ್ಸ್ (ಅಥ್ಲೆಟಿಕ್ ಪೋಷಾಕು) ಧರಿಸಿ ಓಡುವುದು, ಕ್ರೀಡೆಗಳಲ್ಲಿ ಆಡುವುದೆಲ್ಲ ದೂರದ ಮಾತಾಗಿತ್ತು. ಆದರೆ ಶಾಲೆಯಲ್ಲಿ ನನ್ನ ಓಟದ ಪ್ರತಿಭೆಯನ್ನು ಗುರುತಿಸಿದ್ದ ಗೇಮ್ ಟೀಚರ್ ಆಗಿದ್ದ ಡಾಲಿ ಮೇಡಮ್ ಮತ್ತು ಮಂಗಳೂರು ಅಥ್ಲೆಟಿಕ್ಸ್ ಸಂಸ್ಥೆಯ ಜ್ಯೋತಿರ್ಮಯಿ ಮನೆಗೆ ಬಂದು ಅಪ್ಪನ ಮನವೊಲಿಸಿದರು. ಸ್ಪರ್ಧೆಗಳಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತು. ಅದಾದ ನಂತರ ಅಪ್ಪನೇ ನನ್ನ ಬೆಂಬಲಕ್ಕೆ ನಿಂತರು. ಎಲ್ಲ ಸಾಧನೆಗಳಿಗೂ ಅವರೇ ಬೆನ್ನಿಗೆ ನಿಂತರು.

ಆ ರೀತಿ ಎಲ್ಲರ ಮನೆಗಳಲ್ಲಿಯೂ ಹೆಣ್ಣುಮಕ್ಕಳಿಗೆ ಅವಕಾಶ ನೀಡುವಂತಾಗಬೇಕು. ಏಕೆಂದರೆ, ಈಗ ಸರ್ಕಾರದಿಂದ ತಾಂತ್ರಿಕ ಮತ್ತು ಸೌಲಭ್ಯಗಳು ಸಿಗುತ್ತಿವೆ. ನಾವು ಒಲಿಂಪಿಕ್ಸ್‌ಗೆ ಹೋದಾಗ ಮಹಿಳೆಯರ ರಿಲೆ ತಂಡದಲ್ಲಿ ಕೇವಲ ನಾಲ್ಕು ಜನ ಮಾತ್ರ ಇದ್ದೆವು. ಈಗಿನಂತೆ ಐದನೇ ರನ್ನರ್ ನೀಡುತ್ತಿರಲಿಲ್ಲ. ಇಡೀ ತಂಡದಲ್ಲಿ ಇದ್ದದ್ದು 5–6 ಮಹಿಳೆಯರು. ಈಗ 53 ಹುಡುಗಿಯರು ಇದ್ದಾರೆ. ಈ ಬೆಳವಣಿಗೆ ಖುಷಿ ಕೊಡುತ್ತದೆ.

ಕರ್ನಾಟಕದಿಂದ ಒಲಿಂಪಿಕ್ಸ್‌ಗೆ ಹೋದ ಮೊದಲ ಮಹಿಳೆಯೆಂಬ ಹೆಮ್ಮೆ ನನ್ನದು. ಆಗ ನನಗೆ ಸಿಕ್ಕ ಅವಕಾಶದಲ್ಲಿ 1984ರ ಒಲಿಂಪಿಕ್ಸ್‌ಗೆ ಆಯ್ಕೆಯಾದೆ. ಪಿ.ಟಿ. ಉಷಾ, ನಾನು, ವಲ್ಸಮ್ಮ ಮತ್ತು ಶೈನಿ ಅಬ್ರಹಾಂ ಮಹಿಳೆಯರ 4X400 ಮೀಟರ್ಸ್ ರಿಲೆ ಫೈನಲ್ ತಲುಪಿದ್ದೆವು. ಅಂದು ನಾವು ಹಚ್ಚಿದ ದೀಪ ಇವತ್ತು ಕ್ರೀಡಾಜ್ಯೋತಿಯಾಗಿ ಬೆಳಗುತ್ತಿದೆ.

ಆಗ ನಾವೆಲ್ಲ ಕ್ರೀಡೆಯ ಮೇಲಿನ ಆಸಕ್ತಿ, ಪ್ರೀತಿಗಾಗಿ ಸ್ಪರ್ಧಿಸುತ್ತಿದ್ದೆವು. ದುಡ್ಡು, ಹೆಸರು, ಹುದ್ದೆಗಳ ಆಕರ್ಷಣೆ ಇರಲಿಲ್ಲ. ಅಲ್ಲದೆ ವೃತ್ತಿಪರ ತರಬೇತಿ, ನೆರವು ಸಿಬ್ಬಂದಿ, ಟಿ.ವಿ., ಇಂಟರ್‌ನೆಟ್ ಇತ್ಯಾದಿಗಳೂ ಇರಲಿಲ್ಲ. ಒಲಿಂಪಿಕ್ ಕೂಟವೆಂಬುದು ಇದೆ ಎಂಬ ಅರಿವೂ ನನಗಿರಲಿಲ್ಲ. ಟಿ.ವಿಯಂತೂ ದೂರದ ಮಾತು. ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ನಾನು ಆಯ್ಕೆಯಾದಾಗ ರಾಜಕೀಯ ಧುರೀಣರಾಗಿದ್ದ ಜನಾರ್ದನ ಪೂಜಾರಿ ಅವರು ಆಗಿನ ಪ್ರಧಾನಿ ಇಂದಿರಾಗಾಂಧಿ ಅವರೊಂದಿಗೆ ಮಾತನಾಡಿ ಮಂಗಳೂರಿಗೆ ಟೆಲಿವಿಷನ್ ತರಿಸಿದ್ದರು. ನಾವು ಓಡುವುದನ್ನು ನೋಡಲು ವ್ಯವಸ್ಥೆ ಮಾಡಿದ್ದರು. ಅಂತಹ ಕಾಲಘಟ್ಟ ನಮ್ಮದು.

ಇನ್ನು ಅಮೆರಿಕಕ್ಕೆ ಹೋಗಿ ಏರ್‌ಪೋರ್ಟ್‌ನಲ್ಲಿ ಇಳಿದಾಗ ಹೊಸ ಜಗತ್ತಿಗೆ ಹೋದ ಅನುಭವವಾಗಿತ್ತು. ಅಲ್ಲಿಯ ಸಂಸ್ಕೃತಿ, ಕಾರ್ಯವೈಖರಿಗಳೆಲ್ಲವೂ ವಿಭಿನ್ನ. ಅವತ್ತು ವಿಮಾನ ನಿಲ್ದಾಣದಲ್ಲಿ ನಡೆದಿದ್ದ ಒಂದು ಘಟನೆ ನೆನಪಿಸಿಕೊಂಡರೆ ಈಗಲೂ ನಗು ಬರುತ್ತದೆ. ಅಲ್ಲಿ ಸೆಕ್ಯುರಿಟಿ ವಿಭಾಗದಲ್ಲಿ ಪರಿಶೀಲನೆ ಪ್ರಕ್ರಿಯೆಗಳು ನಡೆದಿದ್ದ ಸಂದರ್ಭ ಅದು. ‘ಭದ್ರತಾ ಅಧಿಕಾರಿಯೊಬ್ಬ ನನ್ನತ್ರ ಬಂದು ಡೇಟಿಂಗ್ ಹೋಗೋಣ ಬರ್ತಿಯಾ’ ಎಂದು ಕೇಳಿದ್ದ. ಆ ಪದವನ್ನು ಮೊದಲ ಬಾರಿ ಕೇಳಿದ್ದೆ. ಅರ್ಥವಾಗದೇ ನಿಂತಿದ್ದೆ. ನನ್ನೊಂದಿಗೆ ಇದ್ದ ಮ್ಯಾನೇಜರ್ ‘ಇಲ್ಲಿಂದ ಹೋಗೋಣ ನಡಿ’ ಎಂದು ಕರೆದುಕೊಂಡು ಬಂದಿದ್ದರು. ಒಲಿಂಪಿಕ್ ಗ್ರಾಮ ನೋಡಿದಾಗ ಎಷ್ಟೊಂದು ಜನ, ಅದೆಷ್ಟೊಂದು ದೇಶಗಳು, ಏನೆಲ್ಲಾ ಸ್ಪರ್ಧೆಗಳು ಇವೆಯಲ್ಲ ಎಂದು ಅಚ್ಚರಿಪಟ್ಟಿದ್ದೆ.

ಆದರೆ ಇವತ್ತು ಪರಿಸ್ಥಿತಿ ಹಾಗಿಲ್ಲ. ಈಗ ನಿಜಕ್ಕೂ ಪರಿಸ್ಥಿತಿ ಸುಧಾರಿಸಿದೆ. ಸರ್ಕಾರ, ಪ್ರಾಯೋಜಕರು ಹಣ ವಿನಿಯೋಗಿಸಲು ಸಿದ್ಧ ಇದ್ದಾರೆ. ವಿದೇಶ ಪ್ರವಾಸ, ನೆರವು ಸಿಬ್ಬಂದಿ ಮತ್ತು ತಾಂತ್ರಿಕ ನೆರವು ಲಭಿಸುತ್ತಿವೆ. ಅದರಿಂದಾಗಿಯೇ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸಾಧನೆಗಳು ಮೂಡಿಬಂದಿವೆ. ಆದರೆ ಇಷ್ಟು ದೊಡ್ಡ ದೇಶಕ್ಕೆ ಇಷ್ಟೇ ಸಾಕಾಗಲ್ಲ. ಮಹಿಳೆಯರು ಇನ್ನೂ ಹೆಚ್ಚು ಬೆಳೆಯುವ ಅವಶ್ಯಕತೆ ಮತ್ತು ಅವಕಾಶ ಎರಡೂ ಇವೆ.

ಏಕೆಂದರೆ, ಆಗ ನಾವು ಓಟದಲ್ಲಿ ಸೋಲಿಸಿದ್ದ ನೈಜೀರಿಯಾ ಇವತ್ತು ಒಲಿಂಪಿಕ್ ಪದಕ ಸಾಧನೆ ಮಾಡುವ ಮಟ್ಟಕ್ಕೆ ಬೆಳೆದಿದೆ. ಆದರೆ ನಾವಿನ್ನೂ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಹೆಚ್ಚು ಸುಧಾರಣೆಯಾಗಿಲ್ಲ. ಅಂದಿನ ಟೈಮಿಂಗ್ ಮತ್ತು ಇವತ್ತಿನವರ ಟೈಮಿಂಗ್ ಹೋಲಿಕೆ ಮಾಡಿ ಹೆಚ್ಚು ಮುಂದುವರಿದಿಲ್ಲ. ಅಥ್ಲೆಟಿಕ್ಸ್ ಎಂದರೆ ಕಠಿಣ ಶ್ರಮ ಬೇಡುವ ವಿಭಾಗ. ಆದರೆ, ಈಗ ದಿಢೀರ್ ಜನಪ್ರಿಯತೆ ಮತ್ತು ಹಣ ಸಿಗುವತ್ತ ಆಕರ್ಷಣೆ ಇದೆ. ಅನುಕೂಲಸ್ಥರು ಟೆನಿಸ್, ಬ್ಯಾಡ್ಮಿಂಟನ್, ಕ್ರಿಕೆಟ್‌ನತ್ತ ಮಕ್ಕಳನ್ನು ಕಳಿಸುತ್ತಾರೆ. ಆದರೆ ಅಥ್ಲೆಟಿಕ್ಸ್‌ಗೆ ಬರುವವರು ಬಹುತೇಕ ಗ್ರಾಮೀಣ ಭಾಗದ ಮತ್ತು ಸಾಮಾಜಿಕ, ಆರ್ಥಿಕವಾಗಿ ಕೆಳಸ್ತರದಲ್ಲಿರುವ ಕುಟುಂಬಗಳ ಮಕ್ಕಳು. ಅಂತಹ ಹೆಣ್ಣುಮಕ್ಕಳಿಗೆ ಸೂಕ್ತ ಬೆಂಬಲ, ಪೋಷಣೆ ಸಿಗುವಂತೆ ವ್ಯವಸ್ಥೆಗಳಾಗಬೇಕು. ಒಲಿಂಪಿಕ್ಸ್ ಮಟ್ಟಕ್ಕೆ ಬೆಳೆಯುವುದು ಮತ್ತು ಅಲ್ಲಿ ಗೆಲ್ಲುವುದು ಹುಡುಗಾಟವೇ ಅಲ್ಲ. ಅದಕ್ಕಾಗಿ ನಿರಂತರ ಅಭ್ಯಾಸ, ಪ್ರತಿಭಾಶೋಧ ಮತ್ತು ಪೋಷಣೆಗಳು ಬೇಕು. ಅದು ಮನೆಯೊಳಗಿನಿಂದಲೇ ಆರಂಭವಾಗಬೇಕು.

ಮಾನಸಿಕ ಒತ್ತಡ ಕುರಿತ ಚರ್ಚೆಗಳು ಈಗ ಹೆಚ್ಚು ನಡೆಯುತ್ತಿವೆ. ಇದನ್ನು ನಾನು ಒಪ್ಪುವುದಿಲ್ಲ. ಕ್ರೀಡಾಪಟುವೆಂದ ಮೇಲೆ ಸರ್ವತೋಮುಖವಾಗಿ ಬಲಾಢ್ಯವಾಗಿರಲೇಬೇಕು. ಕ್ರೀಡೆಗಳಿರುವುದೇ ಮನೋಲ್ಲಾಸ ಹೆಚ್ಚಿಸಲು ಮತ್ತು ನಮ್ಮನ್ನು ಸಬಲರನ್ನಾಗಿ ಮಾಡಲು. ಆದರೆ, ಮಾನಸಿಕ ಒತ್ತಡದ ಕಾರಣ ನೀಡುವ ಟ್ರೆಂಡ್ ಈಗ ಆರಂಭವಾಗಿದೆ. ನನಗಿದು ಅರ್ಥವಾಗದ ವಿಷಯ. ಮಕ್ಕಳನ್ನು ಒಬ್ಬ ಮಾನವೀಯ ವ್ಯಕ್ತಿಯಾಗಿ ಬೆಳೆಸಬೇಕೆಂದರೆ ಕ್ರೀಡೆಯ ಬುನಾದಿ ಇರಲೇಬೇಕು. ಬರೀ ಓದು, ಬರಹಕ್ಕೆ ಒತ್ತಡ ಹೇರುವುದು ಸರಿಯಲ್ಲ. ನನ್ನ ಮಗನಿಗೆ ಬೋರ್ಡ್ ಪರೀಕ್ಷೆಗಳು ನಡೆಯುವ ಸಂದರ್ಭದಲ್ಲಿಯೂ ದಿನಕ್ಕೊಂದು ಗಂಟೆ ಹೊರಗೆ ಹೋಗಿ ಆಡಿ ಬರಲೇಬೇಕು ಎಂಬ ಕಟ್ಟಲೆ ಹಾಕಿದ್ದೆ. ವಿದ್ಯೆ, ಉದ್ಯೋಗ, ಹಣದ ಜೊತೆಗೆ ಆರೋಗ್ಯವೂ ಮುಖ್ಯ. ಕ್ರೀಡೆಗಳನ್ನು ಬರೀ ಪದಕ ಜಯ ಮತ್ತು ಆರ್ಥಿಕ ಲಾಭದ ದೃಷ್ಟಿಯಿಂದ ನೋಡಬಾರದು. ಅದು ಪ್ರತಿಯೊಬ್ಬರ ಮನೋದೈಹಿಕ ಬೆಳವಣಿಗೆಗೆ ಮುಖ್ಯ. ಆಟವೆಂದರೆ ಕ್ರಿಕೆಟ್ ಎಂಬ ಕಲ್ಪನೆಯೂ ತಪ್ಪು. ಅದೊಂದು ಕ್ರೀಡೆಯೇ ಅಲ್ಲ. ಅದು ಮನರಂಜನೆ. ಆದರೆ ವೈಭವೀಕರಣದಿಂದಾಗಿ ಅದರ ಆಕರ್ಷಣೆ ಹೆಚ್ಚಿದೆ.

ಕೋವಿಡ್ ಕಾಲದಲ್ಲಿ ಆರೋಗ್ಯ ಎಷ್ಟು ಮುಖ್ಯ ಎನ್ನುವುದು ನಮಗೆಲ್ಲ ಗೊತ್ತಾಗಿದೆ. ಜೊತೆಗೆ ಒಲಿಂಪಿಕ್ ಸಾಧನೆಗಳ ಪ್ರಭಾವಳಿಯೂ ಆವರಿಸಿದೆ. ಇದು ಭಾರತದಲ್ಲಿ ಕ್ರೀಡಾ ಭವಿಷ್ಯವನ್ನು ಉಜ್ವಲಗೊಳಿಸಲು ವೇದಿಕೆಯಾಗಬೇಕು. ಕ್ರೀಡಾ ಆಡಳಿತಗಳು ತಮ್ಮ ಕಾರ್ಯವೈಖರಿ ಬದಲಿಸಿಕೊಳ್ಳಲು ಇದೇ ಸಕಾಲ. ಹೆಚ್ಚು ಹೆಚ್ಚು ಹೆಣ್ಣುಮಕ್ಕಳು ಕ್ರೀಡಾಂಗಣಕ್ಕೆ ಬರಬೇಕು. ಈಶಾನ್ಯ ಭಾರತದ ಹುಡುಗಿಯರ ಸಾಧನೆಗಳು ನಮಗೆ ಮಾದರಿಯಾಗಬೇಕು. ಮೀರಾ, ಲವ್ಲಿನಾ, ಮೇರಿ ಅವರಂತಹವರು ಬೇರೆ ಬೇರೆ ರಾಜ್ಯಗಳಿಂದಲೂ ಬರಬೇಕು. ನನ್ನ ಕರ್ನಾಟಕದ ಪ್ರತಿಭೆಗಳೂ ಬೆಳಗಬೇಕು.

(ಲೇಖಕಿ: 1984 ಮತ್ತು 1988ರ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಅಥ್ಲೀಟ್)

ನಿರೂಪಣೆ: ಗಿರೀಶ ದೊಡ್ಡಮನಿ

ಅದಿತಿ ಅಶೋಕ್

ಮೀರಾಬಾಯಿ ಚಾನು

ಬಾಂಧವ್ಯದ ಬೆಸುಗೆಯ ‘ದಾರ’ವೀಗ, ಬದಲಾದ ಕಾಲಘಟ್ಟದಲ್ಲಿ ‘ರಾಖಿ’ ಹೆಸರಿನಲ್ಲಿ ಪ್ಲಾಸ್ಟಿಕ್‌ಮಯವಾಗಿ ಪರಿಸರವನ್ನು ಕಂಟಕವಾಗಿ ಕಾಡುತ್ತಿದೆ. ಬೀಜಗಳಿಂದಲೇ ರಾಖಿಯನ್ನು ರೂಪಿಸಿ, ಪರಿಸರ ಪ್ರಿಯವಾಗಿಸಿದ ಮೈಸೂರಿನ ‘ಕೃಷಿಕಲಾ’ದ ಪ್ರಯತ್ನದ ಯಶಸ್ಸಿನ ಕಥೆಯೊಂದು ಇಲ್ಲಿದೆ.

ಬೀಜಗಳ ತರಹೇವಾರಿ ರಾಖಿ

ಬಾಂಧವ್ಯಕ್ಕೊಂದು ‘ಬೀಜ ರಕ್ಷೆ’

ಡಿ.ಬಿ.ನಾಗರಾಜ

ರಕ್ಷಾ ಬಂಧನ ಸಮೀಪಿಸುತ್ತಿದೆ. ಬಣ್ಣಬಣ್ಣದ ರಾಖಿಗಳು ಅಂಗಡಿ, ಸೂಪರ್ ಬಜಾರ್, ಆನ್‌ಲೈನ್‌ನಲ್ಲಿ ಕಾಣಸಿಗುತ್ತಿವೆ. ನೋಡಲು ಆಕರ್ಷಕವಾಗಿ ಕಾಣುವ ಈ ರಾಖಿಗಳು ಪ್ಲಾಸ್ಟಿಕ್‌ಮಯ. ಬಳಕೆಯ ನಂತರ ಕಸದ ಬುಟ್ಟಿ ಸೇರುವ ಪ್ಲಾಸ್ಟಿಕ್ ರಾಖಿ ತ್ಯಾಜ್ಯವಾಗಿ ಪರಿಸರವನ್ನು ಹಾಳುಗೆಡವುತ್ತದೆ.

ಪ್ಲಾಸ್ಟಿಕ್‌ಗೆ ಪರ್ಯಾಯ ಸಾಮಗ್ರಿಯನ್ನು ಶೋಧಿಸುವ ಜೊತೆಗೆ ಅದನ್ನು ಬಳಕೆಗೆ ತರುವ ನಿಟ್ಟಿನಲ್ಲಿ ಮೈಸೂರಿನ ‘ಕೃಷಿಕಲಾ’, ಬೀಜಗಳ ರಾಖಿಯನ್ನು ಪರಿಚಯಿಸಿದೆ. ಇದು ಆರಂಭದಲ್ಲೇ ಸದ್ದು ಮಾಡಿದೆ. ನೋಡಲು ಆಕರ್ಷಕ. ಪರಿಸರಕ್ಕೂ ಪೂರಕ- ಇದು ಈ ರಾಖಿಯ ವೈಶಿಷ್ಟ್ಯ. 2020ರಲ್ಲೇ ಬೀಜದ ರಾಖಿಯ ಪ್ರಯೋಗ ನಡೆದಿತ್ತು. ಪರಿಸರಕ್ಕೆ ಪೂರಕವಾದ ಈ ರಕ್ಷಾಬಂಧನಕ್ಕೆ ನಿರೀಕ್ಷೆಗೂ ಮೀರಿದ ಬೇಡಿಕೆ ವ್ಯಕ್ತವಾಗಿದ್ದರಿಂದ; ಈ ಬಾರಿ ಮೂರು ಸಾವಿರ ರಾಖಿಗಳು ತಯಾರಾಗಿವೆ. ಈ ವಾರದಲ್ಲೇ ಗ್ರಾಹಕರಿಗೆ ಭಾರತೀಯ ಅಂಚೆ ಮೂಲಕ ತಲುಪಲಿವೆ. ಸರಳ–ಅತ್ಯಾಕರ್ಷಕವಾಗಿರುವ ಬೀಜದ ರಾಖಿಗಳಿಗೆ ನವದೆಹಲಿ, ಮುಂಬೈ, ಚೆನ್ನೈ ಸೇರಿದಂತೆ ಕೇರಳದ ವಿವಿಧೆಡೆಯಿಂದ ಆನ್ಲೈನ್‌ನಲ್ಲೇ ಬೇಡಿಕೆ ಸಲ್ಲಿಕೆಯಾಗಿದೆ. ‘ಗ್ರಾಹಕರ ಕೋರಿಕೆಗೆ ಅನುಸಾರವಾಗಿ ಪಾರ್ಸೆಲ್ ಕಳುಹಿಸುತ್ತಿದ್ದೇವೆ. ನವದೆಹಲಿ, ಮುಂಬಯಿ ಮಹಾನಗರಗಳಿಗೆ ಬೀಜದ ರಾಖಿಯ ಪಾರ್ಸೆಲ್ ಕಳುಹಿಸಲಾಗಿದೆ’ ಎನ್ನುತ್ತಾರೆ ಕೃಷಿಕಲಾದ ರೂವಾರಿ ಸೀಮಾ.

ಮೈಸೂರಿನ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದಲ್ಲಿನ ‘ವೃದ್ಧಿ ಶಾಪಿಂಗ್’ನಲ್ಲೂ ಈ ರಾಖಿ ಖರೀದಿಗೆ ಲಭ್ಯವುಂಟು. ಮಳಿಗೆಗಳಲ್ಲಿಟ್ಟು ಮಾರಾಟ ಮಾಡುವುದಕ್ಕಿಂತ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್ ಗ್ರೂಪ್ ಮೂಲಕವೇ ಆನ್‌ಲೈನ್ ವಹಿವಾಟು ನಡೆದಿದೆ. ದಿನದಿಂದ ದಿನಕ್ಕೆ ಬೇಡಿಕೆ ಹೆಚ್ಚಿದೆ.

ಕೃಷಿಕಲಾ ಕೇಂದ್ರದಲ್ಲಿ ಸಿದ್ಧವಾಗುತ್ತಿರುವ ಬೀಜ ರಾಖಿಗಳು

ಬೀಜ ರಾಖಿ ಬಗ್ಗೆ: ಲಿಮಾ ಬೀನ್ಸ್, ಕತ್ತಿ ಕಾಯಿ, ಪಲಾವ್ ಅವರೆ, ರೆಕ್ಕೆ ಅವರೆ, ಅಂಟುವಾಳ, ತಮ್ಮೇ ಬೀಜ, ಸೀತಾಫಲ, ಪಡವಲ ಕಾಯಿ, ಹೀರೆ ಕಾಯಿ, ಆನೆ ಗುಲಗಂಜಿ, ಕುಂಬಳ, ಕಾಡ ಅಗಸೆ ಬೀಜಗಳದ ಜೊತೆಗೆ ಮರದ ಮಣಿಗಳನ್ನು ಒಂದರ ಪಕ್ಕ ಒಂದನ್ನು ಪೋಣಿಸಿ ರಾಖಿ ತಯಾರಿಸುವುದರಲ್ಲಿ ಕೃಷಿಕಲಾ ಸಂಸ್ಥೆಯ ಸದಸ್ಯರೀಗ ನಿಷ್ಣಾತರು. ಬೀಜಕ್ಕೆ ರಂಧ್ರ ಕೊರೆಯಲು ಪುಟ್ಟ ಯಂತ್ರವೊಂದನ್ನು ಬಳಸಲಾಗುತ್ತಿದೆ. ಯಾವ ಗಾತ್ರದ ರಂಧ್ರ ಬೇಕೋ ಅದಕ್ಕೆ ತಕ್ಕಂಥ ಬಿಟ್ ಬಳಸುವುದು ವಿಶೇಷ. ಇದು ತುಂಬಾ ಸೂಕ್ಷ್ಮ ಕೆಲಸ. ಪರಿಣಿತರು ಒಂದು ಕೈಯಲ್ಲಿ ಬೀಜ ಹಿಡಿದುಕೊಂಡು, ಮತ್ತೊಂದು ಕೈಯಲ್ಲಿ ಯಂತ್ರದಿಂದ ರಂಧ್ರ ಮಾಡುತ್ತಾರೆ. ಈ ಕೆಲಸವೇ ಹೆಚ್ಚಿನ ಶ್ರಮ ಹಾಗೂ ಕೌಶಲ ಬಯಸುತ್ತದೆ.

ಹೀಗೆ ರಂಧ್ರ ಕೊರೆದ ಬಳಿಕ ತರಹೇವಾರಿ ವಿನ್ಯಾಸ ಶುರುವಾಗುತ್ತದೆ. ಒಂದರ ಪಕ್ಕ ಒಂದು ಬೀಜವನ್ನು ಅತ್ಯಾಕರ್ಷವಾಗಿ ಪೋಣಿಸಿ, ಅಂದಗೊಳಿಸುವುದು ಮುಖ್ಯ ಕೆಲಸ. ಆರಂಭದಲ್ಲಿ ಹತ್ತು ತರಹ ವಿನ್ಯಾಸಗಳಿದ್ದ ಬೀಜದ ರಾಖಿಯ ರಚನೆ, ಇದೀಗ 40ಕ್ಕೂ ಹೆಚ್ಚು ಬಗೆಯಲ್ಲಿ ತಯಾರಾಗುತ್ತಿದೆ. ಬಣ್ಣಬಣ್ಣದಿಂದ ಕಂಗೊಳಿಸುವ ಈ ರಾಖಿಗಳು ಗ್ರಾಹಕರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿವೆ. ಒಂದು ರಾಖಿಯ ತಯಾರಿಗೆ ಅರ್ಧ ಗಂಟೆ ಸಾಕು. ಬೀಜಗಳಿಗೆ ರಂಧ್ರ ಕೊರೆದ ಬಳಿಕ ಗೋಣಿ ದಾರದಿಂದ ಒಂದರ ಪಕ್ಕ ಒಂದು ಬೀಜವನ್ನು ಪೋಣಿಸಲಾಗುವುದು. ವಿವಿಧ ಬಣ್ಣದ ಸ್ವರೂಪ ಹಾಗೂ ವರ್ಣದ ಬೀಜಗಳು ಇಲ್ಲಿ ಬಳಸಲ್ಪಡುತ್ತವೆ. ರಾಖಿಯ ಅಂದ ಹೆಚ್ಚಿಸಲು ಪಾಲಿಷ್ ಮಾಡಿದ ಮರದ ಮಣಿಗಳು, ಆನೆ ಗುಲಗಂಜಿ ಬಳಸಿ ರಕ್ಷಾ ಬಂಧನದ ಆಕರ್ಷಣೆ ಹೆಚ್ಚಿಸಲಾಗುತ್ತಿದೆ.

‘ಅಮೂಲ್ಯವಾದ ಬೀಜಗಳನ್ನು ಹೀಗೆ ವ್ಯರ್ಥ ಮಾಡುತ್ತಿದ್ದೀರಲ್ಲಾ ಎಂದು ಕೆಲವರು ಹೇಳಿದಾಗ ವಿಚಲಿತಗೊಂಡೆ. ಆದರೆ ನಾನು ಬಳಸುತ್ತಿದ್ದು ಹೆಚ್ಚಾಗಿ ಕಾಡು ಬೀನ್ಸ್ ಬೀಜಗಳನ್ನು. ಅದೂ ಒಂದೊಂದು ರಾಖಿ ತಯಾರಿಕೆಗೆ ಬಳಸುತ್ತಿದ್ದುದು ಎಂಟರಿಂದ ಹತ್ತು ಬೀಜಗಳನ್ನಷ್ಟೆ. ಹೀಗಾಗಿ ಬೀಜ ರಾಖಿ ತಯಾರಿ ಮುಂದುವರಿಸಿದೆ. ನಾನಾ ಕಡೆಗಳಿಂದ ಅಪಾರ ಮೆಚ್ಚುಗೆಯ ಜೊತೆಗೆ ಬೇಡಿಕೆಯೂ ಬರುತ್ತಿದೆ’ ಎನ್ನುತ್ತಾರೆ ಸೀಮಾ. ಅಂದಹಾಗೆ, ಒಂದು ‘ಬೀಜ ರಾಖಿ’ ಬೆಲೆ ಸುಮಾರು ₹ 30.

ಸೋರೆ ರಾಖಿ: ‘ಕೃಷಿ ಕಲಾ’ದಲ್ಲಿ ಬೀಜದ ರಾಖಿಯಷ್ಟೇ ಅಲ್ಲ. ಸೋರೆಯ ರಾಖಿಯೂ ಲಭ್ಯ. ಕಳೆದ ವರ್ಷದಿಂದಲೇ ಸೋರೆ ರಾಖಿ ಮಾರುಕಟ್ಟೆಯಲ್ಲಿದೆ. ಒಂದು ರಾಖಿಯ ದರ ₹ 50. ಸೋರೆಕಾಯಿಯನ್ನು ಕೊಯ್ಲು ಮಾಡಿದ ಬಳಿಕ ಒಣಗಿಸುತ್ತಾರೆ. ನಂತರ ಅದನ್ನು ಒಡೆದು ಒಳಭಾಗ–ಹೊರಭಾಗದ ಒಂದು ಪದರ ತೆಗೆಯುತ್ತಾರೆ. ವಿವಿಧ ವಿನ್ಯಾಸಕ್ಕೆ ತಕ್ಕಂತೆ ಕತ್ತರಿಸಿಕೊಂಡು ರಕ್ಷಾ ಬಂಧನ ತಯಾರಿಸಲಾಗುತ್ತದೆ.

ನಕ್ಷತ್ರ, ಎಲೆ, ಬಿಲ್ಲೆ, ಚಕ್ರಾಕಾರದ ರಾಖಿಗಳಿಗೆ ಸಾಕಷ್ಟು ಬೇಡಿಕೆಯಿದೆ. ದಿನಕ್ಕೆ ಒಬ್ಬರು ಹತ್ತು ರಾಖಿಗಳನ್ನು ಮಾಡಬಹುದಷ್ಟೆ. ಇವು ಪರಿಸರ ಸ್ನೇಹಿ. ಪ್ಲಾಸ್ಟಿಕ್ ದಾರದೊಂದಿಗೆ ಮಾಡಿದ ರಾಖಿಗಳು ಕೈಗೆ ಆಗಾಗ್ಗೆ ಕಿರಿಕಿರಿ ಮಾಡಬಲ್ಲವು. ಆದರೆ ಸೋದರನ ಮುಂಗೈಗೆ ಕಟ್ಟಿದಾಗ ಆ ಕೈಗೂ ಮನಸ್ಸಿಗೂ ಹಿತಾನುಭವ ನೀಡುವ ‘ಬೀಜ ರಾಖಿ’, ಪರಿಸರ ಸಂರಕ್ಷಣೆಗೆ ಕೊಡುವ ಕಿರುಕಾಣಿಕೆಯೂ ಹೌದು!

ವಾಟ್ಸ್‌ಆ್ಯಪ್: 9606529606

ಸೋರೆಕಾಯಿಯಲ್ಲಿ ತಯಾರಿಸಿದ ರಾಖಿಗಳು

ಜಾಹೀರಾತು

ಡಾ|| ಶ್ರೀಕಾಂತ್ ಮೋರ್ಲಾವರ್
ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್

ಮಧುಮೇಹ
ಮಧುಮೇಹ ನಿಯಂತ್ರಿಸಲು ಸಾಧ್ಯವಿದೆಯೇ ?

ಇತ್ತೀಚಿನ ಆಧುನಿಕ ಜೀವನ ಶೈಲಿಯಿಂದಾಗಿ ಅನೇಕ ಜನರು ಈ ಡಯಾಬಿಟೀಸ್‌ಗೆ ಗುರಿಯಾಗುತ್ತಿದ್ದಾರೆ. ಹೆಚ್ಚಿದ ಮಾನಸಿಕ ಒತ್ತಡಗಳು ಬೊಜ್ಜು, ಕಲುಷಿತವಾದಂತಹ ಪರಿಸರ, ಆಹಾರ ಪದ್ಧತಿ, ಸರಿಯಾದ ವ್ಯಾಯಾಮದ ಕೊರತೆ ಹಾಗೂ ಅನುವಂಶಿಕ ಕಾರಣಗಳಿಂದಾಗಿ ಈ ರೋಗವು ಎಲ್ಲಾ ವಯಸ್ಸಿನವರಲ್ಲೂ ಕೂಡ ಕಾಣಿಸುತ್ತಿದೆ. ಸಾದಾರಣವಾಗಿ ಡಯಾಬಿಟಿಸ್ ಸಮಸ್ಯೆಯು ರಕ್ತದಲ್ಲಿ ಹೆಚ್ಚಾಗುವ ಸಕ್ಕರೆಯ ಕಾರಣದಿಂದಾಗಿ ಬರುತ್ತದೆ.

ಮನುಷ್ಯನ ಶರೀರದಲ್ಲಿ ಇರುವ ಪ್ಯಾಂಕ್ರಿಯಾಸ್ ಗ್ರಂಥಿಯು ಯಾವುದೇ ಕಾರಣದಿಂದಾಗಿ ಶರೀರದಲ್ಲಿ ಅಗತ್ಯವಿದ್ದಷ್ಟು ಇನ್ಸುಲಿನ್ ಉತ್ಪಾದಿಸಲು ಆಗದೆ ಇದ್ದಾಗ ಅಥವಾ ಶರೀರದ ಕಣಗಳು ಸಹಜವಾಗಿ ಇನ್ಸುಲಿನ್ ಅನ್ನು ಹೀರಿಕೊಳ್ಳುವ ಪ್ರಕ್ರಿಯೆ ಹಾನಿಗೆ ಒಳಗಾದಾಗ ಮಧುಮೇಹ ರೋಗವು ಬರುತ್ತವೆ.

ಮಧುಮೇಹದ ವಿಧಗಳು :

1. ಟೈಪ್ 1 ಡಯಾಬಿಟಿಸ್ (ಇನ್ಸುಲಿನ್ ಡಿಪೆಂಡೆಂಟ್ ಡಯಾಬಿಟಿಸ್).

ಕಾರಣಗಳು :
• ಪ್ಯಾಂಕ್ರಿಯಾಸ್ ಗ್ರಂಥಿಯಲ್ಲಿನ ವ್ಯಾಧಿಗಳು.
• ವ್ಯಕ್ತಿಯಲ್ಲಿನ ಇಮ್ಯೂನಿಟಿ ಸಿಸ್ಟಮ್ ಪ್ಯಾಂಕ್ರಿಯಾಸ್ನಲ್ಲಿನ ಬೀಟಾ ಕೋಶಗಳನ್ನು ನಾಶ ಮಾಡಿದಾಗ.
• 20 ವರ್ಷದ ಒಳಗಿನವರಲ್ಲಿ

2. ಟೈಪ್–2 ಡಯಾಬಿಟಿಸ್ (ನಾನ್ ಇನ್ಸುಲಿನ್ ಡಿಪೆಂಡೆಂಟ್ ಡಯಾಬಿಟಿಸ್)

ಹೋಮಿಯೋಕೇರ್ ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಕಾರಣಗಳು
• ಸಾಮಾನ್ಯವಾಗಿ 30 ವರ್ಷ ಮೇಲ್ಪಟ್ಟವರಲ್ಲಿ
• ಉತ್ಪತ್ತಿಯಾದ ಇನ್ಸುಲಿನ್ ಸರಿಯಾಗಿ ಉಪಯೋಗವಾಗದಿದ್ದಲ್ಲಿ
• ದೈಹಿಕ ವ್ಯಾಯಾಮದ ಕೊರತೆ.
• ಅಧಿಕ ಮಾನಸಿಕ ಒತ್ತಡ.
• ಅನುವಂಶಿಕ ಕಾರಣಗಳು.

3. ಟೈಪ್ 3 ಡಯಾಬಿಟಿಸ್ (ಜೆಸ್ಟೇಷನಲ್ ಡಯಾಬಿಟಿಸ್)

• ಇದನ್ನು ಗರ್ಭಿಣಿಯರಲ್ಲಿ ಕಾಣಬಹುದು.

ಲಕ್ಷಣಗಳು :
• ಬಾಯಾರಿಕೆ ಹೆಚ್ಚಾಗುವುದು.
• ಮೂತ್ರ ವಿಸರ್ಜನೆ ಹೆಚ್ಚಾಗುವುದು.
• ಅಧಿಕ ಹಸಿವು.
• ಇದ್ದಕಿದ್ದಂತೆ ತೂಕ ಕಡಿಮೆ ಯಾಗುವುದು.
• ಸುಸ್ತಾಗುವುದು.
• ಕೈ ಕಾಲುಗಳ ನೋವು.
• ಗಾಯಗಳು ನಿಧಾನವಾಗಿ ಗುಣ ಹೊಂದುವುದು.
• ಲೈಂಗಿಕ ಬಯಕೆಗಳು ಕಡಿಮೆಯಾಗುವುದು.
• ಕೈ ಕಾಲುಗಳು ಉರಿ ಮತ್ತು ಜೋಮು ಬರುವುದು.

ಹೋಮಿಯೋಕೇರ್ ಚಿಕಿತ್ಸೆ

ಹೋಮಿಯೋಕೇರ್ ಇಂಟರ್ ನ್ಯಾಷನಲ್‌ನ ಜೆನೆಟಿಕ್ ಕಾನ್ಸ್ಟಿಟ್ಯೂಷನಲ್ ಚಿಕಿತ್ಸೆಯಿಂದ ವ್ಯಕ್ತಿಯಲ್ಲಿನ ಡಯಾಬಿಟಿಸ್‌ನ ರೋಗ ಲಕ್ಷಣಗಳಿಗೆ ಹಾಗೆಯೇ ಅದರಿಂದಾಗುವ ಅನೇಕ ಪರಿಣಾಮಗಳಿಗೆ ಸಮರ್ಪಕವಾದ ಚಿಕಿತ್ಸೆ ನೀಡಲಾಗುವುದು, ಈ ರೀತಿಯ ಯಾವುದೇ ಸಮಸ್ಯೆಗಳಿಂದಾಗಿ ನೀವು ಬಳಲುತ್ತಿದ್ದರೆ ನಮ್ಮ ಕ್ಲಿನಿಕ್ಕಿಗೆ ಬಂದು ಚಿಕಿತ್ಸೆಯನ್ನು ಹೊಂದಿ ನಿಮ್ಮ ಸಮಸ್ಯೆಯನ್ನು ಪರಿಹರಿಸಿಕೊಂಡು ಜೀವನವನ್ನು ಸುಂದರವಾಗಿಸಬಹುದು.

ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

ಶಾಖೆಗಳು: ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ.
ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

ಪ್ರವಾಸ

ಚಾಕೊಲೇಟ್ ಮ್ಯೂಸಿಯಂನ ಚಾರಿತ್ರಿಕ ನಗರ

ಜಿ.ನಾಗೇಂದ್ರ

ಯುರೋಪಿನ ಅತ್ಯುತ್ತಮ ಸಂರಕ್ಷಿತ ಮಧ್ಯಕಾಲೀನ ನಗರವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬ್ರೂಗ್ಸ್, 'ವೆಸ್ಟ್ ಫ್ಲಾಂಡರ್ಸ್ ಪ್ರಾವಿನ್ಸ್'ನ ರಾಜಧಾನಿ. ಮೊದಲನೆಯ ಹಾಗೂ ಎರಡನೆಯ ಜಾಗತಿಕ ಮಹಾಯುದ್ಧಗಳ ಸಮಯದಲ್ಲಿ ಇತರೆ ಯುರೋಪಿಯನ್ ರಾಷ್ಟ್ರಗಳು ಬಾಂಬ್ ದಾಳಿಯಿಂದ ನಾಶವಾದರೂ ಬ್ರೂಗ್ಸ್ ನಗರ ಕಿಂಚಿತ್ತೂ ಊನವಾಗದೆ ಉಳಿದಿದೆ. ಸಂಪೂರ್ಣವಾಗಿ ಸಂರಕ್ಷಿಸಲ್ಪಟ್ಟ ಮಧ್ಯಕಾಲೀನ ಕಟ್ಟಡಗಳು, ಪಾರಂಪರಿಕ ತಾಣಗಳು, ವಿಲಕ್ಷಣವಾದ ಕಾಬಲ್‌ಸ್ಟೋನ್ ರಸ್ತೆಗಳು, ಕಟ್ಟಡಗಳ ವಾಸ್ತುಶಿಲ್ಪ ಹೀಗೆ ಹಲವು ವಿಶೇಷಗಳನ್ನು ತನ್ನ ಮಡಿಲಲ್ಲಿ ತುಂಬಿಸಿಕೊಂಡಿರುವ ಬ್ರೂಗ್ಸ್ ಪ್ರವಾಸಿಗರ ಅಚ್ಚುಮೆಚ್ಚಿನ ತಾಣಗಳಲ್ಲಿ ಒಂದಾಗಿದೆ.

'ಬ್ರೂಗ್ಸ್' ಎಂಬ ಡಚ್ ಪದವನ್ನು ಇಂಗ್ಲಿಷ್‌ನಲ್ಲಿ 'ಬ್ರಿಡ್ಜ್' ಎಂದು ಅರ್ಥೈಸಲಾಗುತ್ತದೆ. ವಸ್ತು ಸಂಗ್ರಹಾಲಯಗಳು ಮತ್ತು ಧಾರ್ಮಿಕೇತರ ಐತಿಹಾಸಿಕ ತಾಣಗಳ ನೆಲೆಯಾಗಿರುವ 'ಬ್ರೂಗ್ಸ್' ನಗರದಲ್ಲಿರುವ ಹಲವು ಮ್ಯೂಸಿಯಂಗಳು ಮಧ್ಯಕಾಲೀನ ಮತ್ತು ಆರಂಭಿಕ ಆಧುನಿಕ ಕಾಲದ ಕಲೆಗೆ ಸಂಬಂಧಿಸಿದ ಬೃಹತ್ ಸಂಗ್ರಹವನ್ನು ಹೊಂದಿವೆ. ಇವುಗಳಲ್ಲಿ ಪ್ರಾಚೀನ ಫ್ಲೆಮಿಶ್‌ನ ಗಮನಾರ್ಹ ಸಂಗ್ರಹವಿದೆ. ಪ್ರಸಿದ್ಧ ವರ್ಣಚಿತ್ರಕಾರರಾದ ಹ್ಯಾನ್ಸ್ ಮೆಮ್ ಲಿಂಗ್ ಹಾಗೂ ಜಾನ್ ವ್ಯಾನ್ ಐಕ್ ಅವರು ಬ್ರೂಗ್ಸ್‌ನಲ್ಲಿಯೇ ವಾಸಿಸುತ್ತಿದ್ದರು.

ಚಾಕೊಲೇಟ್ ಮ್ಯೂಸಿಯಂ, ಲ್ಯಾಂಪ್ ಮ್ಯೂಸಿಯಂ, ಲೇಸ್ ಮ್ಯೂಸಿಯಂ, ಬೆಲ್ಜಿಯನ್ ಫ್ರೈಸ್ ಮ್ಯೂಸಿಯಂ, ಡೈಮಂಡ್ ಮ್ಯೂಸಿಯಂ ಹೀಗೆ ವಿಭಿನ್ನವಾದ ಇಲ್ಲಿನ ಮ್ಯೂಸಿಯಂಗಳು ಪ್ರವಾಸಿಗರನ್ನು ತಮ್ಮತ್ತ ಸೆಳೆಯುತ್ತವೆ.

ಬ್ರೂಗ್ಸ್ ನಗರದ ಬೀದಿಗಳಲ್ಲಿ ಪವಿತ್ರ ರಕ್ತದ ಶೀಷೆಯ ಮೆರವಣಿಗೆ

ಗ್ರೋಟ್ ಮಾರುಕಟ್ಟೆಯಲ್ಲಿ ಸಕಲವೂ ಲಭ್ಯ

ಯುರೋಪಿನ ಎಲ್ಲಾ ನಗರಗಳಲ್ಲಿರುವಂತೆ ಬ್ರೂಗ್ಸ್ ನಗರದ ಮಧ್ಯಭಾಗದಲ್ಲಿ ವಿಶಾಲವಾದ ಮಾರುಕಟ್ಟೆ (ಗ್ರೋಟ್ ಮಾರ್ಕೆಟ್) ಚೌಕವಿದೆ. ನಗರದ ಹಲವು ಕಾರ್ಯಕ್ರಮಗಳ ಕೇಂದ್ರಬಿಂದು. ಇಲ್ಲಿ ನಡೆಯುವ ಮಧ್ಯಕಾಲೀನ ಉತ್ಸವಗಳು, ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು, ಸುತ್ತಲೂ ಇರುವ ಅಂಗಡಿ, ಕೆಫೆಗಳು, ವಿಶ್ವವಿಖ್ಯಾತ ಬೆಲ್ಜಿಯಂ ಚಾಕೊಲೇಟ್ ಮಾರಾಟ ಮಳಿಗೆಗಳು, ಹೂಗುಚ್ಛ ಮಾರಾಟ ಮಳಿಗೆಗಳು, 'ಟಿನ್ ಟಿನ್' ಕಾಮಿಕ್ ಪುಸ್ತಕ ಮಳಿಗೆಗಳು ಹಾಗೂ ಅಸಂಖ್ಯಾತ ಉಡುಗೊರೆ ಮಳಿಗೆಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಪುರಾತನ ವಸ್ತುಗಳನ್ನು ಸಂಗ್ರಹಿಸುವ ಹವ್ಯಾಸವುಳ್ಳ ಪ್ರವಾಸಿಗರಿಗೆ 'ಆ್ಯಂಟಿಕ್ ಮಾರ್ಕೆಟ್' ಸೂಕ್ತ ತಾಣ. ಇಲ್ಲಿ ಮಾರಾಟ ಮಾಡುವ ದೇಶ ವಿದೇಶಗಳ ಪುರಾತನ ವಸ್ತುಗಳು, ಸಂಗ್ರಹಕಾರರನ್ನು ಆಕರ್ಷಿಸುತ್ತವೆ.

ನಗರದಲ್ಲಿರುವ 'ಐತಿಹಾಸಿಕ ಕೇಂದ್ರ', 'ಬೆಲ್‌ಫ್ರೈ' (ಬೆಲ್ ಟವರ್) ಮೊದಲಾದ ಸ್ಮಾರಕಗಳನ್ನು ವಿಶ್ವ ಪರಂಪರೆಯ ತಾಣಗಳೆಂದು ಗುರುತಿಸಲಾಗಿದೆ.

13ನೇ ಶತಮಾನದಲ್ಲಿ ನಿರ್ಮಿಸಲಾದ 'ಬ್ರೂಗ್ಸ್' ನಗರದ ಹೆಗ್ಗುರುತಾದ 'ಬೆಲ್‌ಫ್ರೈ ಆಫ್ ಬ್ರೂಗ್ಸ್' ಸ್ಮಾರಕವನ್ನು ನ್ಯೂ ಗೋಥಿಕ್ ಶೈಲಿಯಲ್ಲಿ ನಿರ್ಮಿಸಲಾಗಿದೆ. 83 ಮೀಟರ್ ಎತ್ತರವಿದ್ದು, 350 ಮೆಟ್ಟಿಲುಗಳ ಮೂಲಕ ಗೋಪುರವನ್ನು ಏರಿ ನಗರದ ವಿಹಂಗಮ ನೋಟವನ್ನು ಆನಂದಿಸಬಹುದು. ಗೋಪುರದ ಮೇಲಂತಸ್ತಿನಲ್ಲಿ ಸುಸ್ಥಿತಿಯಲ್ಲಿರುವ 47 ಗಂಟೆಗಳ ಸಾಲುಗಳಿದ್ದು, ಗಂಟೆಗಳನ್ನು ಇಂದಿಗೂ ಬಾರಿಸಲಾಗುತ್ತಿದೆ.

ದೂರದಿಂದಲೇ ಪ್ರವಾಸಿಗರ ಗಮನಸೆಳೆಯುವ ಮತ್ತೊಂದು ಸ್ಮಾರಕ 'ಚರ್ಚ್ ಆಫ್ ಅವರ್ ಲೇಡಿ'. ಈ ಮಧ್ಯಕಾಲೀನ ಕಟ್ಟಡವನ್ನು ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. 115.6 ಮೀಟರ್ ಎತ್ತರವುಳ್ಳ ಚರ್ಚ್ ಗೋಪುರವು ಇಟ್ಟಿಗೆಗಳಿಂದ ನಿರ್ಮಿಸಲಾದ ವಿಶ್ವದ ಎರಡನೇ ಅತಿ ಎತ್ತರದ ಗೋಪುರವೆಂಬ ಖ್ಯಾತಿ ಪಡೆದಿದೆ. ಇಟಲಿಯ ಶಿಲ್ಪಿ, ಚಿತ್ರಕಾರ ಹಾಗೂ ವಾಸ್ತುಶಿಲ್ಪಿ ಮೈಕಲ್ಯಾಂಜೆಲೋ ಅವರ ಅಪ್ರತಿಮ ಕಲಾಕೃತಿಗಳಲ್ಲಿ ಒಂದಾದ 'ಮಡೋನ ಮತ್ತು ಮಗು' ಶಿಲ್ಪವನ್ನೂ ಇಲ್ಲಿ ನೋಡಬಹುದು. ಮಾರ್ಬಲ್ ಕಲ್ಲಿನಲ್ಲಿ ಕೆತ್ತಲಾಗಿರುವ, ಆರೂವರೆ ಅಡಿ ಎತ್ತರದ ಏಕಶಿಲಾ ವಿಗ್ರಹವು ಚರ್ಚಿನ ಕೇಂದ್ರಬಿಂದುವಾಗಿದೆ.

ಏಸು ಕ್ರಿಸ್ತನ ರಕ್ತದ ಅವಶೇಷವನ್ನು ಇಲ್ಲಿ ನೋಡಬಹುದು!

ಧಾರ್ಮಿಕ ಹೆಗ್ಗುರುತುಗಳಲ್ಲಿ ಒಂದಾದ 'ಬೆಸಿಲಿಕಾ ಆಫ್ ದಿ ಹೋಲಿ ಬ್ಲಡ್'ನಲ್ಲಿ ಏಸುಕ್ರಿಸ್ತನ ರಕ್ತದ ಅವಶೇಷವನ್ನು ಒಂದು ಶೀಷೆಯಲ್ಲಿ ಇಡಲಾಗಿದ್ದು, ಪ್ರವಾಸಿಗರ ವೀಕ್ಷಣೆಗೆ ಮುಕ್ತವಾಗಿದೆ. ಇದನ್ನು ಎರಡನೇ ಕ್ರುಸೇಡ್ ನಂತರ ಬೆಸಿಲಿಕಾಗೆ ತರಲಾಯಿತಂತೆ. ಪ್ರತೀವರ್ಷ ಪವಿತ್ರ ರಕ್ತದ ಶೀಷೆಯನ್ನು ನಗರದ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ. ಬ್ರೂಗ್ಸ್‌ನ ಪ್ರಮುಖ ಧಾರ್ಮಿಕ ವಿಧಿಗಳಲ್ಲಿ ಒಂದಾಗಿರುವ ಈ ಮೆರವಣಿಗೆಯಲ್ಲಿ ಹಲವರು ಮಧ್ಯಕಾಲೀನ 'ನೈಟ್ಸ್' ಅಥವಾ 'ಕ್ರುಸೇಡರ್'ಗಳ ಪೋಷಾಕುಗಳನ್ನು ಧರಿಸಿ ಸಾಗುವುದು ಅಂದಿನ ದಿನಗಳನ್ನು ನೆನಪಿಸುತ್ತದೆ. ಇನ್ನೂ ಹಲವು ಚರ್ಚ್‌ಗಳು ಮತ್ತು ಅವುಗಳ ಸಂಗ್ರಹಾಲಯಗಳಿಗೆ ಪ್ರವಾಸಿಗರು ಭೇಟಿ ನೀಡಬಹುದು.

ಬೆಲ್ಜಿಯಂ ವೇಫಲ್ಸ್

ಬಿಯರ್ ಪ್ರಿಯರಿಗಾಗಿ...

ಲೇಸ್ ಹಾಗೂ ಜವಳಿ ಉದ್ಯಮಕ್ಕೆ ಹೆಸರುವಾಸಿಯಾಗಿರುವ 'ಬ್ರೂಗ್ಸ್', ಬಿಯರ್ ತಯಾರಿಕೆಯಲ್ಲೂ ಹೆಸರು ಮಾಡಿದೆ. 'ಡಿ ಹಾಲ್ವೇ ಮಾನ್' ಬ್ರೂವರಿಯಲ್ಲಿ 'ಬ್ರೂಗ್ಸ್' ಹೆಸರಿನೊಂದಿಗೆ ಪ್ರಾರಂಭವಾಗುವ ಹಲವು ಬಗೆಯ ಬಿಯರ್‌ಗಳು ತಯಾರಾಗುತ್ತವೆ. ಬಿಯರ್ ಪ್ರಿಯರು ತಮಗಿಷ್ಟವಾದ ಬಿಯರ್ ಸೇವಿಸಿ ಆನಂದಿಸಬಹುದು.

ಡಚ್ ಸಂಸ್ಕೃತಿಯ ಪ್ರತೀಕಗಳಾದ 'ವಿಂಡ್ ಮಿಲ್'ಗಳನ್ನು ಬ್ರೂಗ್ಸ್‌ನಲ್ಲೂ ವೀಕ್ಷಿಸಬಹುದು. ನಗರದ ಹೊರವಲಯದಲ್ಲಿರುವ 17ನೇ ಶತಮಾನದ, ಇಂದಿಗೂ ಕಾರ್ಯನಿರ್ವಹಿಸುತ್ತಿರುವ ಆಕರ್ಷಕ 'ವಿಂಡ್ ಮಿಲ್'ಗಳ ಚಟುವಟಿಕೆಗಳಿಗೆ ಪ್ರವಾಸಿಗರು ಸಾಕ್ಷಿಯಾಗಬಹುದು.

ಚಾಕೊಲೇಟ್‌ಗಳನ್ನು ನಾವೇ ತಯಾರಿಸಬಹುದು

ಬೆಲ್ಜಿಯಂ ಚಾಕೊಲೇಟ್‌ಗಳು ಚಾಕೊಲೇಟ್ ಪ್ರಿಯರ ಬಾಯಲ್ಲಿ ನೀರೂರಿಸುತ್ತವೆ. ಚಾಕೊಲೇಟ್ ತಯಾರಿಕೆಯಲ್ಲಿ ಆಸಕ್ತಿಯುಳ್ಳವರು

ಬ್ರೂಗ್ಸ್‌ನ ಹೆಗ್ಗುರುತು 'ಬೆಲ್‌ಫ್ರೈ ಆಫ್ ಬ್ರೂಗ್ಸ್' ಇಳಿಸಂಜೆಯಲ್ಲಿ ಕಂಡಿದ್ದು ಹೀಗೆ...

ಚಾಕೊ ಸ್ಟೋರಿ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದಲ್ಲಿ, ಚಾಕೊಲೇಟ್‌ನ ಮೂಲ, ಉಪಯೋಗಿಸುವ ವಸ್ತುಗಳು ಹಾಗೂ ಬಗೆ ಬಗೆಯ ಚಾಕೊಲೇಟ್‌ಗಳನ್ನು ತಯಾರಿಸುವ ವಿಧಾನಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು. ಚಾಕೊಲೇಟ್ ತಯಾರಿಕಾ ಕಾರ್ಯಾಗಾರದಲ್ಲಿ ನಾವೇ ಚಾಕೊಲೇಟ್ ತಯಾರಿಸಬಹುದು ಹಾಗೂ ಉಚಿತವಾಗಿ ಚಾಕೊಲೇಟ್‌ಗಳನ್ನು ತಿಂದು ಖುಷಿಪಡಬಹುದು.

'ಬ್ರೂಗ್ಸ್' ನಗರವನ್ನು ವೀಕ್ಷಿಸಿ ದಣಿದ ಪ್ರವಾಸಿಗರು ಇಲ್ಲಿ ವಿಶೇಷವಾಗಿ ತಯಾರಿಸಲಾಗುವ 'ವೇಫಲ್' ಹಾಗೂ ಬೆಲ್ಜಿಯಂ ಚಾಕೊಲೇಟ್‌ಗಳನ್ನು ಸವಿದು ದಣಿವಾರಿಸಿಕೊಳ್ಳಬಹುದು.

1.2 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಬ್ರೂಗ್ಸ್ ನಗರದ 'ಕಾಬಲ್‌ಸ್ಟೋನ್' ರಸ್ತೆಗಳಲ್ಲಿ ಕಾಲ್ನಡಿಗೆಯ ಮೂಲಕ ವೀಕ್ಷಿಸುವಾಗ ಸಿಗುವ ಆನಂದವನ್ನು ವರ್ಣಿಸಲಾಗುವುದಿಲ್ಲ. ಕಾಲ್ನಡಿಗೆಯಲ್ಲೇ ಇಡೀ ನಗರವನ್ನು ಸುತ್ತಾಡುತ್ತಾ ಸೌಂದರ್ಯವನ್ನು ಆಸ್ವಾದಿಸುತ್ತಾ ಇತಿಹಾಸವನ್ನು ತಿಳಿದುಕೊಳ್ಳಬಹುದು. ಯುವತಿಯರು ನಡೆಸುವ ಕುದುರೆ ಗಾಡಿಗಳಲ್ಲಿ ಕುಳಿತು ಸಂಪೂರ್ಣವಾಗಿ ನಗರವನ್ನು ವೀಕ್ಷಿಸುವಾಗ ವಿಶಿಷ್ಟ ಅನುಭೂತಿ ಉಂಟಾಗುತ್ತದೆ.

ಮುದ ನೀಡುವ ಬೋಟ್ ರೈಡ್

ನಗರದಲ್ಲಿರುವ ಹಲವಾರು ಕಾಲುವೆಗಳಿಂದಾಗಿ ಬ್ರೂಗ್ಸ್ ನಗರವನ್ನು 'ವೆನಿಸ್ ಆಫ್ ನಾರ್ಥ್' ಎಂದೂ ಕರೆಯುತ್ತಾರೆ. ಕಾಲುವೆಗಳ ಅಂದವನ್ನು 'ಕೆನಾಲ್ ಬೋಟ್ ರೈಡ್' ಮೂಲಕ ಕಣ್ತುಂಬಿಕೊಳ್ಳಬಹುದು. ಮಾರ್ಚ್-ನವೆಂಬರ್ ತಿಂಗಳುಗಳ ನಡುವೆ ಮಾತ್ರ ಈ ಸೇವೆ ಲಭ್ಯವಿದ್ದು, 30 ನಿಮಿಷಗಳ ದೋಣಿ ಪ್ರಯಾಣದಲ್ಲಿ ನಗರದ ಕಾಲುವೆಗಳಲ್ಲಿ ಸಾಗುವಾಗ ದಡದಲ್ಲಿರುವ ಮನೆಗಳ ಮುಂದಿರುವ ಬಣ್ಣ ಬಣ್ಣದ ಹೂಗಳಿಂದ ಕಂಗೊಳಿಸುವ ಆಲಂಕಾರಿಕ ಹೂವಿನ ಕುಂಡಗಳು ಮನಸ್ಸಿಗೆ ಮುದ ನೀಡುತ್ತವೆ. ಕಾಲುವೆಗಳ ಇಕ್ಕೆಲಗಳಲ್ಲಿರುವ ಐತಿಹಾಸಿಕ, ಪಾರಂಪರಿಕ ಶೈಲಿಯ ಕಟ್ಟಡಗಳ ಸೌಂದರ್ಯವನ್ನು ಕಣ್ತುಂಬಿಕೊಳ್ಳಬಹುದು. ನಗರದ ಐದು ಕಡೆಗಳಿಂದ ಪ್ರಾರಂಭವಾಗುವ 'ಕೆನಾಲ್ ಬೋಟ್ ರೈಡ್' ಕೇಂದ್ರಗಳನ್ನು ಪ್ರವಾಸಿಗರು ತಮ್ಮ ಅನುಕೂಲಕ್ಕೆ ತಕ್ಕಂತೆ ಆಯ್ದುಕೊಳ್ಳಬಹುದು.

ಬ್ರೂಗ್ಸ್ ಸಾರಿಗೆ ವ್ಯವಸ್ಥೆಯೂ ಪ್ರವಾಸಿಗರಿಗೆ ಅನುಕೂಲಕರವಾಗಿದೆ. ರೈಲ್ವೆ ನಿಲ್ದಾಣದಿಂದ ಹಲವು ನಗರಗಳಿಗೆ ರೈಲು ಸಂಪರ್ಕವಿದೆ. ನಗರದ ಕೇಂದ್ರ ಪ್ರದೇಶದಿಂದ ಕೇವಲ 10 ನಿಮಿಷಗಳಲ್ಲಿ ಕಾಲ್ನಡಿಗೆಯ ಮೂಲಕ ರೈಲು ನಿಲ್ದಾಣವನ್ನು ತಲುಪಬಹುದು. 25 ಕಿ.ಮೀ ದೂರದಲ್ಲಿರುವ ವಿಮಾನ ನಿಲ್ದಾಣವನ್ನು ಬಸ್ ಸಾರಿಗೆ ಅಥವಾ ಟ್ಯಾಕ್ಸಿಗಳ ಮೂಲಕ ತಲುಪಬಹುದು.

ಒಂದೆರಡು ದಿನಗಳಲ್ಲಿ ವೀಕ್ಷಿಸಿದ ಬ್ರೂಗ್ಸ್ ನಗರದ ಸ್ಮಾರಕಗಳು, ಅನಿರ್ವಚನೀಯ ಆನಂದವನ್ನು ನೀಡಿದ ಕೆನಾಲ್ ಬೋಟ್ ರೈಡ್, ಚಾಕೊಲೇಟ್, ವೇಫಲ್ಸ್, ಫ್ರೆಂಚ್ ಫ್ರೈಸ್‌ಗಳ ರುಚಿ ಸದಾಕಾಲ ಪ್ರವಾಸಿಗರ ಮನಸ್ಸಿನಲ್ಲಿ ಉಳಿಯುತ್ತದೆ. ❖

ಹೆಬ್ಬೆಟ್ಟಿನ ಗಾತ್ರದ ಲೌಡ್‌ಸ್ಪೀಕರ್ ಕೀಟ!

ಜೀರುಂಡೆ

ಮಂಜುನಾಥ್ ಎಲ್.ಕೆ

ಮೋಡ ಗವ್ವನೆ ಕವಿದರೆ ಸಾಕು, ಎತ್ತರದ ಮರಗಳ ರೆಂಬೆ-ಕೊಂಬೆಗಳಲ್ಲಿ ವಿಚಿತ್ರ ಕೂಗುಗಳು ಕೇಳಿಸಲು ಆರಂಭವಾಗುತ್ತವೆ. ಮರಗಳೇ ಪೀಪಿ ಊದುತ್ತಿವೆಯೇನೋ, ಶಿಳ್ಳೆ ಹೊಡೆಯುತ್ತಿವೆಯೇನೋ ಎಂಬ ಶಂಕೆ ಕಾಡುತ್ತದೆ. ಮರದ ಬುಡದ ಸುತ್ತಲೂ, ಕಣ್ಣಿಗೆ ನಿಲುಕಿದಷ್ಟು ಎತ್ತರದಲ್ಲಿ ಸೂಕ್ಷ್ಮವಾಗಿ ಹುಡುಕಿದರೂ ಪತ್ತೆಯಾಗದ ಸ್ವರವದು.

'ಮಲೆನಾಡಿನ ಹಿನ್ನೆಲೆ ಗಾಯಕ'ನಂತೆ ಸದಾ ಹಾಡುವ ಈ ಕೀಟವನ್ನು ಗುರುತಿಸಲು 'ಶಬ್ಧವೇದಿ ವಿದ್ಯೆ' ಅಗತ್ಯವೇ. ಸಾಮಾನ್ಯವಾಗಿ ಜೀರುಂಡೆ, ಇರಿಂಟಿ ಎಂದು ಇವುಗಳನ್ನು ಕರೆಯಲಾಗುತ್ತದೆ. ಇದರ ಸೀಟಿಯನ್ನು ಕೇಳಿದವರ ಸಂಖ್ಯೆಗೆ ಹೋಲಿಸಿದರೆ ನೋಡಿದವರ ಸಂಖ್ಯೆ ಬೆರಳೆಣಿಕೆ. ಯಾರಾದರೂ ನೋಡಲು ಬಂದರೆ, ಗಾಯನವನ್ನು ನಿಲ್ಲಿಸದೆ ಮರದ ಹಿಂದಕ್ಕೆ ಸರಿದು ಮರೆಯಾಗುತ್ತದೆ. ತೀರ ಉಪದ್ರವೆನಿಸಿತು ಎಂದಾದರೆ ರಪ್ ಎಂದು ಹಾರಿಹೋಗಿ ಬೇರೆ ಯಾವುದೋ ಮರದಲ್ಲಿ ಕುಳಿತುಕೊಳ್ಳುತ್ತದೆ.

ಜಾಗತಿಕವಾಗಿ ಸಿಕಾಡಾಸ್ ಎಂದು ಗುರುತಿಸಿಕೊಂಡಿರುವ ಈ ಕೀಟ ಸುಮಾರು 3,000 ಪ್ರಭೇದಗಳನ್ನು ಒಳಗೊಂಡಿದೆ. ಜಗತ್ತಿನ ಎಲ್ಲ ಕಾಡುಗಳಲ್ಲಿ ಕಾಣಸಿಗುವ ಸಿಕಾಡಾಸ್‌ಗಳು ಅಲ್ಲಿನ ಪ್ರಾಕೃತಿಕ ಗುಣಲಕ್ಷಣಗಳಿಗೆ ತಕ್ಕಂತೆ ಭಿನ್ನತೆಯನ್ನು ಹೊಂದಿರುತ್ತವೆ. ಸ್ವರದಲ್ಲೂ ವಿಭಿನ್ನತೆ ಇರುತ್ತದೆ. ಸಂಗಾತಿಯನ್ನು ಆಕರ್ಷಿಸಲು ನಡೆಸುವ ಗಾಯನವಿದು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅಪಾಯದ ಸೂಚನೆ ನೀಡಲು ವಿಭಿನ್ನ ಧ್ವನಿಯನ್ನು ಹೊರಡಿಸುತ್ತವೆ.

ಹಾಗಂತ ಇವುಗಳೇನು ಕೊರಳಿಂದ ಸ್ವರ ಹೊರಡಿಸುವುದಿಲ್ಲ, ಹಿಂಬದಿಯಲ್ಲಿ ಉಬ್ಬಿಕೊಂಡ ಟೊಳ್ಳು ಹೊಟ್ಟೆಯೊಳಗಿಂದ ಒಂದೇ ಉಸಿರಿನಲ್ಲಿ ಮೂಡಿಸುವ ಸಿಳ್ಳು ಇದಾಗಿದೆ. ಹೊಟ್ಟೆಯೊಳಗಿನ ವಿಶೇಷ ಪದರಗಳನ್ನು ಜೋರಾಗಿ ಅದುರಿಸುವುದರಿಂದ ಶಬ್ದ ಉತ್ಪಾದನೆಯಾಗುತ್ತದೆ. ಹಿಂಬದಿಯ ತುದಿಯಲ್ಲಿರುವ ಸಣ್ಣ ತೂತಿನಿಂದ ದೊಡ್ಡ ಧ್ವನಿಯಾಗಿ ಝೇಂಕರಿಸುತ್ತದೆ. ಇದೇ ಭಾಗದಲ್ಲಿ ಲೈಂಗಿಕ ಸಂಪರ್ಕ, ಮೊಟ್ಟೆ ಇಡುವ ಪ್ರಕ್ರಿಯೆ ಏರ್ಪಡುತ್ತದೆ.

ಹೆಬ್ಬೆರಳು ಗಾತ್ರದ ಸಿಕಾಡಾಸ್‌ಗಳು 12-17 ವರ್ಷಗಳ ಕಾಲ ಬದುಕುತ್ತವೆ ಎಂದರೆ ಅಚ್ಚರಿಯಾಗದೆ ಇರದು. ಎರಡು ದೊಡ್ಡ ಕಣ್ಣುಗಳ ನಡುವೆ ಮೂರು ಸಣ್ಣ ಕಣ್ಣುಗಳನ್ನು ಹೊಂದಿರುವ ಸಿಕಾಡಾಸ್ ಜೀವಿತಾವಧಿಯ ಬಹುಪಾಲು ದಿನಗಳನ್ನು ಮಣ್ಣಿನ ಅಡಿಯಲ್ಲಿ ಕಳೆಯುತ್ತವೆ. ಮರಗಳ ತೊಗಟೆ ಅಡಿಯಲ್ಲಿ, ಕಾಂಡಗಳ ಅಡಿಯಲ್ಲಿ ಒಂದು ಹೆಣ್ಣು ಸಿಕಾಡಾಸ್ ಸುಮಾರು 400 ಮೊಟ್ಟೆಗಳನ್ನು ಇರಿಸುತ್ತದೆ.

ಲ್ಯಾಂಡಿಂಗ್‌ಗೆ ಕ್ಷಣಗಣನೆ... ಊಟ ಅರಿಸಿ ಮರದತ್ತ ಹಾರಿಬಂದ ಕೀಟ

ಪ್ರತ್ಯೇಕ ಸ್ಥಳಗಳಲ್ಲಿ ಗುಂಪು ಗುಂಪಾಗಿ ಮೊಟ್ಟೆಗಳನ್ನು ಜೋಡಿಸಿಡುತ್ತದೆ. ಇದಾದ 6-10 ವಾರಗಳಲ್ಲಿ ಮೊಟ್ಟೆ ಬಿರಿದು ಹುಳುಗಳು ಹೊರಗೆ ಬರುತ್ತವೆ. ಮರದ ಬುಡದಲ್ಲೇ ನೆಲ ಸೇರುವ ಹುಳುಗಳು ಸುಮಾರು ಒಂದು ಮೀಟರ್ ಆಳ ಗುಂಡಿ ತೆಗೆದು ಒಳಗೆ ಸೇರಿಕೊಳ್ಳುತ್ತವೆ. ಮರದ ಬೇರುಗಳಲ್ಲಿನ ಸತ್ವಭರಿತ ದ್ರವವನ್ನು ಹೀರಿಕೊಳ್ಳುತ್ತ ಬದುಕು ಆರಂಭಿಸುತ್ತವೆ. ಹುಳಗಳ ಮೈಮೇಲಿನ ಚಿಪ್ಪು ಕರಗಿ, ರೆಕ್ಕೆಗಳು ಮೂಡಿ, ಲೈಂಗಿಕ ಕ್ರಿಯೆ ನಡೆಸುವಷ್ಟು ದೊಡ್ಡದಾದ ಮೇಲೆ ನೆಲದಡಿಯಿಂದ ಹೊರಗೆ ಬರುತ್ತವೆ. ಮರದಿಂದ ಮರಕ್ಕೆ ಹಾರುತ್ತ, ಸಂಧ್ಯಾಕಾಲಕ್ಕೆ ಅಥವಾ ಸುರಿಯುವ ಸೋನೆ ಮಳೆಗೆ ಹಿನ್ನೆಲೆ ಗಾಯನ ನೀಡಲು ಆರಂಭಿಸುತ್ತವೆ.

ಹೀಗೆ ಮಣ್ಣಿನಿಂದ ಹೊರಬಂದ ಪ್ರಾಯಕ್ಕೆ ಬಂದ ಕೀಟಗಳು 4-6 ವಾರಗಳಲ್ಲಿ ಸಾಯುತ್ತವೆ. ಅಷ್ಟರಲ್ಲಿ ಸಂಗಾತಿಯನ್ನು ಹುಡುಕಿ, ವಂಶಾಭಿವೃದ್ಧಿ ಮಾಡಲು ದೊಡ್ಡ ಸ್ವರದಲ್ಲಿ ಸಿಕಾಡಾಸ್‌ಗಳು ಕಿರಿಚಾಡುತ್ತಿರುತ್ತವೆ.

ಒಂದು ಎಕರೆ ಪ್ರದೇಶದಲ್ಲಿ 15 ಲಕ್ಷ ಸಿಕಾಡಾಸ್‌ಗಳು ಇರುವ ಸಾಧ್ಯತೆ ಇದೆ. ಆದರೆ ಲೋಕಸ್ಟ್ ಎಂಬ ರಾಕ್ಷಸ ಮಿಡತೆಗಳಂತೆ ಇವುಗಳೇನು ಗುಂಪಾಗಿ ದಾಳಿ ನಡೆಸುವುದಿಲ್ಲ. ಇಂತಹ ಸಾವಿರಾರು ಕೀಟಗಳು ದೊಡ್ಡ ಮರದ ಬೇರಿನ ರಸವನ್ನು ಹೀರಿದರೆ ಗಂಭೀರ ಎನಿಸುವುದಿಲ್ಲ. ಆದರೆ ದೊಡ್ಡ ದೊಡ್ಡ ಮರಗಳು ಇಲ್ಲದಿದ್ದಾಗ ಅನಿವಾರ್ಯವಾಗಿ ಸಿಕಾಡಾಸ್‌ಗಳು ರೈತರ ಬೆಳೆಗಳ ಬೇರಿನ ಮೇಲೆ ಅವಲಂಬಿತವಾಗುತ್ತವೆ. ಇದರಿಂದ ಕೃಷಿ ಬೆಳೆಗಳಿಗೆ ಹೆಚ್ಚು ಹಾನಿ ಆಗಬಹುದು. ❖

ಮುನ್ನೋಟ 08-08-2021 ರಿಂದ 14-08-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವ್ಯವಹಾರದಲ್ಲಿ ಸ್ವಲ್ಪ ಯಶಸ್ಸನ್ನು ಕಾಣುವಿರಿ. ಸಂಗ್ರಹಿಸಿಟ್ಟಿದ್ದ ವಸ್ತುಗಳನ್ನು ಮಾರಾಟ ಮಾಡಿ ಲಾಭ ಗಳಿಸುವಿರಿ. ಜಮೀನಿನ ವ್ಯಾಜ್ಯಕ್ಕೆ ಸಂಬಂಧಿಸಿ ಹಿರಿಯರು ಪರಿಹಾರ ಸೂಚಿಸುವರು. ವೃತ್ತಿಯಲ್ಲಿ ಹಿನ್ನಡೆ ಉಂಟಾಗಿ ಮನಸ್ಸಿಗೆ ಖಿನ್ನತೆ ಉಂಟಾಗುವ ಸಾಧ್ಯತೆಗಳಿವೆ. ವ್ಯವಹಾರದಲ್ಲಿ ಹಿನ್ನಡೆಯನ್ನು ಕಂಡರೂ ಸ್ನೇಹಿತರ ಸಹಕಾರದಿಂದ ಮತ್ತೆ ಸರಿದಾರಿಗೆ ತರುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನೀರಾವರಿ ಜಮೀನನ್ನು ಖರೀದಿ ಮಾಡಲು ಸಿದ್ಧತೆ ನಡೆಸುವಿರಿ. ಕಟ್ಟಡಗಳನ್ನು ನಿರ್ಮಾಣ ಮಾಡಿ ಮಾರುವವರಿಗೆ ವ್ಯವಹಾರ ಕುದುರುತ್ತದೆ. ಲೇವಾದೇವಿ ವ್ಯವಹಾರದಲ್ಲಿ ಕೈ ಸುಟ್ಟುಕೊಳ್ಳುವ ಸಾಧ್ಯತೆ ಇದೆ. ಕೆಲವೊಂದು ಕೆಲಸಗಳು ಪೂರ್ಣಗೊಳ್ಳದೆ ಒತ್ತಡಕ್ಕೆ ಸಿಲುಕುವಿರಿ. ಪಾಲುದಾರಿಕೆ ವ್ಯವಹಾರದಲ್ಲಿ ಕೋಪದಿಂದ ಮಾತನಾಡಿ ಹಿನ್ನಡೆಯನ್ನು ಕಾಣುವಿರಿ. ನಿರೀಕ್ಷಿತ ಮಟ್ಟದಷ್ಟು ಹಣದ ಒಳಹರಿವು ಇರುವುದಿಲ್ಲ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಬಂಧುಗಳ ಆರೋಗ್ಯದ ಬಗ್ಗೆ ಶುಭ ಸಮಾಚಾರ ಕೇಳುವಿರಿ. ಚಿನ್ನ, ಬೆಳ್ಳಿ ವ್ಯಾಪಾರ ಮಾಡುವವರಿಗೆ ವ್ಯಾಪಾರದಲ್ಲಿ ಏಳಿಗೆ ಇದೆ. ಮಿತ್ರನೊಡನೆ ಕಾವೇರಿದ ಮಾತುಗಳು ಆಗಬಹುದು. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ನಿಮ್ಮ ವೈಯಕ್ತಿಕ ಸರ್ಕಾರಿ ಕೆಲಸಗಳಲ್ಲಿ ಪ್ರಗತಿಯನ್ನು ಕಾಣಬಹುದು. ಹಣದ ವ್ಯವಹಾರಗಳಲ್ಲಿ ಮೂಡಿದ್ದ ಅನುಮಾನಗಳು ಪರಿಹಾರವಾಗುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿಮ್ಮ ಹೊಸ ಯೋಜನೆಗಳ ಬಗ್ಗೆ ಬಂದ ಸಲಹೆಗಳನ್ನು ನಿರಾಕರಿಸದಿರಿ. ಉದ್ಯೋಗದಲ್ಲಿ ಪ್ರಗತಿಯನ್ನು ಕಾಣುವಿರಿ. ವಿದೇಶಕ್ಕೆ ಕಚ್ಚಾ ಮಾಲು ಪೂರೈಸುವ ಕಂಪನಿಗಳಿಗೆ ವ್ಯವಹಾರ ಜಾಸ್ತಿಯಾಗಿ ಹೊಸ ಪೂರೈಕೆಯ ಆದೇಶಗಳು ಸಹ ದೊರೆಯುತ್ತವೆ. ರಿಯಲ್ ಎಸ್ಟೇಟ್ ಉದ್ಯಮವನ್ನು ನಡೆಸುವವರಿಗೆ ವ್ಯವಹಾರ ಚೇತರಿಸಿಕೊಳ್ಳುತ್ತದೆ. ಶತ್ರುಗಳನ್ನು ಸ್ನೇಹ ಮತ್ತು ಸಂಯಮದಿಂದ ಎದುರಿಸಿರಿ.

ಸಿಂಹ — ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಕೃಷಿ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿ ಇರುತ್ತದೆ. ಮೀನುಗಾರರಿಗೆ ಆದಾಯದಲ್ಲಿ ಅನಿಶ್ಚಿತತೆ ಇರುತ್ತದೆ. ಜಲಸಾರಿಗೆ ಉದ್ಯಮಿಗಳ ಆದಾಯಕ್ಕೆ ಕೊರತೆ ಇರುವುದಿಲ್ಲ. ಸ್ಥಿರಾಸ್ತಿ ಕೊಳ್ಳುವಾಗ ಅಕ್ಕಪಕ್ಕದವರ ಕಿರಿಕಿರಿ ಎದುರಿಸಬೇಕಾದೀತು. ಕೆಲಸ ಕಾರ್ಯಗಳಲ್ಲಿ ಮುನ್ನುಗ್ಗುವ ಮನೋಭಾವದಿಂದ ಹಿಡಿದ ಕೆಲಸಗಳಲ್ಲಿ ಸಾಧನೆ ಮಾಡುವಿರಿ. ವಿದ್ಯಾರ್ಥಿಗಳಿಗೆ ಮಂದಗತಿಯ ಯಶಸ್ಸು ಇರುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮ ವಿರೋಧಿಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದು ನಿಮಗೆ ಉತ್ತಮ. ಸ್ತ್ರೀಯರಿಗೆ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ಕೆಲವು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅಹಂಕಾರ ಬಿಟ್ಟು ರಾಜಿ ಮಾಡಿಕೊಳ್ಳಬೇಕಾದ ಅನಿವಾರ್ಯ ಇದೆ. ವ್ಯವಹಾರಗಳು ಸುಗಮವಾಗಿ ಮುಂದುವರೆಯುತ್ತವೆ. ಕುಟುಂಬದವರೆಲ್ಲರ ಒಪ್ಪಿಗೆಯಂತೆ ಕೆಲಸ ಕಾರ್ಯಗಳನ್ನು ಮಾಡುವುದು ಉತ್ತಮ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿತ ಯಶಸ್ಸು ಸಿಗದೆ ಸ್ವಲ್ಪ ಏರುಪೇರಾಗಬಹುದು. ಸಂಗಾತಿಯ ಕೆಲವು ವರ್ತನೆಗಳು ಮುಜುಗರವನ್ನು ತರಬಹುದು. ಕಟ್ಟಡ ನಿರ್ಮಾಣಕಾರರು ಹೊಸ ಯಂತ್ರೋಪಕರಣಗಳನ್ನು ಖರೀದಿ ಮಾಡುವ ಸಾಧ್ಯತೆ ಇದೆ. ಆರ್ಥಿಕ ಬಲವರ್ಧನೆಗಾಗಿ ಹಲವು ಯೋಜನೆಗಳನ್ನು ಹಾಕಿಕೊಳ್ಳುವಿರಿ. ಆದರೂ ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಸಿಗುವ ಬಗ್ಗೆ ಸೂಚನೆ ದೊರೆಯುತ್ತದೆ. ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಹೆಚ್ಚು ಶ್ರಮ ವಹಿಸಬೇಕು. ಆರ್ಥಿಕ ಪರಿಸ್ಥಿತಿಯು ಮಂದಗತಿಯಲ್ಲಿ ಇರುತ್ತದೆ. ಕೆಲಸ ಕಾರ್ಯಗಳಲ್ಲಿ ನಿರೀಕ್ಷಿತ ಯಶಸ್ಸು ದೊರೆಯದಿದ್ದರೂ ಅಲ್ಪ ಯಶಸ್ಸು ಇದ್ದೇ ಇರುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಕೃಷಿರಂಗದಲ್ಲಿ ತೊಡಗಿಸಿಕೊಂಡಿರುವವರಿಗೆ ಕೆಲಸಕಾರ್ಯಗಳಲ್ಲಿ ಎಚ್ಚರಿಕೆ ಅಗತ್ಯ. ಅನಗತ್ಯ ಕೆಲಸಗಳಿಂದ ಹೆಚ್ಚು ಹಣ ಖರ್ಚು ಆಗಬಹುದು. ಉನ್ನತ ಶಿಕ್ಷಣವನ್ನು ಮಾಡಬೇಕೆಂದಿರುವವರಿಗೆ ತಕ್ಕ ಅನುಕೂಲಗಳು ಒದಗುತ್ತವೆ. ತಂದೆಯ ಮೇಲೆ ವಿನಾಕಾರಣ ಮುನಿಸನ್ನು ತೋರುವಿರಿ. ಪಾಲುದಾರಿಕೆಯ ವ್ಯವಹಾರಗಳಲ್ಲಿ ಅಪನಂಬಿಕೆ ಬಂದರೂ ನಂತರ ಎಲ್ಲವೂ ಸರಿಯಾಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ತುಂಬಾ ಶ್ರಮವಹಿಸಿ ಮಾಡಿದ್ದ ಕೆಲಸಗಳಲ್ಲಿ ಯಶಸ್ಸು ದೊರೆಯುತ್ತದೆ. ಬಹಳ ದಿನಗಳ ಪ್ರಯತ್ನದಿಂದ ನಿಂತಿದ್ದ ವ್ಯವಹಾರಗಳನ್ನು ಪುನರಾರಂಭ ಮಾಡುವಿರಿ. ಮಿಶ್ರಲೋಹಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಲಾಭವಿದೆ. ಸಂಸ್ಥೆಗಳಿಂದ ಸಾಲ ಪಡೆಯುವ ವಿಚಾರದಲ್ಲಿ ಅಧಿಕಾರಿಗಳಿಂದ ವಂಚನೆಗೆ ಒಳಗಾಗುವ ಸಾಧ್ಯತೆಯಿದೆ, ಈ ಬಗ್ಗೆ ಎಚ್ಚರವಿರಲಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಣಕಾಸು ಸಂಸ್ಥೆಗಳ ಸಹಾಯದಿಂದ ಸ್ವಂತ ಉದ್ದಿಮೆಯನ್ನು ಆರಂಭಿಸಲು ತಯಾರಿ ಮಾಡುವಿರಿ. ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಹೆಚ್ಚಿನ ಪ್ರೋತ್ಸಾಹಧನ ದೊರೆಯುತ್ತದೆ. ಆರ್ಥಿಕ ಪರಿಸ್ಥಿತಿಯು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಬಂಧುಗಳ ನಡುವಿನ ಸಂಬಂಧ ಗಟ್ಟಿಯಾಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಉನ್ನತ ಅಧ್ಯಯನದಲ್ಲಿ ಪ್ರಗತಿ ಇರುತ್ತದೆ. ಕಾಡುತ್ತಿದ್ದ ಶತ್ರುವಿನ ಭೀತಿ ನಿಧಾನವಾಗಿ ತಾನಾಗಿಯೇ ನಿವಾರಣೆಯಾಗುತ್ತದೆ. ಭೂಮಿಯ ವ್ಯವಹಾರದಲ್ಲಿ ಲಾಭದ ನಿರೀಕ್ಷೆಯನ್ನು ಇಟ್ಟುಕೊಳ್ಳಬಹುದು. ಬಹಳ ಹಿಂದೆ ನೀಡಿದ್ದ ಕೆಲವು ಸಾಲ ಈಗ ವಾಪಸ್ ಬರುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಪ್ರಗತಿ ಇರುತ್ತದೆ. ಕುಟುಂಬದಲ್ಲಿನ ಕೆಲವು ವಿಚಾರಗಳಿಗೆ ಮಕ್ಕಳೊಡನೆ ಚಕಮಕಿ ಸಂಭವಿಸಬಹುದು.

ಪದಬಂಧ 2699



ಮೇಲಿನಿಂದ ಕೆಳಕ್ಕೆ
1. ಬೇಸಾಯ ಇಲ್ಲಿಂದಲೇ ಶುರು 3
2. ಸ್ವಾಮಿತ್ವದಿಂದ ಮರ್ಯಾದೆ ಪಡೆದ ಗಂಡ 4
3. ಕೆಟ್ಟ ಶಾಸನಕ್ಕೆ ಸಂಕೇತ ಈ ಗಾಂಧಾರಿ ಪುತ್ರ 4
4. ಅನವರತ ನಮ್ಮನ್ನು ಕಾಪಾಡು 3
6. ಅಮೃತದಿಂದ ಕೂಡಿದ ಭೂಮಿ 3
8. ದೂರವನ್ನು ಕ್ರಮಿಸಲು ರಸ್ತೆಯನ್ನು ಆಕ್ರಮಿಸಿರುವ ಮೋಟಾರು 3
10. ಸಾಗರದ ದೇವತೆ 5
12. ಸೌಂದರ್ಯಕ್ಕೆ ಹೆಸರಾದ ಸತಿ ಮನ್ಮಥ 5
13. ಅರಸರ ವೈಭವಕ್ಕೆ ಹೆಸರಾದ ಹೆಣ್ಣು 3
15. ಅಗಲಿಕೆಯ ನೋವಿನಿಂದ ಬಳಲುತ್ತಿರುವವ 3
19. ತನಗೆ ಬೇಕಾದ್ದನ್ನು ಇತರರಿಗಾಗಿ ಬಿಟ್ಟುಕೊಡುವ ಮನೋಭಾವ 3
20. ಹೃದಯ ಅಲ್ಲಾಡುವಂತೆ ಕದಡು 3
22. ಪದ್ಯ ರಚಿಸುವವನ ಅಂತರಂಗ ದೃಷ್ಟಿ 4
23. ಅಸುರ ಜನನಿ, ಕಶ್ಯಪ ಬ್ರಹ್ಮನ ಪತ್ನಿಯ ಪುತ್ರ 4
24. ಒಳಗೊಳಗೇ ಆಗುವ ಭಯ 3
27. ಕುಶ ಸೋದರ ತರುವ ಉಪ್ಪು 3

ಎಡದಿಂದ ಬಲಕ್ಕೆ
1. ಎಲ್ಲೆಡೆ ಸಂತೋಷವೇ ತುಂಬಿಕೊಂಡ ಸ್ಥಿತಿ 5
3. ತನ್ನನ್ನು ಬಿಟ್ಟರೆ ಇಲ್ಲವೆಂಬ ಅತಿಯಾದ ಅಹಂ ಭಾವನೆ 5
5. ಆಗಲಿ, ಇದು ಇಹಕ್ಕೆ ಸಂಬಂಧಿಸಿದ್ದು 2
7. ಅಂತರಾಳದ ಸರೋವರ 3
8. ವಾಸುದೇವನ ಅಡ್ಡ ಹೆಸರು 2
9. ಆರಾಮವಾಗಿ ಕೂರಲು ಯೋಗ ಭಂಗಿ 4
11. ಪ್ರಹ್ಲಾದನನ್ನುಳಿಸಲು ಕಂಬದಿಂದ ಬಂದ ಕೇಸರಿ ಮುಖದ ಅರೆ ಮಾನವ 4
13. ಬೃಂದಾವನದ ಮಾಧವ ಪ್ರಿಯೆ 2
14. ಮುಂಬಯಿಗೆ ಹೊಸತನ್ನು ತುಂಬುವ ಪದ 2
16. ಹರಿಯುವ ಗುಣವುಳ್ಳ ವಸ್ತು 2
17. ಮೂಗಿಗೆ ಬಡಿಯುವ ಸುವಾಸನೆ 2
18. ಶ್ರೀನಿವಾಸನನ್ನು ಚಿಕ್ಕದಾಗಿ ಹೀಗೆ ಕರೆಯಬಹುದು 2
20. ಸಿಹಿಯಲ್ಲದ ನೆನಪುಗಳು ಹೀಗೆ 2
21. ಸಾಧಾರಣ ಸಹಜ ಗುಣ 4
23. ನಿತ್ಯಋಣದ ಪ್ರತಿರೂಪ 4
24. ಗ್ರಹಿಕೆಗೆ ಬರುವ ಹಣಕಾಸು ವಿಷಯ 2
25. ವಿಶೇಷವಾಗಿ ಗುಂಪಿಗೆ ಸೇರದ್ದು 3
26. ವಂಶಕ್ಕೊಂದು ಪರ್ಯಾಯ 2
28. ತನ್ನದೇ ಜಾತಿಗೆ ಸೇರಿದ ನೆಂಟ 5
29. ಕತ್ತಲನ್ನೇ ಅಪಹರಿಸಿದ ಪ್ರಸಂಗ 5

ಪದಬಂಧ ಉತ್ತರ -2698

ಮೇಲಿಂದ ಕೆಳಕ್ಕೆ
1. ಹರಿಕಥಾಮೃತ 2.ತದ್ಭವ 3.ಸಾಹಸಿ 4.ಹಣವಂತ 5.ನಮನ 6.ನಿಯಮಾತೀತ 7.ಗಾದೆ 10.ನತಮಸ್ತಕ 12.ಹರಮಹಾದೇವ 14.ಶೀತಲ 15.ಭೃಂಗಸಂಗ 16.ಸತಿ 19.ರವೀಶ 20ಮರುಕ

ಎಡದಿಂದ ಬಲಕ್ಕೆ
1. ಹಸಜಾತ 3.ಸಾಧನಸಂಗ್ರಹ 5.ನವಮಾಸಿನಿ 7.ಗಾನವಂ 8.ಯಶೋದೆ 9.ಮೃಗನಯನ 11.ತಪತೀ 13.ತಹಶೀಲ್ದಾರ 16.ಸಮಸ್ತ 17.ಗಣತಿ 18.ಕರಕಮಲ 21.ಗಗನಸದೃಶ 22.ಕಲರವ

ನಮ್ಮದೇ ಆಟ, ನಾವೇ ಬೇಟೆ...

ರಘುನಾಥ ಚ.ಹ.

ದೀರ್ಘ ಬರವಣಿಗೆ ಈ ಕಾಲಕ್ಕೆ ತಕ್ಕದ್ದಲ್ಲ ಎನ್ನುವ ನಂಬಿಕೆಯನ್ನು ಸುಳ್ಳು ಮಾಡುವವರಂತೆ, ಕನ್ನಡದ ಕಥೆಗಾರರೆಲ್ಲ ಕಾದಂಬರಿ ಪ್ರಕಾರವನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ, ಹಿರಿಯ ಕಥೆಗಾರ ಎಂ.ಎಸ್. ಶ್ರೀರಾಮ್ ಅವರ 'ಬೇಟೆಯಲ್ಲ ಆಟವೆಲ್ಲ' ಕಾದಂಬರಿ ಪ್ರಕಟಗೊಂಡಿದೆ. ಬೇಟೆ ಮತ್ತು ಆಟ ಪರಸ್ಪರ ಬೆರೆತುಹೋಗಿರುವ ಈ ಕೃತಿ ಬರಹಗಾರನೊಬ್ಬನ ಪ್ರಯೋಗಶೀಲತೆಯ ಹಂಬಲದ ರೂಪದಲ್ಲಿ ಗಮನಸೆಳೆಯುತ್ತದೆ; ವರ್ತಮಾನದ ವಿದ್ಯಮಾನಗಳಿಗೆ ಸೃಜನಶೀಲ ಬರಹಗಾರನ ಪ್ರತಿಕ್ರಿಯೆಯ ರೂಪದಲ್ಲಿ ಮಹತ್ವ ಪಡೆದುಕೊಂಡಿದೆ.

'ಬೇಟೆಯಲ್ಲ ಆಟವೆಲ್ಲ' ಕೃತಿಯ ಭಾಗಗಳು ಕಥೆಗಳಾಗಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು, ಅವುಗಳನ್ನೀಗ ಕಾದಂಬರಿಯ ಬಂಧದ ರೂಪದಲ್ಲಿ ಜೋಡಿಸಲಾಗಿದೆ. 'ಬಿಡಿ ಕಥೆಗಳಾಗಿ ಉಳಿಯದೆ, ಒಂದಕ್ಕೊಂದು ಕೊಂಡಿ ಹಾಕಿ ಮುಂದುವರೆದು ಕಾದಂಬರಿಯ ರೂಪದಲ್ಲಿ ಓದಿಸಿಕೊಳ್ಳಬೇಕೆನ್ನುವುದು ನನ್ನ ಉದ್ದೇಶವಾಗಿತ್ತು' ಎಂದು ಕಾದಂಬರಿಯ ಆರಂಭದಲ್ಲಿ ಶ್ರೀರಾಮ್ ಹೇಳಿಕೊಂಡಿದ್ದಾರೆ. ಅವರ ಮಾತನ್ನು ಮರೆತು ಓದಿದರೆ, ಸಣ್ಣಕಥೆಗಳ ಗುಚ್ಛ ಕಾದಂಬರಿಯಾಗಿ ಜೋಡಣೆಗೊಂಡಿರುವುದು ಮೇಲ್ನೋಟಕ್ಕೆ ತಿಳಿಯದಷ್ಟರ ಮಟ್ಟಿಗೆ ಈ ಕೊಲಾಜ್ ಯಶಸ್ವಿಯಾಗಿದೆ. ಪುನರ್ಮಿಲನ, ಆಗಂತುಕ, ಮಹಾನಗರ, ತಲೆಮಾರು, ಆಕ್ರಮಣ, ತ್ರಿಕೋನ, ದಾರಿಗಳು, ಬೇಟೆ, ಸಂಭಾಷಣೆ ಹಾಗೂ ಮುತ್ತಿಗೆ ಎನ್ನುವ ಶೀರ್ಷಿಕೆಗಳು ಕಥನದ ದಾರಿಯನ್ನು ಸೂಚಿಸುವುದರ ಜೊತೆಗೆ, ಆಧುನಿಕ ಕಾಲಘಟ್ಟದ ಸ್ವರೂಪ ಚಿತ್ರಣದ ಬೀಜಪದಗಳೂ ಆಗಿವೆ. ಇದೆಲ್ಲ ಕೃತಿ ಕಟ್ಟುವಿಕೆಗೆ ಸಂಬಂಧಿಸಿದ ಪ್ರಯೋಗಶೀಲತೆಯ ಮಾತಾಯಿತು. ಕಾದಂಬರಿಯ ಅಸಲಿ ತಾಕತ್ತಿರುವುದು ಭಾರತದ ವರ್ತಮಾನವನ್ನು ಓದುಗರಿಗೆ ಮುಖಾಮುಖಿ ಆಗಿಸುವಲ್ಲಿ.



ಪು: 176 ₹180

ಬೇಟೆಯಲ್ಲ ಆಟವೆಲ್ಲ
ಲೇ: ಎಂ.ಎಸ್. ಶ್ರೀರಾಮ್
ಪ್ರ: ಅಕ್ಷರ ಪ್ರಕಾಶನ
ಸಂ: 9480280401
ಜಾಲತಾಣ: www.aksharaprakashana.com

ರಾಜಕಾರಣ ಮತ್ತು ಧರ್ಮದ ನಡುವಣ ಗೆರೆ ತೀರಾ ತೆಳುವಾಗಿ, ರಾಜಕಾರಣದಲ್ಲಿ ಧಾರ್ಮಿಕ ಚಹರೆಗಳನ್ನೂ ಧರ್ಮದಲ್ಲಿ ರಾಜಕಾರಣದ ಒಳಸುಳಿಗಳನ್ನೂ ಕಾಣುತ್ತಿರುವ ವೈರುಧ್ಯಗಳ ಸಂದರ್ಭ ಇಂದಿನದು. ಈ ಬದಲಾದ ಸನ್ನಿವೇಶದ ಕ್ಯಾನ್ವಾಸ್‌ನಲ್ಲಿ, ಕನ್ನಡ ಸಾಹಿತ್ಯಕ್ಕೆ ಅಷ್ಟೇನೂ ಪರಿಚಿತವಲ್ಲದ ಮೇಲ್ಮಧ್ಯಮ ಮತ್ತು ಶ್ರೀಮಂತ ಸಮಾಜದ ಬದುಕಿನ ತವಕತಲ್ಲಣಗಳನ್ನು ಚಿತ್ರಿಸುವ ಪ್ರಯತ್ನ ಕಾದಂಬರಿಯಲ್ಲಿದೆ. ಮೇಲ್ಮಧ್ಯಮ ಮತ್ತು ಶ್ರೀಮಂತ ಸಮಾಜದ ಬದುಕಿನ ಹಿತಾಸಕ್ತಿಗಳೇ ಜನಸಾಮಾನ್ಯರ ಬದುಕು ಹಾಗೂ ನಂಬಿಕೆಗಳನ್ನು ನಿರ್ದೇಶಿಸುತ್ತಿರುವುದನ್ನು ಅರ್ಥ ಮಾಡಿಕೊಂಡರೆ, ಕಾದಂಬರಿಯ ವಿಸ್ತಾರವೂ ಅರ್ಥವಾಗುತ್ತದೆ. ಕಥೆ ನಡೆಯುವ ಸಾಮಾಜಿಕ ಪರಿಸರ ಬೇರೆಯಾದರೂ, ಸಾಹಿತ್ಯದ ಪ್ರಮುಖ ಆಸಕ್ತಿಯಾಗಿರುವ ಕೇಡಿನ ಸ್ವರೂಪದ ವಿಶ್ಲೇಷಣೆ, ನೈತಿಕತೆ ಮತ್ತು ಅನೈತಿಕತೆಯ ಜಿಜ್ಞಾಸೆ ಇಲ್ಲಿಯೂ ಇದೆ.

ಒಳನೋಟ

ಕಾದಂಬರಿಯ ಕೇಂದ್ರವನ್ನು ಮುಖ್ಯವಾಗಿ ಎರಡು ನೆಲೆಗಳಲ್ಲಿ ಗುರ್ತಿಸಬಹುದು. ಸಾಮಾಜಿಕ ಜೀವನದಲ್ಲಿ ಧರ್ಮವನ್ನು ನಾವು ಪರಿಭಾವಿಸುತ್ತಿರುವ ರೀತಿಯಲ್ಲಿ ಆಗಿರುವ ಬದಲಾವಣೆಯನ್ನು ಹಾಗೂ ಉದ್ಯಮದಲ್ಲಿ ನೈತಿಕತೆಯ ಸ್ವರೂಪ ಯಾವ ಬಗೆಯದು ಎನ್ನುವುದನ್ನು ಕಾದಂಬರಿ ಚರ್ಚಿಸುತ್ತದೆ. ಇಲ್ಲಿನ ಅನಿರುದ್ಧ ಮತ್ತು ಅಖ್ತರ್ ಹುಸೇನ್, ಎರಡು ಧರ್ಮಗಳನ್ನಷ್ಟೇ ಪ್ರತಿನಿಧಿಸುತ್ತಿಲ್ಲ; ಬದಲಾದ ನಂಬಿಕೆಗಳನ್ನೂ ಪ್ರತಿನಿಧಿಸುತ್ತಿದ್ದಾರೆ. ಮೈಸೂರಿನ ಕಾಲೇಜು ದಿನಗಳಲ್ಲಿ, ಆಧುನಿಕ ಹಾಗೂ ವೈಚಾರಿಕ ವ್ಯಕ್ತಿಯಾಗಿದ್ದ ನೈರೋಬಿಯ ಅಖ್ತರ್ ಹಾಗೂ ಬೋಳೆ ವ್ಯಕ್ತಿತ್ವದ ಅನಿರುದ್ಧ ಈಗ ತಮ್ಮ ಪಾತ್ರಗಳನ್ನು ಬದಲಿಸಿಕೊಂಡಂತೆ ಕಾಣಿಸುತ್ತಿದ್ದಾರೆ. ಆಧುನಿಕ ಜೀವನಶೈಲಿ ಅನಿರುದ್ಧನ ಬದುಕಿನಲ್ಲಿ ಬದಲಾವಣೆ ತಂದಿದ್ದರೆ, ಅಖ್ತರ್ ಹೆಚ್ಚು ಧಾರ್ಮಿಕ ವ್ಯಕ್ತಿಯಾಗಿದ್ದಾನೆ. ಅಂತರಂಗದಲ್ಲಿ ಬದಲಾಗದಿದ್ದರೂ, ಬಾಹ್ಯಚಹರೆಯಲ್ಲಿನ ಬದಲಾವಣೆ ಹಾಗೂ ದಿನಕ್ಕೆ ಐದು ಸಲ ನಮಾಜು ಮಾಡುವ ಅಖ್ತರನ ಜೀವನವಿಧಾನ ಅನಿರುದ್ಧನಿಗೆ ಅಚ್ಚರಿ ಹುಟ್ಟಿಸುತ್ತದೆ.

ಅಖ್ತರನದು ಮತ್ತೊಂದು ಬಗೆಯ ಜಿಜ್ಞಾಸೆ. ತನ್ನ ಧಾರ್ಮಿಕ ಚಹರೆಗಳನ್ನು ಗುಮಾನಿಯಿಂದ ನೋಡುವ ವ್ಯವಸ್ಥೆ ಅವನನ್ನು ಖಿನ್ನನನ್ನಾಗಿಸುತ್ತದೆ. ಅಹಮದಾಬಾದ್‌ನ ಹೋಟೆಲ್‌ನಲ್ಲಿ ನಡೆಯುವ ವಿಚಾರಣೆಯಿಂದ, ಮತ್ತೊಮ್ಮೆ ಭಾರತಕ್ಕೆ ಬರುವುದೇ ಬೇಡ ಎನ್ನುವಮಟ್ಟಿಗೆ ಅವನು ವಿಚಲಿತನಾಗುತ್ತಾನೆ. ಪ್ರಸಕ್ತ ಸಾಮಾಜಿಕ ಸಂದರ್ಭದಲ್ಲಿ ವ್ಯಕ್ತಿಯ ಅಂತರಂಗಕ್ಕಿಂತಲೂ ಬಾಹ್ಯ ಚಹರೆಯೇ ಮುಖ್ಯವಾಗುತ್ತಿರುವ ಸ್ಥಿತಿಗೆ ರಾಜಕಾರಣ ಕಾರಣವಾಗಿರುವುದು ಹಾಗೂ ಆ ಬದಲಾವಣೆಯನ್ನು ನಾವು ಹೆಚ್ಚು ತಕರಾರಿಲ್ಲದೆ ಒಪ್ಪಿಕೊಂಡಿರುವುದನ್ನು ಕಾದಂಬರಿ ಸೂಚಿಸುತ್ತದೆ. ಎಲ್ಲರಂತಿರಲು ಅಖ್ತರನಿಗೆ ಸಮಸ್ಯೆಯೇನು ಎನ್ನುವುದು ಈ ಹೊತ್ತಿನ ಭಾರತದ ಬಹುಸಂಖ್ಯಾತರ ಪ್ರತಿನಿಧಿಯಂತಿರುವ ಅನಿರುದ್ಧನಿಗೆ ಕೊನೆಗೂ ಅರ್ಥವಾಗುವುದಿಲ್ಲ ಅಥವಾ ಅರ್ಥವಾಗುವುದು ಅವನಿಗೆ ಬೇಕಿಲ್ಲ ಎನ್ನುವುದೇ 'ಬಹುತ್ವ ಭಾರತ'ದ ಪರಿಕಲ್ಪನೆಯಲ್ಲಿ ಆಗಿರುವ ಬದಲಾವಣೆಯನ್ನು ಕಾಣಿಸುತ್ತದೆ.

ಕಾದಂಬರಿಯ ಮತ್ತೊಂದು ಕೇಂದ್ರ ಕಾರ್ಪೋರೇಟ್ ಜಗತ್ತಿನದು. ತನ್ನ ಗಂಡ ಮುಕುಂದಸಾಗರನ ಕಂಪನಿಯನ್ನು ಬೆಳೆಸುವ ಸುಜಾತಾ, ಮಾನವೀಯ ಸ್ಪಂದನಗಳಿಗೆ ವ್ಯಾಪಾರದಲ್ಲೂ ಅವಕಾಶವಿರಬೇಕು ಎಂದು ನಂಬಿದವಳು. ಆದರೆ, ಕಂಪನಿಗೆ ನೌಕರಳಾಗಿ ಸೇರಿಕೊಂಡು, ನಂತರದ ದಿನಗಳಲ್ಲಿ ಇಡೀ ಸಂಸ್ಥೆಯನ್ನು ತನ್ನ ಅಧೀನಕ್ಕೆ ಪಡೆಯುವ ಶಿವಾನಿ, ವ್ಯಾಪಾರದಲ್ಲಿ ಯಶಸ್ಸಿಗಾಗಿ ಏನು ಮಾಡಿದರೂ ತಪ್ಪಲ್ಲ ಎನ್ನುವ ನಂಬಿಕೆಯುಳ್ಳ ಯುವತಿ. ಸುಜಾತಾ ಮತ್ತು ಶಿವಾನಿ ಭಿನ್ನ ಧ್ರುವಗಳಂತೆ, ವಿರುದ್ಧಾರ್ಥಕ ಮೌಲ್ಯಗಳಂತೆ, ತಲೆಮಾರುಗಳ ನಡುವಿನ ಅಂತರದಂತೆ ಕಾಣಿಸುತ್ತಾರೆ.

ಗಂಡನ ಸಾವಿನೊಂದಿಗೆ ಕಂಪನಿಯ ಮೇಲಿನ ಹಕ್ಕನ್ನೂ ಕಳೆದುಕೊಳ್ಳುವ ಸುಜಾತಾ, ಶಿವಾನಿಯ ವಿರುದ್ಧ ಹೋರಾಡಲು ಮುಂದಾಗುವುದು ನೈತಿಕ ಕಾರಣಗಳಿಂದಲೇ. ಸುಜಾತಾಳಿಗೆ ನೈತಿಕ ಬೆಂಬಲವಾಗಿ ಭಾರತಕ್ಕೆ ಬರುವ ಅಖ್ತರ್, ರಾಜಕೀಯ ಒತ್ತಡಗಳಿಂದಾಗಿ ಬಂಧನಕ್ಕೊಳಗಾಗುತ್ತಾನೆ. ಅಖ್ತರನ ಬಂಧನದೊಂದಿಗೆ ಸುಜಾತಾಳ ಹೋರಾಟದ ನಿರ್ಧಾರ ಮತ್ತಷ್ಟು ಬಲವಾಗುವ ಸೂಚನೆಯೊಂದಿಗೆ ಕಾದಂಬರಿ ಮುಗಿಯುತ್ತದೆ.

'ಬೇಟೆಯಲ್ಲ ಆಟವೆಲ್ಲ' ಎಂದು ಕೃತಿಯ ಶೀರ್ಷಿಕೆ ಹೇಳುತ್ತಿದ್ದರೂ, ಆ ಶೀರ್ಷಿಕೆಯಲ್ಲಿ ಆಟ ಬೇಟೆಯೂ ಆಗಿರುವ ಧ್ವನಿಯಿದೆ. ಆಟಕ್ಕೆ ತನ್ನದೇ ಆದ ಸೌಂದರ್ಯ, ಅಂತಃಕರಣ, ಆಶಯ, ಮಾನವೀಯ ಕಟ್ಟುಪಾಡುಗಳಿರುತ್ತವೆ. ಆ ಕಟ್ಟುಪಾಡುಗಳು ಎಲ್ಲೆಮೀರಿದಾಗ, ಆಟ ಬೇಟೆಯಾಗುವ, ಆ ಬೇಟೆ ನಮ್ಮ ಇಂದಿನ ಬದುಕೇ ಆಗಿರುವ ವಿಪರ್ಯಾಸದ ಬಗ್ಗೆ ಚಿಂತಿಸಲು ಕಾದಂಬರಿ ಒತ್ತಾಯಿಸುವಂತಿದೆ.

ಶ್ರೀರಾಮ್ ಅವರ ಕಾದಂಬರಿ ರೋಚಕವಾಗಿದೆ; ಭಾಷೆ ಕೊಂಚ ಗಡುಸಾಗಿದೆ. ಆದರೆ, ರೋಚಕತೆ ಹಾಗೂ ಒರಟುತನ ಈ ಕಾಲದ ಲಕ್ಷಣಗಳೂ ಆಗಿರುವುದರಿಂದ, ಅವು ಕಾದಂಬರಿಗೆ ಪೂರಕವಾಗಿವೆ. ಕಥನದ ಸಮಕಾಲೀನತೆ ಹಾಗೂ ಬರವಣಿಗೆಯ ಪ್ರಯೋಗಶೀಲತೆಯ ಜೊತೆಗೆ ವಿಭಿನ್ನ ಮುಖಪುಟ ಹಾಗೂ ಯುನಿಕೋಡ್ ಫಾಂಟ್ ಒಳಗೊಂಡ ವಿನ್ಯಾಸದಿಂದಾಗಿ ಕೂಡ ಈ ಕಾದಂಬರಿ ಕನ್ನಡ ಕೃತಿಗಳ ಸಾಲಿನಲ್ಲಿ ವಿಭಿನ್ನವಾಗಿದೆ.

ಕನ್ನಡದ ಇತ್ತೀಚಿನ ಬಹುಚರ್ಚಿತ ಕಾದಂಬರಿಗಳು ಇತಿಹಾಸದ ಗತವೈಭವ ಅಥವಾ ಸಮುದಾಯಗಳ ಚರಿತ್ರೆಗೆ ಒಳಪಟ್ಟಿರುವಂತಹವು; ಸಾಂಸ್ಕೃತಿಕ ಸಾಮುದಾಯಿಕ ಸ್ಮೃತಿಗಳ ಹಂಗಿಗೆ ಒಳಪಟ್ಟಂತಹವು. 'ಬೇಟೆಯಲ್ಲ ಆಟವೆಲ್ಲ' ಕೃತಿ, ನಮ್ಮೊಳಗು ಹೊರಗನ್ನು ಪರಿಶೀಲಿಸಿಕೊಳ್ಳಲು ವರ್ತಮಾನಕ್ಕೆ ನೇರವಾಗಿ ಹಿಡಿದ ಕನ್ನಡಿ.

ಕಥೆ

ದೇವರಿಗಾಗಿ ಹುಡುಕಾಟ
ಮೂಲ(ಒರಿಯಾ): ಅರ್ಚನಾ ನಾಯಕ್
ಕನ್ನಡಕ್ಕೆ: ಡಿ.ಎನ್.ಶ್ರೀನಾಥ್

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ

ಸ್ಮಿತಾ ಅಮೃತರಾಜ್ ಬರೆದ ಕವಿತೆ
ಹುಡುಕಾಟವೆಂಬುದು ವ್ಯಾಧಿ

ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ನೃತ್ಯ ಕಲಾಪ್ರಪಂಚದ ಸರ್ವಾಂಗ ವೈಭವ

ಗ.ನಾ.ಭಟ್ಟ

'ನೃತ್ಯಶಾಸ್ತ್ರ ಮಂಜರಿ' ಹೆಸರೇ ಹೇಳುವಂತೆ ನೃತ್ಯ ಮತ್ತು ಶಾಸ್ತ್ರವನ್ನು ಪರಿಚಯಿಸುವ ಒಂದು ಉದ್ಗ್ರಂಥ. ನೃತ್ಯದ ಬಗ್ಗೆಯೇ ಆಗಲಿ ಅಥವಾ ನೃತ್ಯಶಾಸ್ತ್ರದ ಬಗ್ಗೆಯೇ ಆಗಲಿ ಸೂತ್ರಪ್ರಾಯವಾಗಿ ಲಕ್ಷಣೀಕರಿಸುವುದು ಅಷ್ಟು ಸುಲಭವಲ್ಲ. ಅವೆರಡರ ಬಗ್ಗೆಯೂ ಅಪಾರ ತಿಳಿವಳಿಕೆ ಬೇಕಾಗುತ್ತದೆ; ಅಧ್ಯಯನ ಬೇಕಾಗುತ್ತದೆ. ನಾಟ್ಯಾಚಾರ್ಯ ಪ್ರೊ. ಕೆ.ರಾಮಮೂರ್ತಿ ರಾವ್ ಅವರು ಅಂತಹ ತಿಳಿವಳಿಕೆ ಮತ್ತು ಅಧ್ಯಯನ ಹೊಂದಿದವರು.

ವಿಮರ್ಶೆ

ಕಲೆ ಮತ್ತು ಶಾಸ್ತ್ರಗಳ ಬಗ್ಗೆ ವಿದ್ವಾಂಸರು, ನಾಟ್ಯಶಾಸ್ತ್ರಪರಿಣತರು, ವಿದಗ್ಧರು, ಕಲಾವಿದರು ಬಹುವಿಧದಲ್ಲಿ ವ್ಯಾಖ್ಯಾನಿಸಿದ್ದಾರೆ. ಡಿ.ವಿ. ಗುಂಡಪ್ಪನವರು 'ನಮ್ಮ ಮನಸ್ಸಿಗೆ ಕಣ್ಣು, ಕಿವಿ ಮೊದಲಾದ ಇಂದ್ರಿಯಗಳ ಮೂಲಕ ಒಂದು ಸೌಂದರ್ಯವನ್ನೋ, ಒಂದು ಮಹತ್ವವನ್ನೋ, ಒಂದು ಗಂಭೀರ ವಿಚಾರವನ್ನೋ ಅನುಭವಮಾಡಿಸಿಕೊಡಬಲ್ಲ ಕುಶಲಕರ್ಮವೇ 'ಕಲೆ'ಯೆಂದು ಕರೆದಿದ್ದಾರೆ. ಶತಾವಧಾನಿ ಆರ್. ಗಣೇಶ್ ಅವರು ಶಾಸ್ತ್ರ, ಪಾಂಡಿತ್ಯ ಮತ್ತು ಕಲೆಯ ಬಗ್ಗೆ ಒಂದು ಅಪೂರ್ವ ಒಳನೋಟವನ್ನೇ ಕೊಟ್ಟಿದ್ದಾರೆ.

ಇಂಥದ್ದೇ ದಾರಿಯಲ್ಲಿ ರಾಮಮೂರ್ತಿ ರಾವ್ ಸಾಗಿದ್ದಾರೆ. 'ಸಂಸ್ಕೃತಿ ಮತ್ತು ಕಲೆ' ಎಂಬ ಮೊದಲನೆಯ ಅಧ್ಯಾಯದಲ್ಲಿ ಸಂಸ್ಕೃತಿ, ಕಲೆ, ಕಲಾವಿದ, ನೃತ್ಯಕಲೆ ಮೊದಲಾದವುಗಳ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನೀಡಿದ್ದಾರೆ. 'ಒಂದು ಸಮಾಜದಲ್ಲಿ ಕಂಡುಬರುವ ನಡೆ-ನುಡಿ, ಆಚಾರ-ವಿಚಾರ ಇವೆಲ್ಲದರ ಸಾವಿರಾರು ವರ್ಷಗಳ ಕ್ರಮಬದ್ಧ ವಿಕಾಸದ ಫಲವೇ ಸಂಸ್ಕೃತಿ' ಅಂತ ಹೇಳುತ್ತಾರೆ. ಅನುಭವದ ಒಂದು ಅಭಿವ್ಯಕ್ತಿ, ಹೃದಯವ್ಯಾಪಾರ, ಅಂತಃಕರಣ ಪ್ರಚೋದನೆಯೇ 'ಕಲೆ'ಯೆಂದು ಅವರು ಅತ್ಯಂತ ಸರಳವಾಗಿ ವ್ಯಾಖ್ಯಾನಿಸುತ್ತಾರೆ.

ಎರಡನೆಯ ಅಧ್ಯಾಯದಲ್ಲಿ ಅವರು 'ಭಾರತೀಯ ಶಾಸ್ತ್ರೀಯ ನೃತ್ಯ ಪದ್ಧತಿಗಳ ಪರಿಚಯ'ವನ್ನು ಸಂಕ್ಷಿಪ್ತವಾಗಿ ಮಾಡಿಕೊಟ್ಟಿದ್ದಾರೆ. ಭರತನಾಟ್ಯ, ಕಥಕ್ಕಳಿ, ಮೋಹಿನಿ ಆಟ್ಟಂ, ಕೂಚುಪುಡಿ ಮೊದಲಾದ ಏಳು ನೃತ್ಯಪದ್ಧತಿಗಳನ್ನು ಇಲ್ಲಿ ಪರಿಚಯಿಸಿದ್ದಾರೆ. ಆದರೆ ಇದೇ ಪರಿಚಯ 17ನೆಯ ಅಧ್ಯಾಯದಲ್ಲೂ ಬರುತ್ತದೆ. ಇಲ್ಲಿ ಸಂಕ್ಷಿಪ್ತ, ಅಲ್ಲಿ ವಿಸ್ತಾರ ಎಂಬ ವ್ಯತ್ಯಾಸ ಬಿಟ್ಟರೆ ಎರಡೂ ಅಧ್ಯಾಯಗಳಲ್ಲಿ ವಿಷಯ ಒಂದೇ. ಎರಡನ್ನೂ ಒಂದೇ ಅಧ್ಯಾಯದಲ್ಲಿ ವಿಲೀನಗೊಳಿಸಿ ಪುನರಾವರ್ತನೆಯನ್ನು ತಪ್ಪಿಸಬಹುದಿತ್ತು. ಯಾಕೋ ಅವರು ಆ ದಿಕ್ಕಿನಲ್ಲಿ ಯೋಚಿಸಿದಂತೆ ಕಾಣುವುದಿಲ್ಲ.

ಮಣಿಪುರಿ, ಕಥಕ್ಕಳಿ ಮೊದಲಾದ ಪ್ರಾದೇಶಿಕ ಕಲೆಗಳ ಪರಿಚಯ ಮತ್ತು ನೃತ್ತ, ನೃತ್ಯ, ನಾಟ್ಯಗಳ ಪರಿಚಯ ಹೃದಯಂಗಮವಾಗಿ ಮೂಡಿಬಂದಿವೆ. ನಂದಿಕೇಶ್ವರನ 'ಅಭಿನಯ ದರ್ಪಣ' ಕಲಾವಿದರಿಗೆಲ್ಲ ಒಂದು ಆಕರ ಗ್ರಂಥ ಮತ್ತು ನಿತ್ಯ ಅನುಸಂಧೇಯ ಗ್ರಂಥ. ಇಂತಹ ಅಪೂರ್ವಗ್ರಂಥವನ್ನೇ ಆಧಾರವಾಗಿಟ್ಟುಕೊಂಡು ರಾಮಮೂರ್ತಿ ರಾವ್ ಅವರು ನಂದಿಕೇಶ್ವರನನ್ನೂ ಅವನ ಕೃತಿಯನ್ನೂ ಪರಿಚಯಿಸುತ್ತಾ ಸಭಾಲಕ್ಷಣ, ನಾಯಕ-ನಾಯಿಕೆಯರ ಲಕ್ಷಣ, ರಂಗಲಕ್ಷಣ, ಪಾತ್ರಲಕ್ಷಣ ಮೊದಲಾದುವು ಸಂಕ್ಷಿಪ್ತವಾದರೂ ಅವುಗಳ ಸಾರಾಂಶ ಲೋಪಗೊಳ್ಳದಂತೆ ಸೆರೆಹಿಡಿದಿದ್ದು ಅವರಿಗೆ ಆ ಶಾಸ್ತ್ರದ ಮೇಲೆ ಇದ್ದ ಹಿಡಿತವನ್ನು ಸಾರುತ್ತದೆ.

ಇಲ್ಲಿ ಪರಿಚಯಿಸಿರುವ, ನಟನೆಗೆ ಸಂಬಂಧಪಟ್ಟ ಒಂದೊಂದು ಅಂಶವೂ ನೃತ್ಯಪ್ರಕಾರಕ್ಕಷ್ಟೇ ಸೀಮಿತವಾಗಿಲ್ಲ. ಎಲ್ಲಾ ನಟನಾಪ್ರಕಾರಗಳಿಗೂ ಅನ್ವಯವಾಗುತ್ತದೆ. ಸಿನಿಮಾ ಮತ್ತು ಸೀರಿಯಲ್ಲುಗಳಲ್ಲಿ ತಂತ್ರಜ್ಞಾನದ ಪರಮ ಅವಕಾಶವನ್ನು ಬಿಟ್ಟರೆ ಅಲ್ಲಿಯೂ ನಟನೆ, ನಿರ್ದೇಶನ, ಕಥೆ, ನೃತ್ಯ, ಅಭಿನಯ ಎಲ್ಲವೂ ಇರುತ್ತವೆ. ಇಂದು ಕೆಲವು ಸಿನಿಮಾಗಳಲ್ಲಿ ಚೋದ್ಯ ಕುಚೋದ್ಯ ಆಗಿರುವುದನ್ನೂ ಹಾಸ್ಯ ಅಪಹಾಸ್ಯ ಆಗಿರುವುದನ್ನೂ, ನಾಯಕ ಭಯಂಕರನಾಗಿರುವುದನ್ನೂ ಕಾಣುತ್ತೇವೆ.

ಹಾಗೆಯೇ ಟಿವಿ ಚಾನೆಲ್ಲುಗಳಲ್ಲಿ ಬರುವ ಧಾರಾವಾಹಿಗಳಲ್ಲಿ ಸಂಸ್ಕೃತಿ, ಅಭಿನಯ, ಅರ್ಥವತ್ತಾದ ಕಥಾಹಂದರ ಎಲ್ಲವೂ ನಾಶವಾಗಿ ಅಲ್ಲಿ ವಿಕೃತಿ, ಮನೆಮುರುಕುತನ, ಕಾಮುಕತೆ, ಮೂಢನಂಬಿಕೆಯನ್ನು ಪ್ರಚೋದಿಸುವ ಪೂಜೆ-ಪುನಸ್ಕಾರ, ಅವುಗಳ ವೈಭವೀಕರಣ ಮಾಡುತ್ತಿದ್ದಾರೆ. ಅಭಿನಯದ ಗಂಧವೂ ಇಲ್ಲದ ಯಾರು ಯಾರೋ ಪಾತ್ರವಹಿಸುತ್ತಾ ಅಭಿನಯವನ್ನು ಕಗ್ಗೊಲೆ ಮಾಡಿದ್ದಾರೆ. ಅಂತಹವರು ರಾಮಮೂರ್ತಿರಾವ್ ಬರೆದಿರುವ ಈ ಪುಸ್ತಕವನ್ನು ಓದುವುದು ಒಳ್ಳೆಯದು. ಇಲ್ಲಿ ನಟನಟಿಯರು ಹೇಗಿರಬೇಕು, ಎಂತಹ ಗುಣಗಳನ್ನು ಸಂಪಾದಿಸಿರಬೇಕು, ಅಂತಃಪ್ರಾಣ-ಬಹಿಃಪ್ರಾಣಗಳನ್ನು ಹೇಗೆ ರೂಢಿಸಿಕೊಳ್ಳಬೇಕು, ಹಾವಭಾವಗಳನ್ನು ಹೇಗೆ ಪ್ರಕಟಿಸಬೇಕು? ಉಚ್ಚಾರಣೆಯನ್ನು ಹೇಗೆ ಮಾಡಬೇಕು ಅನ್ನುವುದನ್ನು ರಾಮಮೂರ್ತಿರಾವ್ ಬಹಳ ಸೊಗಸಾಗಿ ನಿರೂಪಿಸಿದ್ದಾರೆ.

ಮಕ್ಕಳಿಗೆ ಅನುಕೂಲವಾಗಲೆಂದು ರಚಿಸಿರುವ ಸರಳಭಾಷೆಯ ಪುಸ್ತಕ ಇದು ಎಂದು ಲೇಖಕರು ಹೇಳಿದ್ದಾರೆ. ಹಾಗೆಂದು ಇದನ್ನು ಲಘುವಾಗಿ ಪರಿಗಣಿಸುವಂತಿಲ್ಲ. ವಿಷಯದ ಮಹತ್ವ ಮತ್ತು ಅದರ ಹಾಸುಬೀಸನ್ನು ಗಮನಿಸಿದರೆ ಇದೊಂದು ಆಚಾರ್ಯಕೃತಿಯ ಮಟ್ಟಕ್ಕಿದೆ. ಗಾತ್ರದಲ್ಲೂ, ವಿಷಯಗಹನತೆಯಲ್ಲೂ, ವಿಸ್ತಾರ-ವೈಪುಲ್ಯತೆಯಲ್ಲೂ ಇದೊಂದು ಅಪೂರ್ವ ಕೃತಿ. ಭರತನಾಟ್ಯದ ಹುಟ್ಟು ಬೆಳವಣಿಗೆಯಿಂದ ಹಿಡಿದು ಭಾರತಿ, ಸಾತ್ವತಿ, ವೃತ್ತಿ, ಯೋಗಾಸನ, ವ್ಯಾಯಾಮ, ಅಡವುಗಳ ವೈವಿಧ್ಯ, ಸಾತ್ವಿಕ,



ಪು: 496 ₹450

ನೃತ್ಯಶಾಸ್ತ್ರ ಮಂಜರಿ
ಲೇ: ಪ್ರೊ.ಕೆ.ರಾಮಮೂರ್ತಿ ರಾವ್
ಪ್ರ: ಸಂವಹನ ಪ್ರಕಾಶನ
ಸಂ: 0821-2476019

ಆಂಗಿಕ, ವಾಚಿಕ ಮೊದಲಾದ ಅಭಿನಯಗಳ ವೈಶಿಷ್ಟ್ಯ, ಭರತನಾಟ್ಯದಲ್ಲಿ ಉಪಯೋಗಿಸುವ ಪ್ರಮುಖ ವಾದ್ಯಗಳು, ಸುಳಾದಿ ಸಪ್ತ ತಾಳಗಳು ಹೀಗೆ ಅವುಗಳ ವಿಸ್ತೃತರೂಪಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ. ಬೇರೆ ಬೇರೆ ಭಾಷೆಗಳಲ್ಲಿ ಇರುವ 20ಕ್ಕೂ ಹೆಚ್ಚು ನಾಟ್ಯಗ್ರಂಥಗಳನ್ನೂ, ಅಷ್ಟೇ ಪ್ರಮಾಣದ ನಾಟ್ಯಗುರುಗಳನ್ನೂ, ನರ್ತಕರನ್ನೂ ಇದರ ತೆಕ್ಕೆಗೆ ಸೇರಿಸಿರುವುದು ಥಟ್ಟನೆ ಬೇಕಾಗುವ ಮಾಹಿತಿಗೆ ಇದೊಂದು ಅಪೂರ್ವ ಕೊಡುಗೆಯಾಗಿ ನಮ್ಮೆಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಮಾತ್ರವಲ್ಲ ನಮ್ಮ ಶ್ರಮವನ್ನು ತಗ್ಗಿಸುತ್ತದೆ.

ಈ ಕೃತಿಯ ಇನ್ನೊಂದು ವಿಶೇಷವೆಂದರೆ ಕೆಲವು ನೃತ್ಯವೈವಿಧ್ಯಗಳನ್ನು, ಅವುಗಳ ಗತಿಸಂಚಾರಗಳನ್ನು, ನಾಟ್ಯಶಾಸ್ತ್ರ ಅಂಗಗಳನ್ನು, ವ್ಯಾಯಾಮಕ್ರಿಯೆಗಳನ್ನು ಪರಿಚಯಿಸಲು ಕಾಲಮ್‌ಗಳನ್ನು (ಸ್ತಂಭ) ಹಾಕಿ ತೋರಿಸಿದ್ದು. ಅದು ಎಷ್ಟು ಉಪಕಾರಕವೆಂದರೆ ಅಧ್ಯೇತೃವಿಗೆ ಕಲಿಕೆ ಅನ್ನವುದು ಸುಲಿದ ಬಾಳೆಹಣ್ಣಿನಂದದಿ ಸುಲಭಲಭ್ಯವಾಗಿದೆ. ಅಪವಿದ್ಧ, ನಿಕುಟ್ಟಕ, ಮಂಡಲಸ್ವಸ್ತಿಕ, ಲೀನಕರಣ ಮೊದಲಾದ ಸಿದ್ಧಮಾದರಿಯ ಕರಣಗಳಂತೂ ಕಾಲಮ್‌ಗಳ ಮಧ್ಯದಲ್ಲಿ ಸುಮನೋಹರವಾಗಿ ಪ್ರಕಟಗೊಂಡಿವೆ. ನೋಡಲೂ ಚೆಂದ; ಅಭ್ಯಸಿಸಲೂ ಸುಲಭ. ಕೆಲವು ನೃತ್ಯಪಟುಗಳ ಭಾವಚಿತ್ರಗಳೂ ಇದರ ಸೊಗಸನ್ನು ಹೆಚ್ಚಿಸಿವೆ. ಭಾರತೀಯ ಮತ್ತು ಪಾಶ್ಚಾತ್ಯಗೇಯ ನಾಟಕಗಳ ಪರಿಚಯ, ಯಕ್ಷಗಾನ, ಭಾಗವತಮೇಳ, ಬ್ಯಾಲೆ ನರ್ತನ, ಕೊರಿಯೊಗ್ರಫಿ, ಅವುಗಳ ಇತಿಹಾಸ, ಬೆಳವಣಿಗೆ ಹಾಗೂ ಸಾಧಕರ ಜೀವನಚರಿತ್ರೆ ಇವೆಲ್ಲವೂ ಒಂದೇ ಸೂರಿನಡಿ ದೊರೆಯುವಂತೆ ಮಾಡಿದ್ದು ಕೃತಿಯ ವೈಶಿಷ್ಟ್ಯವಾಗಿದೆ.

ಸರ್ವ ಕಲೆಗಳ ಸಮೃದ್ಧಿಯ ತೋಟ

ಗೌರಿ

'ಸರ್ವ ಜನಾಂಗದ ಶಾಂತಿಯ ಭಾಷೆ' ಇದು ಎಸ್. ದಿವಾಕರ್ ಅವರ ಇತ್ತೀಚಿನ ಪ್ರಬಂಧ ಸಂಕಲನದ ಹೆಸರು. ಇದು ಈ ಸಂಕಲನದ ಒಂದು ಪ್ರಬಂಧದ ಶೀರ್ಷಿಕೆಯಾದರೂ ಇಡೀ ಪ್ರಬಂಧದ, ಅಷ್ಟೇ ಏಕೆ, ಎಸ್. ದಿವಾಕರ್ ಅವರ ಒಟ್ಟಾರೆ ಗ್ರಹಿಕೆ ಮತ್ತು ಅಭಿವ್ಯಕ್ತಿಗಳಿಗೂ ಹೊಂದುವ ಹೆಸರು.

ಮೇಲಿಂದ ಬೇರೆ ಬೇರೆ ಎಂದು ಕಾಣಿಸುವ ದೇಶ, ಭಾಷೆ ಮತ್ತು ಅವುಗಳಿಂದ ಅಭಿವ್ಯಕ್ತಗೊಳ್ಳುವ ಕಲೆಗಳ ನಡುವಿನ ಅಂತರ್‌ಸಂಬಂಧದ ಹುಡುಕಾಟ ಮತ್ತು ಅವುಗಳ ತಪ್ಪು ಗ್ರಹಿಕೆಗಳಿಂದ ಹುಟ್ಟುವ ಘರ್ಷಣೆಯನ್ನು ದಾಟಿ ತಿಳಿಗೊಳದಲ್ಲಿ ಮೂಡುವ ಅಖಂಡವಾದ ಶಾಂತ ಚಿತ್ರವನ್ನು ಕಾಣಿಸುವುದು ಅವರ ಎಲ್ಲ ಬರಹಗಳ ಹಿಂದಿನ ಹಂಬಲವಾಗಿದೆ. ಆದರೆ ಇದನ್ನು ಅವರು ಸ್ಟೇಟ್‌ಮೆಂಟ್‌ಗಳ ಮೂಲಕ ಹೇಳಲಾರರು; ಸಂವಿಧಾನದ ರೀತಿ ಸ್ಥಾಪಿಸಲಾರರು; ಬದಲಿಗೆ 'ನೋಡಿ ನೋಡಿ, ನೀವು ಅಲ್ಲಿ ನಿಂತು ಕಂಡ ಹೂವಿಗೆ ಇತ್ತಲಿಂದ ಬೇರೆಯದೇ ಒಂದು ಆಯಾಮವಿದೆ. ತುಸು ಆಚೆಯಿಂದ ನೋಡಿದರೆ ಇನ್ನೊಂದೇ ಆಗಿ ಕಾಣಬಹುದು. ಈ ಎಲ್ಲವನ್ನೂ ಒಟ್ಟಿಗೇ ನೋಡಲು ಸಾಧ್ಯವೇ ಪ್ರಯತ್ನಿಸೋಣ ಬನ್ನಿ' ಎಂದು ಆಪ್ತವಾಗಿ ಕರೆಯುತ್ತ ನಮ್ಮನ್ನು ನಡೆಸುತ್ತ, ತಾನೂ ಅದೇ ಕುತೂಹಲದಿಂದ ನಡೆಯುವವರು ಅವರು. ಹಾಗಾಗಿಯೇ ದಿವಾಕರ್ ಅವರದ್ದು ಗುರಿಯಲ್ಲದೆ ಬೇರೇನನ್ನೂ ನೋಡದ ಬಾಣದ ಮೊನೆಯ ಸಂವೇದನೆಯಲ್ಲ; ಬಿತ್ತಿಕೊಂಡಲ್ಲೆಲ್ಲ ಬೇರೂರಿ, ಅಲ್ಲಿಂದ ಇಲ್ಲಿಂದಲೆಲ್ಲ ಸತ್ವವನ್ನು ಹೀರಿ, ಬಿಸಿಲು ಗಾಳಿಗೆ ಮೈಯೊಡ್ಡಿ ಸಮೃದ್ಧವಾಗಿ ಬೆಳೆಯುವ ಮರದ ಬಗೆಯ ಸಂವೇದನೆ.



ಪು: 184 ₹180

ಸರ್ವ ಜನಾಂಗದ ಶಾಂತಿಯ ಭಾಷೆ (ಪ್ರಬಂಧಗಳು)
ಲೇ: ಎಸ್. ದಿವಾಕರ್
ಪ್ರಕಾಶನ: ಅಂಕಿತ ಪುಸ್ತಕ
ದೂ: 080 26617100/755
ಜಾಲತಾಣ: www.ankitapustaka.com

ಅವರ ಹಿಂದಿನ ಪ್ರಬಂಧಗಳಂತೆ ಇಲ್ಲಿನ ಪ್ರಬಂಧಗಳೂ ಬಹುಮುಖಿ ಆಸಕ್ತಿಯನ್ನೂ, ಅವೆಲ್ಲವೂ ಏನೋ ಒಂದನ್ನು ಕಾಣುವ ಉದ್ದೇಶದಿಂದ ಪರಸ್ಪರ ಕೂಡಿಕೊಳ್ಳುವ ಬೆರಗನ್ನೂ ಹುಟ್ಟಿಸುತ್ತವೆ.

ಈ ಸಂಕಲನದ ಮೊದಲ ಪ್ರಬಂಧ 'ಕ್ಲೀಷೆಯ ಭಾಷೆ, ಭಾಷೆಯ ಕ್ಲೀಷೆ'ಯಲ್ಲಿ ಬಳಸಿ ಬಳಸಿ ಜೀವಂತ ಶವಗಳಂತಾಗುವ ಪದ, ಸಾಲು, ನುಡಿಗಟ್ಟುಗಳ ಬಗ್ಗೆ ಮಾತನಾಡುವ ಅವರು, ಕೊನೆಯ ಪ್ರಬಂಧ, 'ಅವಸಾನವೇಕೆ ಅನಿವಾರ್ಯ?' ಎಂಬ ಪ್ರಶ್ನೆಯನ್ನೆತ್ತಿಕೊಂಡು, ಸೃಷ್ಟಿಯಾಗಿದ್ದೆಲ್ಲವೂ ಮುದುಕಾಗಿ, ಸಾಯಲೇಬೇಕಾದ ಅನಿವಾರ್ಯವನ್ನೂ, ಆ ಸಾವನ್ನು ಘನತೆಯಿಂದ ಎದುರಿಸುವುದಷ್ಟೇ ನಾವು ಮಾಡಬಹುದಾಗಿದ್ದೆಂದೂ ಹೇಳುತ್ತದೆ. ಮೊದಲ ಮತ್ತು ಕೊನೆಯ ಪ್ರಬಂಧಗಳೆರಡೂ ಭಾಷೆ/ಸಾಹಿತ್ಯ ಮತ್ತು ಜೀವ/ಜೀವನದ ಅವಸಾನದ ಕುರಿತು ಮಾತನಾಡುವುದು ಕಾಕತಾಳೀಯವಾಗಿರಲಿಕ್ಕಿಲ್ಲ.

ಅವಲೋಕನ

ಈ ಎರಡು ತುದಿಗಳ ನಡುವೆ ಅವರು, ಸಂಗೀತ, ಚಿತ್ರಕಲೆ, ಸಿನಿಮಾ, ವ್ಯಕ್ತಿಚಿತ್ರ, ಸಾಹಿತ್ಯ ಎಲ್ಲ ಕಾಡುಗಳಲ್ಲಿಯೂ ತಾವೇ ಮಾಡಿಕೊಂಡ ದಾರಿಯಲ್ಲಿ ನಮ್ಮನ್ನು ಕರೆದೊಯ್ಯುತ್ತಾರೆ.

'ರೂಪರೂಪಗಳನು ದಾಟಿ' ಎಂಬ ಪ್ರಬಂಧವೇ ಅವರ ಬಹುಮುಖಿ ಪ್ರತಿಭೆಗೆ ಮತ್ತು ಅವರಿಗೇ ವಿಶಿಷ್ಟವಾದ ಅಭಿವ್ಯಕ್ತಿಗೆ ನಿದರ್ಶನವೆಂಬಂತಿದೆ. ಪತ್ರಿಕೆಯೊಂದರ ವಿಶೇಷ ಸಂಚಿಕೆಗಾಗಿ ಮಾಡಿದ ಸಂಗೀತ, ಚಿತ್ರಕಲೆ ಮತ್ತು ಕಾವ್ಯದ ಸಂವಾದವನ್ನು ಸೇರಿಸಿ ಹೊಲಿಯುವ ಕೆಲಸವನ್ನು ಈ ಬರಹ ಮಾಡುತ್ತದೆ. ಈ ಹೊಲಿಗೆ ಬಲವಂತವಾಗಿ ಎಳೆದುತಂದು ಬಿಗಿಯುವುದಲ್ಲ, ಸಹಜವಾಗಿ ಕೂಡಿಕೊಳ್ಳಲು ಸಾಧ್ಯವಿರುವ ಹಾಗೆ ಮಾಡಿದ ಜೋಡಣೆ ಎನ್ನುವುದು ಗಮನಾರ್ಹ. ಸಂಗೀತ, ಚಿತ್ರಕಲೆ, ಮತ್ತು ಕಾವ್ಯವನ್ನು ಅವರು ವಿಶ್ಲೇಷಿಸುವ ರೀತಿ ಅವರಿಗೇ ಅನನ್ಯವಾದದ್ದು. ಹೀಗೆ ಒಂದರ ಜೊತೆ ಇನ್ನೊಂದನ್ನು ಇಟ್ಟು ನೋಡುವ, ನಮ್ಮ ಹಿತ್ತಿಲಗಿಡದ ಜೊತೆಗೆ ಜಗತ್ತಿನ ಇನ್ಯಾವುದೋ ಮೂಲೆಯ ಮೂಲಿಕೆಯನ್ನು ಸೇರಿಸಿ ಮದ್ದನ್ನು ಹುಡುಕುವ ಕಾಣ್ಕೆ ದಿವಾಕರ್ ಅವರ ಬಹುತೇಕ ಎಲ್ಲ ಪ್ರಬಂಧಗಳಲ್ಲಿಯೂ ಕಾಣಿಸುತ್ತದೆ. ಆದರೆ ಇದು ಎಲ್ಲೂ ಪಾಂಡಿತ್ಯ ಪ್ರದರ್ಶನದ ಗ್ಯಾಲರಿ ಆಗುವುದಿಲ್ಲ ಎನ್ನುವುದನ್ನು ಗಮನಿಸಬೇಕು. ಮೊದಲೇ ಹೇಳಿದಂತೆ, ತನಗೆ ಹುಟ್ಟಿದ ಬೆರಗನ್ನು ತನ್ನ ಓದುಗರಿಗೂ ದಾಟಿಸುವ ಸಹಜತೆಯಲ್ಲಿಯೇ ಅವು ಒಡಮೂಡಿರುತ್ತವೆ. ಈ ಬೆರಗು ಕಲೆಯ ಹಲವು ರೂಪ, ನೆಲೆಗಳ ನಡುವಿನ ಸಾಮ್ಯತೆಗಷ್ಟೇ ಸಂಬಂಧಿಸಿದ್ದಲ್ಲ, ಬಿರುಕುಗಳಿಗೂ ಸಂಬಂಧಿಸಿದ್ದು. ಒಂದು ಇನ್ನೊಂದಾಗದ, ಆಗಲಾರದ ವ್ಯತ್ಯಾಸಗಳು ಮತ್ತು ಬೇರೆಯದೇ ಆಗಿ ಕಾಣುವುದರ ನಡುವೆ ಇರುವ ಒಂದುತನ ಎರಡೂ ಅವರನ್ನು ತಾಕುತ್ತವೆ. ಹಾಗಾಗಿಯೇ ವಿಶ್ವ ಸಾಹಿತ್ಯದ ಸಂಗತಿಗಳು ಹಾಗ್ಗಾಗೆ ಬರದೇ ಅದು ದಿವಾಕರತನದ ಛಾಪಿನೊಟ್ಟಿಗೇ ನಮ್ಮೆದೆಗೆ ದಾಟುತ್ತವೆ.

ಈ ಸಂಕಲನದ ಇನ್ನೊಂದು ವಿಶಿಷ್ಟ ಪ್ರಬಂಧ 'ನೊಣ'. ನೊಣದ ಗುಣಲಕ್ಷಣಗಳ ಕುರಿತು ಲಲಿತವಾಗಿ ವಿವರಿಸುತ್ತಲೇ ವಿಶ್ವಸಾಹಿತ್ಯದಲ್ಲಿ ನೊಣದ ಹಾರಾಟವನ್ನೂ ಅದು ಕಾಣಿಸುತ್ತದೆ.

'ಭಾಷಾಂತರ: ಸಾಧ್ಯತೆ ಮತ್ತು ಸವಾಲು' ಎಂಬ ಪ್ರಬಂಧದ ಕೊನೆಯ ಸಾಲುಗಳು ಹೀಗಿವೆ. 'ಅನುವಾದಕ್ಕಾಗಿ ನಾನು ಆಯ್ಕೆ ಮಾಡಿಕೊಂಡ ಪುಸ್ತಕ ಹಾಗೂ ನನ್ನ ಭಾಷಾಂತರ ವಿಧಾನ ಎರಡೂ ನನ್ನನ್ನೇ ಅಭಿವ್ಯಕ್ತಿಸುವಂತಿರಬೇಕು'. ಈ ಸಾಲುಗಳು ಬರೀ ಭಾಷಾಂತರದ ಕುರಿತ ಅವರ ನಿಲುವಷ್ಟೇ ಅಲ್ಲ, ಇಲ್ಲಿನ ಎಲ್ಲ ಪ್ರಬಂಧಗಳ ಗುಣವೂ ಹೌದು.

ವರ್ಚುವಲ್ ವಾದ್ಯಗೋಷ್ಠಿಯಲ್ಲಿ ರಂಗಪ್ರವೇಶ!

ವೈ.ಕೆ.ಸಂಧ್ಯಾ ಶರ್ಮ

ಕಲಾರಸಿಕರು ಎದುರಿಗೆ ಕುಳಿತು ಮೆಚ್ಚುಗೆಯ ಕರತಾಡನ ಮಾಡುತ್ತಿದ್ದರೆ ಕಲಾವಿದರಿಗೆ ನರ್ತಿಸಲು ಸಹಜ ಸ್ಫೂರ್ತಿ-ಉತ್ಸಾಹದ ರಂಗು. ನೃತ್ಯ-ಅಭಿನಯದ ಸಾಕ್ಷಾತ್ಕಾರಕ್ಕೆ ಉತ್ತಮ ಪ್ರಭಾವಳಿ ನೀಡುವ ಉತ್ತಮ ಸಂಗೀತ-ವಾದ್ಯಗೋಷ್ಠಿಯ ಸಾಹಚರ್ಯ ಇದ್ದರಂತೂ ನೃತ್ಯ ಕಲಾವಿದರಿಗೆ ಜೀವಂತಿಕೆಯ ಚೈತನ್ಯ. ಇದು ಎಂದಿನ ನೃತ್ಯ ಕಾರ್ಯಕ್ರಮಗಳ ದೃಶ್ಯ. ಆದರೆ ಇಂದಿನ ವಿಶ್ವವ್ಯಾಪಿ ಕರಾಳ ಕೊರೊನಾದ ಆಕ್ರಮಣದ ಸಂದರ್ಭದಲ್ಲಿ ರಂಗಪ್ರವೇಶಗಳು ನಡೆಯುವ ಸನ್ನಿವೇಶಗಳೇ ವಿಭಿನ್ನ.

ಇಂಥ ವಿಷಮ ಪರ್ವಕಾಲದಲ್ಲಿ ಕೆಲಕಾಲ ಕೈಕಟ್ಟಿ ಕುಳಿತ ನೃತ್ಯ ಕಲಾವಿದರು ತಮ್ಮ ಸೃಜನಾತ್ಮಕ ಚಟುವಟಿಕೆಗಳನ್ನು ಹೆಚ್ಚು ಕಾಲ ಹತ್ತಿಕ್ಕಲಾರದೆ ಪರ್ಯಾಯವಾಗಿ ಕಂಡುಕೊಂಡ ಮಾರ್ಗವೇ 'ಅಂತರ್ಜಾಲ' ಮಾಧ್ಯಮ ಬಳಕೆ. ಕಳೆದೊಂದು ವರ್ಷದಿಂದ ಈ ಬಗೆಯ 'ವರ್ಚುವಲ್' ನೃತ್ಯ ಕಾರ್ಯಕ್ರಮಗಳು ನಡೆಯುತ್ತಿರುವುದು ಸರ್ವೇ ಸಾಮಾನ್ಯವಾಗಿದೆ.

ಇತ್ತೀಚೆಗೆ ಅಮೆರಿಕದ ಬೇ ಏರಿಯಾದಲ್ಲಿ ಇಂಥದೊಂದು 'ರಂಗಪ್ರವೇಶ' ನೃತ್ಯ ಕಾರ್ಯಕ್ರಮ ನಡೆಯಿತು. ಅಲ್ಲಿ ಎಲ್ಲವೂ ಶಿಸ್ತುಬದ್ಧ ಮತ್ತು ಕಾನೂನಿನ ಚೌಕಟ್ಟಿನಲ್ಲೇ ನಡೆಸಬೇಕಾದ ನಿಬಂಧನೆ. ಅದರಂತೆ ಖ್ಯಾತ ನೃತ್ಯ ಕಲಾವಿದೆ ಮತ್ತು ನಾಟ್ಯಗುರು ವಿದುಷಿ ವಿದ್ಯಾಲತಾ ಜೀರಗೆಯವರ ಶಿಷ್ಯೆ ನಿಶಾ ನವೀನ್ 'ರಂಗಪ್ರವೇಶ'ವು ವಿಧ್ಯುಕ್ತವಾಗಿ ನೆರವೇರಿತು. ತಂತ್ರಜ್ಞರೂ ಸೇರಿದಂತೆ ಇಪ್ಪತ್ತು ಜನರಿಗೆ ಮಾತ್ರ ಪ್ರವೇಶಾವಕಾಶವಿತ್ತು. ಧ್ವನಿ, ಬೆಳಕು, ವೇಷಭೂಷಣ ಸಹಾಯಕ, ಮೇಕಪ್ ಮ್ಯಾನ್, ವಿಡಿಯೊ-ಫೋಟೊಗ್ರಾಫರ್‌ಗಳು, ಆಡಿಟೋರಿಯಂನವರೂ ಸೇರಿದಂತೆ ಹನ್ನೆರಡು ಜನ ಮತ್ತು ಕಲಾವಿದೆ ಹಾಗೂ ಅವಳ ತಾಯ್ತಂದೆಯರು, ಗುರುಗಳು, ಪೂಜೆ ಮಾಡಿಸುವ ಶಾಸ್ತ್ರಿಗಳು ಸೇರಿದಂತೆ ಒಟ್ಟು ಎಂಟು ಮಂದಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು.

ನೃತ್ಯಕ್ಕೆ ಸಂಗೀತ ಸಹಕಾರ ನೀಡುವ ವಾದ್ಯಗೋಷ್ಠಿಯವರು ಅಂತರ್ಜಾಲದಲ್ಲೇ ತಮ್ಮ ಕಾರ್ಯವನ್ನು ನಿರ್ವಹಿಸಿದ್ದು ಇದೇ ಪ್ರಥಮ ಎನ್ನಬಹುದು. ನೂರಾರು ಮಂದಿ ಪ್ರೇಕ್ಷಕರು ಕುಳಿತುಕೊಳ್ಳಬಹುದಾದ ರಂಗಮಂದಿರ ಪೂರ್ತಿ ಖಾಲಿಯಾಗಿತ್ತು. ಬರೀ ಖಾಲಿ ಕುರ್ಚಿಗಳು! ಕಲಾವಿದೆ ನಿಶಾ, ಸುಂದರ ವೇಷಭೂಷಣಗಳಿಂದ ಸಜ್ಜಿತಳಾಗಿ, ಎದುರಿಗೆ ಸಾವಿರಾರು ಮಂದಿ ಕಲಾರಸಿಕರು ಆಸಕ್ತಿಯಿಂದ ನೃತ್ಯ ವೀಕ್ಷಣೆ ಮಾಡುತ್ತಿದ್ದಾರೆಂಬ ಭಾವನೆಯಲ್ಲಿ ರಂಗದ ಮೇಲೆ ಸುಮನೋಹರವಾಗಿ ಎರಡು ಗಂಟೆಗಳ ಕಾಲ ತಾದಾತ್ಮ್ಯವಾಗಿ ನರ್ತಿಸಿದ್ದು ಸ್ತುತ್ಯರ್ಹ .

ಆತ್ಮವಿಶ್ವಾಸದಿಂದ ರಂಗವನ್ನು ಪ್ರವೇಶಿಸಿದ ಹನ್ನೆರಡು ವರ್ಷದ ಪುಟ್ಟಕಲಾವಿದೆ ನಿಶಾ ನವೀನ್, ಹಸನ್ಮುಖದಿಂದ ಶುಭಾರಂಭಕ್ಕೆ 'ಪುಷ್ಪಾಂಜಲಿ'ಯನ್ನು ಅಚ್ಚುಕಟ್ಟಾಗಿ ಪ್ರಸ್ತುತಪಡಿಸಿದಳು. ಸಪೂರ ಮೈಕಟ್ಟು, ಲೀಲಾಜಾಲವಾಗಿ ಬಾಗಿ ಬಳುಕುತ್ತಿದ್ದ ಎಳೆಯ ಶರೀರ ಅವಳ ಅಂಗಶುದ್ಧಿಯ ನರ್ತನದ ಸೌಂದರ್ಯವನ್ನು ಎತ್ತಿ ಹಿಡಿಯಿತು. ಪ್ರಥಮ ವಂದಿತ ವಿಘ್ನನಿವಾರಕ ಗಣೇಶನಿಗೆ ಸಂಪ್ರದಾಯದಂತೆ 'ನೃತ್ಯನೈವೇದ್ಯ' ಅರ್ಪಿಸಿದಳು. ನಿಶಾ, ತನ್ನ ನೃತ್ತ ನಾವೀನ್ಯದಿಂದ ಮುದ ನೀಡಿದಳು. ಗಣಪನ ವಿವಿಧ ಭಂಗಿಗಳು ಸೊಗಯಿಸಿದವು.

ಶುದ್ಧ ನೃತ್ತದ ಕೃತಿ 'ಜತಿಸ್ವರಂ'- ನೃತ್ಯ ಕಲಾವಿದರ ಮೂಲಭೂತ ನೃತ್ಯ ವ್ಯಾಕರಣದ ಆಯಾಮಗಳ ತಿಳಿವಳಿಕೆ ಮತ್ತು ಪರಿಶ್ರಮವನ್ನು ಬಿಂಬಿಸುವ ನೃತ್ತ ಪರಿಣತಿಯ ಕೈಗನ್ನಡಿ. 'ಮಾರ್ಗಂ'- ಸಂಪ್ರದಾಯದ ವಿನ್ಯಾಸದಲ್ಲಿನ ಎಲ್ಲ ಕೃತಿಗಳಲ್ಲೂ ಕಾಣಸಿಗುವ ನೃತ್ತಗಳ ನೇಯ್ಗೆ, ವಿವಿಧ ಬಗೆಗಳನ್ನು ಕಲಾವಿದರು ಕರಗತ ಮಾಡಿಕೊಂಡಿದ್ದಕ್ಕೆ ಸಾಕ್ಷಿಗೊಡುವ ಈ 'ಜತಿಸ್ವರ' ನಿರೂಪಣೆಯಲ್ಲಿ ಯಶಸ್ವಿಯಾದರೆ ಮುಂದಿನ ಕೃತಿಗಳ ಸಾಕಾರ ಫಲಪ್ರದ ಮತ್ತು ಅಷ್ಟೇ ಸಲೀಸು.

ನಿಶಾ

ನಿಶಾ ನೃತ್ತಗಳನ್ನು ಸಮರ್ಪಕವಾಗಿ ನಿರ್ವಹಿಸಿದ ಪರಿ, ನಾವೀನ್ಯ ಹಾಗೂ ಬೆಡಗು ತುಂಬಿದ್ದ ಜತಿಗಳು, ಸ್ವರಗಳ ಮಾಧುರ್ಯದ ಆವರ್ತನದಲ್ಲಿ ಮೆಚ್ಚುಗೆ ಪಡೆದವು. ಅವಳ ಅಂಗಶುದ್ಧಿಯ ಅಚ್ಚುಕಟ್ಟಾದ ನರ್ತನ ವೈಶಿಷ್ಟ್ಯಪೂರ್ಣವಾಗಿ ಸೆಳೆದರೆ, ನೃತ್ತಗಳಲ್ಲೇ ಭಂಗಿಗಳನ್ನು ರಚಿಸಿದ ಬಗೆ ವಿಶೇಷವಾಗಿತ್ತು. ನಾಟ್ಯದ ಎಲ್ಲ ಆಯಾಮಗಳನ್ನೂ ಸಮಗ್ರ ದರ್ಶನ ಮಾಡಿಸಿದ ಕ್ರೌಢೀಕೃತ ಜತಿಗಳ ಗುಚ್ಛ ಮನಕಾನಂದ ನೀಡಿತು.

ಶ್ರೀ ಮುತ್ತುಸ್ವಾಮಿ ದೀಕ್ಷಿತರ 'ಅಖಿಲಾಂಡೇಶ್ವರಿ ರಕ್ಷಮಾಂ' ದೇವೀ ಕೀರ್ತನೆಯನ್ನು ಭಕ್ತಿ ತಾದಾತ್ಮ್ಯದಿಂದ ಸಾಕ್ಷಾತ್ಕಾರಗೊಳಿಸಿದಳು ಕಲಾವಿದೆ. ಬಾಲಸುಬ್ರಮಣ್ಯ ಶರ್ಮ ಅವರ ಭಾವಪೂರ್ಣ ಗಾಯನದ ಮಾರ್ದವತೆ, ನರ್ತನಲಾಸ್ಯದಲ್ಲಿ ಪ್ರತಿಧ್ವನಿಸಿತು. ಯಾವುದೇ ಆರ್ಭಟವಿಲ್ಲದ ಸೌಮ್ಯ ನೃತ್ತಗಳು ಹೃದಯಸ್ಪರ್ಶಿಯಾಗಿದ್ದವು. ಅನನ್ಯ ಭಕ್ತಿಯ ಈ ಸಮರ್ಪಣೆ ದೇವಿಗರ್ಪಿಸಿದ ಏಕಾಂತ ಸೇವೆಯಂತೆ ಭಾಸವಾಯಿತು.

ಆನಂತರ-ನೃತ್ಯ ಪ್ರಸ್ತುತಿಯ ಹೃದಯ ಭಾಗ ಅಷ್ಟೇ ಹೃದ್ಯವೂ ಆದ ಘಟ್ಟ 'ವರ್ಣಂ'. ಬಹು ಸಂಕೀರ್ಣ ಮತ್ತು ದೀರ್ಘ ಬಂಧದ ಪ್ರಸ್ತುತಿ, ಕಲಾವಿದೆಯ ತಾಳ-ಲಯಜ್ಞಾನ ಮತ್ತು ನೆನಪಿನ ಶಕ್ತಿಗೆ ಹಾಗೂ ನೃತ್ಯ ಸಾಮರ್ಥ್ಯಕ್ಕೆ ಸವಾಲೊಡ್ಡುವಂಥದ್ದು. ಜೊತೆ ಜೊತೆಯಲ್ಲಿ ಅಭಿನಯ ಪ್ರಭುತ್ವವನ್ನೂ ನಿರೀಕ್ಷಿಸುವಂಥದ್ದು.

ಕಲಾವಿದೆ ನಿಶಾ ಪ್ರಸ್ತುತಪಡಿಸಿದ ವೀಣೆ ಶೇಷಯ್ಯರ್ ರಚಿಸಿದ ಪದವರ್ಣ 'ದೇವಾದಿ ದೇವ ನಟರಾಜ'ನನ್ನು ಸ್ತುತಿಸುವ ಕೃತಿ, ಹಲವು ಸಂಚಾರಿ ಕಥಾನಕಗಳು ನಾಟಕೀಯ ಆಯಾಮದಿಂದ ಕಂಗೊಳಿಸಿದವು. ಚಿದಂಬರದ ದೇವಾಲಯಕ್ಕೆ ನಟರಾಜನ ದರ್ಶನಕ್ಕೆ ಹಾತೊರೆದು ಬರುವ ಭಕ್ತೆಯ ಹಂಬಲ-ಅನನ್ಯ ಭಕ್ತಿ ಸಮರ್ಪಣೆ ಆನಂದ ನೀಡಿತು. ನೃತ್ತಾವಳಿಗಳಲ್ಲಿ ನಾಟ್ಯಪ್ರಿಯ ನಟರಾಜನಿಗೂ ನೃತ್ತಾವೃತ ನರ್ತನಕ್ಕೂ ಅವಿನಾಭಾವ ಸಂಬಂಧವೆಂಬಂತೆ, ಶಿವನನ್ನು ನಿಶಾ ನೃತ್ಯಾರ್ಚನೆಯಲ್ಲಿ ಸಾಕ್ಷಾತ್ಕರಿಸಿದಳು.

ಮುಂದೆ, ಶ್ರೀಮನ್ನಾರಾಯಣನ ರೂಪ-ಶಕ್ತಿ-ಮಹಿಮೆಗಳನ್ನು ಬಗೆಬಗೆಯಾಗಿ ವರ್ಣಿಸಿ, ಕೊಂಡಾಡುವ ಭಕ್ತೆ, ಕಡೆಯಲ್ಲಿ ಆತನಿಗೆ ಶರಣಾಗುವ ಈ ಭಕ್ತಿಪ್ರಧಾನ ಕೃತಿ, ಮನೋಹರವಾಗಿ ಪ್ರಸ್ತುತಿಗೊಂಡಿತು. ದಶಾವತಾರದ ನೋಟ ಬಹು ಸಂಕ್ಷಿಪ್ತವಾಗಿ ಸಾಗಿ ಪರಿಣಾಮ ಬೀರಿತು. ಆನಂತರ- ಮುರುಗನ ರೂಪಾತಿಶಯ, ಮಹಿಮಾಪೂರ್ಣ ವ್ಯಕ್ತಿತ್ವವನ್ನು, ತನ್ನ ದ್ರವೀಕೃತ ಸುಮನೋಹರ ಚಲನೆಗಳಿಂದ, ಕಮನೀಯ ಭಂಗಿಗಳಿಂದ ಕಣ್ಮುಂದೆ ಸುಂದರವಾಗಿ ಕಂಡರಿಸಿದಳು.

ನಟರಾಜನ ಅದ್ಭುತ ವ್ಯಕ್ತಿತ್ವವನ್ನು ಕಟ್ಟಿಕೊಡುವ ದಯಾನಂದ ಸರಸ್ವತಿ ಅವರ ಜನಪ್ರಿಯ ರಚನೆ 'ಭೋ ಶಂಭೋ ಶಿವ ಶಂಭೋ ಸ್ವಯಂಭೋ' ನಿಶಾಳ ಮಿಂಚಿನ ಸಂಚಾರದ ಹೆಜ್ಜೆ-ಗೆಜ್ಜೆಗಳ ಶುದ್ಧ ನೃತ್ತ ಸಂಚಾರ-ಚಲನೆಗಳಲ್ಲಿ ಅದ್ಭುತವಾಗಿ ಮೂಡಿಬಂತು. ನಾಟ್ಯಾಧಿಪತಿಯ ಆನಂದತಾಂಡವದ ರೋಮಾಂಚಕ ಪ್ರಸ್ತುತಿಯು, ಆಕೆಯ ಮಂಡಿ ಅಡವು, ಆಕಾಶಚಾರಿಗಳ ಮೋಡಿಯಲ್ಲಿ, ಉತ್ತಮ ನಿಯಂತ್ರಣದ ಶಕ್ತ ಯೋಗಭಂಗಿಗಳ ಪ್ರದರ್ಶನಗಳಲ್ಲಿ ಯಶಸ್ವಿಯಾಯಿತು. 'ಮಂಗಳ'ದೊಡನೆ ನೃತ್ಯ ಪ್ರಸ್ತುತಿ ಸಂಪನ್ನಗೊಂಡಿತು. ಅಚ್ಚುಕಟ್ಟಾದ ನರ್ತನವನ್ನು ಶಾಸ್ತ್ರೀಯ ಚೌಕಟ್ಟಿನೊಳಗೆ ಸೊಗಸಾಗಿ ನಿರೂಪಿಸಿದ ನಿಶಾ, ತಾನೊಬ್ಬ ಭರವಸೆಯ ಕಲಾವಿದೆಯೆಂಬುದನ್ನು ಸಾಬೀತುಗೊಳಿಸಿದಳು.

ಕನಸು ಬಿತ್ತುವ ಅಜ್ಜಿ ಮನೆ

'ಅಜ್ಜಿ ಮನೆ' ಮುಂದೆ ಸಬಿಹಾ ಹಷ್ಮಿ
-ಚಿತ್ರ: ದೊಡ್ಡಬಾಣಗೆರೆ ಮಾರಣ್ಣ

ದೂರದ ದೆಹಲಿಯಿಂದ ಬೆಂಗಳೂರು ಪಕ್ಕದ ಈ ಪುಟ್ಟ ಹಳ್ಳಿಗೆ ಬಂದು ನೆಲೆಸಿರುವ ಸಬಿಹಾ ಅವರು, ಸದ್ದಿಲ್ಲದೆ ಸಾಮಾಜಿಕ ಕ್ರಾಂತಿಯಲ್ಲಿ ತೊಡಗಿದವರು. ಊರಿನವರ ಪಾಲಿಗೆ ಪ್ರೀತಿಯ 'ಅಜ್ಜಿ' ಎನಿಸಿರುವ ಈ ವಿಶ್ರಾಂತ ಕಲಾ ಶಿಕ್ಷಕಿ ಮಕ್ಕಳಿಗಾಗಿ 'ಅಜ್ಜಿಯ ಕಲಿಕಾ ಕೇಂದ್ರ' ನಿರ್ಮಿಸುವ ಸಾಹಸಕ್ಕೆ ಕೈಹಾಕಿದ್ದಾರೆ. ಅಲ್ಲಿ ಮಕ್ಕಳ ಕಲರವ ಕೇಳಲು ತುದಿಗಾಲ ಮೇಲೆ ನಿಂತಿದ್ದಾರೆ...

ಆರ್.ಜಿತೇಂದ್ರ

ಜ್ಯೋತಿಪಾಳ್ಯದ ಈ ಮನೆ ಸುತ್ತಲಿನ ಮಕ್ಕಳಿಗೆ 'ಅಜ್ಜಿ ಮನೆ' ಎಂತಲೇ ಪ್ರಸಿದ್ಧಿ. ತಮ್ಮ ಅಜ್ಜಿಯ ಮನೆಗೆ ಬಂದಷ್ಟೇ ಖುಷಿಯಾಗಿ ಇಲ್ಲಿಗೆ ಬರುವ ಮಕ್ಕಳು ಇಲ್ಲಿ ಹೊತ್ತು ಕಳೆದು ಹೋಗುತ್ತಾರೆ. ಮಾತ್ರವಲ್ಲ, ಬದುಕಿಗೆ ಬೇಕಾದ ಪಾಠಗಳನ್ನೂ ಈ ಮನೆ ಅವರಿಗೆ ಕಲಿಸಿಕೊಡುತ್ತಿದೆ.

ಹೀಗೆ ಮಕ್ಕಳ ಬಾಯಲ್ಲಿ 'ಅಜ್ಜಿ' ಎಂತಲೇ ಹೆಸರಾದವರು ನಿವೃತ್ತ ಕಲಾ ಶಿಕ್ಷಕಿ ಸಬಿಹಾ ಹಷ್ಮಿ. ದೆಹಲಿಯಿಂದ ಬೆಂಗಳೂರಿಗೆ ನೆಲೆ ಬದಲಿಸಿಕೊಂಡ ಸಬಿಹಾ ಕಡೆಗೆ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಜ್ಯೋತಿಪಾಳ್ಯದಲ್ಲಿ ಜಮೀನು ಕೊಂಡು ಇಲ್ಲಿಯೇ ಬಿಡಾರ ಹೂಡಿದ್ದಾರೆ. ಸ್ವಚ್ಛ ಪರಿಸರದಲ್ಲಿ ಜೀವನ ನಡೆಸುವ ಆಶಯದ ಜೊತೆಗೆ ಸುತ್ತಲಿನವರ ಬದುಕನ್ನೂ ಹಸನಾಗಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದರಲ್ಲೂ ಗ್ರಾಮೀಣ ಹೆಣ್ಣು ಮಕ್ಕಳ ಏಳ್ಗೆಗೆ ಸದ್ದಿಲ್ಲದೇ ಶ್ರಮಿಸುತ್ತಿದ್ದಾರೆ. ಇದೀಗ 'ಅಜ್ಜಿ ಕಲಿಕಾ ಕೇಂದ್ರ' ಕಟ್ಟುವ ಮೂಲಕ ತಾವು ಮಾಡುತ್ತಿರುವ ಸಮಾಜ ಸೇವೆಗೊಂದು ಮೂರ್ತರೂಪ ಕೊಡಲು ಹೊರಟಿದ್ದಾರೆ.

2012ರಲ್ಲಿ ಜ್ಯೋತಿಪಾಳ್ಯದ ಜಮೀನಿಗೆ ಬಂದ ಸಬಿಹಾ ಇಲ್ಲಿ ಪುಟ್ಟದೊಂದು ಮನೆ ಕಟ್ಟಿಕೊಂಡು ವಾಸಕ್ಕೆ ಆರಂಭಿಸಿದರು. ಕಲಾ ಶಿಕ್ಷಕಿಯೂ ಆದ ಅವರು ತಮ್ಮ ವ್ಯಕ್ತಿತ್ವದಿಂದ ಸುತ್ತಲಿನ ಮಕ್ಕಳನ್ನೂ ಆಕರ್ಷಿಸಿದರು. ಹಸು ಮೇಯಿಸಲು ಬಂದವರ ಕೈಗೆ ಬಣ್ಣದ ಬ್ರಶ್ ಕೊಟ್ಟು ಚಿತ್ತಾರ ಬಿಡಿಸುವ ಕಲೆ ಹೇಳಿಕೊಟ್ಟರು. ಓದಲು ಪುಸ್ತಕ ನೀಡಿದರು. ಪಾಠ ಕಲಿಯಲು ಬಂದ ಮಕ್ಕಳ ಬಾಯಲ್ಲಿ 'ಅಜ್ಜಿ' ಎಂದೇ ಗುರುತಿಸಿಕೊಂಡರು.

ಸಬಿಹಾ ಮೂಲತಃ ಉತ್ತರ ಪ್ರದೇಶದ ಅಲಿಗಡದವರು. ದೆಹಲಿಯಲ್ಲಿ ಲಲಿತ ಕಲೆ ವಿಷಯದಲ್ಲಿ ಪದವಿ ಮುಗಿಸಿ ಅಲ್ಲಿಯೇ ಕಲಾ ಶಿಕ್ಷಕಿಯಾಗಿ ಸೇವೆಗೆ ಸೇರಿದರು. ಅಂದಿನಿಂದಲೂ ಮಕ್ಕಳ ಬಗ್ಗೆ ವಿಶೇಷ ಕಾಳಜಿ ಇಟ್ಟುಕೊಂಡು ನಾನಾ ಕಾರ್ಯಗಳಲ್ಲಿ ಕೈ ಜೋಡಿಸುತ್ತಾ ಬಂದ ಅವರು ಕಲಿಕೆಯ ವಿಷಯದಲ್ಲಿ ಹೆಣ್ಣುಮಕ್ಕಳಿಗೆ ಆಗುತ್ತಿರುವ ಅನ್ಯಾಯ ಗುರುತಿಸಿ, ಅದನ್ನು ಸರಿಪಡಿಸಲು ಶ್ರಮಿಸುತ್ತಿರುವವರು.

2007ರಲ್ಲಿ ಸ್ವಯಂ ನಿವೃತ್ತಿ ಪಡೆದು ಮಗನ ಜೊತೆ ಬೆಂಗಳೂರಿಗೆ ಬಂದ ಸಬಿಹಾ 'ಪೂರ್ಣ' ಕಲಿಕಾ ಕೇಂದ್ರದಲ್ಲಿ ಕಲಾ ಶಿಕ್ಷಕಿಯಾಗಿ ಮತ್ತೆ ಸೇವೆ ಆರಂಭಿಸಿದರು. ಈ ನಡುವೆ, ನಗರದ ಜಂಜಾಟದಿಂದ ದೂರ ಇರುವ ನಿರ್ಧಾರಕ್ಕೆ ಬಂದು ಜಮೀನು ಹುಡುಕುತ್ತಾ ಕಡೆಗೆ ಜ್ಯೋತಿಪಾಳ್ಯದಲ್ಲಿ ನೆಲೆ ಕಂಡುಕೊಂಡರು.

ಸಬಿಹಾ ಅವರ ಮಾರ್ಗದರ್ಶನ ಜ್ಯೋತಿಪಾಳ್ಯದ ಮಕ್ಕಳ ಬದುಕನ್ನು ಬದಲಿಸಿದೆ. ಅದರಲ್ಲೂ ಅನೇಕ ಹೆಣ್ಣುಮಕ್ಕಳು ತಮ್ಮ ಕನಸು ನನಸಾಗಿಸಿಕೊಳ್ಳಲು ಅವರು ಮಾರ್ಗದರ್ಶನ ನೀಡುತ್ತಿದ್ದಾರೆ. ಅರ್ಧಕ್ಕೆ ಓದು ಮೊಟಕುಗೊಳಿಸಿ, ಎಳೆಯ ವಯಸ್ಸಿನಲ್ಲೇ ಸಂಸಾರದ ನೊಗ ಹೊರಲು ಸಿದ್ಧರಾಗುತ್ತಿದ್ದ ಹುಡುಗಿಯರು ಇಂದು ಕಾಲೇಜಿನ ಮೆಟ್ಟಿಲು ಹತ್ತಿ, ತಮ್ಮಿಷ್ಟದ ಉದ್ಯೋಗ ಹಿಡಿದು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವುದು ಸಾಧ್ಯವಾಗಿದೆ.

ಜ್ಯೋತಿಪಾಳ್ಯದವರೇ ಆದ ಪಲ್ಲವಿಗೆ ಕಾಲೇಜು ಮೆಟ್ಟಿಲು ಹತ್ತುವುದೇ ದುಸ್ತರವಾಗಿದ್ದ ಹೊತ್ತಿನಲ್ಲಿ ಸಬಿಹಾ ಅವರು, ಆಕೆಯ ಕೈ ಹಿಡಿದು ನಡೆಸಿದ್ದಾರೆ. ಇದರಿಂದಾಗಿ ಇಂದು ಆಕೆ ಪದವಿ ಶಿಕ್ಷಣ ಪೂರ್ಣಗೊಳಿಸಿ ಉದ್ಯೋಗದೊಂದಿಗೆ ಕುಟುಂಬಕ್ಕೆ ನೆರವಾಗುತ್ತಿದ್ದಾರೆ. ಇದೇ ಗ್ರಾಮದ ಮತ್ತೊಬ್ಬ ಯುವತಿ ಸುಷ್ಮಾ ಪಿಯುಸಿ ನಂತರ ಮುಂದೇನು ಎಂದು ಕೈಕಟ್ಟಿ ಕುಳಿತಾಗ, ಆಕೆಗೆ ಕರಕುಶಲ ಕಲೆ ಹೇಳಿಕೊಟ್ಟು ತನ್ನ ಸಂಪಾದನೆಯಿಂದಲೇ ಶಿಕ್ಷಣ ಪೂರೈಸಲು ನೆರವಾಗಿದ್ದಾರೆ. ಇಂದು ಸುಷ್ಮಾ ಕಂಪನಿಯೊಂದರಲ್ಲಿ ಅಕೌಂಟೆಂಟ್ ಆಗಿರುವ ಜೊತೆಗೆ ಬೆಂಗಳೂರಿನಲ್ಲಿ ತಮ್ಮದೇ ಆದ ಕಸೂತಿ ಕಲೆಯ ಅಂಗಡಿ ಹೊಂದಿದ್ದಾರೆ.

ನಿರುಪಯುಕ್ತ ಸಾಮಗ್ರಿಗೆ ಜೀವ ತುಂಬಿದ ಪಲ್ಲವಿ

ವಾರದಲ್ಲಿ ಕಚೇರಿ ಕೆಲಸ ಹಾಗೂ ವಾರಾಂತ್ಯದಲ್ಲಿ ತಮ್ಮ ಅಂಗಡಿಯಲ್ಲಿ ಸಂಪಾದನೆ ಮೂಲಕ ಉತ್ತಮ ಬದುಕು ಕಟ್ಟಿಕೊಳ್ಳುತ್ತಿದ್ದಾರೆ.

'ಜ್ಯೋತಿಪಾಳ್ಯಕ್ಕೆ ಬಂದ ಆರಂಭದಲ್ಲಿ ಇಲ್ಲಿನ ಅಸಹಾಯಕ ಹೆಣ್ಣುಮಕ್ಕಳ ಸ್ಥಿತಿ ಕಂಡು ಸ್ವಂತ ಹಣ ಹಾಗೂ ದಾನಿಗಳ ನೆರವಿನಿಂದ ಅನೇಕ ಮಕ್ಕಳ ಶಾಲಾ ಶುಲ್ಕ ಕಟ್ಟಿದೆವು. ವಿದ್ಯಾರ್ಥಿಗಳಿಗೆ ಕಲಿಕೆಗೆ ಬೇಕಾದ ಸಾಮಗ್ರಿಗಳನ್ನೂ ಕೊಡಿಸಿದೆವು. ಆದರೆ ಇಷ್ಟೇ ಆದರೆ ಸಾಲದು ಎನ್ನಿಸಿತು. ಹೀಗಾಗಿ ಹುಡುಗಿಯರಿಗೆ ಹೊಲಿಗೆ, ಕಸೂತಿ, ಕರಕುಶಲ ಕಲೆಯ ಪಾಠ ಆರಂಭಿಸಿದೆ. ಹಳೆಯ ಬಟ್ಟೆ, ದಿನಪತ್ರಿಕೆ, ರಟ್ಟುಗಳನ್ನು ಬಳಸಿಕೊಂಡು ಚೆಂದನೆಯ ಬ್ಯಾಗುಗಳು, ಬಾಕ್ಸ್‌ಗಳು ಮೊದಲಾದ ದಿನೋಪಯೋಗಿ ಸಾಮಗ್ರಿ ತಯಾರಿಸುವುದನ್ನು ಕಲಿಸಿಕೊಟ್ಟೆ. ಹೀಗೆ ತಯಾರಾದವುಗಳನ್ನು ಬೆಂಗಳೂರು ಮೊದಲಾದ ಕಡೆಗಳಲ್ಲಿ ನಡೆಯುವ ವಸ್ತುಪ್ರದರ್ಶನದಲ್ಲಿ ಮಾರಾಟ ಮಾಡಿದೆವು. ಇದರಿಂದ ಬಂದ ಹಣವೆಲ್ಲ ವಿದ್ಯಾರ್ಥಿನಿಯರ ಹೆಸರಿನ 'ಗೋಲಕ' ಸೇರಿತು. ಅದೇ ಹಣದಿಂದ ಮಕ್ಕಳು ಶಾಲೆಯ ಶುಲ್ಕ ಕಟ್ಟುವುದು ಸಾಧ್ಯವಾಯಿತು. ಇದರಿಂದ ಪ್ರೇರೇಪಣೆಗೊಂಡು ಇನ್ನಷ್ಟು ವಿದ್ಯಾರ್ಥಿನಿಯರು ಹಾಗೂ ಅವರ ಪೋಷಕರು 'ಅಜ್ಜಿ ಮನೆ'ಯತ್ತ ಮುಖ ಮಾಡಿದರು' ಎಂದು ತಮ್ಮ ಕಾರ್ಯದ ಬಗ್ಗೆ ವಿವರಿಸುತ್ತಾರೆ ಸಬಿಹಾ.

'ಅಜ್ಜಿ ನಮ್ಮೂರಿನ ಹೆಣ್ಣು ಮಕ್ಕಳ ಪಾಲಿನ ಆಶಾಕಿರಣವಾಗಿ ಕೆಲಸ ಮಾಡುತ್ತಿದ್ದಾರೆ. ನನ್ನನ್ನೂ ಒಳಗೊಂಡು ಅನೇಕ ಕುಟುಂಬಗಳಿಗೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನೆರವು ನೀಡಿದ್ದಾರೆ. ಇದರಿಂದ ನಮ್ಮೂರಿನ ಹುಡುಗಿಯರು ಕಾಲೇಜು ಮೆಟ್ಟಿಲು ಹತ್ತಿ ಸ್ವಾವಲಂಬಿ ಆಗಲು ಸಾಧ್ಯವಾಗಿದೆ' ಎನ್ನುತ್ತಾರೆ ಗ್ರಾಮದ ಅಂಗನವಾಡಿ ಕಾರ್ಯಕರ್ತೆ ಪ್ರಮೀಳಾ.

ಗ್ರಾಮೀಣ ಮಹಿಳೆಯರ ಅನೇಕ ಸಮಸ್ಯೆಗಳಿಗೆ ಸಬಿಹಾ ಸ್ಪಂದಿಸುತ್ತಿದ್ದಾರೆ. ತಮ್ಮ ಸಹವರ್ತಿಗಳ ಜೊತೆಗೂಡಿ ಸುತ್ತಲಿನ ಮನೆಗಳಿಗೆ ಭೇಟಿನೀಡಿ ಮಕ್ಕಳಿಗೆ ಬಾಲ್ಯವಿವಾಹ ಮಾಡದಂತೆ ತಿಳಿವಳಿಕೆ ನೀಡಿದ್ದಾರೆ. ವಿದ್ಯಾರ್ಥಿಗಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದುದನ್ನು ಕಂಡು ದಾನಿಗಳ ನೆರವಿನಿಂದ ತಮ್ಮ ಮನೆಯಲ್ಲೇ ಮಕ್ಕಳಿಗೆ ನಿತ್ಯ ಹಾಲು ನೀಡಿದ್ದಾರೆ. ಸಾಕಷ್ಟು ವಿದ್ಯಾರ್ಥಿಗಳಿಗೆ ಪುಸ್ತಕ, ಲೇಖನ ಸಾಮಗ್ರಿ ಕೊಡಿಸಿದ್ದಾರೆ.

ಕೋವಿಡ್ ಕಾರಣಕ್ಕೆ ಶಾಲೆಗಳು ಬಂದ್ ಆದಾಗ, ಇಲ್ಲಿನ ಮಕ್ಕಳು ಮೊಬೈಲ್ ಹಿಡಿದು ಸೀದಾ ಅಜ್ಜಿ ಮನೆಗೆ ಬಂದಿದ್ದಾರೆ. ಆನ್‌ಲೈನ್ ಕಲಿಕೆಗೆ ಬೇಕಾದ ಅಂತರ್ಜಾಲ ಸಂಪರ್ಕದ ಜೊತೆಗೆ ಅವರಿಗೆ ಅಗತ್ಯ ಮಾರ್ಗದರ್ಶನವೂ ಇಲ್ಲಿ ಸಿಕ್ಕಿದೆ. 72ರ ಇಳಿ ವಯಸ್ಸಿನಲ್ಲೂ ಸಬಿಹಾ ಅವರ ಉತ್ಸಾಹ ಮಾತ್ರ ಕುಗ್ಗಿಲ್ಲ. ಆರೋಗ್ಯದ ಸಮಸ್ಯೆ ನಡುವೆಯೂ ಮಕ್ಕಳಿಗಾಗಿ ಇನ್ನಷ್ಟು ಕೆಲಸ ಮಾಡಬೇಕು ಎನ್ನುವ ಕನಸು ಹೊತ್ತಿದ್ದಾರೆ. ತಮ್ಮ ನಾಲ್ಕು ಎಕರೆ ಜಮೀನಿನಲ್ಲಿ ಸಾವಯವ ಕೃಷಿಯ ಮೂಲಕ ಆರೋಗ್ಯಕರ ಜೀವನ ನಡೆಸುವ ಆಶಯ ಅವರದ್ದು.

ಸಬಿಹಾ ಅವರ ಸಂಪರ್ಕಕ್ಕೆ: 99006 90411 ಅಥವಾ sabihashmi@yahoo.com.

ಕಲಿಕಾ ಕೇಂದ್ರ ನಿರ್ಮಾಣಕ್ಕೆ ಮುನ್ನುಡಿ

ಗ್ರಾಮೀಣ ಮಕ್ಕಳಿಗೆ ಉತ್ತಮ ಕಲಿಕೆ ವಾತಾವರಣ ನಿರ್ಮಿಸುವ ಜೊತೆಗೆ ವಿವಿಧ ತರಬೇತಿ ಮೂಲಕ ಅವರನ್ನು ಆರ್ಥಿಕವಾಗಿ ಸ್ವಾವಲಂಬಿ ಆಗಿಸುವ ಆಶಯ ಹೊತ್ತು ಜ್ಯೋತಿಪಾಳ್ಯದ ಹದ್ದಿನಕಲ್ಲು ಬೆಟ್ಟದ ತಪ್ಪಲಿನಲ್ಲಿ 'ಅಜ್ಜಿಯ ಕಲಿಕಾ ಕೇಂದ್ರ' ತಲೆ ಎತ್ತುತ್ತಿದೆ. ಈಗಾಗಲೇ ಇದರ ನಿರ್ಮಾಣ ಕಾಮಗಾರಿಯೂ ಆರಂಭ ಆಗಿದೆ. ಸುಸಜ್ಜಿತ ಗ್ರಂಥಾಲಯ ಹಾಗೂ ಸಂಶೋಧನಾ ಕೇಂದ್ರ ಇಲ್ಲಿರಲಿದೆ. ಜೊತೆಗೆ ಮಕ್ಕಳು ಹಾಗೂ ಯುವಜನರಿಗೆ ಕಂಪ್ಯೂಟರ್ ತರಬೇತಿ, ಚಿತ್ರಕಲೆ, ಕಸೂತಿ, ಕುಂಬಾರಿಕೆ ಮೊದಲಾದ ತರಬೇತಿ ನೀಡಲು ಯೋಜಿಸಲಾಗಿದೆ. ಮುಂದೆ ಇದನ್ನು ಕಲಾವಿದರ ವೇದಿಕೆಯಾಗಿಯೂ ರೂಪಿಸುವ ಆಶಯ ಸಬಿಹಾ ಅವರದ್ದು.

ಸಬಿಹಾ ತಮ್ಮ ಉಳಿತಾಯದ ಹಣದ ಜೊತೆಗೆ ದಾನಿಗಳ ನೆರವಿನಿಂದ ಇದನ್ನು ನಿರ್ಮಿಸುತ್ತಿದ್ದಾರೆ. ಅವರ ಸಹೋದರಿ ಶಬನಂ ಹಷ್ಮಿ ಈ ಕಾರ್ಯದಲ್ಲಿ ನೆರವಾಗುತ್ತಿದ್ದಾರೆ. ಶೈಲೇಶ್ ಎಂಬ ಉತ್ಸಾಹಿ ವಾಸ್ತುಶಿಲ್ಪಿ ಇದರ ವಿನ್ಯಾಸ ಹಾಗೂ ನಿರ್ಮಾಣದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

ಅಜ್ಜಿಯ ಕಲಿಕಾ ಕೇಂದ್ರದ ನೀಲನಕ್ಷೆ

'ಅಜ್ಜಿ' ಹೊಲದ ಮೊದಲ ಬೆಳೆಯನ್ನು ಸ್ವಚ್ಛಗೊಳಿಸಲು ಊರಿನ ಮಹಿಳೆಯರು ಸಬಿಹಾ ಹಷ್ಮಿ ಅವರಿಗೆ ನೆರವಾದಾಗ...

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ನಿಮ್ಮ ಹುಟ್ಟಿದ ದಿನಾಂಕ ಹೇಳುವ ಜಾದೂ

ಗುಟ್ಟು ರಟ್ಟು: ನಿಮ್ಮ ಹುಟ್ಟಿದ ದಿನಾಂಕವನ್ನು ನೆನಪಿಸಿಕೊಳ್ಳಿ. ಆ ದಿನಾಂಕ ಕೆಳಗಿನ ಐದು ಸಾಲುಗಳಲ್ಲಿ ಯಾವ ಯಾವ ಸಾಲಿನಲ್ಲಿದೆ ಎಂದು ಹೇಳಿದರೆ ನೀವು ನೆನಪಿಟ್ಟುಕೊಂಡ ದಿನಾಂಕವನ್ನು ನಾನು ಹೇಳುತ್ತೇನೆ. ಹೇಗೆ ಗೊತ್ತಾ? ಹೀಗೆ!
ಉದಾ: ನಿಮ್ಮ ಹುಟ್ಟಿದ ದಿನಾಂಕ 13 ಆಗಿದ್ದರೆ ಆ ದಿನಾಂಕವು 1ನೇ ಸಾಲಿನಲ್ಲಿ, 3ನೇ ಸಾಲಿನಲ್ಲಿ, 4ನೇ ಸಾಲಿನಲ್ಲಿ ಇರುತ್ತದೆ. ಅವುಗಳಿಗೆ ಒಂದೊಂದು ಗುಪ್ತ ಸಂಖ್ಯೆಗಳಿದ್ದು ಮೂರೂ ಸಾಲಿನ ಗುಪ್ತ ಸಂಖ್ಯೆಗಳನ್ನು ಕೂಡಿಸಿದಾಗ 13 ಆಗುತ್ತದೆ. ಆದ್ದರಿಂದ ನೀವು 13ನೇ ದಿನಾಂಕದಂದು ಹುಟ್ಟಿದ್ದೀರೆಂದು ಹೇಳಬಹುದು. ಹೀಗೆ ಯಾವುದೇ ದಿನಾಂಕ ಇದ್ದರೂ ಹೇಳಬಹುದು.

1	2	4	8	16
3	3	5	9	17
5	6	6	10	18
7	7	7	11	19
9	10	12	12	20
11	11	13	13	21
13	14	14	14	22
15	15	15	15	23
17	18	20	24	24
19	19	21	25	25
21	22	22	26	26
23	23	23	27	27
25	26	28	28	28
27	27	29	29	29
29	30	30	30	30
31	31	31	31	31
ಗುಪ್ತ ಸಂಖ್ಯೆಗಳು 1	2	4	8	16

2) ಜೀರೋ-ಹೀರೊ ಗುಣಾಕಾರಗಳು

1. 1953125 x 512 = 1000000000
2. 769230769231 x 13 = 10000000000003
3. 142857143 x 7 = 1000000001
4. 3125 x 32 = 100000

ಡಣ್ಣ ಚಕ್ಕು ಶೀಶ್ರಪ್ಪ ಕಥೆಯ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ನ್ಯಾಯ ಸಿಂಹಾಸನ



ರಾಜಾ ವಿಕ್ರಮಾದಿತ್ಯ ಪ್ರಾಚೀನ ಭಾರತದ ಮಹಾನ್ ದೊರೆಗಳಲ್ಲಿ ಒಬ್ಬನು. ಜನಾನುರಾಗಿಯಾಗಿದ್ದ ಆತ ವಿದ್ವಾಂಸರ ಬಗ್ಗೆ ಗೌರವ ಹೊಂದಿದ್ದ. ನ್ಯಾಯಸಮ್ಮತ ತೀರ್ಪು ನೀಡುವುದರಲ್ಲೂ ಹೆಸರಾಗಿದ್ದ

ಉಜ್ಜಯಿನಿ ಆತನ ರಾಜಧಾನಿಯಾಗಿತ್ತು. ಸುಖ-ಸಮೃದ್ಧಿಯೂ ಅಲ್ಲಿ ಮನೆ ಮಾಡಿತ್ತು ಎಂದು ಪ್ರತೀತಿ. ವಿಕ್ರಮಾದಿತ್ಯನ ಮೇಲೆ ಹಲವು ಕಥೆಗಳು ಇವೆ. ಆತನ ಸಿಂಹಾಸನ ಕುರಿತಾದ ಕಥೆಯೂ ಅವುಗಳಲ್ಲೊಂದು

ದನಗಾಹಿಯೊಬ್ಬ ದನ ಮೇಯಿಸಲು ಹೋದಾಗ ದಿಬ್ಬವೊಂದರ ಮೇಲೆ ಕುಳಿತು ನ್ಯಾಯ ಪಂಚಾಯ್ತಿ ಮಾಡುವಾಗ ಅದ್ಭುತವಾದ ತೀರ್ಪುಗಳನ್ನು ನೀಡುತ್ತಿರುವ ಕುರಿತು ದೇಶದ ತುಂಬಾ ಸುದ್ದಿಯಾಯಿತು



ಆಗ ಆ ರಾಜ್ಯವನ್ನು ಆಳುತ್ತಿದ್ದ ರಾಜ ಈ ಕುರಿತು ವಿಚಾರಿಸಿದಾಗ ದಿಬ್ಬದ ಅಡಿಯಲ್ಲಿ ವಿಕ್ರಮಾದಿತ್ಯನ ಸಿಂಹಾಸನವಿದ್ದು, ಅದರ ಪ್ರಭಾವವೇ ದನಗಾಹಿ ನ್ಯಾಯಸಮ್ಮತ ತೀರ್ಪು ನೀಡಲು ಕಾರಣ ಎಂದು ಗೊತ್ತಾಯಿತು

ದಿಬ್ಬ ಅಗೆದು ಸಿಂಹಾಸನವನ್ನು ಅರಮನೆಗೆ ತರಲಾಯಿತು. ಆ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ರಾಜ ಮುಂದಾದಾಗ ಅನ್ಯಾಯದಲ್ಲಿ ಭಾಗಿಯಾದವರಿಗೆ ಕೂರಲು ಅವಕಾಶವಿಲ್ಲ ಎಂದು ರಾಜನಿಗೆ ಕೇಳಿಸಿದಂತಾಯಿತು



ತಾನು ನ್ಯಾಯದಿಂದ ನಡೆದುಕೊಂಡಿಲ್ಲ ಎನ್ನುವುದು ಅರಿವಾದ ಮೇಲೆ ರಾಜ ಸಿಂಹಾಸನದಲ್ಲಿ ಕೂರದೆ ದೂರ ಸರಿದ. ಆ ಸಿಂಹಾಸನಕ್ಕೆ ರೆಕ್ಕೆ ಮೂಡಿ ಅದು ಹಾರಿಹೋಯಿತು ಎಂದು ಕಥೆಯಲ್ಲಿ ಹೇಳಲಾಗುತ್ತದೆ

ಪದ ಹಿಗ್ಗು

- ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಆಳು 2. ಕಾಕ 3. ಉರು 4. ಸಳ
5. ಬಲು 6. ಗಡಿ 7. ಕಾಲು 8. ಗತ

1. _ ರ _
2. _ ಳ _
3. _ ಣಿ _
4. _ ವ _
5. _ ಕ _
6. _ ಯ _
7. _ ರ _
8. _ ರು _

ಟ್ವೆಂಟಿ – 20 ಮ್ಯಾಚ್

- ಎಡಭಾಗದ ಸಂಗತಿಗಳಿಗೆ ಬಲಭಾಗದ ಸಂಗತಿಗಳನ್ನು ಹೊಂದಿಸಿ.

ಅ ವಿಭಾಗ
ಶಬ್ದಗಳು ಅರ್ಥ

1. ಚಿಪ್ಪಾಡಿ	A ರಾಡಿ
2. ಟೀಪಾಯಿ	B ತುಣುಕು
3. ನಿರುಮ್ಮಳ	C ಒಂದು ಬಾಣದ ಹೆಸರು
4. ಪಾಶುಪತ	D ಮುಕ್ಕಾಲು ಮಣೆ
5. ಬಗ್ಗಡ	E ನಿಶ್ಚಿಂತೆ

ಬ ವಿಭಾಗ
ಕವಿಗಳು ಅನ್ವರ್ಥಕ ನಾಮ

1. ತ್ರಿಪದಿಕವಿ	A ಡುಂಡಿರಾಜ
2. ಸಮನ್ವಯಕವಿ	B ಸರ್ವಜ್ಞ
3. ಪ್ರೇಮಕವಿ	C ದಿನಕರ ದೇಸಾಯಿ
4. ಚೌಪದಿಕವಿ	D ಚನ್ನವೀರ ಕಣವಿ
5. ಚುಟುಕುಕವಿ	E ಕೆ.ಎಸ್.ನರಸಿಂಹಸ್ವಾಮಿ

ಕ ವಿಭಾಗ
ನದಿಗಳು ಉಗಮ ಸ್ಥಾನ

1. ಕೃಷ್ಣಾ	A ನಂದಿದುರ್ಗ
2. ಮಲಪ್ರಭಾ	B ತಿಪಟೂರು
3. ಶರಾವತಿ	C ಮಹಾಬಲೇಶ್ವರ
4. ಶಿಂಷಾ	D ಕಣಕುಂಬಿ
5. ಅರ್ಕಾವತಿ	E ಅಂಬುತೀರ್ಥ

ಡ ವಿಭಾಗ
ಒಂದು ಪದಕ್ಕೆ ಇಲ್ಲಿ ಎರಡರ್ಥಗಳಿವೆ. ಒಂದು ಅರ್ಥ ಕೊಟ್ಟಿದೆ ಇನ್ನೊಂದು ಹೊಂದಿಸಿ.

1. ಕರಿ = ಆನೆ	A ಒಂದು ವಾದ್ಯ
2. ಪಾಲಕ = ಒಡೆಯ	B ಅರಸ
3. ತಿಂಡಿ = ನವೆ	C ಒಂದು ಸೊಪ್ಪು
4. ದುಡಿ = ಕೆಲಸಮಾಡು	D ಕಪ್ಪು
5. ದೊರೆ = ಸಿಗು	E ಉಪಾಹಾರ

ಅದಲು ಬದಲು ಕಂಚೀ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಅವೇ ಅಕ್ಷರಗಳ ಬೇರೊಂದು ಪದ ರಚಿಸಿ

1. ನೀಡಲು ಕಲಿ = ________
2. ಮಾಮಾರ ಕುರ = ________
3. ಜನ್ನನ ಮಣೆ = ________
4. ಪಾಪು ಸಂಕಟ = ________

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಪದಗಳಿಗೆ ಒಂದಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

ಉದಾ: ಹಳದಿ + ತ = ತಳಹದಿ

1. ಹಳದಿ + ತ = ________
2. ಗರತಿ + ತ = ________
3. ವರಸೆ + ಭ = ________
4. ಕದನ + ರು = ________
5. ಗರುಡ + ಮ = ________
6. ಸಡಿಲು + ಗು = ________
7. ಅಮರ + ನೆ = ________
8. ಸಮರ + ಚಾ = ________
9. ನಿಯಮ + ವಿ = ________
10. ಸದರ + ಮಾ = ________

ಜಾನಪದ-ಪ್ರಾಸ ಗೀತೆಗಳು

ಶಿಶು ಪ್ರಾಸ ಪದ ತುಂಬಿ.

1. ಚಂದಪ್ಪ ಚಂದಪ್ಪ ಚೌರಿ ಕಾಯಿ
ಬಟ್ಟಲ ತುಂಬ ________
2. ಅಂಗಡ್ಯಾಗ ಕಾಚು
ಗಂಡ-ಹೆಣ್ತಿ ________
3. ಬಾರ ಕೋಲ ಬಿಗಿಬಿಗಿ
ಎಣ್ಣೆ ಹೋಳಿಗೆ ________
4. ಜಾಕ ಮೂಕ ಜಾಲಿಕಾಯಿ
ಮೋಟರದಾಗ ________
5. ಅಮ್ಮ ಮಾಡಿದ ಹಪ್ಪಳ
ಮುರಿದು ತಿಂದರೆ ________

ಮಜ ಮಜ ಮಜಕೂರದ ಆಗಸ್ಟ್ 1ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ ಹಿಗ್ಗು:
1) ಗರತಿ 2) ಮಾನವ 3) ಶಕುನಿ
4) ಗಾರುಡಿ 5) ಕೊಕ್ಕರೆ 6) ಮುನ್ನುಡಿ
7) ಸನಿಹ 8) ದಮನ

ಅದಲು ಬದಲು ಕಂಚಿ ಕದಲು
1) ಸದಾಹೋಗಿ 2) ಕರಿನಾಗ
3) ದೇವಾನಂದ 4) ನೀರಿನಾಳ

ಟ್ವೆಂಟಿ 20 ಮ್ಯಾಚ್
1) K 2) I 3) M 4) H 5) F
6) O 7) P 8) S 9) R 10) Q
11) L 12) T 13) J 14) N 15) D
16) G 17) B 18) C 19) A 20) E

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಸಾತ್ವಿಕ್ ಇ.ವಿ., ದಾವಣಗೆರೆ

ಅಪೇಕ್ಷಾ ನಾಯಕ್, ಹುಬ್ಬಳ್ಳಿ

ಕೀರ್ತನಾ ಎಂ., ಕೆ.ಆರ್. ನಗರ (ಮೈಸೂರು)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ: majakoora@prajavani.co.in

ಅಪ್ಪ ತುಂಬಿದ ಹುರುಪಿಗೆ ಒಲಿದ ಜಯ: ಹರಿಯಾಣ ಪೈಲ್ವಾನನ ಸಾಧನೆ

ಬಜರಂಗ್ ಕಂಚು–ಮಿಂಚು

ಟೋಕಿಯೊ (ಪಿಟಿಐ): ಶನಿವಾರ ಬಜರಂಗ್ ಪೂನಿಯಾಗೆ ಅಪ್ಪ ಬಲವಾನ್ ಸಿಂಗ್ ಅವರು ತುಂಬಿದ ಹುರುಪು ಹುಸಿ ಹೋಗಲಿಲ್ಲ. ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಮತ್ತೊಂದು ಪದಕ ಗೆದ್ದುಕೊಡುವಲ್ಲಿ ಯಶಸ್ವಿಯಾದರು.

ಶನಿವಾರ ಪುರುಷರ 65 ಕೆಜಿ ವಿಭಾಗದಲ್ಲಿ ಮೂರನೇ ಸ್ಥಾನಕ್ಕಾಗಿ ನಡೆದ ಬೌಟ್‌ನಲ್ಲಿ ಬಜರಂಗ್ ಪೂನಿಯಾ 8–0ಯಿಂದ ಕಜಕಸ್ತಾನದ ದೌಲೆತ್ ನಿಯಾಜ್‌ಬೆಕೊವ್ ವಿರುದ್ಧ ಗೆದ್ದರು ಕಂಚಿನ ಪದಕ ಕೊರಳಿಗೇರಿಸಿಕೊಂಡರು.

ಪ್ರತಿಭಾವಂತ ಕುಸ್ತಿಪಟು ಶುಕ್ರವಾರ ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿದ್ದರು. ಮಂಡಿನೋವಿನ ಕಾರಣದಿಂದ ಲೆಗ್ ಡಿಫೆನ್ಸ್‌ನಲ್ಲಿ ದುರ್ಬಲರಾಗಿದ್ದ ಅವರು ಸೋತಿದ್ದರು.

ಅದರ ನಂತರ ಹರಿಯಾಣದಲ್ಲಿರುವ ಬಲವಾನ್ ಸಿಂಗ್ ಅವರು ಮಗನೊಂದಿಗೆ ವಿಡಿಯೊ ಕಾಲ್ ಮಾಡಿ ಹುರುಪು ತುಂಬಿದ್ದರು. ಬಜರಂಗ್ ತಾಯಿ ಮಗ ಪದಕ ಗೆದ್ದ ಸುದ್ದಿ ಬರುವವರೆಗೂ ದೇವರ ಪೂಜೆ ಮಾಡುತ್ತಲೇ ಇದ್ದ ದೃಶ್ಯಗಳು ಟಿವಿ, ಸಾಮಾಜಿಕ ಜಾಲತಾಣಗಳಲ್ಲಿ ಓಡಾಡಿದವು.

‘ನೀನು ಸೆಮಿಫೈನಲ್‌ನಲ್ಲಿ ಸೋತಿಲ್ಲ. ಮಂಡಿನೋವಿನಿಂದ ಹಾಗಾಗಿದೆ. ಅದನ್ನು ಮರೆತುಬಿಡು. ಪದಕ ಜಯಿಸುವ ಅವಕಾಶ ಇನ್ನೂ ಇದೆ. ದೇಶಕ್ಕೆ ಕಾಣಿಕೆ ನೀಡುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ಎದ್ದು ಅಭ್ಯಾಸ ಮಾಡು. ಚೆನ್ನಾಗಿ ಆಡು’ ಎಂದಿದ್ದರು ಬಲವಾನ್ ಸಿಂಗ್.

ಅದರಂತೆಯೇ ಅವರ ಬೌಟ್‌ನಲ್ಲಿ ಯಾವುದೇ ದೌರ್ಬಲ್ಯಗಳೂ ಕಾಣಲಿಲ್ಲ. ಚುರುಕಾದ ಚಲನೆಗಳು ಮತ್ತು ಪಟ್ಟುಗಳಿಂದ ಎದುರಾಳಿಯನ್ನು ಕಂಗೆಡಿಸಿದರು. ಇದೇ ಮೊದಲ ಬಾರಿ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸಿದ್ದ ಬಜರಂಗ್ ಪದಕದೊಂದಿಗೆ ಸಂಭ್ರಮಿಸಿದರು.

ಕಳೆದ ನಾಲ್ಕು ವರ್ಷಗಳಿಂದ ಮಹತ್ವದ ಅಂತರರಾಷ್ಟ್ರೀಯ ಪದಕಗಳನ್ನು ಜಯಿಸಿದ್ದರು. ಲಾಕ್‌ಡೌನ್ ಸಂದರ್ಭದಲ್ಲಿ ತಮ್ಮ ಮನೆಯ ಅಖಾಡದಲ್ಲಿಯೇ ಅಭ್ಯಾಸ ಮಾಡಿದ್ದರು. ಫಿಟ್‌ನೆಸ್ ಕಾಯ್ದುಕೊಳ್ಳಲು ಹೊಲಗದ್ದೆಯಲ್ಲಿ ಕೃಷಿ ಕೆಲಸವನ್ನೂ ಮಾಡಿ ಗಮನ ಸೆಳೆದಿದ್ದರು.

ಬಜರಂಗ್ ಅವರ ಸಾಧನೆಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಪ್ರಧಾನಿ ನರೇಂದ್ರ ಮೋದಿ ಮತ್ತು ವಿವಿಧ ಕ್ಷೇತ್ರಗಳ ಗಣ್ಯರು ಅಭಿನಂದಿಸಿದ್ದಾರೆ.

ಭಾರತದ ಬಜರಂಗ್ ಪೂನಿಯಾ (ನೀಲಿ ಪೋಷಾಕು) ಮತ್ತು ಕಜಕಸ್ತಾನದ ದೌಲೆತ್ ನಿಯಾಜ್‌ಬೆಕೊವ್ ಹಣಾಹಣಿ ನಡೆಸಿದ ರೀತಿ –ಎಎಫ್‌ಪಿ ಚಿತ್ರ

ಜಾತಿನಿಂದನೆಗೆ ರಾಣಿ ರಾಂಪಾಲ್ ಆಕ್ರೋಶ

ಟೋಕಿಯೊ: ತಂಡದ ಸದಸ್ಯೆ ವಂದನಾ ಕಟಾರಿಯ ಅವರ ಕುಟುಂಬದವರನ್ನು ಜಾತಿ ನಿಂದನೆಗೆ ಒಳಪಡಿಸಿದ್ದಕ್ಕೆ ಭಾರತ ಮಹಿಳೆಯರ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ರಾಣಿ ರಾಂಪಾಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕ್ರೀಡಾಕ್ಷೇತ್ರದಲ್ಲಿ ದೇಶದ ಗೌರವ ಎತ್ತಿಹಿಡಿಯಲು ಪ್ರಯತ್ನಿಸು-ತ್ತಿರುವ ಸಂದರ್ಭದಲ್ಲಿ ಇಂಥ ಘಟನೆಗಳು ನಡೆಯುವುದು ಖೇದಕರ ಎಂದು ಅವರು ಹೇಳಿದ್ದಾರೆ.

ಭರವಸೆ ಕೈಬಿಟ್ಟರಲಿಲ್ಲ: ಮೊದಲ ಮೂರು ಪಂದ್ಯಗಳಲ್ಲಿ ಸತತ ಸೋಲು ಕಂಡಿದ್ದರೂ ತಂಡ ಭರವಸೆ ಕೈಬಿಟ್ಟರಲಿಲ್ಲ. ನಾಕೌಟ್ ಹಂತ ತಲುಪುವ ನಿರೀಕ್ಷೆ ಪ್ರತಿಯೊಬ್ಬ ಆಟಗಾರ್ತಿಯಲ್ಲೂ ಇತ್ತು ಎಂದು ತಿಳಿಸಿದರು. ಕಳೆದ ಬಾರಿಯ ರಿಯೊ ಕೂಟದಲ್ಲಿ ಕೊನೆಯ ಸ್ಥಾನಕ್ಕೆ ಕುಸಿದಿದ್ದ ಮಹಿಳಾ ತಂಡ ಈ ಬಾರಿ ಆರಂಭದಲ್ಲಿ ನೀರಸ ಪ್ರದರ್ಶನ ನೀಡಿತ್ತು. ನಂತರ ಚೇತರಿಸಿ-ಕೊಂಡಿತ್ತು. ಮೊದಲ ಬಾರಿ ಸೆಮಿಫೈನಲ್ ಪ್ರವೇಶಿಸಿ ಇತಿಹಾಸ ಬರೆದಿತ್ತು.

ಸ್ಪರ್ಧಾ ಸಮಯ

ಸಮಯ	ಸ್ಪರ್ಧೆ
ಅಥ್ಲೆಟಿಕ್ಸ್	
ಬೆಳಿಗ್ಗೆ 3.30	ಪುರುಷರ ಮ್ಯಾರಥಾನ್ ಫೈನಲ್
ಬ್ಯಾಸ್ಕೆಟ್‌ಬಾಲ್	
ಬೆಳಿಗ್ಗೆ 8 ಗಂಟೆ	ಮಹಿಳೆಯರ ಫೈನಲ್ ಪಂದ್ಯ
ಬಾಕ್ಸಿಂಗ್	
ಬೆಳಿಗ್ಗೆ 10.30	ಮಹಿಳೆಯರ ಲೈಟ್‌ವೇಟ್ ಫೈನಲ್
ಬೆಳಿಗ್ಗೆ 10.45	ಪುರುಷರ ಲೈಟ್‌ವೇಟ್ ಫೈನಲ್
ಬೆಳಿಗ್ಗೆ 11.15	ಮಹಿಳೆಯರ ಮಿಡ್ಲ್‌ವೇಟ್ ಫೈನಲ್
ಬೆಳಿಗ್ಗೆ 11.45	ಪುರುಷರ ಸೂಪರ್ ಹೆವಿವೇಟ್ ಫೈನಲ್
ಟ್ರ್ಯಾಕ್ ಸೈಕ್ಲಿಂಗ್	
ಬೆಳಿಗ್ಗೆ 8.15	ಮಹಿಳೆಯರ ಸ್ಪ್ರಿಂಟ್ ಫೈನಲ್ ರೇಸ್ 2
ಬೆಳಿಗ್ಗೆ 8.30	ಪುರುಷರ ಕಿಯರಿನ್ ಫೈನಲ್
ಬೆಳಿಗ್ಗೆ 8.35	ಮಹಿಳೆಯರ ಸ್ಪ್ರಿಂಟ್ ಫೈನಲ್ಸ್– ನಿರ್ಣಾಯಕ
ಬೆಳಿಗ್ಗೆ 8.55	ಮಹಿಳೆಯರ ಒಮ್ನಿಯಮ್ ಪಾಯಿಂಟ್ಸ್ ರೇಸ್ 4/4
ರಿಧಮಿಕ್ ಜಿಮ್ನಾಸ್ಟಿಕ್ಸ್	
ಬೆಳಿಗ್ಗೆ 7.30	ಗುಂಪು ವಿಭಾಗದ ಆಲ್‌ರೌಂಡ್ ಫೈನಲ್ ರೊಟೇಶನ್ 2
ಹ್ಯಾಂಡ್‌ಬಾಲ್	
ಬೆಳಿಗ್ಗೆ 11.30	ಮಹಿಳೆಯರ ಫೈನಲ್ ಪಂದ್ಯ
ವಾಲಿಬಾಲ್	
ಬೆಳಿಗ್ಗೆ 10 ಗಂಟೆ	ಮಹಿಳೆಯರ ಫೈನಲ್ ಪಂದ್ಯ
ವಾಟರ್‌ಪೋಲೊ	
ಮಧ್ಯಾಹ್ನ 1 ಗಂಟೆ	ಪುರುಷರ ಫೈನಲ್ ಪಂದ್ಯ

(ಆವರಣದಲ್ಲಿ ಭಾರತದ ಸ್ಪರ್ಧಿಗಳು)

ಭಾರತೀಯ ಕಾಲಮಾನ | ಲೈವ್ ಸೋನಿ ನೆಟ್‌ವರ್ಕ್

ವಾಲಿಬಾಲ್: ಫ್ರಾನ್ಸ್ ಪ್ರಭುತ್ವ

ಟೋಕಿಯೊ: ಒಲಿಂಪಿಕ್ಸ್‌ನ ಪುರುಷರ ವಿಭಾಗದ ವಾಲಿಬಾಲ್ ಸ್ಪರ್ಧೆಯಲ್ಲಿ ಫ್ರಾನ್ಸ್ ತಂಡವು ಪ್ರಭುತ್ವ ಸಾಧಿಸಿತು. ಫೈನಲ್‌ನಲ್ಲಿ ಫ್ರಾನ್ಸ್ 3–2 ಸೆಟ್‌ಗಳಿಂದ ರಷ್ಯಾ ಒಲಿಂಪಿಕ್ ಸಮಿತಿಯನ್ನು ಸೋಲಿಸಿತು.ಕಂಚಿನ ಪದಕಕ್ಕಾಗಿ ನಡೆದ ಹಣಾಹಣಿಯಲ್ಲಿ ಅರ್ಜೆಂಟೀನಾ ತಂಡವು 3–2ರಿಂದ ಬ್ರೆಜಿಲ್ ತಂಡವನ್ನು ಪರಾಭವಗೊಳಿಸಿತು.

ಗಾಲ್ಫ್: ಚಿನ್ನ ಗೆದ್ದ ಕೊರ್ಡಾ; ಕನ್ನಡದ ಹುಡುಗಿಗೆ 4ನೇ ಸ್ಥಾನ

ಕವಾಗೆ, ಜಪಾನ್ (ಎಎಫ್‌ಪಿ): ಹವಾಮಾನ ವೈಪರೀತ್ಯದಿಂದಾಗಿ ಬೀಸಿದ ಪ್ರಬಲ ಗಾಳಿಯಿಂದಾಗಿ ಪಂದ್ಯಕ್ಕೆ ಅಡ್ಡಿಯಾದರೂ ಅಮೆರಿಕದ ನೆಲ್ಲಿ ಕೊರ್ಡಾ ಅವರ ಚಿನ್ನದ ಕನಸಿನ ಓಟಕ್ಕೆ ಭಂಗವಾಗಲಿಲ್ಲ. ಒಲಿಂಪಿಕ್ಸ್ ಗಾಲ್ಫ್‌ನಲ್ಲಿ ಆರಂಭದಿಂದ ಕೊನೆಯ ವರೆಗೂ ಮುನ್ನಡೆ ಕಾಯ್ದುಕೊಂಡ ಅವರು ಚಾಂಪಿಯನ್ ಆಗಿ ಹೊರಹೊಮ್ಮಿದರು. ಶುಕ್ರವಾರ ಸಂಜೆಯ ವರೆಗೂ ಪದಕದ ಭರವಸೆ ಮೂಡಿಸಿದ್ದ ಭಾರತದ ಅದಿತಿ ಅಶೋಕ್ ನಿರಾಸೆ ಅನುಭವಿಸಿದರು.

ವಿಶ್ವದ ಒಂದನೇ ಕ್ರಮಾಂಕದ ಆಟಗಾರ್ತಿ ನೆಲ್ಲಿ ಕೊರ್ಡಾ ಅವರು ನ್ಯೂಜಿಲೆಂಡ್‌ನ ಲಿಡಿಯಾ ಕೊ ಮತ್ತು ಜಪಾನ್‌ನ ಇನಾಮಿ ಮೊನೆ ಅವರಿಗಿಂತ ಒಂದು ಸ್ಟ್ರೋಕ್ ಮುನ್ನಡೆ ಸಾಧಿಸಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. ಬೆಳ್ಳಿ ಪದಕಕ್ಕಾಗಿ ನಡೆದ ಪ್ಲೇ ಆಫ್ ಹಣಾಹಣಿಯಲ್ಲಿ ರಿಯೊ ಒಲಿಂಪಿಕ್ಸ್‌ನ ಬೆಳ್ಳಿ ಪದಕ ವಿಜೇತೆ ಲಿಡಿಯಾ ಕೊ ಅವರು ಪಾರ್ ಗಳಿಸುವ ಯತ್ನದಲ್ಲಿ 10 ಅಡಿ ದೂರದ ಪುಟ್‌ನಲ್ಲಿ ವೈಫಲ್ಯ ಕಂಡರು. ಹೀಗಾಗಿ ಇನಾಮಿ ಬೆಳ್ಳಿ ಗೆದ್ದು ಒಲಿಂಪಿಕ್ಸ್ ಗಾಲ್ಫ್‌ನಲ್ಲಿ ಜಪಾನ್‌ಗೆ ಮೊದಲ ಪದಕ ಗೆದ್ದುಕೊಟ್ಟರು.

ನೆಲ್ಲಿ ಕೊರ್ಡಾ ಅವರ ಸುಗಮ ಓಟಕ್ಕೆ ಗಾಳಿ ಕೆಲ ಹೊತ್ತು ಅಡ್ಡಿಯಾಯಿತು. ಒಂದು ತಾಸು ಆಟವನ್ನು ಸ್ಥಗಿತಗೊಳಿಸಲಾಯಿತು. ಪಂದ್ಯ ಪುನರಾರಂಭಗೊಂಡಾಗ ಜಪಾನ್ ಆಟಗಾರ್ತಿಯಿಂದ ಭಾರಿ ಪೈಪೋಟಿ ಎದುರಾಯಿತು. ನ್ಯೂಜಿಲೆಂಡ್ ಗಾಲ್ಫರ್ ಕೂಡ ಕಣದಲ್ಲಿ ಮಿಂಚಿದರು. ಅಗ್ರ ಸ್ಥಾನ ಟೈಗೊಂಡ ಕಾರಣ ಚಿನ್ನದ ಪದಕಕ್ಕಾಗಿ ಪ್ಲೇ ಆಫ್ ಹಣಾಹಣಿ ನಡೆಯಿತು.



ನೆಲ್ಲಿ ಕೊರ್ಡಾ ಸಂಭ್ರಮ –ಎಎಫ್‌ಪಿ ಚಿತ್ರ

ಸ್ಪರ್ಧೆಯಲ್ಲಿ ಅಗ್ರ 5 ಸ್ಥಾನ ಗಳಿಸಿದವರು

ಗಾಲ್ಫರ್	ದೇಶ	1ನೇ ಸುತ್ತು	2ನೇ ಸುತ್ತು	3ನೇ ಸುತ್ತು	4ನೇ ಸುತ್ತು	ಒಟ್ಟು
ನೆಲ್ಲಿ ಕೊರ್ಡಾ	ಅಮೆರಿಕ	67	62	69	69	267
ಇನಾಮಿ ಮೊನೆ	ಜಪಾನ್	70	65	68	65	268
ಲಿಡಿಯಾ ಕೊ	ನ್ಯೂಜಿಲೆಂಡ್	70	67	66	65	268
ಅದಿತಿ ಅಶೋಕ್	ಭಾರತ	67	66	68	68	269
ಹನಾ ಗ್ರೀನ್	ಆಸ್ಟ್ರೇಲಿಯಾ	71	65	67	68	271
ಕ್ರಿಸ್ಟಿನ್ ಎಮಿಲಿ	ಡೆನ್ಮಾರ್ಕ್	70	63	70	68	271

ಬ್ಯಾಸ್ಕೆಟ್‌ಬಾಲ್‌ನಲ್ಲಿ ಚಿನ್ನ ಗೆದ್ದ ಅಮೆರಿಕ ಆಟಗಾರರು ಸಂಭ್ರಮಿಸಿದರು –ರಾಯಿಟರ್ಸ್ ಚಿತ್ರ

ಭಾರತದಲ್ಲಿ ಗಾಲ್ಫ್ ಬೆಳವಣಿಗೆಗೆ ಅದಿತಿ ಮುನ್ನುಡಿ

ಬೆಂಗಳೂರು: ಶುಕ್ರವಾರ ರಾತ್ರಿ ನಾಟಿಂಗ್‌ಹ್ಯಾಮ್ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ ತಂಡ ಮೊದಲ ಇನಿಂಗ್ಸ್ ಮುನ್ನಡೆ ಪಡೆದಿದ್ದನ್ನು ನೋಡುತ್ತ ಕುಳಿತಿದ್ದೆ. ಪಕ್ಕದಮನೆಯವರು ಬಂದು ಯಾರು ಈ ಅದಿತಿ ಅಶೋಕ್? ಬೆಂಗಳೂರಿನ ಹುಡುಗಿಯಂತೆ? ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಬಹುದಂತೆ? ಗಾಲ್ಫ್ ಬಗ್ಗೆ ನಿಮಗೇನಾದರೂ ಗೊತ್ತಾ? ಎಂದು ಕೇಳಿದರು.

ಅವರ ಮಾತು ಕೇಳಿ ಮುಗಿಲು ಮೂರೇ ಗೇಣು ಉಳಿದಿತ್ತು ನನಗೆ. ಭಾರತದಲ್ಲಿ ಗಾಲ್ಫ್ ಕ್ರೀಡೆ ಜನಪ್ರಿಯವಾಗಬೇಕೆಂಬ ಬಹುದಿನಗಳ ಆಸೆಗೆ ರೆಕ್ಕೆ ಮೂಡಿದ್ದವು. ಇದಕ್ಕೆ ಕಾರಣವಾದ ಅದಿತಿಗೆ ಧನ್ಯವಾದಗಳು. ಒಲಿಂಪಿಕ್ ವೇದಿಕೆಯಲ್ಲಿ ಅದಿತಿ ಈ ಸಾಧನೆ ಮಾಡಿದ್ದರಿಂದ ಇಷ್ಟೆಲ್ಲ ಜನಾನುರಾಗ ದೊರೆಯುತ್ತಿರುವುದು ಸತ್ಯ.

ಸುಮಾರು ಒಂದು ದಶಕದ ಹಿಂದೆ, ಜೂನಿಯರ್ ಸ್ಪರ್ಧೆಗಳಲ್ಲಿ ಉತ್ತಮ ಸಾಮರ್ಥ್ಯ ತೋರುತ್ತಿದ್ದ ಅದಿತಿಯ ಬಗ್ಗೆ ಆಗಾಗ ಕೇಳುತ್ತಿದ್ದೆ. ಆದರೆ 2013 ರಲ್ಲಿ ಅವರು ಏಷ್ಯಾ ಪೆಸಿಫಿಕ್ ಜೂನಿಯರ್ ಚಾಂಪಿಯನ್‌ಷಿಪ್ ಗೆದ್ದಾಗ ಮೊದಲ ಬಾರಿಗೆ ನೋಡಿದ್ದೆ. ಅವತ್ತು ರಾಯಲ್ ಕಲ್ಕತ್ತಾ ಗಾಲ್ಫ್ ಕೋರ್ಸ್‌ನಲ್ಲಿ ಪ್ಲೇ-ಆಫ್‌ನಲ್ಲಿ ತೈಪೆಯ ಪ್ರತಿಭಾವಂತ ಮಿನ್-ಜೌ ಚೆನ್ ಅವರನ್ನು ಮೀರಿ ನಿಂತಿದ್ದರು. ಅದಾಗಿ ಎಂಟು ವರ್ಷಗಳಲ್ಲಿ ಅದಿತಿ ಏರಿರುವ ಎತ್ತರ ಅಮೋಘವಾದದ್ದು.

ವಾಸ್ತವವಾಗಿ ಅದಿತಿ ಗಾಲ್ಫ್ ಆರಂಭಿಸಿದಾಗ ಈ ಆಟವಿನ್ನೂ ಒಲಿಂಪಿಕ್ ಕ್ರೀಡೆಯಾಗಿರಲಿಲ್ಲ. 2016ರಲ್ಲಿ ರಿಯೊ ಡಿಜನೈರೊದಲ್ಲಿ ಸೇರ್ಪಡೆಯಾದಾಗ ಅದಿತಿ ಆಯ್ಕೆಯಾಗಿದ್ದರು. ಈಗ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಪದಕ ಗಳಿಕೆಯ ಹೊಸ್ತಿಲಿಗೆ ಬಂದು ನಿಂತರು. ಆದರೆ ಸ್ವಲ್ಪ ಅಂತರದಿಂದ ಬೆಳ್ಳಿಯ ಪದಕ ಕೈತಪ್ಪಿತು. ಆದರೆ, ಅದಿತಿ ಪಡೆದ ನಾಲ್ಕನೇ ಸ್ಥಾನವು ಭಾರತವನ್ನು ವಿಶ್ವದ ಗಾಲ್ಫ್ ಕ್ರೀಡೆಯ ನಕ್ಷೆಯಲ್ಲಿ ಗುರುತಿಸುವಂತೆ ಮಾಡಿತು. ಅಲ್ಲದೇ ಯುವಸಮೂಹವನ್ನು ಈ ಕ್ರೀಡೆಯತ್ತ ಸೆಳೆಯುವ ಚುಂಬಕ ಶಕ್ತಿಯಾಗಲಿದೆ. ಅದಿತಿಯ ಸಾಧನೆಯ ಹಿಂದಿನ ರೂವಾರಿಗಳು ಅವರ ತಂದೆ, ಅಶೋಕ್ ಮತ್ತು ತಾಯಿ ಮಹೇಶ್ವರಿ. ಅದಿತಿ ಐದನೇ ವಯಸ್ಸಿನಲ್ಲಿಯೇ ಈ ಕ್ರೀಡೆಯತ್ತ ಆಕರ್ಷಿತರಾಗಿದ್ದರು. ಅದನ್ನು ಗುರುತಿಸಿದ ತಂದೆ ತಾಯಿ, ಸರ್ವರೀತಿಯಲ್ಲಿಯೂ ಬೆಂಬಲಿಸಿದರು. ಅದರ ಫಲವಾಗಿ ತನ್ನ ಹತ್ತನೇ ವಯಸ್ಸಿನಿಂದಲೇ ಪ್ರಶಸ್ತಿಗಳನ್ನು ಜಯಿಸುವ ಮಟ್ಟಕ್ಕೆ ಅದಿತಿ ಬೆಳೆದರು. ಎಲ್‌ಇಟಿ ಕಾರ್ಡ್ ಗಳಿಸಿದ ಅತ್ಯಂತ ಕಿರಿಯ ಭಾರತೀಯ ಆಟಗಾರ್ತಿ ಶ್ರೇಯವೂ ಒಲಿಯಿತು ಐದು ಅಂತರರಾಷ್ಟ್ರೀಯ ಪ್ರಶಸ್ತಿ ಗಳಿಸಿದ್ದು ಅವರು ದೊಡ್ಡ ಸಾಧನೆಯೇ ಸರಿ.

ಬೆಂಗಳೂರಿನ ಅದಿತಿಗೆ ಈಗ 23 ವರ್ಷ. ಪ್ರಸ್ತುತ 200 ಕ್ಕಿಂತ ಕಡಿಮೆ ಶ್ರೇಯಾಂಕದಲ್ಲಿದ್ದಾರೆ. ಒಲಿಂಪಿಕ್ಸ್‌ನಲ್ಲಿ ವಿಶ್ವದ ಅಗ್ರ ಶ್ರೇಯಾಂಕದ ಗಾಲ್ಫ್ ಆಟಗಾರ್ತಿಯರ ವಿರುದ್ಧ ಸ್ಪರ್ಧಿಸಿದ್ದರು. ‘ಕಪ್ಪುಕುದುರೆ’ ಹಣೆಪಟ್ಟಿಯೊಂದಿಗೆ ಕಣಕ್ಕಿಳಿದಿದ್ದ ಅವರು ಕಳೆದ ನಾಲ್ಕು ದಿನಗಳಲ್ಲಿ ಅದ್ಭುತವಾದ ಗಾಲ್ಫ್ ಆಡಿದರು.

ವಿಶ್ವದ ಅಗ್ರಶ್ರೇಯಾಂಕದ ನೆಲ್ಲಿ ಕೊರ್ಡಾ ಚಿನ್ನದ ಪದಕ ಜಯಿಸಿದ ಈ ಸ್ಪರ್ಧೆಯಲ್ಲಿ ಶುಕ್ರವಾರ ಸಂಜೆಯ ಹೊತ್ತಿಗೆ ಎರಡನೇ ಸ್ಥಾನ ಪಡೆಯುವ ನಿರೀಕ್ಷೆ ಮೂಡಿಸಿದ್ದು ಅದಿತಿ. ಎರಡನೇ ಹಂತದಲ್ಲಿ ಅದಿತಿಯ ಏಕೈಕ ನ್ಯೂನತೆಯೆಂದರೆ ಡ್ರೈವ್‌ಗಳು, ಅದು ತನ್ನ ಎದುರಾಳಿಗಳಿಗಿಂತ ದುರ್ಬಲವಾಗಿದ್ದು ದುಬಾರಿಯಾಯಿತು. ಆದರೂ ಶಾರ್ಟ್‌ಗೇಮ್, ಸ್ಟ್ರೋಕ್ ಪ್ಲೇ ಮತ್ತು ಪುಟ್ಟಿಂಗ್‌ಗಳಲ್ಲಿ ವಿಶೇಷ ಸಾಧನೆ ತೋರಿದರು.

ಈ ಬಾರಿ ಅದಿತಿ ಪದಕ ಜಯಿಸದೇ ಇರಬಹುದು. ಆದರೆ, ಅವರ ನಾಲ್ಕನೇ ಸ್ಥಾನ ಮತ್ತು ಕಳೆದ ನಾಲ್ಕಾರು ದಿನಗಳಲ್ಲಿ ತೋರಿದ ಪ್ರದರ್ಶನ ಬಹಳ ಮಹತ್ವದ್ದು. ವಿಶ್ವದ ಪ್ರಮುಖ ಟೂರ್‌ಗಳಲ್ಲಿ ಅವರು ಅಗ್ರ 10ರಲ್ಲಿ ಸ್ಥಾನ ಪಡೆಯಲು ಇದು ಸಹಕಾರಿ. ಈ ಕ್ರೀಡೆಯಲ್ಲಿ ವೃತ್ತಿಪರ ಮತ್ತು ಹವ್ಯಾಸಕ್ಕಾಗಿ ತೊಡಗಿಕೊಂಡಿರುವ ಬಹುತೇಕ ಎಲ್ಲ ವರ್ಗದವರ ಗಮನವನ್ನು ಸೆಳೆಯುವಲ್ಲಿ ಅದಿತಿ ಸಫಲರಾಗಿದ್ದಾರೆ. ಅದರಿಂದಾಗಿ ಭಾರತದಲ್ಲಿ ಈಗ ಗಾಲ್ಫ್ ಜನಾಕರ್ಷಣೆಯ ಕ್ರೀಡೆಯಾಗಿ ಬೆಳೆಯುವ ಸಾಧ್ಯತೆಗಳನ್ನು ತಳ್ಳಿಹಾಕಲಾಗದು.

(–**ಪಾರ್ಥ್ ಸಿಂಗ್** ಹವ್ಯಾಸಿ ಕ್ರೀಡಾ ಲೇಖಕ)

ಅರಗಿಸಿಕೊಳ್ಳುವುದು ಕಷ್ಟ: ಅದಿತಿ

ಆರಂಭದಿಂದ ಉತ್ತಮ ಸಾಮರ್ಥ್ಯ ತೋರಿದ್ದರೂ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಕುಸಿದ ಸಂಕಟವನ್ನು ಅರಗಿಸಿಕೊಳ್ಳಲು ಕಷ್ಟವಾಗುತ್ತಿದೆ ಎಂದು ಅದಿತಿ ಅಶೋಕ್ ಅಭಿಪ್ರಾಯಪಟ್ಟರು. ಮೂರನೇ ದಿನವಾದ ಶುಕ್ರವಾರ ಎರಡನೇ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದ ಅದಿತಿ ಶನಿವಾರ ಅನಿರೀಕ್ಷಿತ ಹಿನ್ನಡೆ ಕಂಡರು.

‘ನನ್ನಿಂದಾದ ಎಲ್ಲ ಬಗೆಯ ಪ್ರಯತ್ನವನ್ನೂ ಮಾಡಿದೆ. ಕೊನೆಯಲ್ಲಿ ಅತ್ಯುತ್ತಮವಾಗಿ ಆಡಿದೆ. ಬೇರೆ ಯಾವುದೇ ಟೂರ್ನಿಯಲ್ಲಾದರೆ ಎರಡು ಅಥವಾ ನಾಲ್ಕನೇ ಸ್ಥಾನ ಗಳಿಸಿದರೆ ಹೆಚ್ಚು ಬೇಸ-ರವಾಗುತ್ತಿರಲಿಲ್ಲ. ಆದರೆ ಇದು ಒಲಿಂಪಿಕ್ಸ್. ಇಲ್ಲಿ ಹೀಗೆ ಆದದ್ದು ದುಃಖದ ವಿಷಯ’ ಎಂದು ಅವರು ಹೇಳಿದರು.

‘ನಾನು ಇಲ್ಲಿ ತೋರಿದ ಪ್ರದರ್ಶನದಿಂದಾಗಿ ದೇಶದಲ್ಲಿ ಗಾಲ್ಫ್‌ಗೆ ನವಚೇತನ ಸಿಗುವ ನಿರೀಕ್ಷೆ ಇದೆ. ಒಲಿಂಪಿಕ್ಸ್‌ನಂಥ ಕೂಟದಲ್ಲಿ ಪಾಲ್ಗೊಳ್ಳಲು ಸಾಧ್ಯ ಎಂದು ಕನಸಿನಲ್ಲೂ ಅನಿಸಿರಲಿಲ್ಲ.

ಅದಿತಿ ಅಶೋಕ್ –ರಾಯಿಟರ್ಸ್ ಚಿತ್ರ

ಚಿನ್ನದ ಹೊಳಪು ಮೂಡಿಸಿದ ಬ್ರೆಜಿಲ್

ಟೋಕಿಯೊ: ಬ್ರೆಜಿಲ್ ಪುರುಷರ ತಂಡದವರು ಟೋಕಿಯೊದ ಫುಟ್‌ಬಾಲ್ ಅಂಗಳದಲ್ಲಿ ಚಿನ್ನದ ಹೊಳಪು ಮೂಡಿಸಿದರು.

ಫೈನಲ್ ಹಣಾಹಣಿಯಲ್ಲಿ ಮಿಂಚಿದ ಈ ತಂಡ 2–1 ಗೋಲುಗಳಿಂದ ಸ್ಪೇನ್ ವಿರುದ್ಧ ಗೆದ್ದಿತು.

ಮೊದಲಾರ್ಧದ ಹೆಚ್ಚುವರಿ ಅವಧಿಯಲ್ಲಿ (45 + 2) ಬ್ರೆಜಿಲ್ ಖಾತೆ ತೆರೆಯಿತು. ಮ್ಯಾಥ್ಯೂಸ್ ಕುನ್ಹಾ ಕಾಲ್ಚಳಕ ತೋರಿದರು. 108ನೇ ನಿಮಿಷದಲ್ಲಿ ಮಾಲ್ಕಂ ಚೆಂಡನ್ನು ಗುರಿ ಸೇರಿಸಿದರು.

ಪುರುಷರ ವಿಭಾಗದ ಫುಟ್‌ಬಾಲ್‌ನಲ್ಲಿ ಚಿನ್ನದ ಪದಕ ಜಯಿಸಿದ ಬ್ರೆಜಿಲ್ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಬಾಕ್ಸಿಂಗ್: ಸುರ್ಮೆನೆಲಿಗೆ ಚಿನ್ನದ ಮಾಲೆ

ಟೋಕಿಯೊ (ಎಎಫ್‌ಪಿ/ರಾಯಿಟರ್ಸ್): ಟರ್ಕಿಯ ಬುಸೆನಾಜ್ ಸುರ್ಮೆನೆಲಿ ಹಾಗೂ ಬಲ್ಗೇರಿಯಾದ ಸ್ಟೋಯಿಕಾ ಕ್ರಾಸ್ತೆವಾ ಅವರು ತಮ್ಮ ದೇಶಗಳಿಗೆ ಮೊದಲ ಬಾರಿ ಮಹಿಳಾ ವಿಭಾಗದಲ್ಲಿ ಒಲಿಂಪಿಕ್ಸ್ ಚಿನ್ನದ ಪದಕ ಕಳಶ ತೊಡಿಸಿದರು.

35 ವರ್ಷದ ಕ್ರಾಸ್ತೆವಾ ಇಲ್ಲಿ ನಡೆದ ಫ್ಲೈ ವೇಟ್ ವಿಭಾಗದ ಫೈನಲ್ ಬೌಟ್‌ನಲ್ಲಿ ಟರ್ಕಿಯ ಬುಸೆನಾಜ್ ಕಾಕಿರೊಗ್ಲು ಅವರನ್ನು 5–0ಯಿಂದ ಸುಲಭವಾಗಿ ಮಣಿಸಿದರು. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕ್ರಾಸ್ತೆವಾ ಐದನೇ ಸ್ಥಾನ ಗಳಿಸಿದ್ದರು.

ವೆಲ್ಟರ್‌ವೇಟ್ ವಿಭಾಗದ ಫೈನಲ್ ಹಣಾಹಣಿಯಲ್ಲಿ 23 ವರ್ಷದ ಸುರ್ಮೆನೆಲಿ 3–0ಯಿಂದ ಚೀನಾದ ಗು ಹಾಂಗ್ ಅವರನ್ನು ಪರಾಭವಗೊಳಿಸಿದರು. ಆರಂಭದಲ್ಲಿ ಗು ಹಾಂಗ್ ಮುನ್ನಡೆಯಲ್ಲಿದ್ದರು. ಆದರೆ ತಿರುಗೇಟು ನೀಡಿದ ಟರ್ಕಿಯ ತಾರೆ ಬಲಶಾಲಿ ಪಂಚ್‌ಗಳ ಮೂಲಕ ಎದುರಾಳಿಯನ್ನು ತಬ್ಬಿಬ್ಬುಗೊಳಿಸಿದರು. ಗೆಲುವು ಒಲಿಸಿಕೊಂಡರು.

ಸೆಮಿಫೈನಲ್ ಬೌಟ್‌ನಲ್ಲಿ ಸುರ್ಮೆನೆಲಿ ಅವರು ಭಾರತದ ಲವ್ಲಿನಾ ಬೊರ್ಗೊಹೈನ್ ವಿರುದ್ಧ ಗೆಲುವು ಸಾಧಿಸಿದ್ದರು.

2012ರ ಕೂಟದಲ್ಲಿ ಮಹಿಳಾ ಬಾಕ್ಸಿಂಗ್‌ನ್ನು ಪರಿಚಯಿಸಲಾಯಿತು. ಆಗ ಕೇವಲ ಮೂರು ತೂಕ ವಿಭಾಗಗಳಲ್ಲಿ ಸ್ಪರ್ಧೆಯಿತ್ತು. ಟೋಕಿಯೊದಲ್ಲಿ ಐದು ವಿಭಾಗಗಳಲ್ಲಿ ಸ್ಪರ್ಧೆಗಳನ್ನು ನಡೆಸಲಾಯಿತು.

ಟರ್ಕಿಯ ಬುಸಾನೆಜ್ ಸುರ್ಮೆನೆಲಿ (ಎಡ) ಅವರು ಚೀನಾದ ಗು ಹಾಂಗ್‌ಗೆ ಪಂಚ್ ನೀಡಿದ ಪರಿ– ಎಎಫ್‌ಪಿ ಚಿತ್ರ

ಮಿಂಚಿದ ಸೌಸಾ, ಗೆಲಾಲ್

ಬ್ರೆಜಿಲ್‌ನ ಹರ್ಬರ್ಟ್ ಸೌಸಾ ಹಾಗೂ ಬ್ರಿಟನ್‌ನ ಗೆಲಾಲ್ ಯಫಾಯಿ ಅವರು ಕ್ರಮವಾಗಿ ಪುರುಷರ ಮಿಡ್ಲ್‌ವೇಟ್ ಮತ್ತು ಫ್ಲೈವೇಟ್ ವಿಭಾಗದಲ್ಲಿ ಚಿನ್ನದ ಪದಕ ಕೊರಳಿಗೇರಿಸಿಕೊಂಡರು.

ರೋಚಕ ಫೈನಲ್ ಬೌಟ್‌ನಲ್ಲಿ ಸೌಸಾ, ಉಕ್ರೇನ್‌ನ ಅಲೆಕ್ಸಾಂಡರ್ ಕ್ಯಾಜಿನಿಯಾಕ್ ಅವರನ್ನು ಪರಾಭವಗೊಳಿಸಿದರು. ಮೂರು ಸುತ್ತುಗಳ ನಾಕೌಟ್‌ನಲ್ಲಿ ಸೌಸಾ ಗೆದ್ದು ಬೀಗಿದರು.

ಗೆಲಾಲ್ ಯಫಾಯಿ ಟೋಕಿಯೊ ಒಲಿಂಪಿಕ್ಸ್‌ನ ಬಾಕ್ಸಿಂಗ್ ವಿಭಾಗದಲ್ಲಿ ತಮ್ಮ ದೇಶಕ್ಕೆ ಮೊದಲ ಚಿನ್ನದ ಪದಕ ಗೆದ್ದುಕೊಟ್ಟರು. ಫ್ಲೈವೇಟ್ ವಿಭಾಗದ ಫೈನಲ್‌ನಲ್ಲಿ ಅವರು ಫಿಲಿಪ್ಪೀನ್ಸ್‌ನ ಕಾರ್ಲೊ ಪಾಲಮ್ ಅವರ ಮೇಲೆ ಸಂಪೂರ್ಣ ಪಾರಮ್ಯ ಮೆರೆದರು. ನಿಖರ ಪಂಚ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದರು. 4–1ರಿಂದ ಅವರಿಗೆ ಜಯ ಒಲಿಯಿತು.

ಮಹಿಳೆಯರ ಬಾಕ್ಸಿಂಗ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ಭಾರತದ ಲವ್ಲಿನಾ ಬೊರ್ಗೊಹೈನ್ ಶನಿವಾರ ಪದಕದೊಂದಿಗೆ ಸಂಭ್ರಮಿಸಿದರು

ಹರ್ಬರ್ಟ್ ಸೌಸಾ– ಎಎಫ್‌ಪಿ ಚಿತ್ರ

ಸೈಕ್ಲಿಂಗ್: ಡೆನ್ಮಾರ್ಕ್ ಪಾರಮ್ಯ

ಶಿಜೊಕಾ, ಜಪಾನ್ (ಎಎಫ್‌ಪಿ): ಅದ್ಭುತ ಸಾಮರ್ಥ್ಯ ತೋರಿದ ಡೆನ್ಮಾರ್ಕ್ ಸ್ಪರ್ಧಿಗಳು ಬ್ರಿಟನ್ ಹಾಗೂ ಫ್ರಾನ್ಸ್ ತಂಡಗಳನ್ನು ಹಿಂದಿಕ್ಕಿ ಒಲಿಂಪಿಕ್ಸ್‌ನ ಪುರುಷರ ಮ್ಯಾಡಿಸನ್ ಸೈಕ್ಲಿಂಗ್ ವಿಭಾಗದ ಚಿನ್ನ ಮುಡಿಗೇರಿಸಿ-ಕೊಂಡರು.

ಇಲ್ಲಿ ಇಜು ವೆಲೊಡ್ರೋಮ್ ಟ್ರ್ಯಾಕ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಡೆನ್ಮಾರ್ಕ್‌ನ ಮೈಕೆಲ್ ಮಾರ್ಕೊವ್ ಮತ್ತು ಲಾಸ್ಸೆ ನಾರ್ಮನ್ ಹನ್ಸೆನ್ (ಒಟ್ಟು 43 ಪಾಯಿಂಟ್ಸ್) ಪಾರಮ್ಯ ಮೆರೆದರು. ಮೂರು ಪಾಯಿಂಟ್‌ಗಳ ಅಂತರದಿಂದ ಬ್ರಿಟನ್‌ನ ಎಥನ್ ಹೈಟರ್ ಮತ್ತು ಮ್ಯಾಥ್ಯೂ ವಾಲ್ಸ್ ಅವರನ್ನು ಪರಾಭವ-ಗೊಳಿಸಿದರು.

ಕಂಚಿನ ಪದಕವು ಫ್ರಾನ್ಸ್ ಜೋಡಿ ಬೆಂಜಮಿನ್ ಥಾಮಸ್ ಮತ್ತು ಡೊನಾವನ್ ಗ್ರೊಂಡಿನ್ ಅವರ ಪಾಲಾಯಿತು. ಬ್ರಿಟನ್ ಹಾಗೂ ಫ್ರೆಂಚ್ ಜೋಡಿ ತಲಾ 40 ಪಾಯಿಂಟ್ಸ್ ಕಲೆಹಾಕಿತು. ಆದರೆ ಕೊನೆಯ ಸ್ಪ್ರಿಂಟ್‌ನಲ್ಲಿ ಗೆಲುವು ಸಾಧಿಸಿದ ಕಾರಣ ಬ್ರಿಟನ್ ಸೈಕ್ಲಿಸ್ಟ್‌ಗಳು ಎರಡನೇ ಸ್ಥಾನ ಗಳಿಸಿದರು. ಇಲ್ಲಿ ಅಗ್ರಸ್ಥಾನ ಗಳಿಸುವ ಮೂಲಕ ಹನ್ಸೆನ್ ಅವರು ಐದು ಒಲಿಂಪಿಕ್ಸ್ ಪದಕಗಳನ್ನು ಗೆದ್ದ ಡೆನ್ಮಾರ್ಕ್‌ನ ನಾಲ್ಕನೇ ಅಥ್ಲೀಟ್ ಎನಿಸಿಕೊಂಡರು.

ಚಿನ್ನದ ಪದಕ ಗೆದ್ದ ಡೆನ್ಮಾರ್ಕ್‌ನ ಮೈಕೆಲ್ ಮಾರ್ಕೊವ್ (ಎಡ) ಮತ್ತು ಲಾಸ್ಸೆ ನಾರ್ಮನ್ ಹನ್ಸೆನ್– ಎಎಫ್‌ಪಿ ಚಿತ್ರ

ರಟ್ಟೆಯ ಕಸುವು ಚಿನ್ನದ ಚೆಲುವು



ನೀರಜ್ ಚೋಪ್ರಾ —ರಾಯಿಟರ್ಸ್ ಚಿತ್ರ

ಟೋಕಿಯೊ (ಎಎಫ್‌ಪಿ/ಪಿಟಿಐ): ಭಾರತಕ್ಕೆ ಒಲಿಂಪಿಕ್ಸ್‌ನ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಮೊದಲ ಚಿನ್ನ ಗಳಿಸಿಕೊಟ್ಟ ನೀರಜ್ ಚೋಪ್ರಾ ಮೊದಲ ಪ್ರಯತ್ನದಲ್ಲೇ 87 ಮೀಟರ್‌ಗಳಿಗೂ ದೂರ ಜಾವೆಲಿನ್ ಎಸೆದರು. ಅವರನ್ನು ದಾಟಿ ಮುಂದೆ ಸಾಗಲು ಪ್ರತಿಸ್ಪರ್ಧಿಗಳಿಗೆ ಸಾಧ್ಯವಾಗಲಿಲ್ಲ.

ಎರಡನೇ ಪ್ರಯತ್ನದಲ್ಲಿ ಇನ್ನಷ್ಟು ಸಾಧನೆ ಮಾಡಿದ ನೀರಜ್ ಚೋಪ್ರಾ ಅವರ ದೂರ ಮೂರನೇ ಯತ್ನದಲ್ಲಿ ಕೊಂಚ ಕಡಿಮೆಯಾಯಿತು.

ನಂತರದ ಎರಡು ಪ್ರಯತ್ನಗಳಲ್ಲಿ ವೈಫಲ್ಯ ಕಂಡರು. ಕೊನೆಯ ಪ್ರಯತ್ನದಲ್ಲಿ ಕನಿಷ್ಠ ದೂರ ಎಸೆದರೂ ಅಷ್ಟರಲ್ಲಿ ಉಳಿದವರೆಲ್ಲರೂ ಹಿನ್ನಡೆ ಅನುಭವಿಸಿದ್ದರು.

ಪದಕ ಗೆಲ್ಲುವ ನೆಚ್ಚಿನ ಕ್ರೀಡಾಪಟು ಎಂದೆನಿಸಿಕೊಂಡಿದ್ದ ಜರ್ಮನಿಯ ಜೊಹಾನ್ಸ್ ವೆಟರ್ ಅವರನ್ನು ಹಿಂದಿಕ್ಕಿದ ಜೆಕ್ ಗಣರಾಜ್ಯದ ಜಾಕುಬ್ ವಡ್ಲೆಜ್ ಮತ್ತು ವಿಟೆಜ್ಲವ್ ವೆಸೆಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು.

ವೆಟರ್ ಒಂಬತ್ತನೇ ಸ್ಥಾನಕ್ಕೆ ಕುಸಿದರೆ ಜರ್ಮನಿಯ ಮತ್ತೊಬ್ಬ ಅಥ್ಲೀಟ್ ಜುಲಿಯನ್ ವೆಬರ್ ನಾಲ್ಕನೇ ಸ್ಥಾನ ಗಳಿಸಿದರು.

ಹರಿಯಾಣದ ಪಾನಿಪತ್‌ನ ಖಾಂದ್ರ ಗ್ರಾಮದ ರೈತನ ಪುತ್ರನಾದ 23 ವರ್ಷದ ನೀರಜ್ ದೇಶಕ್ಕೆ ಟೋಕಿಯೊದಲ್ಲಿ ಏಳನೇ ಪದಕ ಗಳಿಸಿಕೊಟ್ಟರು. ಈ ಮೂಲಕ ಭಾರತದ ಗರಿಷ್ಠ ಸಾಧನೆಗೂ ಕಾರಣರಾದರು.

ಅರ್ಹತಾ ಸುತ್ತಿನಲ್ಲಿ 86.59 ಮೀಟರ್‌ಗಳ ಗರಿಷ್ಠ ಸಾಧನೆ ಮಾಡಿದ ನೀರಜ್ ಪದಕ ಗೆಲ್ಲುವ ನೆಚ್ಚಿನ ಎಸೆತಗಾರನಾಗಿಯೇ ಕಣಕ್ಕೆ ಇಳಿದಿದ್ದರು. ಈ ಋತುವಿನಲ್ಲಿ ಗರಿಷ್ಠ ಸಾಧನೆ ಮಾಡಿರುವ, ಏಳು ಬಾರಿ 90 ಮೀಟರ್‌ಗಳಿಗೂ ಹೆಚ್ಚು ದೂರ ಎಸೆದಿದ್ದ ವೆಟರ್ ಮೊದಲ ಮೂರು ಪ್ರಯತ್ನಗಳ ನಂತರ ಹೊರನಡೆದರು. ಅವರ ಗರಿಷ್ಠ ಸಾಮರ್ಥ್ಯ 82.52 ಆಗಿತ್ತು.

ನೀರಜ್ ಚೋಪ್ರಾ ಪದಕಗಳ ಸಾಧನೆ			
ಕ್ರೀಡಾಕೂಟ	ಸ್ಥಳ	ಇಸವಿ	ಪದಕ
ಕಾಮನ್ವೆಲ್ತ್	ಗೋಲ್ಡ್‌ಕೋಸ್ಟ್	2018	ಚಿನ್ನ
ಏಷ್ಯನ್‌ಗೇಮ್ಸ್	ಜಕಾರ್ತ	2018	ಚಿನ್ನ
ಏಷ್ಯನ್ ಚಾಂಪಿಯನ್‌ಷಿಪ್	ಭುವನೇಶ್ವರ	2017	ಚಿನ್ನ
ದಕ್ಷಿಣ ಏಷ್ಯಾಗೇಮ್ಸ್	ಗುವಾಹಟಿ	2016	ಚಿನ್ನ
ವಿಶ್ವ ಜೂ.ಚಾಂಪಿಯನ್‌ಷಿಪ್	ಬಿಡ್‌ಘೋಷ್	2016	ಚಿನ್ನ
ಏಷ್ಯನ್ ಜೂ.ಚಾಂಪಿಯನ್‌ಷಿಪ್	ಹೊ ಚಿ ಮಿನ್ ಸಿಟಿ	2016	ಬೆಳ್ಳಿ

ಹರಿಯಾಣ ಸರ್ಕಾರದಿಂದ ₹6 ಕೋಟಿ ಬಹುಮಾನ

ಹರಿಯಾಣ ಸರ್ಕಾರವು ನೀರಜ್ ಚೋಪ್ರಾ ಅವರಿಗೆ ₹ ಆರು ಕೋಟಿ ನೀಡಲಿದೆ ಎಂದು ಮುಖ್ಯಮಂತ್ರಿ ಎಂ.ಎಲ್. ಖಟ್ಟರ್ ತಿಳಿಸಿದ್ದಾರೆ. ರಾಜ್ಯದ ಪಂಚಕುಲದಲ್ಲಿ ತಲೆ ಎತ್ತಲಿರುವ ಅಥ್ಲೆಟಿಕ್ಸ್ ಕೇಂದ್ರಕ್ಕೆ ಚೋಪ್ರಾ ಅವರನ್ನು ಮುಖ್ಯಸ್ಥರನ್ನಾಗಿ ಮಾಡಲಾಗುವುದು ಎಂದೂ ಅವರು ವಿವರಿಸಿದ್ದಾರೆ.

ರಾಜ್ಯದ ನೀರಜ್ ಚೋಪ್ರಾ, ರವಿ ದಹಿಯಾ ಮತ್ತು ಬಜರಂಗ್ ಪೂನಿಯಾ ಅವರನ್ನು ಗೌರವಿಸುವ ಸಮಾರಂಭ ಆಗಸ್ಟ್ 13ರಂದು ಪಂಚಕುಲದಲ್ಲಿ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಪಂಜಾಬ್ ಸರ್ಕಾರವು ನೀರಜ್ ಅವರಿಗೆ ₹ 2 ಕೋಟಿ ಹಣ ನೀಡಲು ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಬಿಸಿಸಿಐನಿಂದ ಕೋಟಿ ಕೊಡುಗೆ

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕಗಳನ್ನು ಗೆದ್ದಿರುವ ದೇಶದ ಕ್ರೀಡಾ ಪಟುಗಳಿಗೆ ಹಣಕಾಸಿನ ಕೊಡುಗೆ ನೀಡಲಿದೆ. ₹ ಒಂದು ಕೋಟಿಯನ್ನು ನೀರಜ್ ಚೋಪ್ರಾಗೆ ಮೀಸಲಿಡಲಿದೆ. ಬೆಳ್ಳಿ ಪದಕಗಳನ್ನು ಗೆದ್ದಿರುವ ಮೀರಾಬಾಯಿ ಚಾನು ಮತ್ತು ರವಿ ದಹಿಯಾ ಅವರಿಗೆ ತಲಾ ₹ 50 ಲಕ್ಷ ನೀಡುವುದಾಗಿ ಮಂಡಳಿಯ ಕಾರ್ಯದರ್ಶಿ ಜಯ ಶಾ ಅವರು ಟ್ವೀಟ್ ಮೂಲಕ ತಿಳಿಸಿದ್ದಾರೆ. ಕಂಚಿನ ಪದಕ ಗಳಿಸಿರುವ ಕುಸ್ತಿಪಟು ಬಜರಂಗ್ ಪೂನಿಯಾ, ಬಾಕ್ಸರ್ ಲವ್ಲಿನಾ ಬೋರ್ಗೊಹೈನ್ ಮತ್ತು ಬ್ಯಾಡ್ಮಿಂಟನ್ ಪಟು ಪಿ.ವಿ.ಸಿಂಧು ಅವರಿಗೆ ತಲಾ ₹ 25 ಲಕ್ಷ, ಕಂಚಿನ ಪದಕ ಗೆದ್ದಿರುವ ಪುರುಷರ ಹಾಕಿ ತಂಡಕ್ಕೆ ₹ 1.25 ಕೋಟಿ ನೀಡಲು ನಿರ್ಧರಿಸಿರುವುದಾಗಿ ಅವರು ವಿವರಿಸಿದ್ದಾರೆ.

8758 ಸಂಖ್ಯೆಯ ಜೆರ್ಸಿ!

ನೀರಜ್ ಅವರಿಗೆ ₹ ಒಂದು ಕೋಟಿ ಮೊತ್ತವನ್ನು ನೀಡುವುದಾಗಿ ಹೇಳಿರುವ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸ್ 8758 (ನೀರಜ್ ಎಸೆದ ದೂರ 87.58ಮೀ) ಸಂಖ್ಯೆಯ ಜೆರ್ಸಿಯನ್ನು ಸಿದ್ಧಪಡಿಸಲಿದೆ ಎಂದೂ ವಿವರಿಸಿದೆ.

ಮಿಲ್ಖಾ ಸಿಂಗ್ ಅವರಿಗೆ ಪದಕ ಅರ್ಪಣೆ

ಚಿನ್ನದ ಪದಕವನ್ನು ದಿಗ್ಗಜ ಅಥ್ಲೀಟ್, ಈಚೆಗೆ ಕೋವಿಡ್‌ನಿಂದ ನಿಧನರಾದ ಮಿಲ್ಖಾ ಸಿಂಗ್ ಅವರಿಗೆ ನೀರಜ್ ಚೋಪ್ರಾ ಅರ್ಪಿಸಿದ್ದಾರೆ.

‘ಕ್ರೀಡಾಂಗಣದಲ್ಲಿ ರಾಷ್ಟ್ರಗೀತೆ ಮೊಳಗುವುದನ್ನು ಕೇಳಲು ಮಿಲ್ಖಾ ಸಿಂಗ್ ಅವರು ಬಯಸಿದ್ದರು. ಅವರು ಈಗ ನಮ್ಮೊಂದಿಗಿಲ್ಲ. ಆದರೆ ಅವರ ಆಸೆ ಈಡೇರಿದೆ’ ಎಂದು ನೀರಜ್ ಹೇಳಿದ್ದಾರೆ.

ಎಲಾನ್ ಗ್ರೂಪ್‌ನಿಂದ ₹ 25 ಲಕ್ಷ

ಗುರುಗ್ರಾಮದ ರಿಯಾಲಿಟಿ ಸಂಸ್ಥೆ ಎಲಾನ್ ಗ್ರೂಪ್ ನೀರಜ್ ಚೋಪ್ರಾ ಅವರಿಗೆ ₹ 25 ಲಕ್ಷ ನೀಡಲಿದೆ. ಕಂಪನಿಯ ಅಧ್ಯಕ್ಷ ರಾಕೇಶ್ ಕಪೂರ್ ಅವರು ಶನಿವಾರ ಈ ವಿಷಯ ತಿಳಿಸಿದ್ದಾರೆ. ‘ದೇಶಕ್ಕೆ ಇಂದು ಸಂಭ್ರಮದ ದಿನ. ನೀರಜ್ ಅವರು ಗೌರವ ತಂದಿದ್ದಾರೆ. ಕ್ರೀಡಾಕುಟುಂಬದಿಂದ ಬಂದಿರುವ ನಾನು ಕಂಪನಿಯ ಪರವಾಗಿ ಸಂತೋಷದಿಂದ ಅವರಿಗೆ ಗೌರವ ಸಲ್ಲಿಸುತ್ತೇನೆ’ ಎಂದು ರಾಕೇಶ್ ಹೇಳಿದ್ದಾರೆ. ಇಂಡಿಗೊ ವಿಮಾನ ಕಂಪನಿ ಒಂದು ವರ್ಷ ಉಚಿತ ಪ್ರಯಾಣದ ಕೊಡುಗೆ ಘೋಷಿಸಿದೆ.

ಪದಕ ಪಟ್ಟಿ				
ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	38	31	18	87
ಅಮೆರಿಕ	36	39	33	108
ಜಪಾನ್	27	12	17	56
ಆರ್‌ಒಸಿ	20	26	23	69
ಬ್ರಿಟನ್	20	21	22	63
ಭಾರತ (47ನೇ ಸ್ಥಾನ)	1	2	4	7

ತೂಕ ಇಳಿಸಲು ಟ್ರ್ಯಾಕ್ ಹಿಡಿದ ಹುಡುಗ

ನೀರಜ್ ಚೋಪ್ರಾ ಅಥ್ಲೆಟಿಕ್ಸ್ ಟ್ರ್ಯಾಕ್‌ಗೆ ಇಳಿಯಲು ಕಾರಣ ಬಾಲ್ಯದಲ್ಲಿ ಅವರ ದೇಹತೂಕ. ಗುಂಡುಗುಂಡಾಗಿದ್ದ ಅವರು ತೂಕ ಕಡಿಮೆ ಮಾಡುವುದಕ್ಕಾಗಿ ಅಥ್ಲೆಟಿಕ್ಸ್ ಆಯ್ಕೆ ಮಾಡಿಕೊಂಡಿದ್ದರು. ಆ ಹಾದಿಯಲ್ಲಿ ಈಗ ಚಿನ್ನದ ಹೂ ಅರಳಿದೆ.

ಒಂದು ಶತಮಾನದಿಂದ ಭಾರತ ಕಾಯುತ್ತಿದ್ದ ಚಿನ್ನದ ಗಳಿಗೆಯನ್ನು ಕಾಣಿಕೆ ನೀಡಿದ ಚೋಪ್ರಾ ಅವರ ಅವಿಭಕ್ತ ಕುಟುಂಬದಲ್ಲಿ ಒಟ್ಟು 17 ಮಂದಿ ಇದ್ದಾರೆ. ಅಂಥ ‘ದೊಡ್ಡ’ ಮನೆಯಲ್ಲಿ ಬೆಳೆದ ಹುಡುಗ ಸಣ್ಣವನಿದ್ದಾಗ ಮರ ಏರುತ್ತ, ಜಮೀನುಗಳಲ್ಲಿ ಮೇಯುತ್ತಿದ್ದ ಕೋಣಗಳ ಬಾಲ ಹಿಡಿದು ಕೀಟಲೆ ಮಾಡುತ್ತಿದ್ದ. ಆ ಹುಡುಗನಿಗೆ ಶಿಸ್ತು ಕಲಿಸುವುದಕ್ಕಾಗಿ ತಂದೆ ಸತೀಶ್ ಕುಮಾರ್ ಕ್ರೀಡೆಯಲ್ಲಿ ಅಭ್ಯಾಸ ಮಾಡಲು ಒತ್ತಾಯಿಸಿದರು. ಮೊದಲು ಒಪ್ಪಲಿಲ್ಲವಾದರೂ ಕೊನೆಗೆ ಓಟದಲ್ಲಿ ಪಾಲ್ಗೊಳ್ಳುವುದಾಗಿ ಹೇಳಿದರು. ಹೀಗಾಗಿ ಪಾನಿಪತ್‌ನ ಶಿವಾಜಿ ಕ್ರೀಡಾಂಗಣಕ್ಕೆ ಅವರ ಪಯಣ ಬೆಳೆಯಿತು. ನಂತರ ಪಂಚಕುಲಾದ ತವು ದೇವಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಯಿತು.

ಅಲ್ಲಿ ಜಾವೆಲಿನ್ ಎಸೆಯಲು ಕಲಿತ ನೀರಜ್ 2016ರ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತಕ್ಕೆ ಮೊದಲ ಪದಕ ತಂದುಕೊಟ್ಟಿದ್ದರು. 86.48 ಮೀ ದೂರ ಎಸೆದ ಅವರು 20 ವರ್ಷದೊಳಗಿನವರ ವಿಶ್ವದಾಖಲೆಯನ್ನೂ ಮುರಿದಿದ್ದರು.

‘ಹೊಸ’ ಎಸ್‌ಯುವಿ ಕಾರು ಕೊಡುಗೆ

ಮಹಿಂದ್ರಾ ಕಂಪನಿ ಹೊಸದಾಗಿ ರಸ್ತೆಗೆ ಇಳಿಸಲಿರುವ ಎಸ್‌ಯುವಿ ಎಕ್ಸ್‌ಯುವಿ 700 ಕಾರನ್ನು ನೀರಜ್ ಚೋಪ್ರಾಗೆ ಕೊಡುಗೆಯಾಗಿ ನೀಡುವುದಾಗಿ ಮಹಿಂದ್ರಾ ಗ್ರೂಪ್‌ನ ಅಧ್ಯಕ್ಷ ಆನಂದ್ ಮಹಿಂದ್ರಾ ತಿಳಿಸಿದ್ದಾರೆ.

ಟ್ವಿಟರ್‌ನಲ್ಲಿ ಆನಂದ್ ಅವರ ಹಿಂಬಾಲಕರಾಗಿರುವ ವ್ಯಕ್ತಿಯೊಬ್ಬರು ನೀರಜ್‌ಗೆ ಏನು ಕೊಡುಗೆ ನೀಡುತ್ತೀರಿ ಎಂದು ಕೇಳಿದ್ದಕ್ಕೆ ಉತ್ತರಿಸಿರುವ ಅವರು ‘ಹೊಸ ಕಾರನ್ನು ನೀರಜ್ ಅವರಿಗೆ ಅಭಿಮಾನದಿಂದ ಉಡುಗೊರೆಯಾಗಿ ನೀಡುವೆವು’ ಎಂದಿದ್ದಾರೆ.

ಏನೆಂದೇ ಗೊತ್ತಾಗಲಿಲ್ಲ: ನೀರಜ್ ಅಭಿಪ್ರಾಯ

ಚಿನ್ನ ಗೆದ್ದೆನೋ ಏನಾಯಿತೋ ಗೊತ್ತಾಗಲಿಲ್ಲ. ಒಂದು ಕ್ಷಣ ಎಲ್ಲವನ್ನೂ ಮರೆತಿದ್ದೆ. ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನ ಗೆದ್ದುಕೊಡಲು ಸಾಧ್ಯವಾದದ್ದಕ್ಕೆ ಅತ್ಯಂತ ಖುಷಿಯಾಗಿದೆ ಎಂದು ನೀರಜ್ ಚೋಪ್ರಾ ಅಭಿಪ್ರಾಯಪಟ್ಟರು.

‘ಅರ್ಹತಾ ಸುತ್ತಿನಲ್ಲಿ ಚೆನ್ನಾಗಿ ಎಸೆದಿದ್ದೆ. ಆದ್ದರಿಂದ ಫೈನಲ್‌ನಲ್ಲಿ ಉತ್ತಮ ಸಾಮರ್ಥ್ಯ ತೋರುವ ಭರವಸೆ ಇತ್ತು. ಆದರೆ ಚಿನ್ನ ಗೆಲ್ಲುತ್ತೇನೆ ಎಂದು ಗೊತ್ತಿರಲಿಲ್ಲ. ಈಗ ಸಂತೋಷವನ್ನು ಹೇಗೆ ವ್ಯಕ್ತಪಡಿಸಬೇಕು ಎಂಬುದೇ ಗೊತ್ತಾಗುವುದಿಲ್ಲ’ ಎಂದು ಅವರು ಹೇಳಿದರು.

ತರಬೇತಿ ವೇಳೆ ಕಾಶೀನಾಥ್ ನಾಯ್ಕ್ (ಎಡ) ಹಾಗೂ ನೀರಜ್ ಚೋಪ್ರಾ

ಚಿನ್ನದ ಅಥ್ಲೀಟ್‌ಗೆ ಕನ್ನಡಿಗನ ತರಬೇತಿ

• ಗಣಪತಿ ಹೆಗಡೆ

ಶಿರಸಿ: ಟೋಕಿಯೊದಲ್ಲಿ ಚಿನ್ನ ಗೆದ್ದ ನೀರಜ್ ಚೋಪ್ರಾ ಸಾಧನೆಗೆ ಮುನ್ನುಡಿ ಬರೆಯುವಲ್ಲಿ ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಬೆಂಗಳೆ ಗ್ರಾಮದ ಅಥ್ಲೆಟಿಕ್ ಕೋಚ್ ಕಾಶೀನಾಥ ನಾಯ್ಕ ಅವರ ಶ್ರಮವೂ ಇದೆ.

ಭಾರತ ಸೇನೆಯಲ್ಲಿ ಉದ್ಯೋಗಿಯಾಗಿರುವ ನೀರಜ್ 2015ರಿಂದ 2017ರ ಅವಧಿಯಲ್ಲಿ ಪಟಿಯಾಲಾದಲ್ಲಿ ಜಾವೆಲಿನ್ ಎಸೆತದ ತರಬೇತಿ ಪಡೆದುಕೊಂಡಿದ್ದರು. ಅಲ್ಲಿ ಅವರಿಗೆ ಕಾಶೀನಾಥ ಅವರು ‘ಗುರು’ ಆಗಿದ್ದರು. ಎರಡು ವರ್ಷ ನೀರಜ್‌ಗೆ ತರಬೇತಿ ನೀಡಿದ್ದ ಅವರು ಜಾವೆಲಿನ್ ಎಸೆತದ ಕೌಶಲಗಳಿಗೆ ಸಾಣೆ ಹಿಡಿದಿದ್ದರು.

ಈಗ ಪುಣೆ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತುದಾರರಾಗಿರುವ ಕಾಶೀನಾಥ್ ದೂರವಾಣಿ ಮೂಲಕ ‘ಪ್ರಜಾವಾಣಿ’ ಜೊತೆ ಸಂಭ್ರಮ ಹಂಚಿಕೊಂಡು ‘ನೀರಜ್ ಅವರಿಗೆ ಎರಡು ವರ್ಷ ತರಬೇತಿ ನೀಡಿದ್ದೆ ಎಂಬುದೇ ಹೆಮ್ಮೆಯ ವಿಷಯ’ ಎಂದರು.

‘ಒಲಿಂಪಿಕ್ಸ್‌ಗೆ ತೆರಳುವ ಎರಡು ತಿಂಗಳ ಮುನ್ನ ಪುಣೆಗೆ ಬಂದಿದ್ದ ನೀರಜ್ ಕೌಶಲಗಳ ಬಗ್ಗೆ ಚರ್ಚಿಸಿದ್ದರು. ಅದಕ್ಕೂ ಮುನ್ನ ಸ್ವೀಡನ್‌ನಲ್ಲಿ ತರಬೇತಿ ಪಡೆದಿದ್ದರು. ಪ್ರತಿ ಹಂತದಲ್ಲೂ ಮತ್ತಷ್ಟು ದೂರ ಎಸೆಯುವ ಬಗ್ಗೆ ತಿಳಿಸಿದ್ದೆ. ಫೈನಲ್ ಪ್ರವೇಶಿಸಿದಾಗಲೇ ಪದಕದ ಭರವಸೆ ಮೂಡಿತ್ತು’ ಎಂದರು. ಕಾಶೀನಾಥ 2010ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದಿದ್ದರು. 2019ರ ಬಳಿಕ ಪುಣೆಯಲ್ಲಿ ತರಬೇತುದಾರರಾಗಿದ್ದಾರೆ.

ಅಭಿನಂದನೆಯ ಮಳೆ

ನೀರಜ್ ಚೋಪ್ರಾ ಅವರಿಗೆ ದೇಶದ ವಿವಿಧ ಕಡೆಯಿಂದ ಅಭಿನಂದನೆಯ ಹೊಳೆ ಹರಿದುಬಂದಿದೆ. ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ‘ಇದು ಅತ್ಯುನ್ನತ ಸಾಧನೆಯಾಗಿದ್ದು ನಿಮ್ಮ ಜಾವೆಲಿನ್ ಎಲ್ಲ ದಾಖಲೆಗಳನ್ನು ಮುರಿದು ಇತಿಹಾಸ ನಿರ್ಮಿಸಿದೆ’ ಎಂದು ಟ್ವೀಟ್ ಮಾಡಿದ್ದಾರೆ.

‘ಚೋಪ್ರಾ ಅವರು ಅತ್ಯುತ್ಕೃಷ್ಟ ಕ್ರೀಡಾಪಟು ಎಂದು ತೋರಿಸಿ ಕೊಟ್ಟಿದ್ದಾರೆ. ಅವರಿಗೆ ಅಭಿನಂದನೆಗಳು ಸಲ್ಲಲೇಬೇಕು’ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಟ್ವೀಟ್ ಮಾಡಿದ್ದಾರೆ.

ಕ್ರೀಡಾಸಚಿವ ಅನುರಾಗ್ ಠಾಕೂರ್, ಮಾಜಿ ಕ್ರೀಡಾ ಸಚಿವ ಕಿರನ್ ರಿಜಿಜು, ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಚಿನ್ನ ಗೆದ್ದಿದ್ದ ಅಭಿನವ್ ಬಿಂದ್ರಾ, ವೇಟ್‌ಲಿಫ್ಟರ್ ಮೀರಾಬಾಯಿ ಚಾನು, ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್, ಕ್ರಿಕೆಟರ್ ಸುರೇಶ್ ರೈನಾ ಮುಂತಾದವರು ಅಭಿನಂದನೆ ಸಲ್ಲಿಸಿದ್ದಾರೆ.

ಅಥ್ಲೆಟಿಕ್ಸ್‌ನಲ್ಲಿ ಭಾರತ

- **1900ರಲ್ಲಿ ನಾರ್ಮನ್ ಪ್ರಿಚರ್ಡ್ – ಬೆಳ್ಳಿ** (200 ಮೀ ಓಟ, 200 ಮೀ ಹರ್ಡಲ್ಸ್)
- **1960ರಲ್ಲಿ ಮಿಲ್ಖಾ ಸಿಂಗ್ 4ನೇ ಸ್ಥಾನ** (400 ಮೀಟರ್ಸ್ ಓಟ)
- **1984ರಲ್ಲಿ ಪಿ.ಟಿ.ಉಷಾ 4ನೇ ಸ್ಥಾನ** (400 ಮೀ ಹರ್ಡಲ್ಸ್)

ಭಾರತ ಗೆದ್ದ ವೈಯಕ್ತಿಕ ಚಿನ್ನ

- **2008ರಲ್ಲಿ ಅಭಿನವ್ ಬಿಂದ್ರಾ** (ಶೂಟಿಂಗ್)

ವಿಶ್ವ ದಾಖಲೆಯ ಹಾನ್ ನೀರಜ್ ಕೋಚ್

ಬೆಂಗಳೂರು: ನೀರಜ್ ಚೋಪ್ರಾ ಸಾಧನೆಯ ಶ್ರೇಯ ಅವರ ಕೋಚ್ ಯುವೆ ಹಾನ್ ಅವರಿಗೂ ಸಲ್ಲಬೇಕು.

ಜರ್ಮನಿಯ ಹಾನ್ 1984ರ ಜುಲೈ 20ರಂದು ನಡೆದಿದ್ದ ಕೂಟವೊಂದರಲ್ಲಿ 104.80 ಮೀಟರ್ಸ್ ದೂರ ಜಾವೆಲಿನ್ ಎಸೆದು ವಿಶ್ವ ದಾಖಲೆ ಬರೆದಿದ್ದರು. ಈವರೆಗೂ ಈ ದಾಖಲೆ ಮುರಿಯಲು ಯಾರಿಗೂ ಆಗಿಲ್ಲ.

1985ರಲ್ಲಿ ಕ್ಯಾನ್‌ಬೆರಾದಲ್ಲಿ ನಡೆದಿದ್ದ ವಿಶ್ವಕಪ್‌ನಲ್ಲಿ 96.96 ಮೀಟರ್ಸ್ ಎಸೆದು ಚಿನ್ನ ಗೆದ್ದಿದ್ದರು. 1982ರಲ್ಲಿ ಅಥೆನ್ಸ್‌ನಲ್ಲಿ ನಡೆದಿದ್ದ ಯುರೋಪಿಯನ್ ಚಾಂಪಿಯನ್‌ಷಿಪ್‌ನಲ್ಲೂ ಚಿನ್ನ ಗಳಿಸಿದ್ದರು. ಅವರು 2017ರ ನವೆಂಬರ್‌ನಲ್ಲಿ ಭಾರತ ಜಾವೆಲಿನ್ ಥ್ರೋ ತಂಡದ ಕೋಚ್ ಆಗಿ ನೇಮಕಗೊಂಡಿದ್ದರು. ಅವರ ಮಾಸಿಕ ವೇತನ ₹5.9 ಲಕ್ಷ ಎಂದು ಹೇಳಲಾಗಿದೆ. ಒಲಿಂಪಿಕ್ಸ್‌ವರೆಗೂ ಮಾತ್ರ ಅವರೊಂದಿಗೆ ಎಎಫ್‌ಐ ಒಪ್ಪಂದ ಮಾಡಿಕೊಂಡಿತ್ತು.

ಯುವೆ ಹಾನ್ ಜೊತೆ ನೀರಜ್ —ಇನ್‌ಸ್ಟಾಗ್ರಾಂ ಚಿತ್ರ

ಪಿ.ಟಿ ಉಷಾ ಸಂಭ್ರಮ

37 ವರ್ಷಗಳ ಹಿಂದೆ ಅಪೂರ್ಣವಾಗಿದ್ದ ನನ್ನ ಸಾಧನೆಯ ಕನಸು ಇವತ್ತು ನನಸಾಯಿತು. ಅದಕ್ಕಾಗಿ ಧನ್ಯಡವಾದಗಳು.

ಪಿ.ಟಿ. ಉಷಾ
ಒಲಿಂಪಿಯನ್ ಅಥ್ಲೀಟ್

ಭಾರತಕ್ಕೆ 7 ಪದಕಗಳ ದಾಖಲೆ

ಟೋಕಿಯೊ: ಭಾರತವು ಒಲಿಂಪಿಕ್ ಕೂಟದಲ್ಲಿ ಏಳು ಪದಕಗಳನ್ನು ಜಯಿಸಿದ ಸಾಧನೆ ಮಾಡಿತು.

ಒಲಿಂಪಿಕ್‌ನಲ್ಲಿ ಇದು ಭಾರತದ ಶ್ರೇಷ್ಠ ಸಾಧನೆಯಾಗಿದೆ. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಭಾರತವು ಆರು ಪದಕಗಳನ್ನು ಗೆದ್ದಿತ್ತು. ನೀರಜ್ ಚಿನ್ನ, ಮೀರಾಬಾಯಿ ಚಾನು ಮತ್ತು ರವಿಕುಮಾರ್ ದಹಿಯಾ ಬೆಳ್ಳಿ ಪದಕ ಜಯಿಸಿದ್ದಾರೆ. ಪಿ.ವಿ.ಸಿಂಧು, ಲವ್ಲಿನಾ ಬೊರ್ಗೊಹೈನ್ (ಬಾಕ್ಸಿಂಗ್) ಕಂಚಿನ ಪದಕ ಜಯಿಸಿದರು. ಭಾರತ ಪುರುಷರ ಹಾಕಿ ತಂಡ ಕಂಚು ಜಯಿಸಿದ ಸಾಧನೆಯನ್ನೂ ಮಾಡಿದೆ.

ಸುಬೇದಾರ್ ನೀರಜ್

ನೀರಜ್ ಚೋಪ್ರಾ ಭಾರತೀಯ ಸೇನೆಯಲ್ಲಿ ಯೋಧನೂ ಹೌದು. ಭಾರತೀಯ ಸೇನೆಯ ರಜಪುತಾನಾ ರೈಫಲ್ಸ್‌ನಲ್ಲಿ ಸುಬೇದಾರ್ ಆಗಿದ್ದಾರೆ.

‘ನೀರಜ್ ಒಲಿಂಪಿಕ್ಸ್‌ನಲ್ಲಿ ಅಪ್ಪಟ ಯೋಧನಾಗಿ ಆಡಿದರು. ಅವರಿಗೆ ಅಭಿನಂದನೆಗಳು’ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಟ್ವೀಟ್ ಮಾಡಿದ್ದಾರೆ.

1500 ಮೀ: ಜೇಕಬ್ ಒಲಿಂಪಿಕ್ ದಾಖಲೆ

ಪುರುಷರ 1500 ಮೀ ಓಟದ ಚಿನ್ನದ ಪದಕ ಗೆದ್ದ ನಾರ್ವೆಯ ಜೇಕಬ್ ಇಂಗ್‌ಬ್ರಿಸ್ಟನ್ ಅವರು ಒಲಿಂಪಿಕ್ಸ್ ದಾಖಲೆಯನ್ನೂ ಬರೆದರು. 3 ನಿಮಿಷ 28.32 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು ಕೆನ್ಯಾದ ಅಬೆಲ್ ಕ್ರಿಪ್ಸಾಂಗ್ (3:31.65)ಅವರ ದಾಖಲೆ ಮುರಿದರು. ಕೆನ್ಯಾದ ತಿಮೋತಿ ಚೆರಿಯೊತ್ (3:29.01) ಮತ್ತು ಬ್ರಿಟನ್‌ನ ಜೋಶ್ ಕೆರ್ (3:29.05) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು.

ಮಹಿಳೆಯರ 10 ಸಾವಿರ ಮೀ ಓಟದಲ್ಲಿ ನೆದರ್ಲೆಂಡ್ಸ್‌ನ ಸಿಫಾನ್ ಹಸನ್ (29 ನಿಮಿಷ 55.32 ಸೆಕೆಂಡು) ಚಿನ್ನ ಗೆದ್ದರು. ಬಹರೇನ್‌ನ ಕಲ್ಕಿಡನ್ ಜೆಡಹನೆ (29:56.18) ಬೆಳ್ಳಿ ಮತ್ತು ಇಥಿಯೋಪಿಯಾದ ಲೆಟೆಜೆನ್‌ಬೆಟ್ ಗಿಡಿ (30:01.72) ಕಂಚು ಗೆದ್ದುಕೊಂಡರು. ಮಹಿಳೆಯರ ಹೈಜಂಪ್ ಸ್ಪರ್ಧೆಯ ಚಿನ್ನ ರಷ್ಯಾದ ಮರಿಯಾ ಲಟಿಸ್ಕೇನಿ (2.04 ಮೀ) ಅವರ ಪಾಲಾಯಿತು.

ಆಸ್ಟ್ರೇಲಿಯಾದ ನಿಕೋಲ ಮೆಕ್‌ಡರ್ಮಿಯಟ್ (2.02) ಮತ್ತು ಉಕ್ರೇನ್‌ನ ಯರೊಸ್ಲಾವ ಮಚುಚಿಕ್ (2.00) ಕಂಚು ಗೆದ್ದರು. ಪುರುಷರ 4x400 ಮೀ ರಿಲೆಯಲ್ಲಿ ಅಮೆರಿಕ (2 ನಿಮಿಷ 55.70 ಸೆ), ನೆದರ್ಲೆಂಡ್ಸ್ (2:57.18) ಮತ್ತು ಬೋಟ್ಸ್ವಾನ (2:57.27) ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚು ಗೆದ್ದರೆ ಮಹಿಳೆಯರ 4x400 ಮೀ ರಿಲೆಯಲ್ಲೂ ಅಮೆರಿಕ (3:16.85) ಚಿನ್ನ ಗೆದ್ದುಕೊಂಡಿತು. ಪೋಲೆಂಡ್ (3:20.53) ಮತ್ತು ಜಮೈಕಾ (3:21.24) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗಳಿಸಿತು.

ಜೋ ರೂಟ್ ಶತಕ; ಜಸ್‌ಪ್ರೀತ್ ಬೂಮ್ರಾಗೆ ಐದು ವಿಕೆಟ್

ಕುತೂಹಲ ಘಟ್ಟದಲ್ಲಿ ಟೆಸ್ಟ್

ನಾಟಿಂಗ್‌ಹ್ಯಾಮ್ (ಪಿಟಿಐ): ಭಾನುವಾರ ತಾಳ್ಮೆಯಿಂದ ಬ್ಯಾಟಿಂಗ್ ಮಾಡಿದರೆ ಭಾರತಕ್ಕೆ ಇಂಗ್ಲೆಂಡ್ ಎದುರು ಮೊದಲ ಟೆಸ್ಟ್ ಪಂದ್ಯದ ಜಯದ ಸಂಭ್ರಮ ಖಚಿತ. ಇದಕ್ಕೆ ಇಂಗ್ಲೆಂಡ್ ವೇಗಿಗಳು ಬಿಡುವರೇ ಎಂಬ ಕುತೂಹಲ ಗರಿಗೆದರಿದೆ.

ಇಲ್ಲಿ ನಡೆಯುತ್ತಿರುವ ಪಂದ್ಯದ ನಾಲ್ಕನೇ ದಿನ ಜೋ ರೂಟ್ ಶತಕದ ಬಲದಿಂದ ಆತಿಥೇಯ ತಂಡವು ಎರಡನೇ ಇನಿಂಗ್ಸ್‌ನಲ್ಲಿ 85.5 ಓವರ್‌ಗಳಲ್ಲಿ 303 ರನ್ ಗಳಿಸಿ ಆಲೌಟ್ ಆಯಿತು. ಭಾರತದ ಗೆಲುವಿಗೆ 208 ರನ್‌ಗಳ ಗುರಿ ಒಡ್ಡಿತು. ದಿನದಾಟದಲ್ಲಿ ಲಭಿಸಿದ ಒಂದು ತಾಸಿನ ಅವಧಿಯಲ್ಲಿ ಭಾರತವು ಒಂದು ವಿಕೆಟ್ ನಷ್ಟಕ್ಕೆ 52 ರನ್ ಗಳಿಸಿದೆ. ಕೆ.ಎಲ್. ರಾಹುಲ್ (26; 38 ಎಸೆತ) ಅವರು ಸ್ಟುವರ್ಟ್ ಬ್ರಾಡ್ ಎಸೆತದಲ್ಲಿ ಔಟಾದರು. ರೋಹಿತ್ ಶರ್ಮಾ (ಬ್ಯಾಟಿಂಗ್ 12) ಮತ್ತು ಚೇತೇಶ್ವರ್ ಪೂಜಾರ (ಬ್ಯಾಟಿಂಗ್ 12) ಕ್ರೀಸ್‌ನಲ್ಲಿದ್ದಾರೆ.

ಜೋ ರೂಟ್ ಅವರ ಸುಂದರ ಶತಕದ ಬಲದಿಂದ ದೊಡ್ಡ ಗುರಿಯನ್ನು ನೀಡುವತ್ತ ಇಂಗ್ಲೆಂಡ್ ಚಿತ್ತ ನೆಟ್ಟಿತ್ತು. ಆದರೆ ಐದು ವಿಕೆಟ್ ಗೊಂಚಲು ಪಡೆದ ವೇಗಿ ಜಸ್‌ಪ್ರೀತ್ ಬೂಮ್ರಾ ಭಾರತಕ್ಕೆ ನೆರವಾದರು. ಬೂಮ್ರಾ ಅವರು ಡ್ಯಾಮ್ ಸಿಬ್ಲಿ, ಜ್ಯಾಕ್ ಕ್ರಾಲಿ, ಜೋ ರೂಟ್, ಸ್ಯಾಮ್ ಕರನ್ ಮತ್ತು ಸ್ಟುವರ್ಟ್ ಬ್ರಾಡ್ ವಿಕೆಟ್‌ಗಳನ್ನು ಗಳಿಸಿದರು.

ಶತಕ ಗಳಿಸಿದ ಜೋ ರೂಟ್ ಸಂಭ್ರಮ– ರಾಯಿಟರ್ಸ್ ಚಿತ್ರ

ಜೊತೆಯಾಟಗಳನ್ನು ಬೆಳೆಸಿದ ರೂಟ್: ಒಂದೆಡೆ ವಿಕೆಟ್ ಬೀಳುತ್ತಿದ್ದರೂ ತಾಳ್ಮೆಯ ಆಟ ಆಡಿದ ಜೋ ರೂಟ್ ಜೊತೆಯಾಟಗಳನ್ನು ಬೆಳೆಸಿದರು. ಬೆಸ್ಟೊ ಜೊತೆ ನಾಲ್ಕನೇ ವಿಕೆಟ್‌ಗೆ 42 ರನ್ ಸೇರಿಸಿದ ಅವರು, ಡ್ಯಾನ್ ಲಾರೆನ್ಸ್ (25) ಜೊತೆಯಾಗಿ 34 ರನ್ ಕಲೆಹಾಕಿದರು. 172 ಎಸೆತಗಳನ್ನು ಎದುರಿಸಿ ಗಳಿಸಿದ ಅವರ ಸುಂದರ ಶತಕದಲ್ಲಿ 14 ಬೌಂಡರಿಗಳಿದ್ದವು. ಸ್ಯಾಮ್ ಕರನ್ (32) ಕೂಡ ಮಿಂಚಿದರು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್ (ಮೊದಲ ಇನಿಂಗ್ಸ್) 65.4 ಓವರ್‌ಗಳಲ್ಲಿ183. ಭಾರತ (ಮೊದಲ ಇನಿಂಗ್ಸ್) (84.5 ಓವರ್‌ಗಳಲ್ಲಿ 278. ಇಂಗ್ಲೆಂಡ್: ಎರಡನೇ ಇನಿಂಗ್ಸ್: (ಶುಕ್ರವಾರ 11.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 25) 85.5 ಓವರ್‌ಗಳಲ್ಲಿ 303 (ಜೋ ರೂಟ್ 109, ಸ್ಯಾಮ್ ಕರನ್ 32, ಡಾಮ್ ಸಿಬ್ಲಿ 28; ಜಸ್‌ಪ್ರೀತ್ ಬೂಮ್ರಾ 64ಕ್ಕೆ 5, ಮೊಹಮ್ಮದ್ ಸಿರಾಜ್ 84ಕ್ಕೆ 2). ಭಾರತ: 14 ಓವರ್‌ಗಳಲ್ಲಿ 1 ವಿಕೆಟ್‌ಗೆ 52 (ರಾಹುಲ್ 26).



ಜಸ್‌ಪ್ರೀತ್ ಬೂಮ್ರಾ

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರ ನಡೆದ ಕೆ.ಎನ್. ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ ಒಂದನೇ ಡಿವಿಷನ್ ರೇಸ್‌ನಲ್ಲಿ ಜಾಕಿ ಪಿ.ಎಸ್. ಚೌಹಾಣ್ ಅವರು ಆಲ್ ಅಟ್ರಾಕ್ಟಿವ್ ಕುದುರೆಯನ್ನು ಜಯದತ್ತ ಮುನ್ನಡೆಸಿದರು. ಶುಕ್ರವಾರ ರಾತ್ರಿ ರಾಜ್ಯ ಸರ್ಕಾರವು ಹೊರಡಿಸಿದ್ದ ಆದೇಶದ ಅನ್ವಯ ಶನಿವಾರದ ರೇಸ್‌ಗಳಿಗೆ ಬೆಟ್ಟಿಂಗ್ ನಡೆಸಲಿಲ್ಲ. ಮುಂದಿನ ಆದೇಶದವರೆಗೆ, ರಾಜ್ಯದಲ್ಲಿ ನಡೆಯುವ ರೇಸ್‌ಗಳಿಗೆ ಬೆಟ್ಟಿಂಗ್ ರದ್ದು ಮಾಡಲಾಗಿದೆ ಎಂದು ಬಿಟಿಸಿ ತಿಳಿಸಿದೆ.

ವಿದೇಶಿ ಆಟಗಾರರಿಗೆ ಕ್ವಾರಂಟೈನ್ ಇಲ್ಲ

ದುಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ವಿದೇಶಿ ಆಟಗಾ ರರಿಗೆ ಕ್ವಾರಂಟೈನ್ ಇರುವುದಿಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ತಿಳಿಸಿದೆ. ಆದರೆ ಬಯೋಬಬಲ್ ನಿಯಮಗಳನ್ನು ಉಲ್ಲಂಘಿಸುವ ಫ್ರಾಂಚೈಸ್‌ನ ಸದಸ್ಯರು ಹಾಗೂ ಕುಟುಂಬದವರು ಶಿಕ್ಷೆ ಎದುರಿಸಬೇಕಾಗುತ್ತದೆ ಎಂದು ಮಂಡಳಿಯು ರೂಪಿಸಿರುವ ಮಾರ್ಗಸೂಚಿಗಳಲ್ಲಿ ಹೇಳಲಾಗಿದೆ.

ಸುನಿಲ್ ಗಾವಸ್ಕರ್ ಸಂಭ್ರಮ

ನಾಟಿಂಗ್‌ಹ್ಯಾಮ್: ನೀರಜ್ ಚಿನ್ನದ ಪದಕ ಜಯಿಸಿದ ನಂತರ ಜನರು ಬೀದಿ ಗಿಳಿದು ಸಂಭ್ರಮಿಸಿದರೆ, ಬೇರೆ ಕ್ರೀಡೆಗಳ ದಿಗ್ಗಜರೂ ವಿಜಯೋತ್ಸವ ಆಚರಿಸಿದರು.

ಮಾಜಿ ಕ್ರಿಕೆಟಿಗ ಸುನಿಲ್ ಗಾವಸ್ಕರ್ 'ಮೇರೇ ದೇಶ್ ಕೀ ಧರ್ತೀ ಸೋನಾ ಉಗ್ಲೇ' ಹಿಂದಿ ಹಾಡು ಹಾಡಿ ಕುಣಿದು ಸಂಭ್ರಮಿಸಿದರು. ಭಾರತ – ಇಂಗ್ಲೆಂಡ್ ನಡುವಣ ಟೆಸ್ಟ್ ಪಂದ್ಯದ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅವರು ನೀರಜ್ ಚಿನ್ನ ಗೆದ್ದ ವಿಚಾರ ತಿಳಿದಾಗ 'ಉಪಕಾರ್' ಸಿನಿಮಾದ ಆ ಹಾಡು ಹಾಡಿ ಕುಣಿದರು. ಅಷ್ಟರಲ್ಲಿ ಅವರೊಂದಿಗಿದ್ದವರೂ ಜತೆ ಹೆಜ್ಜೆಹಾಕಿದರು. ಈ ದೃಶ್ಯದ ತುಣುಕನ್ನು ಅನೇಕರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಕ್ವಾರ್ಟರ್‌ಗೆ ಮಹೇಶ್ ರಾಜ್ ಎಫ್‌ಸಿ

ಬೆಂಗಳೂರು: ಮಹೇಶ್ ರಾಜ್ ಎಫ್‌ಸಿ, ಬೆಂಗಳೂರು ಸೂಪರ್ ಸ್ಟ್ರೈಕರ್ ಮತ್ತು ರೂಟ್ಸ್ ಫುಟ್‌ಬಾಲ್ ಸ್ಕೂಲ್ ತಂಡಗಳು ಕೆಎಸ್‌ಎಫ್‌ಎ–ಬಿಡಿಎಫ್‌ಎ 'ಸಿ' ಡಿವಿಷನ್ ನಾಕೌಟ್ ಫುಟ್‌ಬಾಲ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದವು.

ಶನಿವಾರ ಇಲ್ಲಿ ನಡೆದ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಮಹೇಶ್ ರಾಜ್ ಎಫ್‌ಸಿ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿ 8–7ರಿಂದ ಬ್ಲ್ಯಾಕ್ ಪ್ಯಾಂಥರ್ಸ್ ತಂಡವನ್ನು ಪರಾಭವಗೊಳಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು ಯಾವುದೇ ಗೋಲು ದಾಖಲಿಸಿರಲಿಲ್ಲ. ಹೀಗಾಗಿ ಶೂಟೌಟ್ ಮೊರೆ ಹೋಗಲಾಗಿತ್ತು. ಮತ್ತೊಂದು ಪಂದ್ಯದಲ್ಲಿ ಬೆಂಗ ಳೂರು ಸೂಪರ್ ಸ್ಟ್ರೈಕರ್ ಎಫ್‌ಸಿ ತಂಡವು ಪೆನಾಲ್ಟಿ ಶೂಟೌಟ್ ಮೂಲಕ ರಾಮನ್ ಸ್ಪೋರ್ಟ್ಸ್ ಎಫ್‌ಸಿ ತಂಡ ವನ್ನು ಸೋಲಿಸಿತು. ಮತ್ತೊಂದು ಸೆಣಸಾಟದಲ್ಲಿ ರೂಟ್ಸ್ ಫುಟ್‌ಬಾಲ್ ಸ್ಕೂಲ್ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿಯೇ ಫ್ರೀಡಂ ಎಫ್‌ಸಿ ಎದುರು ಗೆದ್ದಿತು.